ಪ್ರಗತಿಶೀಲ ಸಾಹಿತ್ಯ

ಬರೆಹಗಾರರು

ತಿ. ತಾ. ಶರ್ಮ

ಶ್ರೀರಾಜ

ತ. ರಾ. ಸುಬ್ಬರಾಯ

ಕುಮಾರ ವೆಂಕಣ್ಣ

ಎಸ್. ಅನಂತನಾರಾಯಣ

ಮಾ. ನಾ. ಚೌಡಪ್ಪ

ಎಂ. ಜಿ. ಜಿ.

ದ. ಕೃ. ಭಾರದ್ವಾಜ

ಕುಳುಕುಂದ ಶಿವರಾಯ

ದೊಡ್ಡೇರಿ ವೆಂಕಟಗಿರಿರಾವ್

ನಾಡಿಗೇರ ಕೃಷ್ಣರಾಯ

ಅರ್ಚಿಕ ವೆಂಕಟೇಶ

ಕೆ. ಶ್ರೀಕಂಠೇಶ್ವರನ್

ಸೌ. ಮಾಲತಿದೇವಿ

ಅ. ನ. ಕೃಷ್ಣರಾಯ

ಪಂಡಿತ ರಾಹುಲ ಸಾಂಕೃತ್ಯಾಯನ

ಕೆ. ಎ. ಅಬ್ಬಾಸ್

ಸಂಪಾದಕ

ಅ. ನ. ಕೃಷ್ಣರಾಯ

ಪ್ರಕಾಶಕರು

...ಲೇಖಕರ ಸಂಘ, ಬೆಂಗಳೂರು

ಮತ್ತು

...ಕೆ ಸಾಹಿತ್ಯ ಮಂದಿರ, ಧಾರವಾಡ

ಪ್ರಗತಿಶೀಲ ಸಾಹಿತ್ಯ

(೨೩ ಪ್ರಬಂಧಗಳು)

ಸಂಪಾದಕ

ಅ. ನ. ಕೃಷ್ಣರಾಯ

ಪ್ರಕಾಶಕರು

ಪ್ರಗತಿಶೀಲ ಲೇಖಕರ ಸಂಘ, ಬೆಂಗಳೂರು

ಮತ್ತು

ಕರ್ನಾಟಕ ಸಾಹಿತ್ಯ ಮಂದಿರ, ಧಾರವಾಡ

೨ ಪುಟ]

[ಬೆಲೆ : ರೂ. ೨/-

ಸಂಘದ ಇತರ ಪ್ರಕಟಣೆಗಳು

---

೧. ಭಾರತ ಶಕ್ತಿ : ಕುಮಾರ ವೆಂಕಣ್ಣ

೨. ನನ್ನನ್ನು ನಾನೇ ಕಂಡೆ : ಅ. ನ. ಕೃ.

೩. ದೀನವಾಣಿ ಗಾರ್ಕಿ : (ಅಚ್ಚಿನಲ್ಲಿ)

೪. ಸೋವಿಯಟ್ ಸಂಸ್ಕೃತಿ : ಕೃಷ್ಣರಾವ್ ನಾಡಿಗೇರ್ ಮತ್ತು ಕುಮಾರ ವೆಂಕಣ್ಣ.

೫. ರಷ್ಯಾದ ಕಥೆಗಳು : ಸಂ. ಅ.ನ. ಕೃಷ್ಣರಾಯ.

೬. ಪ್ರಗತಿಶೀಲ ಕಥೆಗಳು : ,, ,,

ಮುದ್ರಕರು
ಎಚ್. ಎಲ್. ಪ್ರಸಾದ್, ಟೌನ್ ಪ್ರೆಸ್,
ಪತ್ರಪ್ಪ ರಸ್ತೆ, ಬೆಂಗಳೂರು ನಗರ

PROGRESSIVE WRITING

(A Symposium)

Contributors:

T. T. SHARMAN
SRI RAJA
T. R. SUBBA RAO
KUMAR VENKANNA
S. ANANTHANARAYANA
D. VENKATAGIRI RAO
KULKUND SHIVA RAO
D. K. BHARADWAJ
NADAGIR KRISHNA RAO
ARCHAK VENKATESH
M. N. CHOWDAPPA
K. SRIKANTESWARAN
A. SOGAL
MALATHI DEVI
PANDIT RAHUL SANKRITYAYANA
K. A. ABBAS
M. J. G.

Editor:
A. N. KRISHNA RAO

Published by

Progressive Writers' Association (Bangalore Branch)
and
Karnataka Sahithya Mandira, Dharwar

212 Pages. 1944 Price Rs. 2/-

A. N. Krishna Rao

ALL INDIA PROGRESSIVE WRITERS' ASSOCIATIO

General Secretary :

Sajjad Zaheer (Bombay)

Joint Secretaries :

Bishnu Dey (Bengal)

K. A. Abbas (Bombay)

Treasurer :

Mama Varerkar (Bombay)

Bangalore Branch :

President :

A. N. Krishna Rao

Hon. Secretaries :

Krishna Rao Nadgir

A. Sogal

Publications of the Bangalore Branch :

1. BHARATHA SAKTHI : (Blank Verse Play)
   —*Kumar Venkann*
2. NANNANNU NANE KANDE (I saw Myself)
   —*A. N. Krishna Ra*
3. PRAGATISILA SAHITHYA : (A Symposium)
4. MAXIM GORKI Commemoration Volume :
   —*Editor : A. N. Krishna Ra*
5. SOVIET CULTURE : —*Krishna Rao Nadgir & Kumar Venkann*
6. ANTHOLOGY OF RUSSIAN STORIES :
   (24 Stories of Pre - Revolutionary and Post Revolutionary Russia)
7. PROGRESSIVE STORIES : Short stories fron Various Progressive Kannada Authors.

PROGRESSIVE WRITERS' MOVEMENT IN BANGALORE

A branch of the All India Progressive Writers' Association was found at Bangalore in November '43 with A. N. Krishno Rao as President and Krishna Rao Nadgir and A. Sogal as Secretaries. The Association has so for arranged several symposiums and group meetings to dissemenate the ideals of the P. W. movement. Several members under-took tours in different parts of Karnataka to propogate the P. W. mission and start branches. Under the kind co-operation of Mysore "AKASHAVANI" authorities three of our leading members broadcasted talks on varied aspects of the P. W. movement, The Bangalore Branch has vigorously fought reactionary elements in the literary and political domains. They strongly protested against the Mysore Government order stopping the publication of "VISWA KARNATAKA" the leading Progressive Nationalist Daily of Bangalore Edited by the distinguished journalist T T. Sharman.

The publication department of the Bangalore P.W.A. has within its limited means so far published two books. "BHARATHA SAKTHI" by Kumar Venkanna, a proletarian play urging the masses to awaken ond rid India of its golden shackles. In our second publication "NANNANNU NANE KANDE" (I SAW MYSELF) A. N. Krishna Rao employs an altogether new teehnique in discussing various aspects of our Cultural, Political and Social problems. This symposium in the third. Progressive writers from different parts cf Karnataka discuss several aspects of our life and struggle and suggest ways and means to create a New Free India. The aims and ideals of the writer and the role he is destined to play in the National regeneration of his country is discussed by Sri Raja, Nadgir and Venkanna. Ananthanarayana and T. R. Subba Rao project the people's point of view and emphasise on a

complete overhauling of our present bourgeois outlook. Archak Venkatesh traces the development of Progressive thought in Kannada from the ages. Drs. Bhardvaj and Venkatagiri Rao and T. T. Sharman have some original things to say about Sex and Literature with its far-reaching influence on the growth of a healthy robust Nation. A. N. Krishna Rao writes on War and Literature and enjoins the leathargic Kannada folk to fight Fascism in all its ever-changing forms. K. Srikanteswaran and M. N. Chowdappa analyse our relation to working class people and Kisans and plead for the wide spreading of literacy. Kulkund Shiva Rao and Venkanna write on People's Theatre movement and Folk art respectively.

Excerpts from the proceedings of the International Conference of writers held at Paris (1935), Pandit Rahul Sankrityayana's exhortation to Progressive writers and the word duel that transpired between K. A. Abbas and M.J.G. in the columns of "SOUND" have also been included.

A. N. Krishna Rao the Editor of the symposium in his lengthy introduction discusses our writers' part in India's struggle for independence and reveals to us the several obstacles that beset us.

This brochure, the first of its kind in Karnataka places before the country a new philosephy of life and makes a substantial contribution to the awakening of the masses. All the writers, pay ungrudging tribute to Mahatma Gandhi, the first citizen of India and reaffirm their faith in his sincere, selfless efforts to Unite India and create a self-respecting Free India.

—*Publishers.*

—— : ——

ಮುನ್ನುಡಿ

ಪ್ರಸ್ತಾವನೆ

ಪ್ರಗತಿಶೀಲ ಲೇಖಕರ ಸಂಘದ ಉದ್ದೇಶ, ಗುರಿಗಳನ್ನು ಕ್ರೋಡೀಕರಿಸಿ ಪ್ರಗತಿಶೀಲ ಲೇಖಕರ ವಿಚಾರಗಳನ್ನು ಒಗ್ಗೂಡಿಸಿ ಈ ಗ್ರಂಥವನ್ನು ಪ್ರಕಟಿಸಲು ನಮಗೆ ಬಹಳ ಸಂತೋಷವಾಗುತ್ತದೆ. ಪ್ರಗತಿಶೀಲ ಲೇಖಕ ಸಂಘದ ಸದಸ್ಯರು ಇದಕ್ಕೆ ಲೇಖನಗಳನ್ನು ಬರೆದಿರುವುದಲ್ಲದೆ ಸಂಘದ ಸದಸ್ಯರಾಗದೆ ಇದೇ ತೆರನಲ್ಲಿ ವಿಚಾರಮಾಡುತ್ತಿರುವ ಇತರ ಸಾಹಿತಿಗಳು ಬರೆದಿರುವುದನ್ನೂ ಓದುಗರು ಗಮನಿಸಬೇಕು. ದೇಶದ ವಿಚಾರಪರರು ಪ್ರಗತಿಶೀಲ ಲೇಖಕರ ಸಂಘದ ಸದಸ್ಯರಾಗಿರಲಿ, ಆಗಿರದೇ ಇರಲಿ ಒಂದೇ ತೆರನಲ್ಲಿ ವಿಚಾರಮಾಡುತ್ತಿದ್ದಾರೆ; ದೇಶದ ಹಲವಾರು ಪ್ರಶ್ನೆಗಳು ಸಮಸ್ಯೆಗಳು ಅವರ ಚಿತ್ತವನ್ನು ಮುತ್ತಿವೆಯೆನ್ನುವುದಕ್ಕೆ ಈ ಗ್ರಂಥ ಪರಮ ಸಾಕ್ಷಿ.

ಸಾಹಿತ್ಯ, ರಾಜಕಾರಣ

"ಸಾಹಿತ್ಯಕ್ಕೂ ರಾಜಕಾರಣಕ್ಕೂ ಸಂಬಂಧವಿಲ್ಲ. ಸಾಹಿತ್ಯದೊಳಗೆ ರಾಜಕಾರಣವನ್ನು ನುಗ್ಗಿಸಿ ಅದನ್ನು ಕುಲಗೆಡಿಸಬಾರದು. ಸಾಹಿತ್ಯದ ವ್ಯಾಪ್ತಿ ವಿಶಾಲವಾದುದು, ರಾಜಕಾರಣ ಕ್ಷಣಿಕವಾದುದು" ಎಂದು ಸಂಪ್ರದಾಯಸ್ಥರು ವಾದಮಾಡುತ್ತಿದ್ದಾರೆ. ಸಾಹಿತ್ಯದಲ್ಲಿ ಶಾಶ್ವತವಾದ ಕೆಲಸವನ್ನು ಮಾಡಿ ಸ್ಪೃಹಣೀಯ ಸ್ಥಾನಗಳನ್ನು ಗಳಿಸಿಕೊಂಡಿರುವವರೇ ಈ ವಾದವನ್ನು ಏತಕ್ಕೆ ಒಪ್ಪುವುದಿಲ್ಲವೆಂಬ ಅಂಶವನ್ನು ಸಂಪ್ರದಾಯಸ್ಥರು ಸ್ವಲ್ಪ ವಿಚಾರಮಾಡಬೇಕು. ಪ್ರಗತಿಶೀಲ ಲೇಖಕರು ಸಂಪ್ರದಾಯಸ್ಥರ ಈ ವಾದವನ್ನು ಸುತರಾಂ ಒಪ್ಪುವುದಿಲ್ಲ. ಒಂದು ಕೃತಕ ಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡು, ಹತ್ತು ಜನ ವಂಧಿಮಾಗಧರನ್ನು ಕೂಡಿಸಿಕೊಂಡು, ಸಾಮಾನ್ಯ ಜನತೆಯ ಅಜ್ಞಾನಾಂಧಕಾರವನ್ನೇ ತಮ್ಮ ಬಂಡವಾಳ ಮಾಡಿಕೊಂಡು, ಮಠದ ಹೆಗ್ಗಣಗಳಂತೆ ಬೆಳೆದ ಸಾಹಿತಿಗಳನ್ನು ನಾವು ಮಾನ್ಯಮಾಡುವ ಕಾಲ ಹೋಯಿತು. ಸಾಹಿತ್ಯ ಪಂಡಿತರ, ವಿವಿಧ ಕಳಾಮಂಡಿತರ ಸ್ವತ್ತೆಂಬ ಭಾವನೆ ದೇಶದ ಸರ್ವತೋಮುಖ ಪ್ರಗತಿಗೆ ಹಾನಿಕರವಾದುದೆಂಬ ಸತ್ಯ

ನಿಶ್ಯವಾಗುತ್ತಿದೆ. ಸಾಹಿತಿಯ ಧ್ಯೇಯ ಆತ್ಮೋಲ್ಲಾಸನಾಪರತೆಯಲ್ಲ, ಸ್ವಪ್ರತಿಷ್ಠಾ ಪ್ರಸಾರವೂ ಅಲ್ಲ. ಅವನು ದೇಶವನ್ನು ಕಟ್ಟುವ ಶಿಲ್ಪಿಗಳಲ್ಲಿ ಒಬ್ಬ; ಅವನ ಮಹಾಯುಧ ಲೇಖನಿ. ಅದರ ಪ್ರಭಾವದಿಂದ ಅವನು ಸತ್ತವರನ್ನು ಬದುಕಿಸಬಲ್ಲ; ಬದುಕಿದವರನ್ನು ಸಾಯಿಸಬಲ್ಲ. ದೈವದತ್ತವಾದ ಈ ವರವನ್ನು ಅವನು ತನ್ನ ಲಾಲಸೆಗಾಗಿ ಉಪಯೋಗಿಸಿಕೊಳ್ಳಬೇಕೇ ಮಾನವ ಕಲ್ಯಾಣಕ್ಕೆ ಮೀಸಲು ಮಾಡಬೇಕೇ? ಅವನ ಬಾಳು ಸ್ವಾತಂತ್ರ್ಯ, ನಿರ್ಭೀತಿ, ವಿಚಾರಗಳಿಂದ ಹುರಿಗೊಂಡು ನಾಡಿಗೆ ಮಾದರಿಯಾಗಬೇಕೇ ದಾಸ್ಯ, ಭಯ, ಅವಿಚಾರಗಳಿಂದ ಕುಗ್ಗಿ ಸೊರಗಬೇಕೇ? ಮಾನವ ಕಲ್ಯಾಣದಿಂದ ಹೊರಗಲ್ಲ ಸಾಹಿತಿ. ಮಾನವ ಕಲ್ಯಾಣಸಾಧನೆ ಅವನಿಗೆ ಅಹಿತವಾದ ವಿಷಯವಲ್ಲ. ಅವನ ಕೃತಿ ಈ ಗುರಿಯನ್ನು ಸಾಧಿಸದಿದ್ದ ಮೇಲೆ ಅದು ಜೀವಂತಕೃತಿಯಾದೀತೇ? ಅವನ ಧ್ಯೇಯದ ಕನ್ನಡಿಯಂತೆ ಅವನ ಜೀವನವಿರದಿದ್ದರೆ ಅದಕ್ಕೇನಾದರೂ ಬೆಲೆ ಬಂದೀತೇ?

ಸಾಹಿತಿಗೆ ಬೇಕಾದ ರಾಜಕಾರಣ

ರಾಜಕಾರಣವೆಂದರೆ 'ಅಸೆಂಬ್ಲಿ, ಮುನಿಸಿಪಾಲಿಟಿಯ ಪಾಲಿಟಿಕ್ಸ್' ಎಂದು ಸಾಮಾನ್ಯ ಕಲ್ಪನೆ. ಇದು ಸ್ಥಾನದಾಹದ ಕುದುರೆ ಜೂಜು. ಸಾಹಿತಿಗೆ ಬೇಕಾದುದು ಇಂತಹ ರಾಜಕಾರಣವಲ್ಲ. ರಾಮಪ್ಪನನ್ನು ಮುನಿಸಿಪಲ್ ಅಧ್ಯಕ್ಷಸ್ಥಾನದಿಂದ ಇಳಿಸಿ ಭೀಮಪ್ಪನನ್ನು ಏರಿಸಬೇಕೆಂಬುದು ಇಂದಿನ ರಾಜಕಾರಣ. ಸಾಹಿತಿಗೆ ರಾಮಪ್ಪನೂ ಒಂದೇ; ಭೀಮಪ್ಪನೂ ಒಂದೇ. ಅವನ ರಾಜಕಾರಣ ಹೆಚ್ಚಿನ ವೈಶಾಲ್ಯವನ್ನು ಪಡೆದಿದೆ. ಭಾರತದ ಸ್ವಾತಂತ್ರ್ಯದ ಪ್ರಶ್ನೆ ಅವನ ಕಣ್ಣುಮುಂದಿನ ಆದರ್ಶ ಕಂಬ. ಜಗತ್ತನ್ನು ಕಬಳಿಸಿ ಹಿಂದಿನ ಪೌರಾಣಿಕ ರಾಕ್ಷಸರನ್ನು ನೆನಪಿಗೆ ತರುತ್ತಿರುವ ನಾಜಿಜಂ, ಫಾಸಿಸಂ, ಇಂಪೀರಿಯಲಿಸಂ, ನಿಪ್ಪೋಯಿಸಂ ಇವುಗಳ ಸಮೂಲನಾಶವೇ ಅವನ ಹೆಗ್ಗುರಿ. ಮೈಬಣ್ಣದ ಹೆಸರಿನಲ್ಲಿ ಮನುಷ್ಯ ಮನುಷ್ಯನನ್ನು ತುಳಿಯುತ್ತಿದ್ದಾನೆ. ಭಾಷೆಯ ಹೆಸರಿನಲ್ಲಿ ಮನುಷ್ಯ ಮನುಷ್ಯನನ್ನು ಪೀಡಿಸುತ್ತಿದ್ದಾನೆ. ಈ ಅನ್ಯಾಯ, ಅಸಮತೆ, ದೌರ್ಜನ್ಯ ಬುಡಮೂಲವಾಗಿ ಹೋಗಬೇಕೆಂದು ಜಗತ್ತಿನಲ್ಲಿ ಯಾವ ವಿಚಾರವಾದಿ ಬಯಸುವುದಿಲ್ಲ. ತನಗೆ ರಾಜಕಾರಣ ಬೇಡವೆಂದು ಹೊರಗೆ ನಿಂತು ಈ ಮಹಾ ರಾಕ್ಷಸರ ಬೆಳವಣಿಗೆಗೆ ಪರ್ಯಾಯವಾಗಿ ಇಂಬುಗೊಡುವ

ಸಾಹಿತಿ ಮಾನವದ್ರೋಹಿ, ಇವರ ಕೀರ್ತಿಕಥನಮಾಡುವ ಸಾಹಿತಿ ಮಾನವ ಕುಲಘಾತಕ. ಅವನ ವಿನಾಶದಿಂದಲೇ ಜಗತ್ತಿಗೆ ಶಾಂತಿ. ಸಾಮ್ರಾಜ್ಯವಾದದ ಮುಖವೀಣೆಯಾಗಿದ್ದ ಕಿಪ್ಲಿಂಗ್, ವರ್ಣವಿದ್ವೇಷದ ಪ್ರವಾದಿಯಾದ ಮಿಸ್ ಮೇಯೋ ಇವರ ಕುಲಕೋಟಿಗೆ ಸೇರಿದ ಸಾಹಿತಿ ನಮಗೆ ಬೇಕಾಗಿಲ್ಲ. ದೌರ್ಜನ್ಯ, ದಬ್ಬಾಳಿಕೆ, ದಲಿತರ ರಕ್ತಶೋಷಣೆಯನ್ನೆದುರಿಸದ ಸಾಹಿತಿ ಶಿಖಂಡಿ.

ಕನ್ನಡ ಸಾಹಿತ್ಯದಲ್ಲಿ ಸಾಮ್ರಾಜ್ಯವಾದ ತುಂಬಿಹೋಗಿದೆ. ಕನ್ನಡ ಸಾಹಿತಿಗಳ ಏಕಮಾತ್ರ ಕೇಂದ್ರಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಇದೇ ಮಂತ್ರವನ್ನು ಪಠಿಸುತ್ತ ಬಂದಿದೆ.

ಕನ್ನಡ ಸಾಹಿತ್ಯದಲ್ಲಿ ಸಾಮ್ರಾಜ್ಯವಾದ

ಸರ್ ಮಿರ್ಜಾ ಎಂ. ಇಸ್ಮಾಯಿಲರು ತಮ್ಮ ದಿವಾನಗಿರಿಯಲ್ಲಿ ಕಾಂಗ್ರೆಸ್ ಸಂಸ್ಥೆಯ ಮೇಲೆ ಅತಿಶಯ ದಬ್ಬಾಳಿಕೆಯನ್ನಾರಂಭಿಸಿದಾಗ ಅವರ ಪ್ರಸಾರ ಕಾರ್ಯಕ್ಕೆ ಪರಿಷತ್ತು ವೇದಿಕೆಯಾಯಿತು. ಆಗಿದ್ದ ಉಪಾಧ್ಯಕ್ಷರು ಅವರ ಹಿಮ್ಮೇಳಕ್ಕೆ ನಿಂತರು. ಪ್ರತಿಭಟಿಸಿದ ಕೆಲವು ಸ್ವತಂತ್ರ ವಿಚಾರದ ಸಾಹಿತಿಗಳನ್ನು ಪರಿಷತ್ತಿನ ಅಧಿಕಾರಿವರ್ಗ ತುಳಿದು ಮೆಟ್ಟಿತು. ದೇಶ ಕ್ಷುಬ್ಧವಾಯಿತು. ಆದರೇನು? ಪರಿಷತ್ತಿನ ನಾಜಿದಳ ತನ್ನ ವಿಜಯಪತಾಕೆಯನ್ನು ಮೆರೆಯಿಸಿತು. ವಿಚಾರವಾದಿಗಳಿಗಾದ ಸೋಲು ಸೋಲಲ್ಲ. ಇದರಿಂದ ದೇಶದಲ್ಲಿ ಅಭೂತಪೂರ್ವವಾದ ಕ್ರಾಂತಿಯಾಯಿತು. ಪರಿಷತ್ತಿನ ನಿಜಬಣ್ಣ ಬಯಲಿಗೆ ಬಿತ್ತು. ವಿಚಾರವಾದಿಗಳ ಬಲ ಬೆಳೆಯುತ್ತಹೋಯಿತು. ಆದರೆ ಸಂಪ್ರದಾಯಸ್ಥರ ನೀತಿ ಅವ್ಯಾಹತವಾಗಿ ಸಾಗಿತು. ಕಳೆದ ವರ್ಷ ಪರಿಷತ್ತಿನ ಉಪಾಧ್ಯಕ್ಷರು ಆಶ್ರಿತ ಸಂಸ್ಥಾನಗಳ ಅರಸುಗಳ ಹಿತಸಂರಕ್ಷಣೆಗೆ ನಿಂತರು. ಒಂದು ಪ್ರಗತಿಶೀಲ ಪತ್ರಿಕೆ ಅವರ ಭಾಷಣವನ್ನು ಅಮೆರಿಯವರ ಪ್ರತಿಧ್ವನಿಯೆಂದು ಟೀಕಿಸಿತು. ಪರಿಷತ್ತಿನ ಅಧಿಕಾರಿಗಳು ಸಾಮ್ರಾಜ್ಯವಾದವನ್ನು ಮಂಡಿಸಿದರೆ ಅದು ರಾಜಕಾರಣವಲ್ಲ. ಪ್ರಗತಿಶೀಲರು ಕೂಲಿಗಾರರ, ಹಳ್ಳಿಗರ, ವಿದ್ಯಾರ್ಥಿಗಳ ಕಷ್ಟಸುಖಗಳನ್ನು ನಿವೇದಿಸಿದರೆ ಅದು ಸಾಹಿತ್ಯ ಪ್ರಪಂಚದೂರವಾದ ರಾಜಕಾರಣವಾಗುತ್ತದೆ. ಈ ವರ್ಷದ ವಸಂತ ಸಾಹಿತ್ಯೋತ್ಸವ ಕಾಲದಲ್ಲಿ (೨೨-೪-೪೪) ಪ್ರಗತಿಶೀಲರು ತಮ್ಮ ವಿಚಾರ ಧೋರಣೆಗಳನ್ನು

ಪರಿಷತ್ತಿನಲ್ಲಿಯೇ ಮಂಡಿಸಿ ಸಂಪ್ರದಾಯಸ್ಥರಿಗೆ ಸಕಾಲಿಕ ಎಚ್ಚರಕೊಟ್ಟರು. ಅವರು ಒಬ್ಬ ಅಸಾಮರ್ಥ್ಯರನ್ನು ಮುಂದೆ ಮಾಡಿಕೊಂಡು ಪ್ರಗತಿಶೀಲ ಲೇಖಕರನ್ನು ಪತ್ರಿಕೆಗಳಲ್ಲಿ ನಿಂದಿಸಿ ತೃಪ್ತರಾದರು.

ಈ ಮನೋಭಾವಕ್ಕೆ ಬೇಸತ್ತೇ ಕರ್ನಾಟಕ ಕುಲಪುರೋಹಿತರಾದ ಶ್ರೀ ಆಲೂರ ವೆಂಕಟರಾಯರು ಪರಿಷತ್ತನ್ನು 'ಬೆಂಗಳೂರು ಬ್ಯುರಾಕ್ರಸಿ' ಎಂದು ಕರೆದುದು. ಅವರೂ ಪರಿಷತ್ತಿನ ಪ್ರಾಣ್ಯಸೇವಕರಾದ ಇನ್ನಿತರರೂ ಪರಿಷತ್ತಿನಿಂದ ದೂರವಾದರು. ಮಂಗಳೂರು ಜಿಲ್ಲೆಯಂತೂ ಪರಿಷತ್ತನ್ನು ಸಂಪೂರ್ಣವಾಗಿ ಕೈಬಿಟ್ಟಿತು. ಅಖಿಲ ಕರ್ನಾಟಕದ ಏಕಮಾತ್ರ ಕೇಂದ್ರ ಸಂಸ್ಥೆ ನಾಲ್ವರ ಸಂಕುಚಿತ ದೃಷ್ಟಿಯಿಂದ ತನ್ನ 'ಅಖಿಲ ಕರ್ನಾಟಕ ಪ್ರಾತಿನಿಧ್ಯ ಸ್ವರೂಪವನ್ನು' ಕಳೆದುಕೊಳ್ಳುತ್ತ ಬರುತ್ತಿದೆ. ಈ ಪರಿಸ್ಥಿತಿಯನ್ನೇ ಬೆಳೆಯಕೊಟ್ಟರೆ ಪರಿಷತ್ತಿನಂತಹ ಹಿರಿಯಸಂಸ್ಥೆ ನಾಮಾವಶೇಷವಾಗಿ ಹೋಗುತ್ತದೆ. ಕಾಲುಶತಮಾನದ ಮೇಲೆ ಬೆಳೆದುಬಂದು, ಕರ್ನಾಟಕವನ್ನು ಒಗ್ಗೂಡಿಸಲು ಪ್ರಯತ್ನಿಸಿದ ಸಂಸ್ಥೆಯ ಪರ್ಯವಸಾನ ಇಂತಾಗಲು ಕನ್ನಡಿಗರು ಅವಕಾಶಕೊಡಬಾರದು. ಪರಿಷತ್ತಿನ ದುರಂತ ಕನ್ನಡಿಗರ ದುರಂತವಾಗುತ್ತದೆ. ಕನ್ನಡಿಗರು ಎಲ್ಲಿಯೂ ತಲೆಯೆತ್ತದಂತಾಗುತ್ತದೆ. ಪ್ರಗತಿಶೀಲ ಮನೋಭಾವನೆಯುಳ್ಳ ಸಮಸ್ತರೂ ಪರಿಷತ್ತಿನ ಒಳಗೆ ಬಂದು, ಈಗಿರುವ ನಾಜಿ ದುರಾಕ್ರಮಣವನ್ನು ಕೊನೆಗಾಣಿಸಿ ನಿಜವಾದ ಪ್ರಜಾಪ್ರಭುತ್ವ ಏರ್ಪಡುವಂತೆ ಮಾಡಬೇಕು.

ಇಂದು ಕನ್ನಡ ಸಾಹಿತ್ಯದಲ್ಲಿ (ಭಾರತೀಯ ಸಾಹಿತ್ಯದಲ್ಲಿಯೇ ಎಂದು ಹೇಳಬಹುದು) ಸಂಪ್ರದಾಯಕ್ಕೂ ಪ್ರಗತಿಗೂ ಹೋರಾಟ ನಡೆದಿದೆ.

* ಸಾಹಿತ್ಯ ಮತ್ತು ಪ್ರಸಾರ

ಪ್ರಗತಿಗಾಮಿಗಳು ಪ್ರಗತಿಯೆಂದು ಹೆಸರಿಟ್ಟು ಸಾಹಿತ್ಯವನ್ನು ಪ್ರಸಾರದ (Propoganda) ಕೈಗೊಂಬೆಯನ್ನಾಗಿ ಮಾಡಲು ಹವಣಿಸುತ್ತಿದ್ದಾರೆ ಎಂಬ ವಾದವೆದ್ದಿದೆ. ರಾಜಕೀಯ, ಸಾಮಾಜಿಕ, ಆರ್ಥಿಕ ಜಗತ್ತಿಗೆ ಇಣಿಕಿಹಾಕದಿರುವ ಸೌಂದರ್ಯೋಪಾಸಕನಾದ ಸಾಹಿತಿಯೂ ಪ್ರಸಾರ

* "If it be objected that this is to make the novel an instrument of propoganda, I would reply that, at a time

ಕನೇ. ಸೌಂದರ್ಯ ಪ್ರಸಾರವೇ ಅವನ ಧ್ಯೇಯ. ವೇದೋಪನಿಷತ್ತುಗಳು, ಕುರಾನ ಬೈಬಲ್ಲುಗಳು, ಜಂಡವೆಸ್ತಾ ತಾಲಮೂಡುಗಳ ಕರ್ತೃಗಳೂ ಪ್ರಸಾರಕರೇ. ಸತ್ಯ ಪ್ರಸಾರವೇ ಅವರ ಧ್ಯೇಯ. ಗ್ರೀಕರ ನಾಲ್ಕು ಮಹಾ ಕವಿಗಳೂ, ಯೂರೋಪ್ ಕಾಂಟಿನೆಂಟ್‌ಗಳ ಮಹಾ ಕವಿಗಳೂ ಕಾಲೋಚಿತವಾದ ತತ್ವಗಳನ್ನೇ ಪ್ರಸಾರಮಾಡಿದರು. ಕಲಾ ದೃಷ್ಟಿಯಿಂದ ಅತ್ಯಂತ ಸುಂದರವೆಂದು ಗಣಿಸಲ್ಪಟ್ಟಿರುವ ಉಪನಿಷತ್ಕಥೆಗಳು, ಬೈಬಲ್ ಕಥೆಗಳು, ಜಾತಕ ಕಥೆಗಳೂ, ಸೂಫಿ ಕಥೆಗಳೂ ಕೂಡ ಪ್ರಸಾರಕ್ಕಾಗಿಯೇ ಹುಟ್ಟಿದವು. ಬೈರನ್, ಷೆಲ್ಲಿ, ಕೋಮಿಯನ್ಸ್, ವಿಕ್ಟರ್ ಹ್ಯೂಗೋ, ದಾಂತೆ, ಗಯಟೆ ಮೊದಲಾದ ಮಹಾಕವಿಗಳು ಬಿಚ್ಚು ಮಾತುಗಳಿಂದ ಪ್ರಸಾರ ಕಾರ್ಯವನ್ನು

---

like the present, so it should be; but whether the novelist will produce a political tract or 'a work of art' will depend on the extent to which his political convictions have become assimilated into his general outlook. In a sense, of course, all art, which comes to being through the resolution of a conflict in the author's mind, will be 'propoganda' for what he believes in and holds most worth while. It will, in fact, be 'propoganda' for a certain attitude to life. It may be crude propoganda, in which case it will be bad art, or it may be subtle, but is still remains 'propoganda' in the widest sense of the term. A writer's work may be in no sense polemical, but it will nevertheless only be significant in so far as he has a point of view, and in so far as he brings his world-attitude, the sum total of his experience, to bear upon the particular fragment of his experience that forms his immediate theme.

Hence I take that there cannot be such a thing as a purely detached and impartial book. Everyone must believe in something, otherwise there would be no point in living at all. What a man writes will be modified by what he believes. And having got so much it will be almost impossible to say where detachment and objectivity end and 'propoganda', in its more subtle and insidious form, begins."

—Philip Henderson in "The Novel To-day."

ಮಾಡಿದ್ದಾರೆ. ವಾಲ್ಮೀಕಿ ಮಹಾಕವಿ ಮಾಡಿದುದು ಆರ್ಯ ಸಂಸ್ಕೃತಿಯ ಪ್ರಸಾರ, ತಮಿಳು ಪ್ರಬಂಧಕಾರರು ಕನ್ನಡದ ಶಿವಶರಣರು ಹರಿದಾಸರು ಮಾಡಿದುದು ದ್ರಾವಿಡ ಸಂಸ್ಕೃತಿಯ ಪ್ರಸಾರ. ಗಾರ್ಕಿ, ಷಾ, ಪರ್ಲ್ ಬಕ್, ಗಾಲ್ಸ್‌ವರ್ದಿ, ಅಪ್ಟನ್ ಸಿಂಕ್ಲೇರ್, ಹೆನ್ರಿಕ್‌ಮನ್, ಕುತ್ ಹಮ್ಸನ್, ಟಾಲ್‌ಸ್ಟಾಯ್ ಇವರ ಕೃತಿಗಳಲ್ಲೆಲ್ಲಾ ಪ್ರಸಾರಕನ ಹುರುಪೂ, ಶ್ರದ್ಧೆಯೂ ಎತ್ತಿ ಕಾಣುತ್ತಿದೆ. ಪ್ರಸಾರೋದ್ದೇಶದಿಂದ ಹೊರಟಿದ್ದೆಂದು ಸಾಹಿತ್ಯ ಕೀಳಾಗುವುದಿಲ್ಲ. ಸಾಹಿತಿ ತನ್ನ ಉದ್ದೇಶವನ್ನು (ಉದ್ದೇಶ ಯಾವದೇ ಇರಬಹುದು) ಖಚಿತವಾಗಿ, ಸಬಲವಾಗಿ, ಸುಂದರವಾಗಿ ನೆರವೇರಿಸಿದ್ದರೆ ಸಾಕು. ಉತ್ತಮ ಸಾಹಿತಿ ತಾನು ಕಂಡುಂಡುದನ್ನು ವರ್ತಮಾನ ಪತ್ರಿಕೆಯ ಸುದ್ದಿಗಾರನಂತೆ ವರದಿ ಹೇಳುತ್ತ ಹೋಗುವುದಿಲ್ಲ. ತನ್ನ ಅನುಭವದ ಕಸೋಟಿಯ ಮೇಲೆ ಅದಕ್ಕೆ ಪುಟಗೊಟ್ಟು ಹೇಳುತ್ತ ಹೋಗುತ್ತಾನೆ. ಈ ಮಾನಸಿಕ ಮುದ್ರೆ ಬಿತ್ತೆಂತಲೇ ವರದಿ ಸಾಹಿತ್ಯವಾಗುತ್ತದೆ. ಇತಿಹಾಸದಲ್ಲಿ ನಾವು ನೆಪೋಲಿಯನ್ನನ ರಷ್ಯಾ ದಂಡಯಾತ್ರೆಯ ವರದಿಯನ್ನು ಓದಿದ್ದೇವೆ. ಟಾಲ್‌ಸ್ಟಾಯ್ ತನ್ನ "ಯುದ್ಧ ಮತ್ತು ಶಾಂತಿ" (War and Peace) ಕಾದಂಬರಿಯಲ್ಲಿಯೂ ಚಿತ್ರಿಸಿದ್ದಾನೆ. ಎಷ್ಟು ವ್ಯತ್ಯಾಸ! ಫಾಸಿಸಂ ಇಟಲಿಯ ಜನತೆಯ ಮೇಲೆ ಮಾಡಿದ ದಬ್ಬಾಳಿಕೆಯನ್ನು ವರ್ತಮಾನ ಪತ್ರಿಕೆಗಳಿಂದ ನಾವು ಬಲ್ಲೆವು. ಇಗ್ನಾಜಿಯೋ ಸಿಲಾನ್ ತನ್ನ "ಫಾಂಟಮಾರಾ" (Fontamara) ಕಾದಂಬರಿಯಲ್ಲಿ ಹೇಳಿರುವುದು ಅಷ್ಟು ಚೆನ್ನಾಗಿ ಮನಮುಟ್ಟುವಂತೆ ನಮಗೆ ಮೊದಲು ಗೊತ್ತಿತ್ತೆ. ಚೀನೀಯರು ಕಡುಬಡವರೆಂದು ನಮಗೆ ಗೊತ್ತು. ಆದರೆ ಪರ್ಲ್ ಬಕ್ "ದಿ ಗುಡ್ ಅರ್ತ್" ಕಾದಂಬರಿಯಲ್ಲಿ ಕಾಣಿಸಿರುವ ಜೀವನದ ಪರಿಚಯ ನಮಗಿತ್ತೆ? ಸತ್ಯದ ಪ್ರತಿ ಮಾತಿನಲ್ಲಿಯೂ ಪ್ರಸಾರಕತೆಯ ನಿಷ್ಠುರ ತೀಕ್ಷ್ಣತೆಯಿದ್ದೇ ಇರುತ್ತದೆ. ಕೆಲವರು ಗಾಲ್ಸ್‌ವರ್ದಿಯಂತೆ ಮಿತವಾಗಿ ಹೇಳಬಹುದು, ಕೆಲವರು ಅಪ್ಟನ್ ಸಿಂಕ್ಲೇರ್‌ನಂತೆ ಅತಿಯಾಗಿ ಹೇಳಬಹುದು, ಉದ್ದೇಶ ಒಂದೇ, ಪರಿಣಾಮ ಒಂದೇ. ಪ್ರಸಾರಮಾಡದೆ ಸಾಹಿತ್ಯ ಸೃಷ್ಟಿಸೆನ್ನುವುದು ನೀರುಹಾಕದೆ ಅಕ್ಕಿ ಬೇಯಿಸು ಎಂದ ಹಾಗೆ.

ಪ್ರಸಾರದಿಂದಕೂಡಲೆ ಯುದ್ಧ ಸಪ್ತ ಕಣ್ಣು ಮುಂದೆ ಬಂದು ನಿಲ್ಲುತ್ತದೆ.

ಯುದ್ಧ

ಮೊದಲನೆಯ ಜಗತ್ತಿನ ಮಹಾ ಯುದ್ಧ ಭಾರತದ ಗಡಿಯ ಒಳಗೆ ಬರಲಿಲ್ಲ; ಎರಡನೆಯ ಮಹಾಯುದ್ಧ ಭಾರತದ ಒಳಗೆ ಕಾಲಿಟ್ಟಿದೆ. ಸಣ್ಣ ಪ್ರಮಾಣದಲ್ಲಿ ಬಾಂಬುಗಳ ರುಚಿಯನ್ನು ಭಾರತೀಯರು ತಿಳಿದಿದ್ದಾರೆ. ಬರ್ಮಾ, ಸಿಂಗಪುರದ ಪತನದ ಕಥೆ ಅವರ ಕರುಳನ್ನು ಹಿಂಡಿದೆ. ಯುದ್ಧದ ಶಖೆ ಬಂಗಾಳ, ವಿಜಾಪುರ, ಕೇರಳಗಳ ಮೇಲೆ ಪಸರಿಸಿ ಲಕ್ಷಾಂತರ ಜನ ಸಾವು ನೋವಿಗೆ ತುತ್ತಾಗಿದ್ದಾರೆ. ದೇಶಾದ್ಯಂತವೂ ಅರಹೊಟ್ಟೆ ಕೂಳಿನ ಕೂಗಾಟ, ಹಣದ ಬೆಲೆ ಇಳಿದುಹೋದುದರ ಅನಾಹುತ. ಸಾಮಾನ್ಯ ಜನತೆ ಕಂಗೆಟ್ಟು ಕುಗ್ಗಿ ಹೋಗಿದೆ. ಜನಾಂಗವೇ ಅಳಿದು ಹೋಗುವ ಪರಿಸ್ಥಿತಿ ಬಂದಿದೆ. ಎಲ್ಲಿ ನೋಡಿದರೂ ನಿಸ್ತೇಜ ಮುಖಗಳು. ಈ ರಕ್ತ ಶೋಷಣೆಯಿಂದ ಬಲಿತು ಬೆಳೆದ ಹಲವು ಮದಾಂಧ ವ್ಯಾಪಾರಸ್ಥರ ಬಂಡವಾಳಿಗರ ಸುಲಿಗೆಯ ನ್ಯಾಯವೇ ಇಂದಿನ ವೇದ.

ಇಂತಹ ವಿಪನ್ನಾವಸ್ಥೆಯಲ್ಲಿಯೂ ಭಾರತವನ್ನು ರಕ್ಷಿಸಿರುವುದು ಅದರ ಸಾಂಸ್ಕೃತಿಕ ಹಿನ್ನೆಲೆ; ಅದರ ಮೂರ್ತಿಸ್ವರೂಪರಾದ ಮಹಾತ್ಮಾ ಗಾಂಧಿಯವರು. ಪ್ರಬಲ ಯೋಧ ರಾಷ್ಟ್ರಗಳಾದ ಜರ್ಮನಿ, ಇಟಲಿ, ಜಪಾನ್ ಜಗತ್ ವಿಭಜನೆಗೆ ಹೊರಟಾಗ ಅವರನ್ನು ಎದುರಿಸಿ ವಿಜಯ ಪತಾಕೆಯನ್ನು ಹಾರಿಸಿದವರು, ಭಾರತೀಯರಂತೆಯೇ ಶಾಂತಿಪ್ರಿಯರೂ ಕೃಷೀವಲರೂ ಆದ ರಷ್ಯ ಮತ್ತು ಚೀನಾ ದೇಶದ ಸಾಮಾನ್ಯರು. ಆತ್ಮಶಕ್ತಿಯನ್ನು, ಜಾಗೃತ ರಾಷ್ಟ್ರದ ಸಮಷ್ಟಿ ಬಲವನ್ನು—ಜಪಾನ್, ಜರ್ಮನಿ, ಇಟಲಿಗಳಂತಹ ಸಮರಪ್ರವೀಣರೂ ಎದುರಿಸಲಾರರೆಂಬುದನ್ನು ಚೀನಾ, ರಷ್ಯಾ ತೋರಿಸಿ ಕೊಟ್ಟಿವೆ.

ಭಾರತ ಮತ್ತು ಬ್ರಿಟನ್

ಭಾರತಕ್ಕೂ ಬ್ರಿಟನ್ನಿಗೂ ಅರ್ಧ ಶತಮಾನದಿಂದ ತೀಕ್ಷ್ಣ ತಿಕ್ಕಾಟ ನಡೆದಿದೆ, ನಮ್ಮನ್ನು ನಾವು ಆಳಿಕೊಳ್ಳುತ್ತೇವೆಂದು ಭಾರತೀಯರು; ನಿಮ್ಮನ್ನು ನೀವು ಆಳಿಕೊಳ್ಳುವ ಶಕ್ತಿಯಿಲ್ಲ. ನಾವು ಆಳಿ ನಿಮ್ಮನ್ನು ಕಾಪಾಡುತ್ತೇವೆ ಎಂದು ಬ್ರಿಟನ್. ಬ್ರಿಟಿಷ್ ಸಾಮ್ರಾಜ್ಯದ ಕಣ್ಣಿನಲ್ಲಿ ಭಾರತಕ್ಕೆ ರವಿ

ಯಷ್ಟು ಬೆಲೆಯಿಲ್ಲ. ಭಾರತವೆಂದರೆ ಅವರಿಗೆ ಸುಲಿಗೆಯ ಭೂಮಿ ; ಭಾರತೀಯರೆಂದರೆ ಮೂಕ ಪಶುಗಳು. ಗಾಂಧೀಜಿಯವರ ಪ್ರಭಾವದಿಂದ ಮೂಕ ಪಶುಗಳು ಮಾತನಾಡುವಂತಾಯಿತು ; ತಮ್ಮ ಆಶೆ ಆಕಾಂಕ್ಷೆಗಳನ್ನು ಮಂಡಿಸುವಂತಾಯಿತು. ಅದಕ್ಕಾಗಿ ಹೋರಾಡಿ ಪ್ರಾಣಗಳನ್ನು ಹುಲ್ಲಿಗೆ ಕಡೆಯಾಗೆಣಿಸಿ ಅರ್ಪಿಸುವಂತಾಯಿತು. ಬ್ರಿಟಿಷ್ ಸಾಮ್ರಾಜ್ಯದ ಪರಮ ಹಿತೈಷಿಗಳೂ ಸ್ನೇಹಿತರೂ ಆದ ಗಾಂಧೀಜಿಯವರೇ ಡೌನಿಂಗ್ ಸ್ಟ್ರೀಟಿನವರ ಚಾಣಿಕ್ಯ ತಂತ್ರವನ್ನು ಕಂಡು, ಬೇಸರಪಡುವಂತಾಯಿತು. ಜಲಿಯನ್ ವಾಲಾಬಾಗ್, ರೌಲತ್ ಬಿಲ್ಲುಗಳು, ಕಾರ್ಮಿಕರ ಹತ್ಯಾಕಾಂಡ, ರಾಷ್ಟ್ರ ಮುಖಂಡರ ನಿರಂತರ ಕಾರಾಗೃಹವಾಸಗಳೆಲ್ಲವನ್ನು ಉದಾರಚಿತ್ತದಿಂದ ಮರೆತು, ಕ್ಷಮಿಸಿ, ಗಾಂಧಿಜಿಯವರು ತಮ್ಮ ಬ್ರಿಟಿಷ್ ಬಾಂಧವ್ಯವನ್ನು ಕಾಪಾಡಿಕೊಂಡು ಬಂದರು. ತಮಗೆ ವಿದ್ಯಾ ಬುದ್ಧಿ ಕಲಿಸಿದ ಇಂಗ್ಲೆಂಡ್ ಸುಖವಾಗಿರಬೇಕು. ಬ್ರಿಟನ್ ತನ್ನ ಚರಿತ್ರಾರ್ಹವಾದ ನ್ಯಾಯಪ್ರಿಯತೆಯನ್ನು ರಕ್ಷಿಸಿಕೊಂಡು ಬಂದು ಭಾರತವನ್ನು ಗೌರವಿಸಬೇಕು ಎಂಬುದು ಗಾಂಧೀಜಿಯವರ ತ್ರಿಕರಣಪೂರ್ವ ನಂಬಿಕೆ. ಬ್ರಿಟಿಷರು ಕರೆದಾಗ ದುಂಡು ಮೇಜಿನ ಪರಿಷತ್ತಿಗೆ ಹೋಗಿ ಅಲ್ಲಿಂದ ಬರಿಗೈಯಲ್ಲಿ ಗಾಂಧೀಜಿಯವರು ಹಿಂದಿರುಗಿದ್ದರು. ಆದರೂ ಅವರ ಮನಸ್ಸು ರೋಷ ತಪ್ತವಾಗಲಿಲ್ಲ. ಅಮಾನುಷವಾದ ಶಾಂತಿ, ಕ್ಷಮಾಶೀಲತೆಗಳಿಂದ ಬ್ರಿಟನ್ನಿನ ಹಲವಾರು ತಪ್ಪುಗಳನ್ನು ಖಂಡಿಸಿ ಕ್ಷಮಿಸುತ್ತ ಬಂದರು.

ಯುದ್ಧ ಯಾವಾಗ ಸಮೀಪ ಪ್ರಾಚ್ಯ ದೇಶಗಳ ಕಡೆ ತಿರುಗಿತೋ ಆಗ ಭಾರತದ ನೆರವು ಬ್ರಿಟನ್ನಿಗೆ ಅತ್ಯಗತ್ಯವಾಯಿತು. "ಗಾಂಧಿ, ಅವರನ್ನನುಸರಿಸುವ ಕಾಂಗ್ರೆಸ್, ಬ್ರಿಟನ್ನಿನ ಯುದ್ಧ ಪ್ರಯತ್ನಕ್ಕೆ ನೆರವಾಗದಿದ್ದರೆ. ಏನು, ಭಾರತ ನಮ್ಮದು ಅಲ್ಲಿಂದ ಏನು ಬೇಕಾದರೂ ಒಯ್ಯಬಲ್ಲೆವು" ಎಂದು ಜಂಬದಿಂದ ನುಡಿದಿದ್ದ ಬ್ರಿಟನ್ ಈ ಕೌಪೀನಧಾರಿಯನ್ನು ಬಿಟ್ಟರೆ ಗತ್ಯಂತರವಿಲ್ಲವೆಂದು ಗ್ರಹಿಸಿತು. ಚಾಣಾಕ್ಷ ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರನ್ನು ಭಾರತ ನಾಯಕರೊಂದಿಗೆ ಸಂಧಾನಕ್ಕಾಗಿ ಮಾರ್ಚಿ ೧೯೪೨ ರಲ್ಲಿ ಬ್ರಿಟನ್ ಕಳುಹಿಸಿತು. ಸಂಧಾನ ನಡೆಯಿತು. 'ಮನೆಯೆಲ್ಲಾ ನಿಮ್ಮದು ಆದರೆ ಕಾಗದ ಪತ್ರ ನಮ್ಮ ಹೆಸರಿನಲ್ಲಿರಲಿ' ಎನ್ನುವಂತೆ ಕ್ರಿಪ್ಸ್ ಅವರು ತಮ್ಮ

ಆಲೋಚನೆಗಳನ್ನು ಭಾರತೀಯರ ಮುಂದಿಟ್ಟರು. “ದೇಶದ ಒಳಾಡಳಿತವನ್ನು ನಿಮಗೊಪ್ಪಿಸುತ್ತೇವೆ, ಅದರ ರಕ್ಷಣ ಭಾರ ಮಾತ್ರ ನಮ್ಮದು” ಎಂದರು ಕ್ರಿಪ್ಸ್. ಬ್ರಿಟನ್ನಿನ ಭೇದೋಪಾಯವನ್ನರಿಯದ ಮಂದ ರಾಜಕಾರಣಪಟು ಗಳು “ಇದು ದೈವದತ್ತವಾದುದು. ಕಾಂಗ್ರೆಸ್ ಕಣ್ಣುಮುಚ್ಚಿಕೊಂಡು ಒಪ್ಪಿ ಕೊಳ್ಳಬೇಕು” ಎಂದರು. ಕಾಂಗ್ರೆಸ್ ಕ್ರಿಪ್ಸ್ ಆಲೋಚನೆಗಳನ್ನು ನಿರಾಕರಿ ಸಿತು. “ಯುದ್ಧಕಾಲದಲ್ಲಿ ಸರ್ವಾಧಿಕಾರವೂ ಯುದ್ಧಕಛೇರಿಯ ಅಧೀನ. ಒಳಾಡಳಿತ ಹೆಸರಿಗೆ ನಮ್ಮ ಕೈಯಲ್ಲಿದ್ದರೂ ನಾವು ನಿಮ್ಮ ಸೂತ್ರದ ಗೊಂಬೆ ಗಳು. ಇಂತಹ ಅಧಿಕಾರ ನಮಗೆ ಬೇಡ” ಎಂದು ಕಾಂಗ್ರೆಸ್ ಖಂಡಿತ ವಾಗಿ ನುಡಿಯಿತು.

ಆಗಸ್ಟು ತಿಂಗಳಲ್ಲಿ ಮುಂಬಯಿಯಲ್ಲಿ ಸೇರಿದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ‘ಭಾರತ ಬಿಟ್ಟು ತೊಲಗಿ’ (Quit India) ನಿರ್ಣಯ ಅಂಗೀಕಾರವಾಯಿತು. ಭಾರತದ ಮೇಲಣ ತನ್ನ ವ್ಯಾಮೋಹ ವನ್ನು ತ್ಯಜಿಸುವುದರಿಂದ ಬ್ರಿಟನ್ನಿಗೆ ಕೋಟಿ ಪಾಲು ಲಾಭವಿದೆ. ಸಂತೃಪ್ತ ಭಾರತ ಬ್ರಿಟಿಷರ ಬತ್ತಳಿಕೆಯಲ್ಲಿನ ಮಹಾಸ್ತ್ರವಾಗುತ್ತದೆ. ಹಿಂದಿನ ಸಂಬಂಧ ದೃಷ್ಟಿಯಿಂದ ಭಾರತ ಎಂದಿಗೂ ಬ್ರಿಟನ್ನಿನ ಕೈಬಿಡುವುದಿಲ್ಲ ಎಂದರು ಗಾಂಧೀಜಿ. ಆದರೆ ಅಮೆರಿ, ಚರ್ಚಿಲ್ಲರಿಗೆ ಈ ಅಧ್ಯಾತ್ಮವಾದ ಅರ್ಥವಾಗ ಲಿಲ್ಲ. ಸಭೆ ಮುಗಿಸಿ ಬರುವಷ್ಟರಲ್ಲಿ ನಾಯಕರನ್ನೆಲ್ಲಾ ಸಾಮ್ರಾಜ್ಯ ಸರ್ಕಾರ ಬಂಧಿಸಿತು.

ನಾಯಕರ ಬಂಧನ ದೇಶವನ್ನು ಅವರ್ಣನೀಯ ಕ್ಷೋಭೆಯಲ್ಲಿ ಮುಳು ಗಿಸಿತು. ಮಹಾವಾಳಿಗಳು, ದಂಗೆಕೋರರು ದೇಶದ ಅಶಾಂತಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ಕೊಳ್ಳೆ, ಲೂಟಿ, ಸಬೋಟಾಜ್ ಕೆಲಸಕಾರ್ಯ ಗಳಲ್ಲಿ ಪ್ರವೃತ್ತರಾದರು. ತಮ್ಮ ಹೀನಕೃತ್ಯಗಳನ್ನು ಮುಚ್ಚಲು ಅವರು ಕಾಂಗ್ರೆಸ್ಸಿನ ಹೆಸರನ್ನು ಧಾರಾಳವಾಗಿ ಉಪಯೋಗಿಸಿಕೊಳ್ಳಲಾರಂಭಿಸಿದರು. ಇದನ್ನು ಪ್ರತಿಭಟಿಸಿ ದೇಶದಲ್ಲಿ ಶಾಂತಿಯನ್ನು ಸ್ಥಾಪಿಸಬಲ್ಲ ಒಂದೇ ಒಂದು ಸಂಸ್ಥೆ ಕಾಂಗ್ರೆಸ್; ಅದು ಸೆರೆಮನೆಯಲ್ಲಿ. ಗಾಂಧೀಜಿಯವರು ದೇಶದ ಅಶಾಂತಿಗೆ ಮನನೊಂದು ಸೆರೆಮನೆಯಲ್ಲಿ ಮಹೋಪವಾಸವನ್ನಾರಂಭಿಸಿದರು. ಅವರ ಸ್ಥಿತಿ ಚಿಂತಾಜನಕವಾಗುತ್ತ ಬಂತು. ಭಾರತಕ್ಕೆ ಭಾರತವೇ ಒಂದಾಗಿ

ಗಾಂಧೀಜಿಯವರ ಬಿಡುಗಡೆಯನ್ನಪೇಕ್ಷಿಸಿತು. ಇಡೀ ಜಗತ್ತು ದನಿಗೂಡಿಸಿತು. ಸಾಮ್ರಾಜ್ಯಸರ್ಕಾರ ತನ್ನ ಕಪಿಮುಷ್ಟಿಯನ್ನು ಸಡಿಲಿಸಲಿಲ್ಲ. ಗಾಂಧೀಜಿಯವರ ಉತ್ಕ್ರಮಣ ಕಾಲ ಸಮಿಾಪಿಸಿದೆಯೆಂದು ಭಾವಿಸಿ ಸಾಮ್ರಾಜ್ಯ ಸರ್ಕಾರ ತನ್ನ ಅಡಿಷನಲ್ ಸೆಕ್ರೆಟರಿಯವರಾದ ಸರ್ ಟೋಟನ್‌ಹ್ಯಾಂ ಅವರ ಸಹಿ ಹಾಕಿಸಿ ಆಗಸ್ಟ್ ಗಲಭೆಗಳ ಎಲ್ಲ ಹೊಣೆಯನ್ನು ಗಾಂಧೀಜಿಯವರ ತಲೆಯ ಮೇಲೆ ಹೊರೆಸಿತು. ವಿದೇಶಗಳಲ್ಲಿ ಈ ಕಪ್ಪು ಹೊತ್ತಗೆಯ ಭಯಂಕರ ಪ್ರಸಾರವಾಯಿತು. ಪೋಲಿಸಿನವನು, ವಾದಿ, ನ್ಯಾಯಾಧೀಶ ಎಲ್ಲಾ ಒಬ್ಬನೇ ಆದಂತೆ ಸಾಮ್ರಾಜ್ಯ ಸರ್ಕಾರ ವರ್ತಿಸಿತು ಎಂದರು ಗಾಂಧೀಜಿ.

ಗಾಂಧೀಜಿಯವರ ಆರೋಗ್ಯ ಸೆರೆಮನೆಯಲ್ಲಿ ತೀರ ಕೆಡುತ್ತ ಬಂತು. ಇನ್ನು ಹೆಚ್ಚು ಜವಾಬ್ದಾರಿ ಹೊರುವ ಇಚ್ಛೆಯಿಲ್ಲದೆ ಸರ್ಕಾರ ಮೇ ೬-೧೯೪೪ರಲ್ಲಿ ಗಾಂಧೀಜಿಯವರನ್ನು ಬಿಡುಗಡೆಮಾಡಿತು. ಗಾಂಧೀಜಿಯವರು ತಮ್ಮ ದೇಹಸ್ಥಿತಿಯನ್ನು ಗಮನಿಸದೆ ಸರ್ ಟೋಟನ್‌ಹಂ ಅವರ ಹೊತ್ತಗೆಗೆ ಉತ್ತರವಿತ್ತರು.

ಗಾಂಧೀಜಿ ಹೆಚ್ಚು ದಿನ ಹೊರಗಿರುವರೇ? ಸಾಮ್ರಾಜ್ಯ ಸರ್ಕಾರ ಅವರನ್ನು ಬಿಡುಗಡೆಮಾಡಿರುವುದು ಆರೋಗ್ಯದ ಸಲುವಾಗಿ. ಆರೋಗ್ಯ ಸ್ವಲ್ಪ ಸರಿಹೋಗಲು ಮತ್ತೆ ಸೆರೆಮನೆಗೆ ಅವರನ್ನು ಒಯ್ಯುವುದಿಲ್ಲವೇ? ಇಲ್ಲವೆನ್ನಲಿಕ್ಕೆ ಸಾಧ್ಯವಿಲ್ಲ. ಗಾಂಧೀಜಿಯವರನ್ನು ಬಂಧಿಸಬಹುದು. ಗಾಂಧೀ ತತ್ವವನ್ನು, ಆ ತೇಜಸ್ಸನ್ನು ಬಂಧಿಸಲು ಸಾಧ್ಯವೇ?

ಬ್ರಿಟನ್ ತನ್ನ ರಾಜ್ಯಲಾಲಸೆಯನ್ನು ಬಿಡಬೇಕು. ಭಾರತವನ್ನು ಬಿಟ್ಟು ಗಂಟು ಮೂಟೆ ಕಟ್ಟಿ ಮನೆಗೆ ಹೋಗಬೇಕು. ತಮ್ಮ ರಕ್ಷಣೆಯನ್ನು ಮಾಡಿಕೊಳ್ಳಲು ಭಾರತೀಯರು ಸಿದ್ಧರಾಗಿಯೂ ಇದ್ದಾರೆ. ಸಮರ್ಥರಾಗಿಯೂ ಇದ್ದಾರೆ, ಇದು ಗಾಂಧೀವಾದದ ತಿರುಳು.

ಗಾಂಧೀಜಿಯವರ ವಾದ ಬಹಳ ಜನಕ್ಕೆ ಹಗಲುಗನಸಾಗಿ ಕಾಣಬಹುದು. ಅನೈಕ್ಯತೆಯ ಬೀಡಾಗಿರುವ ಭಾರತಕ್ಕೆ ಸ್ವರಕ್ಷಣಾ ಸಾಮರ್ಥ್ಯ ಬರುವುದೆಂದಿಗೆ? ಬ್ರಿಟಿಷರು ಭಾರತ ಬಿಟ್ಟುಹೋದರೆ ಜಪಾನು ಬಂದು ಭಾರತವನ್ನು ಒಂದೇ ತುತ್ತಿಗೆ ನುಂಗಿಬಿಡುತ್ತದೆ. ಇಲ್ಲದಿದ್ದರೆ ಹಿಂದೂ-ಮುಸ್ಲಿ

ಮರು ಕಚ್ಚಾಡಿ ಕಾದಾಡಿ ಭಾರತವನ್ನು ಕುರುಕ್ಷೇತ್ರವನ್ನಾಗಿ ಮಾಡಿಬಿಡುತ್ತಾರೆ. ಇದು ಸಾಮ್ರಾಜ್ಯ ಪಕ್ಷಪಾತಿಗಳ ಭಯ, ವಾದ. ಜಪಾನಿನ ಯಾಂತ್ರಿಕ ಸಮರಶಕ್ತಿಯ ಮುಂದೆ ಚೀನಾ ಒಂದು ಹಸುಗೂಸು.

ಚೀನಾ ರಷ್ಯಾಗಳ ಆದರ್ಶ

ಸಮ್ರಾಟ, ಸಮ್ರಾಟನ ಪ್ರತಿನಿಧಿ ಟೋಜೋ ಕೆಳಗೆ ಇಡೀ ಜಪಾನ್ ಚಕ್ರಾಧಿಪತ್ಯ ಒಂದು ದೇಹ, ಒಂದು ಪ್ರಾಣವಾಗಿ ನಿಂತಿದೆ. ಚೀನಾ ಹಲವು ಪಕ್ಷಗಳ, ಹಲವು ಧರ್ಮಗಳ, ಹಲವು ನಾಯಕರ ಹಿಡಿತಕ್ಕೆ ಸಿಕ್ಕಿ ಛಿದ್ರ ಛಿದ್ರವಾಗಿ ಹೋಗಿತ್ತು. ಆದರೆ ಬಲಯುತ ಜಪಾನ್ ಚೀನಾದ ಒಂದು ಕೂದಲನ್ನು ಕೊಂಕಿಸಿಲ್ಲ. ಕೇವಲ ಶ್ರಮಜೀವಿಗಳಿಂದ ತುಂಬಿದ ಚೀನಾ, ದೇಹದ ಪರಿವೆಯನ್ನು ಮರೆತು ತನ್ನ ನಾಯಕ ಚಿಯಾಂಗ್-ಕೈ-ಷೇಕರ ಕೈಕೆಳಗೆ ಹೋರಾಡುತ್ತಿದೆ. ಚಿಯಾಂಗರ ಕೋಮಿಂಟಾಂಗ್ ಪಕ್ಷದ ಆಜನ್ಮ ವಿರೋಧಿಗಳು ಕಮ್ಯೂನಿಸ್ಟರು. ಅವರೂ ಇಂದು ಚಿಯಾಂಗರ ನಾಯಕತ್ವವನ್ನು ಒಪ್ಪಿಕೊಂಡು ಚೀನಾಗಾಗಿ ಹೋರಾಡುತ್ತಿದ್ದಾರೆ. ಚೀನಾದೇಶದ ಸ್ವಾತಂತ್ರ್ಯವನ್ನು ಕಬಳಿಸಲು ಬಂದಿರುವ ಒಬ್ಬ ಶತ್ರುವಿನ ವಿರುದ್ಧ ದೇಶದ ವಿವಿಧ ಪಕ್ಷ, ಬಣ್ಣ, ಕೋಮುಗಳು ಒಂದಾಗಿವೆ. ಇದು ಚೀನಾದ ಅಪಾರ ಅಸೀಮ ಬಲದ ರಹಸ್ಯ. ಚೀನಾ ಭಾರತಕ್ಕೆ ಮೇಲ್ಪಂಕ್ತಿ ಹಾಕಿಕೊಟ್ಟಿದೆ. ಹೊರಗಿನವರ ಕೈವಾಡವಿರುವತನಕ ಯಾವ ದೇಶವೂ ಶಾಂತಿಯಿಂದ ಬಾಳಲಾಗುವುದಿಲ್ಲ. ಇಂದಿನ ಭಾರತದ ಪರಿಸ್ಥಿತಿಯೇ ಅಂದಿನ ಅಮೇರಿಕೆಗೂ ಒದಗಿತ್ತು. ಬ್ರಿಟನ್ನು ಅಮೇರಿಕೆಯನ್ನು ಬಿಟ್ಟು ತೆರಳಿದಂದಿನಿಂದ ಅಮೇರಿಕಾ ಜಗಜ್ಜೇತವಾಗಿ ನಿಂತಿತು. ರಷ್ಯಾದಲ್ಲಿ ಎಷ್ಟು ಜಾತಿಗಳು, ಎಷ್ಟು ಭಾಷೆಗಳು, ಎಷ್ಟು ಜನಾಂಗಗಳು. ಯುಗಪುರುಷ ಲೆನಿನ್ ಅವುಗಳನ್ನು ಬೆಸೆದ, ಜನತೆಯ ರಕ್ತ ಶೋಷಿಸುತ್ತಿದ್ದ ಸಾಮ್ರಾಜ್ಯಶಾಹಿಯನ್ನು ಬುಡಮುಟ್ಟ ಕಿತ್ತೊಗೆದು ಜನಪದ ಸಾಮ್ರಾಜ್ಯವನ್ನು ಸ್ಥಾಪಿಸಿದ. ಜಾಗೃತ ಜನಪದ ರಷ್ಯಾ ಇಂದಿನ ಮಹಾ ಯುದ್ಧದ ತೊಲೆಗೋಲನ್ನು ಕೈಯಲ್ಲಿ ಹಿಡಿದಿದೆ. ಉನ್ಮತ್ತ ಜರ್ಮನಿಯನ್ನು ಹಣ್ಣುಗಣ್ಣು ಮಾಡಿದೆ.

ತಮ್ಮ ನಾಡಿನ ಒಳಗೆ ಹುದುಗಿರುವ ಅಜೇಯ ಅಪಾರ ಶಕ್ತಿಯನ್ನು ಗಾಂಧೀಜಿಯವರು ಬಲ್ಲರು. ರಾಜಕಾರಣದಲ್ಲಿ ಕಳಿತಿರುವ ಗಾಂಧೀಜಿ

ಪಾಕಿಸ್ತಾನ

ಪೂರ್ವಾಪರಗಳರಿಯದೆ ಬ್ರಿಟಿಷರಿಗೆ 'ಮಡಿಲಕ್ಕಿ' ತುಂಬಲು ಮುಂದುವರಿಯುತ್ತಿರಲಿಲ್ಲ. ಪಾಕಿಸ್ತಾನ ವಿಷಯವನ್ನು ಇತರರು ಕನಸಿನ ಭೂತವಾಡಿಕೊಂಡು ಅಂಜುತ್ತಿರುವಾಗ ನಿಶ್ಚಲಚಿತ್ತದಿಂದಿರುವವರು ಗಾಂಧಿಯವರೊಬ್ಬರೇ. ಜಿನ್ನಾ ಭಾರತದ ಸುಪುತ್ರರಲ್ಲೊಬ್ಬರೆಂದು ಗಾಂಧೀಜಿಯವರು ಬಲ್ಲರು. ಇಂದಲ್ಲ ನಾಳೆ ದಾರಿತಪ್ಪಿಹೋದ ಈ ತಮ್ಮ, ತಮ್ಮ ಬಳಿಗೆ ಬರುವನೆಂದು ಗಾಂಧೀಜಿಯವರ ದೃಢ ವಾತ್ಸಲ್ಯ. ಆಲಿ ಸೋದರರನ್ನಪ್ಪಿದ ಕೈಗಳು ಜಿನ್ನಾ ಅವರನ್ನಪ್ಪಲು ತವಕಪಡುತ್ತಿವೆ. ಮುಸ್ಲಿಮರ ಸಾಹಜಿಕವಾದ ಸ್ವಯಂ ನಿರ್ಧಾರದ ಹಕ್ಕನ್ನು (Self-Determination) ಗಾಂಧೀಜಿಯವರೂ ಕಾಂಗ್ರೆಸ್‌ನವರೂ ಒಪ್ಪಿಕೊಂಡಿದ್ದಾರೆ. ಇದರ ಬಗ್ಗೆ ಮತಭೇದವಿಲ್ಲ.

ಗಾಂಧೀಜಿ ಮತ್ತು ಕಾಂಗ್ರೆಸ್ ನಾಯಕರ ಬಗ್ಗೆ ಸಾಮ್ರಾಜ್ಯ ಸರ್ಕಾರ ತಳೆದಿರುವ ಧೋರಣೆ ಜಗತ್ತಿನ ಶಾಂತಿಯ ದೃಷ್ಟಿಯಿಂದ ಅಕ್ಷಮ್ಯವಾದುದು.

ಫಾಸಿಸಂ ವಿರೋಧಿ ಕಾಂಗ್ರೆಸ್

ಫಾಸಿಸ್ಟ್ ಮತ್ತು ನಾಜಿ ತತ್ವಗಳಿಗೆ ಕಾಂಗ್ರೆಸ್ಸಿನವರು ಯಾವಾಗಲೂ ಮಣೆಹಾಕಿಲ್ಲ. ಜಪಾನ್ ಜರ್ಮನಿಗಳ ದುರಾಕ್ರಮಣಶೀಲತೆಯನ್ನು ಗಾಂಧೀಜಿ, ನೆಹ್ರೂ, ಅಜಾದ್ ಮತ್ತು ಇತರ ಕಾಂಗ್ರೆಸ್ ನಾಯಕರು ಬ್ರಿಟಿಷರಿಗಿಂತಲೂ ಹೆಚ್ಚಿನ ತೀಕ್ಷ್ಣತೆಯಿಂದ ಖಂಡಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಒಳಗೆ ಕೂಡ ಇರದಿದ್ದ ವಿಶ್ವಕವಿ ರವೀಂದ್ರರು ನಗುಚಿಗೆ ಬರೆದ ತಮ್ಮ ಅಮರ ಪತ್ರಗಳಲ್ಲಿ ಜಪಾನಿನ ಧೋರಣೆಯನ್ನು ಚೆನ್ನಾಗಿ ಖಂಡಿಸಿದ್ದಾರೆ. *

---

* "No nation excepting Japan can carry on a sacred war. His Majesty considers the entire world as His Majesty's dwelling. His Majesty is the Emperor of the world. Therefore if the ways of the Emperor are understood fully by the people of the world, there should not be any objection to having our Emperor as the World's ruler."

"A Tokyo Broadcast" Quoted in "A Report to Gandhi"
—by K. A. Abbas and N. G. Jog.

ಜಪಾನಿನ ರಾಜ್ಯವಿಸ್ತಾರದ ತತ್ವವನ್ನು ಏತಕ್ಕೆ ನಾವು ಪ್ರಬಲವಾಗಿ ವಿರೋಧಿಸಬೇಕು. ಜಪಾನ್ ಸಣ್ಣ ದ್ವೀಪ. ಅದರ ಪ್ರಜಾಸಂಖ್ಯೆ ೧೯೩೭ ರಲ್ಲಿ ೭ ಕೋಟಿಗಿಂತ ಅಧಿಕವಾಗಿತ್ತು. ವರ್ಷಕ್ಕೆ ೮ ಲಕ್ಷದಂತೆ ಅದರ ಪ್ರಜಾಸಂಖ್ಯೆ ಬೆಳೆಯುತ್ತಿದೆ. ಇದರ ಪರಿಣಾಮವನ್ನು ಡಾ. ಸನ್‌ಯಾತ್‌ಸನ್ ಅವರು ಹೀಗೆ ನುಡಿದಿದ್ದಾರೆ.

"ಜಪಾನಿನ ಈಗಿನ ಜನಸಂಖ್ಯೆ ೬೦ ಮಿಲಿಯನ್. ನೂರು ವರ್ಷಗಳಾನಂತರ ಅದು ೨೪೦ ಮಿಲಿಯನ್‌ಗಳಿಗೇರುತ್ತದೆ. ತನ್ನ ಪ್ರಜೆಗಳಿಗೆ ಸಾಕಷ್ಟು ಸ್ಥಳಾವಕಾಶವಿಲ್ಲವೆಂದು ಜಪಾನ್ ಗೊಣಗುತ್ತಿದೆ. ಬೇರೆ ಕಡೆ ವಸಾಹತುಗಳನ್ನು ಹುಡುಕಿದ ಹೊರತೂ ಅದಕ್ಕೆ ಬೇರೆ ಮಾರ್ಗವಿಲ್ಲ. ಪೂರ್ವಕ್ಕೆ, ಯುನೈಟೆಡ್ ಸ್ಟೇಟ್ಸಿಗೆ ಅದು ತಿರುಗಲು ಕ್ಯಾಲಿಫೋರ್ನಿಯಾ ತನ್ನ ಬಾಗಿಲನ್ನು ಮುಚ್ಚಿತು. ಆಸ್ಟ್ರೇಲಿಯಾ ಕಡೆ ತಿರುಗಿದರೆ ಅದು ಶ್ವೇತರ ಕಟ್ಟುಟ್ಟ ಗಂಟೆಂದು ಇಂಗ್ಲಿಷರು ನುಡಿದರು. ಚಲನವಲನಕ್ಕೆ ಅವಕಾಶವಿಲ್ಲದೆ ಕೊರಿಯಾ, ಮಂಚೂರಿಯಾಗಳನ್ನು ಪ್ರವೇಶಿಸಿ ಜಪಾನ್ ತನ್ನ ಅನುಕೂಲಕ್ಕೆ ಅವುಗಳನ್ನು ಆಳವಡಿಸಿಕೊಂಡಿತು." *

ಜಪಾನಿನ ಲಕ್ಷ್ಯ ಮುಂದೆ ಭಾರತದ ಕಡೆ ಹೊರಳುವುದೆಂದು ಡಾ॥ ಸೆನ್ ಅವರು ೧೯೨೪ ರಲ್ಲಿಯೇ ಎಚ್ಚರಿಕೆ ಕೊಟ್ಟರು.

ಜಪಾನಿನಲ್ಲಿ ೧೫ ವರ್ಷಕಾಲ ಜೀವಿಸಿ, ಜಪಾನಿನ ಕಾಲೇಜಿನಲ್ಲಿ ಪ್ರೊಫೆಸರಾಗಿದ್ದ ಡಾ॥ ಫ್ರೆಡ್ ಓ ಕಾನ್‌ರಾಯರು ಹೇಳುತ್ತಾರೆ.

"ಜಪಾನಿನ ಕಣ್ಣು ಆಸ್ಟ್ರೇಲಿಯಾ ಮೇಲಿದೆಯೆಂದು ಬಹಳ ವರ್ಷಗಳಿಂದ ಬಂದ ನಂಬಿಕೆಯಾಗಿತ್ತು. ಕೆಲವು ಕಾರಣಗಳಿಂದ ಈ ಅಭಿಪ್ರಾಯ ಇಂದು ಬದಲಾಗಿದೆ. ಜಪಾನಿನಲ್ಲಿ ಈ ಅಭಿಪ್ರಾಯ ಇನ್ನೂ ಬಲವತ್ತರವಾಗಿ ಮೂಡಿದೆ. ಕಾಲ ಬಂದಾಗ ಆಸ್ಟ್ರೇಲಿಯಾ ನುಂಗುವುದು ಮಕ್ಕಳಾಟ ಎಂದು ಜಪಾನೀಯರ ಭಾವನೆ. ಜಪಾನಿನ ಅಧಿಪತ್ಯಕೊಳಗಾದ ದ್ವೀಪಗಳು ಜಪಾನಿಗೆ ನೆರವಾಗುತ್ತವೆ. ಜಪಾನಿನ ಭವಿಷತ್-ನಿಯೋಜನೆಯಲ್ಲಿ ಆಸ್ಟ್ರೇಲಿಯಾ ಸೇರಿದೆಯೆನ್ನುವುದರಲ್ಲಿ ಸಂದೇಹವೇ ಇಲ್ಲ. ಆದರ ಹವಮಾನ ಜಪಾನಿಗಳಿಗೆ ಒಗ್ಗುತ್ತದೆ. ಶ್ವೇತರ ಜತೆಗೆ ವರ್ಣಜನಾಂಗಗಳು ಸೇರುವುದರ ಬಗ್ಗೆ ಆಸ್ಟ್ರೇಲಿಯಾ

---

* Dr. Sun Yat Sen's "The Three principles of the people" (1924) — Page 17.

ಸಾಕಷ್ಟು ಕಟುವಾಗಿ ನುಡಿದಿದೆ. ಈ ಅಪಮಾನವನ್ನು ಜಪಾನ್ ಮರೆತಿಲ್ಲ. ಆಸ್ಟ್ರೇಲಿಯಾದ ಆಸೆ ಅದು ಬಿಟ್ಟಿಲ್ಲ. ಜಪಾನು ಮೊದಲು ಮಂಚೂಕೋ, ಅನಂತರ ಚೀನಾ, ಇಂಡಿಯಾ, ಆಸ್ಟ್ರೇಲಿಯಾ, ನ್ಯೂಜೀಲೆಂಡ್ ಮತ್ತು ರಷ್ಯಾ ಗಳನ್ನು ಸ್ವಾಧೀನಮಾಡಬೇಕೆಂದಿದೆ. ಜಪಾನ್ ಒಮ್ಮೆಲೇ ಯುದ್ಧವನ್ನು ಸಾರು ವುದಿಲ್ಲ. ಮೊದಲು ಚೀನಾ ಹಿಡಿದು ಅನಂತರ ಇತರ ದೇಶಗಳ ಮೇಲೆ ಧಾಳಿ ನಡೆಸುತ್ತದೆ." ‡

ಭಾರತಕ್ಕೆ ಜಪಾನಿನ ಗಂಡಾಂತರ ತಪ್ಪಿದ್ದಲ್ಲವೆಂಬುದು ಸ್ವತಸ್ಸಿದ್ಧ ವಾದ ವಿಷಯ. ಭಾರತ ಇದಕ್ಕೆ ಸಿದ್ಧವಾಗಿ ತನ್ನ ರಕ್ಷಣೆಯ ಪ್ರಯತ್ನ ವನ್ನಾರಂಭಿಸಬೇಕು. ನೆಹ್ರೂ ಅವರು ಹೇಳಿದಂತೆ ಗೆರಿಲಾ ಪಡೆಗಳನ್ನು ದೇಶಾದ್ಯಂತವೂ ನಿಯೋಜಿಸಬೇಕು. ಜಪಾನಿನ ಸಖ್ಯ, ಸ್ನೇಹಗಳಿಂದ ಭಾರತೀಯರ ಕಲ್ಯಾಣವಾಗುತ್ತದೆಂದು ಸುಭಾಷ್‌ಚಂದ್ರ ಬೋಸರಂತೆ ಭಾವಿಸುವವರು ಭಾರತದ ಪರಮ ಶತ್ರುಗಳು. ಕ್ರೌರ್ಯ, ರಕ್ತಪಿಪಾಸೆ, ದಬ್ಬಾಳಿಕೆ, ಅಮಾನುಷ ಕೃತ್ಯಗಳಿಂದ ಬೆಳೆದಿರುವ ಜಪಾನ್ ಅವಕಾಶ ಸಿಕ್ಕಿ ದರೆ ಭಾರತವನ್ನು ಪುಡಿ ಪುಡಿಮಾಡಿಬಿಡುತ್ತದೆ. ಕೊರಿಯಾ, ಮಾಂಚೂ ರಿಯಾಗಳಲ್ಲಿ ಜಪಾನು ನಡೆಸಿರುವ ಹೀನಕೃತ್ಯಗಳು ಕ್ರೌರ್ಯದ ಇತಿಹಾಸದ ರಕ್ತ ಪುಟಗಳಾಗಿವೆ. ಚೀನಾದಲ್ಲಿ ಜಪಾನೀಯರು ಆಚರಿಸಿದ ಅತ್ಯಾಚಾರ ಗಳನ್ನು ಎಡ್ಗಾರ್‌ಸ್ನೋ ತಮ್ಮ "ಬ್ಯಾಟಲ್ ಫಾರ್ ಏಷ್ಯಾ" (Battle for Asia) ಗ್ರಂಥದಲ್ಲಿ ವರ್ಣಿಸಿದ್ದಾರೆ.

> "ನಾನ್‌ಕಿಂಗನ್ನು ಜಪಾನಿಗಳು ಡಿಸೆಂಬರ್ ೧೨ ಪ್ರವೇಶಿಸಿದರು. ಚಿತ್ರ ವಿಚಿತ್ರವಕ ನೋಟ ಕಣ್ಣಿಗೆ ಬಿತ್ತು. ನಾನ್‌ಕಿಂಗ್ ಬಿಟ್ಟುಹೋಗುತ್ತಿದ್ದ ನೂರಾರು ಜನಗಳನ್ನು ಮಿಷನ್‌ಗನ್ನಿಗೆ ತುತ್ತುಮಾಡಿದರು, ವಿಮಾನಗಳಿಂದ ಗುಂಡಿನ ಮಳೆ ಸುರಿಸಿದರು. ಸಿಯಾಕುವಾನ್ ಗೇಟಿನ ಬಳಿ ಸಿಕ್ಕಿಬಿದ್ದ ಸಹ ಸ್ರಾರು ಜನ ಸತ್ತರು. ಹೆಣಗಳ ರಾಶಿ ನಾಲ್ಕು ಅಡಿಯುವರೆಗೆ ಏರಿತು.... ಷಾಂಗ್ಹಾಯ್ ಮತ್ತು ನಾನ್‌ಕಿಂಗ್ ಒಂದರಲ್ಲೇ ೪೨,೦೦೦ ಜನಗಳನ್ನು ಕೊಲೆಮಾಡಿದರು. ಷಾಂಗ್ಹಾಯ್ ಮತ್ತು ನಾನ್‌ಕಿಂಗ್ ಮಧ್ಯೆ ಸಂಚರಿಸು ತ್ತಿದ್ದ ೩,೦೦,೦೦೦ ನಾಗರಿಕರನ್ನು ಕೊಲೆಮಾಡಿದರು. ಅದೇ ಸಂಖ್ಯೆ ಚೀನೀ

‡ Dr. Taid O' Conroy's "Menace of Japan" (Page 218)

ಯೋಧರು ಪ್ರವೇಶಪಟ್ಟರು...೧೦ ರಿಂದ ೬೦ ವರ್ಷಗಳವರೆಗಿನ ಹೆಣ್ಣುಮಕ್ಕಳ ಶೀಲಭಂಗವಾಯಿತು. ತಾಯಂದಿರು ತಮ್ಮ ಮಕ್ಕಳ ಕೊಲೆಯನ್ನು ಕಣ್ಣಾರೆ ಕಂಡು, ಶೀಲಭಂಗಕ್ಕೆ ತುತ್ತಾದರು. ಮಗು ಅತ್ತರೆ ಸೈನಿಕರು ಬರುತ್ತಾರೆಂಬ ಭಯದಿಂದ ತಾಯಿಯೊಬ್ಬಳು ಹಾಸಿಗೆಯ ಸುರುಳಿಯಿಂದ ತನ್ನ ಮಗುವಿನ ಧ್ವನಿ ಮುಚ್ಚಲೆತ್ತಿ ಸಾಯಿಸಿದಳು. ಅಧಿಕಾರಿಗಳು ತಮ್ಮ ಕಛೇರಿಗಳನ್ನು ಹೇರವರ್ಗಗಳಾಗಿ ಮಾಡಿಕೊಂಡು, ಪ್ರತಿದಿವಸ ಹೊಸ ಹೊಸ ಸ್ತ್ರೀಯರನ್ನು ಬರಮಾಡಿಕೊಂಡು ರಾಕ್ಷಸೀಭೋಗದಲ್ಲಿ ಆಲಿಪ್ತರಾದರು. ೫೦,೦೦೦ ಸಂಖ್ಯೆಯ ಸೈನ್ಯ ಊರ ಮೇಲೆ ಬಿದ್ದು ಲೂಟಿ, ಶೀಲಭಂಗ, ಕೊಲೆಗಳನ್ನಾಚರಿಸಿದರು. ಈ ಕ್ರೌರ್ಯವನ್ನು ಆಧುನಿಕ ಯುಗದಲ್ಲಿ ಸರಿಹೋಲುವುದು ಬೇರೊಂದಿಲ್ಲ.”

ಚೀನಾದಲ್ಲಿ ೬ ಲಕ್ಷ ಮನೆ ಮಠವಿಲ್ಲದ ನಿರಾಶ್ರಿತರಿದ್ದಾರೆ. ಜಪಾನೀಯರು ಒಂದೊಂದು ದಿವಸ ೪,೦೦೦ ಜನಗಳನ್ನು ಬಾಂಬು ಹಾಕಿ ಕೊಂದಿದ್ದಾರೆ. ನಿರಪರಾಧಿಗಳಾದ ಮಕ್ಕಳನ್ನು ಜಪಾನ್ ಸೈನಿಕರು ಭರ್ಜಿಗಳಲ್ಲೆತ್ತಿ ವಿಹರಿಸಿದ್ದಾರೆ. ಕೈಗೆ ಸಿಕ್ಕಿದ ಹೆಣ್ಣುಮಕ್ಕಳನ್ನು ಮಾನಕಳಚಿ ಕೊಂದಿದ್ದಾರೆ.

ಈ ಪರಿಸ್ಥಿತಿ ಭಾರತಕ್ಕೆ ಬರಬೇಕೇ?

ಹಿಟ್ಲರನ ದೈತ್ಯಾನುಯಾಯಿಗಳೂ ಇದೇ ನೀತಿಯನ್ನು ಯೂರೋಪಿನಲ್ಲಿ ಅನುಸರಿಸಿದ್ದಾರೆ. ಹಿಟ್ಲರ್‌ಶಾಹಿಯ ಇತಿಹಾಸವೆಂದರೆ ಕೊಲೆ, ರಕ್ತಪಾತ ಹಿಂಸೆ, ವ್ಯಭಿಚಾರಗಳ ಭೀಕರ ಕಥೆ.* ಜ್ಯೂಜನಗಳನ್ನು ನಾಜಿ ಜರ್ಮನಿ ಅಮಾನುಷ ಹಿಂಸೆಗೀಡುಮಾಡಿತು, ಅವರ ಸರ್ವ ಸಂಪತ್ತನ್ನೂ ಸೆಳೆದುಕೊಂಡು ದೇಶದ ಹೊರಗೆ ಹಾಕಿತು. ಸ್ವತಂತ್ರ ವಿಚಾರದ ಲೇಖಕರನ್ನು ಜರ್ಮನಿ ‘ಕಾನ್‌ಸೆಂಟ್ರೇಷನ್ ಕ್ಯಾಂಪಿ’ಗೆ ಹಾಕಿ ಕೊಳೆಯಿಸಿತು. ನಾಜಿ ಆಚರಣೆಗಳನ್ನು ಒಪ್ಪದಿದ್ದ ಲೇಖಕರನ್ನು ದೇಶದಿಂದ ಹೊರಗೆ ಹಾಕಿತು,

---

* “What the Yogi is for the Indian doctrine, the Commander-in-Chief and Conqueror is for the German, he is the true Saint of the German; what inner discipline is for the Indian idea, external organization is for the German, what asceticisim is for the Indian, rapine, conquest and possession are for the German.”

—Vilem Haas in “Germans beyond Germany.”

ಅನೇಕರನ್ನು ಗುಂಡಿನ ಬಾಯಿಗೆ ತುತ್ತುಮಾಡಿತು. ನಾಜಿ ಜರ್ಮನಿಯಲ್ಲಿ ಬಾಳಲಾರದೆ ಸ್ಟೀಫನ್ ಜ್ವೈಗನಂತಹ ವಿಶ್ವಸಾಹಿತಿಗಳು ಆತ್ಮಹತ್ಯೆಮಾಡಿಕೊಂಡರು. ಸೌಂದರ್ಯ, ಸತ್ಯ, ವಿಚಾರ, ವಿಜ್ಞಾನವನ್ನು ನಾಜಿ ಜರ್ಮನಿ ಬುಡಮೂಲ ಕಿತ್ತೊಗೆಯಿತು.

ಶ್ವೇತ ಜನಾಂಗಗಳ ಸಂಪೂರ್ಣ ಸ್ವಾಮ್ಯ ಜರ್ಮನಿಗೆ, ವರ್ಣ ಜನಾಂಗಗಳ ಸಂಪೂರ್ಣ ಸ್ವಾಮ್ಯ ಜಪಾನಿಗೆ ಇದರಿಂದ ಜಗತ್ತಿನಲ್ಲಿ ಶಾಂತಿ ಹೇಗೆ ನೆಲಸಬೇಕು ?

ಜರ್ಮನಿ ರಷ್ಯಾ ಮುತ್ತಿಗೆಯಲ್ಲಿ ಅದ್ಭುತ ಸೋಲನ್ನನುಭವಿಸಬೇಕಾಯಿತು. ಜೋಯಾ (ಟಾನ್ಯಾ) ಅಂತಹ ಹೆಣ್ಣುಮಗಳ ಶವದ ಮೇಲೆ ಕೂಡ ನಾಜಿ ಸೈನಿಕರು ಸೇಡನ್ನು ತೀರಿಸಿಕೊಂಡರು. ಆದರೆ ಜರ್ಮನಿಯ ಸಬಲ ಸೈನ್ಯಗಳನ್ನು ರಷ್ಯಾ ಯಶಸ್ವಿಯಾಗಿ ಹೊಡೆದಟ್ಟಿದೆ. ಚೀನಾ ಅದೇ ತೆರನಲ್ಲಿ ಜಪಾನಿನ ಆಕ್ರಮಣವನ್ನು ತಡೆಗಟ್ಟಿದೆ. ಮಿತ್ರರಾಷ್ಟ್ರಗಳಿಗೆ ರಷ್ಯಾ ಚೀಣಗಳ ನೆರವು ಸಿಕ್ಕದಿದ್ದರೆ ಇಂದಿನ ಯುದ್ಧ ನಾಜಿ ನಿಪ್ಪೋ ಸರ್ವಾಧಿಕಾರವನ್ನು ಪ್ರತಿಷ್ಠಾಪಿಸುತ್ತಿತ್ತು.

ಅಂತರ ರಾಷ್ಟ್ರೀಯ ಉರಿಯುವ ಮನೆಯಲ್ಲಿ ಭಾರತವೂ ಸಿಕ್ಕಿಕೊಂಡಿದೆ. ದಳ್ಳುರಿ ಹೀಗೆ ವ್ಯಾಪಿಸಿರುವಾಗ ಭಾರತೀಯ ಲೇಖಕರ ಕರ್ತವ್ಯವೇನು ? ನೀರೋನಂತೆ ಪಿಟೀಲು ಬಾರಿಸುತ್ತ ಕೂಡುವುದೋ ?

ಜರ್ಮನರ ಅತ್ಯಾಚಾರ

ಲೇಖಕರಿಗೆ ಅತ್ಯಂತ ಅವಶ್ಯಕವೂ ಪ್ರಿಯವೂ ಆದುದು ವಿಚಾರಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ. ಅದನ್ನು ನಾಜಿ ಜರ್ಮನಿ ತುಳಿದುಬಿಟ್ಟಿತು. ಪ್ರತಿಭಾಶಾಲಿಗಳಾದ ಜರ್ಮನ್ ಸಾಹಿತಿಗಳು ನಾಜಿ ದಬ್ಬಾಳಿಕೆಯನ್ನು ಎದುರಿಸಿದರು. ಹಿಟ್ಲರನ ಉಗ್ರಕೋಪಕ್ಕೆ ತುತ್ತಾದರು. ಆದರೆ ಅವರು ಹಿಡಿದ ಜ್ಞಾನದ ಪಂಜನ್ನು ಗೆಸ್ಟಾಪೋ ನಿರ್ಮೂಲ ಮಾಡಲಾಗಲಿಲ್ಲ. ಜಾರಿಸ್ಟ್ ರಷ್ಯಾದಲ್ಲಿಯೂ ಹಿಂದೆ ಇದೇ ನಾಟಕ ನಡೆಯಿತು. ಸಾಮ್ರಾಜ್ಯವಾದಿ ಬ್ರಿಟನ್ನು ಭಾರತದ ಮೇಲೆ ಇದೇ ನೀತಿಯನ್ನು ಅನುಸರಿಸುತ್ತಿದೆ. ಲೆನಿನ್, ಕಾರ್ಲ್ ಮಾರ್ಕ್ಸ ತಮ್ಮ ವಿಚಾರ ವೈಖರಿಗಾಗಿ ದೇಶದಿಂದ ಹೊರಗೆ

ಹಾಕಲ್ಪಟ್ಟರು. ಆದರೆ ಜಾರಿಸ್ಟ್ ರಷ್ಯಾವಾಗಲಿ, ಕೈಸರಿನ ಜರ್ಮನಿಯಾಗಲಿ ಅವರ ಸಂದೇಶವನ್ನು ಕಾಣೆಮಾಡಲಾಗಲಿಲ್ಲ.

ಭಾರತೀಯ ಲೇಖಕರು ಹಿಂದೆ ವಿದ್ಯಾರಣ್ಯರು ಸಾಯಣರಿಗೆ ಹೇಳಿದ 'ಏಳು ಸಾಯಣ ಕಟ್ಟು ಗ್ರಂಥವ ಏಳು ಪಂಪಾ ಕ್ಷೇತ್ರಕೆ' ಎಂಬ ಮಾತನ್ನು ಪಾಲಿಸಬೇಕಾಗಿದೆ. ಅವರ ಪ್ರತಿಭೆ ದೇಶಕ್ಕೆ ನಿವೇದಿತವಾಗಬೇಕು. ಅವರ ವಜ್ರಲೇಖನಿಯಿಂದ ಭಾರತದ ಸಮಸ್ಯೆಗಳ ಸಿಕ್ಕು ಬಿಡುಗಡೆಯಾಗಬೇಕು.

ಲೇಖಕ ಮತ್ತು ಜನಪದ

ಲೇಖಕ ಜನಪದವನ್ನು ಒಂದು ಕುತೂಹಲ ದೃಷ್ಟಿಯಿಂದ ನೋಡುವ ಹವ್ಯಾಸವನ್ನು ಬಿಟ್ಟರೆ ಮಾತ್ರ ಈ ಪರಿಸ್ಥಿತಿ ಸಾಧ್ಯ. ಇಂದಿನ ಲೇಖಕರು ತಮ್ಮದೇ ಒಂದು ಜಾತಿಯನ್ನು ಒಂದು ಕುಲವನ್ನು ಕಟ್ಟಿಕೊಂಡಿದ್ದಾರೆ. ನಿತ್ಯಜೀವನವನ್ನು ಎತ್ತಿತೋರುವುದೆಂದರೆ ಅವರಿಗೆ ತಿರಸ್ಕಾರ. ಲೇಖಕರು ನಿತ್ಯಜೀವನವನ್ನು ಎತ್ತಿ ತೋರುವುದು ಮಾತ್ರವೇ ಅಲ್ಲ, ಅದರಲ್ಲಿ ತ್ರಿಕರಣಪೂರ್ವಕವಾಗಿ ಒಂದಾಗಬೇಕು. ಶ್ರಮಜೀವಿಗಳು ತಾವಾದ ಹೊರತೂ ಅವರ ಕಷ್ಟ ಸುಖಗಳ ಸರಿಯಾದ ಸತ್ಯವಾದ ಕಲ್ಪನೆ ಲೇಖಕರಿಗೆ ಬರುವುದು ದುಸ್ಸಾಧ್ಯ.

ಭಾರತೀಯ ಲೇಖಕರಲ್ಲಿ ಬಹುಮಂದಿ ಶ್ರಮಜೀವಿಗಳೇ. ಶ್ರೀಮಂತರಾಗಿ, ದೊಡ್ಡ ಅಧಿಕಾರಿಗಳಾಗಿ ಸಾಹಿತ್ಯದಲ್ಲಿ ಕೈಹಾಕಿರುವವರು ತೀರಾ ವಿರಳ. ಆದರೂ ಜನಪದ ದೃಷ್ಟಿ ನಮ್ಮಲ್ಲೇಕಿಲ್ಲ? ಇದು ದಾಸ್ಯ ಜನಾಂಗದ ಪರಂಪರಾಗತ ಪ್ರಾರಬ್ಧ. ಬಂಡವಾಳಗಾರರು ಬಂಡವಾಳವಿರುವ ಬಂಡವಾಳಗಾರರಾದರೆ, ನಮ್ಮ ಲೇಖಕರು ಬಂಡವಾಳವಿಲ್ಲದ ಬಂಡವಾಳಗಾರರು. ಅವರ ದೃಷ್ಟಿ ಒಲವು ಆಕಾಂಕ್ಷೆ ಎಲ್ಲಾ ಅತ್ತಕಡೆಯೇ. ಭಾರತ, ಪರಾಧೀನತೆಯ ಸುವರ್ಣಶೃಂಖಲೆಯನ್ನು ಕಿತ್ತೊಗೆಯುತ್ತದೆಂಬ ಮಾತು ಅವರಿಗೆ ಕನಸ್ಸಿನಲ್ಲಿಯೂ ಹೊಳೆಯದು; ಒಂದುವೇಳೆ ಹೊಳೆದರೂ ಅದನ್ನು ನಂಬಲಿಚ್ಛೆಯಿಲ್ಲ; ನಂಬಿದರೂ ಆಚರಣೆಗೆ ತರುವ ಧೀಃಶಕ್ತಿಯಿಲ್ಲ. ಇಂತಹ ನಿರ್ವೀರ್ಯ ಉತ್ತರಕುಮಾರರಿಂದ ಭಾರತದ ಸಾಂಸ್ಕೃತಿಕ ಸೌಧ ಸುರಕ್ಷಿತವಾಗಿ ಉಳಿಯುತ್ತದೆಂದು ನಾವು ನಂಬೋಣವೇ?

ನಮ್ಮ ಸಮಸ್ಯೆಗಳೆಲ್ಲಾ ರಾಜಕೀಯವೆಂದೂ ಭಾವಿಸುವುದು ನ್ಯಾಯವಾಗಲಾರದು. ಹಲವಾರು ಸಾಮಾಜಿಕ ಸಮಸ್ಯೆಗಳು ನಮ್ಮನ್ನು ಕಾಡುತ್ತಿವೆ. ಆದರವು ಸ್ವಾತಂತ್ರ್ಯ ಸಮಸ್ಯೆಯ ಪೆಡಂ**ನಮ್ಮ ಸಮಸ್ಯೆಗಳು** ಭೂತದ ಮುಂದೆ ಅಣುರೂಪವನ್ನು ತಾಳುತ್ತವೆ. ಸ್ವಾತಂತ್ರ ಸಮಸ್ಯೆಯೊಂದಿಗೆ ಇವುಗಳನ್ನು ನಾವು ಗಮನಕ್ಕೆ ತಂದುಕೊಳ್ಳಬೇಕು. ಕೆಲವು ನಮ್ಮ ಸ್ವಾತಂತ್ರ್ಯ ಪ್ರಶ್ನೆಯೊಂದಿಗೇ ಹಾಸು ಹೊಕ್ಕಾಗಿ ಹೊಂದಿಕೊಂಡಿವೆ. ಮತ್ತೆ ಕೆಲವನ್ನು ನಾವು ಗಮನಿಸದಿದ್ದರೆ ನಾಳೆ ಸ್ವತಂತ್ರ ಭಾರತವನ್ನು ಮತ್ತೊಂದು ಫಾಸಿಸಂ ರಾಜ್ಯವನ್ನಾಗಿ ಮಾಡುವ ತಪ್ಪಿಗೆ ತುತ್ತಾಗುತ್ತೇವೆ. ನೀಷೆ ಹೇಳಿದಂತೆ ಸೋಲಿಗಿಂತ ಗೆಲುವನ್ನು ಸಹಿಸುವುದು ಮಾನವ ಸ್ವಾಭಾವಾತೀತವಾದುದು. ಗೆಲುವಿನ ಉನ್ಮಾದದಲ್ಲಿ ಮಾನವ ಸ್ವಭಾವ ಹಲವು ಹಿರಿಯ ತಪ್ಪುಗಳನ್ನು ಮಾಡಿ ಹೆಚ್ಚಿನ ಸೋಲಿಗೆ ಬುನಾದಿ ಹಾಕುತ್ತದೆ.* ವರ್ಸೆಲ್ಸ್ ಒಪ್ಪಂದ ಮಾಡಿಕೊಳ್ಳುವಾಗ ಈ ನೀತಿ ಮಿತ್ರರಾಷ್ಟ್ರಗಳಿಗೆ ಅರಿವಾಗಿದ್ದರೆ ಪ್ರಾಯಶಃ ಇಂದಿನ ಮಹಾಸಮರ ಸಂಭವಿಸುತ್ತಲೇ ಇರಲಿಲ್ಲವೇನೋ?

ಹರಿಜನರು

ಇಂಗ್ಲೆಂಡ್ ನಮ್ಮನ್ನೂ ಇತರ ಆಕ್ರಮಿತ ರಾಜ್ಯಗಳನ್ನೂ ನಡಸಿಕೊಳ್ಳುತ್ತಿರುವ ರೀತಿಯನ್ನು ನಾವು ಖಂಡಿಸುತ್ತೇವೆ. ಅಬ್ರಹಾಂ ಲಿಂಕನ್ನನ ಅಮೇರಿಕಾ ನಿಗ್ರೋಗಳಿಗೆ ತೋರಿದ ಧೋರಣೆ ಹಿಟ್ಲರನ . ಜ್ಯೂ ಬೇಟೆಗಿಂತಲೂ ಕಡಿಮೆಯಾದುದಲ್ಲ. ಕೊರಿಯಾದ ಜನಗಳ ಬಗ್ಗೆ ಜಪಾನು ವರ್ತಿಸುತ್ತಿರುವುದು ಮಾನವ್ಯದ ದುರಂತ ಕಥೆ. ಆದರೆ ನಾವು ೭೦ ಲಕ್ಷ ಜನ ಅಂತ್ಯಜರ (ಹರಿಜನರ) ಬಗ್ಗೆ ವರ್ತಿಸುತ್ತಿರುವುದು ಹೇಗೆ? ಗಾಂಧೀಜಿಯವರ ಅಮರ ಸಂದೇಶ ನಮ್ಮ ಹೃದಯವನ್ನು ಹೊಕ್ಕಿದೆಯೇ? ಭಾರತ ಜೀವನ

---

* "And yet a great victory is a great danger. Human nature bears a triumph less easily than a defeat; indeed, it is easier to gain a victory of this sort than to bear it in such a way that it may not ultimately lead to a more serious defeat."

—Nietzche in "Thoughts out of Season."

ದಿಂದ ಈ ಮಹಾ ವ್ಯಾಧಿಯನ್ನು ತೊಡೆಯಬೇಕೆಂದು ಅವರು ಮಾಡಿದ ಪ್ರಯತ್ನಗಳೇನಾದವು? ಅವರ ಮಹೋಪವಾಸಗಳು ನಮ್ಮ ಹೃದಯವನ್ನು ಪರಿವರ್ತಿಸಿವೆಯೇ? ಹರಿಜನರ ಮೇಲೆ ನಾವು ತೋರುತ್ತಿರುವ ದಬ್ಬಾಳಿಕೆಯನ್ನು ಸಮೂಲವಾಗಿ ತೊಡೆದು ಹಾಕುವ ತನಕ ನಾವು ಮನುಷ್ಯರೆಂದು ವೇದೋಪನಿಷತ್ಕಾರರ ಸಂತತಿಯವರೆಂದು ಕರೆದುಕೊಳ್ಳುವುದು ನಾಚಿಗೇಡುತನ. ಇದು ಸಾಮಾಜಿಕ ಸಮಸ್ಯೆಯಾದರೂ ನಮ್ಮ ರಾಷ್ಟ್ರಜೀವನವನ್ನೇ ಅಲುಗಾಡಿಸುತ್ತಿರುವ ಮಹಾ ಪ್ರಶ್ನೆಯಾಗಿದೆ.

ಸ್ತ್ರೀಯರು

ಸ್ತ್ರೀಯರ ಬಗ್ಗೆ ನಾವು ತಳೆದಿರುವ ಧೋರಣೆಯೂ ಇಷ್ಟೇ ಉದಾರವಾಗಿದೆ. ಅವರ ಅಜ್ಞಾನದ ಮೇಲೆ ನಡೆದಿದೆ ನಮ್ಮ ದರ್ಪ. ಭಾರತದ ಸ್ತ್ರೀಯರಲ್ಲಿ ೩೦,೫೫,೨೨೪ ಜನ ಮಾತ್ರ ಅಕ್ಷರಸ್ಥರು. ತಾಯಿಗಿಂತಲೂ ಹಿರಿದಾದ ವಸ್ತು ಜಗತ್ತಿನಲ್ಲಿ ಬೇರೊಂದಿಲ್ಲ ಎಂದು ಭಾವಿಸುವ ನಾವು ನಮ್ಮ ತಾಯಂದಿರನ್ನು ಅನಕ್ಷರಸ್ಥರನ್ನಾಗಿ ಮಾಡಿ, ಘರದೆಹಾಕಿ ಕಾಮದ ಗೊಂಬೆಗಳನ್ನಾಗಿ ಮಾಡಿಕೊಂಡಿದ್ದೇವೆ. ಗಂಡು ಸ್ವತಂತ್ರನಾಗಿ ಸ್ವಚ್ಛಂದಗಾಮಿಯಾಗಿರಬೇಕು. ಗಂಡು ನಾಲ್ಕು, ಹತ್ತು ಹೆಣ್ಣುಗಳನ್ನು ಒಟ್ಟಿಗೆ ಲಗ್ನವಾಗಬಹುದು. ಗಂಡನನ್ನು ಕಳೆದುಕೊಂಡ ಹೆಣ್ಣಿಗೂ ಬೇರೆ ಲಗ್ನವಾಗುವ ಅಧಿಕಾರವಿಲ್ಲ. ನಮ್ಮ ದೇಶದ ವಿಧವೆಯರ ವಯಸ್ಸು ಸಂಖ್ಯೆಯನ್ನು ಗಮನಿಸಿದರೆ ನಮ್ಮ ಕ್ರೌರ್ಯದ ಚಿತ್ರ ಕಣ್ಣುಮುಂದೆ ನಿಲ್ಲುತ್ತದೆ.

ವಯಸ್ಸು	ಸಾವಿರಕ್ಕೆ ವಿಧವೆಯರ ಸಂಖ್ಯೆ
ಎಲ್ಲಾ ವಯಸ್ಸುಗಳೂ	೧೭೫.೦
೦— ೫	೦.೭
೫—೧೦	೪.೫
೧೦—೧೫	೧೬ ೮
೧೫—೨೦	೪೧.೪
೨೦—೨೫	೭೧.೫
೨೫—೩೫	೧೪೬.೯

ಈ ವೈಧವ್ಯದ ಸಂಖ್ಯೆ ನಮ್ಮ ಮೋರೆಗೆ ಮಸಿಬಳಿಯುತ್ತಿದೆ. ಸ್ತ್ರೀಯರ ಮೇಲೆ ನಾವು ಆಚರಿಸುತ್ತಿರುವ ಅತ್ಯಾಚಾರಕ್ಕೆ ಇದಕ್ಕಿಂತ ಉತ್ತಮ ನಿದರ್ಶನ ಬೇಕೇನು ? ಈ ಪರಿಸ್ಥಿತಿಯನ್ನು ಸುಧಾರಿಸಲು ಶಾರದಾ ಕಾನೂನು ಪ್ರಯತ್ನಿಸಿತು. ಬ್ರಿಟಿಷ್ ಭಾರತದಲ್ಲಿ ಮಾತ್ರ ಕಾನೂನು ಜಾರಿಗೆ ಬಂದಿತು. ನಿಷ್ಕರುಣಿಗಳಾದ ತಂದೆತಾಯಿಗಳು ಅಕ್ಕಪಕ್ಕದ ಆಶ್ರಿತ ಸಂಸ್ಥಾನಗಳ ಮರೆಹೊಕ್ಕು ಬಾಲ್ಯ ವಿವಾಹಗಳನ್ನು ನೆರವೇರಿಸಿದರು. ಭಾರತದ ಎಲ್ಲಾ ಕಡೆಯಲ್ಲಿಯೂ ವಿವಾಹ ಸಮ್ಮತಿಯ ವಯಸ್ಸು ೧೮ ಕ್ಕೆ ಏರಬೇಕು, ಜನತೆಯಲ್ಲಿ ಪ್ರಸಾರ ಕಾರ್ಯವಾಗಿ ಅವರೂ ಸಂತೋಷದಿಂದ ಕಾನೂನನ್ನು ಕಾರ್ಯತೋಮುಖ ಮಾಡಬೇಕು.

ತಂದೆ, ಗಂಡ, ಮಗನ ಆಶ್ರಯ ಬಿಟ್ಟರೆ ಹೆಂಗಸಿಗೆ ಬೇರೆ ಮಾರ್ಗವೇ ಇಲ್ಲ. ತಂದೆಯ ಆಸ್ತಿಯಲ್ಲಿ ಮಗಳಿಗೆ ಪಾಲಿಲ್ಲ. ಮತಕೊಡುವ ಅಧಿಕಾರವಿಲ್ಲ. ಕೆಲವು ಸಾರ್ವಜನಿಕ ಸಂಸ್ಥೆಗಳಿಗೆ ಹೆಂಗಸು ಸದಸ್ಯಳಾಗಲು ಸಾಧ್ಯವಿಲ್ಲ. ಈ ಪರಿಸ್ಥಿತಿಯು ಬದಲು ಅಮೇರಿಕಾ, ರಷ್ಯಾಗಳಂತೆ ಹೆಂಗಸರೂ ಗಂಡಸರೂ ರಾಷ್ಟ್ರಜೀವನದಲ್ಲಿ ಸಮಭಾಗಿಗಳಾಗಿದ್ದರೆ ನಾವು ಒಬ್ಬೊಬ್ಬ ಸರೋಜಿನಿ ನಾಯಿಡು, ಕಸ್ತೂರಿಬಾ, ವಿಜಯಲಕ್ಷ್ಮಿ ಪಂಡಿತ್ ಇವರಲ್ಲಿ ತೃಪ್ತಿಪಟ್ಟುಕೊಳ್ಳಬೇಕಾಗಿರಲಿಲ್ಲ. ರಷ್ಯಾದ ಗೆಲುವಿಗೆ ಸ್ತ್ರೀಯರಲ್ಲಿ ಉಂಟಾದ ಜಾಗೃತಿಯೇ ಮೂಲಕಾರಣ. ಚೀನಾದ ಸೂತ್ರಗಳನ್ನು ಇಂದು ನಡೆಸುತ್ತಿರುವವಳು ಮ್ಯಾಡಾಂ ಚಿಯಾಂಗ್-ಕೈ-ಷೇಕ್.

ಸ್ತ್ರೀಯರ ಪರಿಸ್ಥಿತಿ ಭಾರತದಲ್ಲಿ ಸುಧಾರಿಸಬೇಕಾದರೆ ಮೊದಲು ಪುರುಷರ ಮನೋಭಾವನೆ ಬದಲಾಯಿಸಬೇಕು. ಸ್ತ್ರೀಯರಲ್ಲಿ ದಾವಾನಲದಂತೆ ವ್ಯಾಪಿಸಿರುವ ನಿರಕ್ಷರತೆ ನಿರ್ಮೂಲವಾಗಬೇಕು. ಸ್ತ್ರೀಯನ್ನು ಮನುಷ್ಯಳಂತೆ ನೋಡುವ ಪರಿಪಾಠ ನಮ್ಮಲ್ಲಿ ಬರಬೇಕು. ಸುಳ್ಳು ವೇದಿಕೆಯ ಮೇಲೆ ದೇವತ್ವದ ಪಟ್ಟಕಟ್ಟಿ ಆಕೆಯನ್ನು ಮೃತಶಿಲೆಯಂತೆ ಕೂಡಿಸುವುದೂ ಬೇಡ; ಹೀನ ಜಂತುವೆಂದು ಭಾವಿಸುವುದೂ ಬೇಡ. ಅವೂ ನಮ್ಮ ಹಾಗೆ ಮನುಷ್ಯ ಜೀವ. ನಮಗಿದ್ದ ಹಾಗೆಯೇ ಹೆಣ್ಣಿಗೂ ಸುಖ ದುಃಖ, ಕೋಪ ತಾಪ, ಕಾಮ ಕ್ರೋಧಗಳಿರುತ್ತವೆ. ನಮ್ಮ ಹಾಗೆಯೇ ಅವಳೂ ಸುಶೀಲ, ಸದ್ವರ್ತನೆ, ಸತ್-ಜೀವನಗಳಿಂದ ಆದರ್ಶ ವ್ಯಕ್ತಿಯಾಗುತ್ತಾಳೆ;

ನಮ್ಮ ಹಾಗೆಯೇ ಅವಳೂ ಅರಿಷಡ್ವರ್ಗಗಳಿಗೆ ತುತ್ತಾಗಿ ಪಪಾತಕ್ಕಿಳಿಯುತ್ತಾಳೆ. ಅವಳನ್ನು ಆದರ್ಶವ್ಯಕ್ತಿ ಮಾಡುವುದರ ಕಡೆ ನಮ್ಮ ಒಲವಿಲ್ಲ; ಆದರೆ ಪಪಾತಕ್ಕೆ ತುಳಿಯುವುದರಲ್ಲಿ ನಾವು ತುಂಬಾ ಉತ್ಸುಕರು. ನಮ್ಮ ಸಾಹಿತ್ಯ, ಧರ್ಮಗ್ರಂಥಗಳು, ಸಾಮಾಜಿಕ ಆಚರಣೆಯೆಲ್ಲಾ ಸುಳ್ಳು ಸಿದ್ಧಾಂತಗಳನ್ನೇ ಅವಲಂಬಿಸಿವೆ. **ನಿಷ್ಠುರ ಸತ್ಯವನ್ನು ಕಣ್ಣು ತೆರೆದು ನೋಡುವ ಎದೆಗಾರಿಕೆ ನಮ್ಮಲ್ಲಿ ಬರಬೇಕು; ಬಲಿಯಬೇಕು, ಬೆಳೆಯಬೇಕು.**

ಜಾತಿ, ಮತಗಳ ಹೆಸರಿನಲ್ಲಿ ಸ್ತ್ರೀಯರ ಬಗ್ಗೆ ಅನೇಕ ನಿಷೇದಾತ್ಮಕ ಕಾನೂನುಗಳು (Taboos) ಹೊರಟು ಅವರ ಜೀವನವನ್ನು ನರಕ ಸದೃಶ ಮಾಡಿವೆ. ರಾಷ್ಟ್ರೀಯ ಸರ್ಕಾರವೊಂದೇ ಇವುಗಳನ್ನು ನಿವಾರಿಸಬಲ್ಲುದು. ತನ್ನ ಪ್ರಜೆಗಳ ಹಿತ ಬಾಧ್ಯತೆಗಳ ಸಂಪೂರ್ಣ ಜವಾಬ್ದಾರಿಯನ್ನು ಹೊರುವ ಸರ್ಕಾರ ನಿರ್ಮಾಣವಾಗುವವರೆಗೂ ಸ್ತ್ರೀಯ ಪರಿಸ್ಥಿತಿ ಪೂರ್ಣ ಸುಧಾರಿಸಲು ಶಕ್ಯವಿಲ್ಲ. ನಿರಾಶ್ರಿತ ಸ್ತ್ರೀಯ ಜೀವನೋಪಾಯ ನೇರವಾದ ಹಾದಿಯಲ್ಲಿ ಸಾಗುವಂತೆ ವ್ಯವಸ್ಥೆಯಾದ ಹೊರತೂ ವೇಶ್ಯಾವೃತ್ತಿ ನಿರ್ಮೂಲವಾಗುವುದಿಲ್ಲ. ಧರ್ಮದ ಹೆಸರಿನಲ್ಲಿ ಭಾರತದಲ್ಲಿ ವೇಶ್ಯಾವೃತ್ತಿ ಬೆಳೆದಿದೆ, ಜತೆಗೆ ಪುರುಷರ ಲೋಲುಪ್ತತೆಯಿಂದ ಇದು ಪರಿಪೋಷಿಸಲ್ಪಟ್ಟಿದೆ. ಕಾನೂನಿನ ಮೂಲಕ ವೇಶ್ಯಾವೃತ್ತಿಯನ್ನು ತೊಡೆದುಹಾಕಲು ಮೈಸೂರು, ಬರೋಡಾ ಮೊದಲಾದ ಆಶ್ರಿತ ಸಂಸ್ಥಾನಗಳು ಪ್ರಯತ್ನಿಸಿವೆ. ವ್ಯಾಧಿಯ ಬುಡವನ್ನು ಕಡಿಯದೆ ಈ ಬಗೆಯ ಕಾನೂನುಗಳನ್ನು ಮಾಡುವುದು ಪೋಲೀಸಿನವರ ಕೈಗೆ ಅನವಶ್ಯಕ ಅಧಿಕಾರಕೊಟ್ಟು ಅವರು ಈ ಬಡಜೀವಿಗಳನ್ನು ಸುಲಿಯಲು ಅನುಕೂಲ ಕಲ್ಪಿಸಿಕೊಟ್ಟಂತಾಗುತ್ತದೆ. ವೇಶ್ಯಾವೃತ್ತಿ ಹೋಗಬೇಕಾದರೆ ಅವರನ್ನು ಆ ಜೀವನಕ್ಕೆ ತಳ್ಳುವ ಶ್ರೀಮಂತರು, ಮನೆಯ ಮಾಲಿಕರು, ಸಾಮಾಜಿಕ ಕಟ್ಟುಕಟ್ಟಳೆಗಳು, ಧಾರ್ಮಿಕ ಸಂಪ್ರದಾಯಗಳು ಮೊದಲು ಹೋಗಬೇಕು. ಅವರಿಗೆ ಸರಿಯಾದ ಜೀವನೋಪಾಯವನ್ನು ಸರ್ಕಾರ ಕಲ್ಪಿಸಿಕೊಡಬೇಕು.

ವಿವಾಹ ಎರಡು ಆತ್ಮಗಳ ಮೈತ್ರಿಯೆಂದು ನಾವು ಸೂತ್ರದಲ್ಲಿ ಒಪ್ಪಿಕೊಂಡರೆ ಸಾಲದು. ಅದು ಜೀವನರಂಗಕ್ಕೂ ಇಳಿಯಬೇಕು. ಒಲ್ಲದ ಗಂಡ ಹೆಂಡತಿಯೊಡನೆ ಬಾಳುವೆ ಏತಕ್ಕೆ ಮಾಡಬೇಕು; ಒಲ್ಲದ ಹೆಂಡತಿ

ಗಂಡನ ಜತೆ ಏತಕ್ಕೆ ಬಾಳು ನೀಗಬೇಕು. ವಿವಾಹ ಗಂಡು ಹೆಣ್ಣಿನ ಗಾಣವಾಗಿ ಬಿಟ್ಟಿದೆ. ಈ ಒತ್ತಾಯದ ಸಾಂಸಾರಿಕ ಜೀವನ ನಮ್ಮ ಭಾವೀಸಂತಾನದ ಆತ್ಮಶಕ್ತಿಯನ್ನು ಕುಂದಿಸುತ್ತದೆ. ಸಂಸಾರವನ್ನು ನಿಭಾಯಿಸುವ ಯೋಗ್ಯತೆಯಿದ್ದ ಹೊರತೂ ವಿವಾಹವನ್ನು ಸರ್ಕಾರ ದುಸ್ಸಾಧ್ಯಮಾಡಬೇಕು. ವಿವಾಹಿತ ಸ್ತ್ರೀಪುರುಷರಲ್ಲಿ ಒಮ್ಮತಿ ಸಮ್ಮತಿ ಇಲ್ಲವಾದಕೂಡಲೆ ಅವರು ತಮ್ಮ ದಾಂಪತ್ಯ ವಿಚ್ಛೇದನ (Divorce) ಗೊಳಿಸುವ ಅಧಿಕಾರ ಅವರಿಗಿರಬೇಕು. ಮಕ್ಕಳ ಜವಾಬ್ದಾರಿ ಇಬ್ಬರಿಗೂ ಸಮನಾಗಿರಬೇಕು. ಹಾಗೆ ತಂದೆತಾಯಿಗಳಿಬ್ಬರೂ ಮಕ್ಕಳನ್ನು ಸಾಕಲು ಅಸಮರ್ಥರಾಗಿದ್ದರೆ ಸರ್ಕಾರ ಅದರ ಜವಾಬ್ದಾರಿಯನ್ನು ವಹಿಸಬೇಕು. ವ್ಯಭಿಚಾರಕ್ಕೆ ಹುಟ್ಟಿಯೋ, ತಂದೆತಾಯಿಗಳಿಲ್ಲದೆ ನಿರಾಶ್ರಿತರಾಗಿಯೋ ಇರುವ ಮಕ್ಕಳ ಜವಾಬ್ದಾರಿಯನ್ನು ಸರ್ಕಾರ ಹೊತ್ತು ಅವರು ಉತ್ತಮ ಪೌರರಾಗಿ ಬೆಳೆಯಲು ಸಾಧಕವಾಗಬೇಕು.

ದೇಶದ ಆರೋಗ್ಯದ ದೃಷ್ಟಿಯಿಂದ ಸಂತಾನ ಸಂಯಮ (Birth Control) ಭಾರತದಲ್ಲಿ ಪ್ರಸಾರವಾಗಬೇಕು. ವಿವಾಹ ಸಮ್ಮತಿಯ (Age of Consent) ವಯಸ್ಸನ್ನು ೧೮ಕ್ಕೆ ಏರಿಸುವುದ

ಸಂತಾನ ಸಂಯಮ ರಿಂದ ಈ ಪ್ರಶ್ನೆ ಸ್ವಲ್ಪಮಟ್ಟಿಗೆ ಇಳಿಮುಖವಾಗುತ್ತದೆ. ಆದರೆ ದುರ್ಬಲ ಸಂತಾನದ ತೌರಾಗಿರುವ ಭಾರತದಲ್ಲಿ ಸಂತಾನ ಸಂಯಮದ ಆವಶ್ಯಕತೆ ಉತ್ಕಟವಾಗಿದೆ. ಸಂತಾನ ಸಂಯಮ ಪ್ರಸರಣದಿಂದ ಜನಬಲ ಕುಗ್ಗಿ ರಾಷ್ಟ್ರ ಅಧೋಗತಿಗಿಳಿದು ಪರ ರಾಷ್ಟ್ರಗಳ ಪಾಲಾಗುತ್ತದೆಂದು ಡಾ|| ಸನ್‌ಯಾತ್‌ಸೇನರು ಅಭಿಪ್ರಾಯಪಟ್ಟಿದ್ದಾರೆ. ಫ್ರಾನ್ಸಿನ ಪತನಕ್ಕೆ ಸಂತಾನಸಂಯಮದ ಅಮಿತವ್ಯಾಪ್ತಿಯೂ ಒಂದು ಕಾರಣವೆಂದು ಅವರ ಮತ. ಈ ತತ್ವ ಭಾರತಕ್ಕೆ ಅನ್ವಯಿಸುವುದಿಲ್ಲ. ಅಧಿಕ ಪ್ರಜಾಸಂಖ್ಯೆಯಿಂದ ಭಾರತ ಅವಸ್ಥೆಪಡುತ್ತಿದೆ. ಜಪಾನಿನಲ್ಲಿಯೂ ಇದೇ ಹಣೇಬರಹ. ನಾಡು ಸಾಕಲಾರದ ಮಕ್ಕಳನ್ನು ನಾಡವರು ಹುಟ್ಟಿಸಬಾರದು. ಅಮಿತ ಪ್ರಜಾಭಿವೃದ್ಧಿಯಿಂದ ಹಲವು ಸಮಸ್ಯೆಗಳನ್ನು ನಾವೇ ಹುಟ್ಟಿಹಾಕುವುದು ಮಾತ್ರವಲ್ಲದೆ ದೇಶದಲ್ಲಿ ಅನವಶ್ಯಕವಾದ ಅಸಂತುಷ್ಟಿಯನ್ನು ತಂದೊಡ್ಡಿ ಶಾಂತಿಭಂಗಕ್ಕೆ ಕಾರಣರಾಗುತ್ತೇವೆ.

ಕರ್ನಾಟಕದ ಪರಿಸ್ಥಿತಿ

ಕರ್ನಾಟಕದಲ್ಲಿಯೂ ಇವೆಲ್ಲ ಸಜೀವ ಸಮಸ್ಯೆಗಳಾಗಿ ಉಳಿತಿವೆ. ಕರ್ನಾಟಕದ ವಿಚಿತ್ರ ರಾಜಕೀಯ ಪರಿಸ್ಥಿತಿಯಿಂದ ಇವುಗಳ ಕಡೆಗೆ ಯಾರ ಲಕ್ಷ್ಯವೂ ಹೋಗಿಲ್ಲ. ಇಪ್ಪತ್ತೆರಡು ಸರ್ಕಾರಗಳ ಕೆಳಗೆ ಕರ್ನಾಟಕ ಹರಿದು ಹಂಚಿಹೋಗಿದೆ. ಕೆಲವು ಆಶ್ರಿತ ಸಂಸ್ಥಾನಗಳಿಗೆ ಸೇರಿವೆ; ಕೆಲಭಾಗ ಬ್ರಿಟಿಷ್ ಸರ್ಕಾರದ ಆಧಿಪತ್ಯಕ್ಕೆ ಸೇರಿದೆ. ಆಶ್ರಿತ ಸಂಸ್ಥಾನಗಳ ತೊಡಕನ್ನು ಪರಿಹರಿಸದಿದ್ದರೆ ಭಾರತ ಸಮಸ್ಯೆ ಹರಿಯದ ಕಗ್ಗಂಟು. ಭಾರತದ ೫೬೨ ಆಶ್ರಿತ ಸಂಸ್ಥಾನಗಳಲ್ಲಿ ಮೈಸೂರು, ತಿರುವನಂತಪುರ, ಕೊಚ್ಚಿ, ಬರೋಡಾ, ಪುದುಕೋಟೆ ಸಂಸ್ಥಾನಗಳು ಮಾತ್ರ ಸ್ವಲ್ಪಮಟ್ಟಿಗೆ ಪ್ರಗತಿಗಾಮಿಗಳಾಗಿವೆ. ರಜಪುಟಾಣ ಸಂಸ್ಥಾನಗಳು, ಉತ್ತರ ಕರ್ನಾಟಕದ (ದಕ್ಷಿಣ ಮಹಾರಾಷ್ಟ್ರ ಎಂಬ ತಪ್ಪು ಹೆಸರೂ ಇವಕ್ಕಿವೆ) ಸಂಸ್ಥಾನಗಳೂ, ಹೈದರಾಬಾದು ಸಂಸ್ಥಾನವೂ, ನಿರಂಕುಶ ಪ್ರಭುತ್ವದ ಪರಮಾವಧಿಗೇರಿವೆ. ಅಲ್ಲಿನ ಪ್ರಜೆಗಳನ್ನು ಆಳರಸರು ತುಳಿದು ಉಸಿರಾಡುವ ಹೆಣಗಳನ್ನಾಗಿ ಮಾಡಿದ್ದಾರೆ. ಭಾರತದ ನೂತನ ರಾಜ್ಯಾಂಗ ರಚನೆಯಲ್ಲಿ ಸಣ್ಣಪುಟ್ಟ ಜಾಗಿರದಾರಿಗಳಂತಿರುವ ಆಶ್ರಿತ ಸಂಸ್ಥಾನಗಳಂತೂ ಹೋಗಲೇ ಬೇಕು. ದೊಡ್ಡ ಸಂಸ್ಥಾನಗಳಲ್ಲಿ ಪೂರ್ಣ ಜವಾಬ್ದಾರಿ ಸರ್ಕಾರ ವ್ಯವಸ್ಥೆಯಾಗಬೇಕು.

ಕರ್ನಾಟಕ ಸುಲಿಗೆಗೆ ಸುವರ್ಣಭೂಮಿಯಾಗಿ ಬಿಟ್ಟಿದೆ. ಪ್ರಜೆಗಳು ಕನ್ನಡಿಗರು, ಆಳುವವರು ಮಹಾರಾಷ್ಟ್ರದವರು; ಹೀಗಾಗಿ ಕನ್ನಡ ಪ್ರಜೆ ಹೇಳಲಸದಳವಾದ ಹಿಂಸೆಗಳಿಗೆ ಗುರಿಯಾಗುತ್ತಿದ್ದಾರೆ. ಗಡಿನಾಡುಗಳಲ್ಲಿರುವ ಆಶ್ರಿತ ಸಂಸ್ಥಾನಗಳಲ್ಲಿ ಕನ್ನಡ ಶಾಲೆಗಳಿಲ್ಲ, ಕನ್ನಡಿಗರಿಗೆ ರಾಜ್ಯನಿರ್ವಹಣದಲ್ಲಿ ಸ್ಥಾನಮಾನವಿಲ್ಲ. ರಾಮದುರ್ಗ ಪ್ರಕರಣದಂತಹ ದುರಂತಗಳು ಸಂಭವಿಸಿ ಕನ್ನಡ ಜನತೆಯನ್ನು ಹಲವು ಕೋಮುವಾರುಭೂತಗಳಿಗೆ ಗ್ರಾಸ ಮಾಡಿವೆ. ಒಳಗಿನ ಬಂಡವಾಳಗಾರರ ಸುಲಿಗೆ, ಹೊರಗಿನಿಂದ ಬರುವ ಮಾರವಾಡಿ, ಮುಲ್ತಾನಿ, ಗುಜರಾತಿ, ತಮಿಳು, ತೆಲುಗು ಬಂಡವಾಳಗಾರರ ಸುಲಿಗೆ, ಜತೆಗೆ ಸಂಸ್ಥಾನಿಕರ ಸುಲಿಗೆಗಳಿಂದ ಜನ ಕಂಗೆಟ್ಟು ಕುಸಿದು ಹೋಗಿದ್ದಾರೆ.

ಈ ಸುಲಿಗೆಯನ್ನು ಎದುರಿಸಿ ಕರ್ನಾಟಕವನ್ನು ಒಂದುಗೂಡಿಸುವ ಶಕ್ತಿ ಸಾಮಾನ್ಯ ಜನತೆಗಿದೆ. ಆದರೆ ಕೋಮುವಾರು ನಾಯಕತ್ವ, ಏಕಪಕ್ಷೀಯ ನಾಯಕತ್ವಗಳಿಂದ ಕರ್ನಾಟಕದಲ್ಲಿ ಈ ಕೆಲಸವಾಗಿಲ್ಲ. ಕರ್ನಾಟಕಕ್ಕೆ ಒದಗಿರುವ ಅಧಿವ್ಯಾಧಿಗಳನ್ನೆದುರಿಸಲು ಕರ್ನಾಟಕದ ಸರ್ವಪಕ್ಷ, ಬಣ, ಗುಂಪುಗಳು ಒಂದಾಗಿ ದುಡಿಯಬೇಕು. ಇದಕ್ಕೆ ಅಡಚಣೆಯನ್ನು ತಂದೊಡ್ಡುವವರು ಇಂದಿನ ನಾಯಕರು. ರಾಮದುರ್ಗದ ಪ್ರಕರಣದಲ್ಲಿ ಶ್ರೀ ದೇಶಪಾಂಡೆ ಗಂಗಾಧರರಾಯರ ಮುತ್ಸದ್ದಿತನದ ಪ್ರಭಾವದಿಂದ ಕರ್ನಾಟಕದ ಭವಿಷ್ಯವೇ ಹಾಳಾಯಿತು. ಒಂದು ಮನೆಯವರ ಹಾಗಿದ್ದ ಉತ್ತರ ಕರ್ನಾಟಕದ ಬ್ರಾಹ್ಮಣ, ವೀರಶೈವರು ಎರಡು ಪಕ್ಷವಾಗಿ ಕರ್ನಾಟಕವನ್ನು ಕುರುಕ್ಷೇತ್ರ ಮಾಡಿಬಿಟ್ಟರು. ಇಂದಿನ ಕರ್ನಾಟಕದಲ್ಲಿ ಕನ್ನಡಿಗರಿಗೆ ನೆಲೆಯಿಲ್ಲ, ಕನ್ನಡ ಭಾಷೆ ಬದುಕುವ ಹಾಗಿಲ್ಲ, ಕನ್ನಡತನ ಯಾವದೇ ರೂಪದಲ್ಲಿಯೂ ಉಳಿಯುವ ಹಾಗಿಲ್ಲ. ಈ ವಿಪನ್ನಾವಸ್ಥೆಗೆ ನಮ್ಮ ನಾಯಕರ ಸಂಕುಚಿತ, ಸ್ವಾರ್ಥಪರ ಮನೋಭಾವನೆಯೇ ಕಾರಣ. ಕರ್ನಾಟಕದ ನಾಯಕರು (ರಾಜಕೀಯ, ಸಾಹಿತ್ಯ, ಸಾಮಾಜಿಕ ರಂಗಗಳಲ್ಲಿನ) ಒಂದು ಉಪಕಾರ ಮಾಡಬೇಕು – ಸಾರ್ವಜನಿಕ ಜೀವನದಿಂದ ದೂರವಾಗಿ ದೇಶವನ್ನು ಕ್ರಾಂತಿಯ ಕರಾಳಖಡ್ಗದಿಂದ ಕಾಪಾಡಬೇಕು. ತರುಣರು ಮುಂದೆ ಬಂದು ನಾಯಕತ್ವವನ್ನು ತಮ್ಮ ಕೈಗೆ ತೆಗೆದುಕೊಳ್ಳಬೇಕು. **ಭಾರತದಲ್ಲಿರಬೇಕಾದುದು ಒಂದೇ ಧರ್ಮ – ಭಾರತ ಧರ್ಮ – ಇದರ ಮುಂದೆ ಎಲ್ಲಾ ಧರ್ಮಗಳೂ, ಜಾತಿಗಳೂ, ಮತಗಳೂ, ರಾಜಕೀಯ, ಸಾಮಾಜಿಕ, ಸಾಹಿತ್ಯ ಪಕ್ಷ ವಿಪಕ್ಷಗಳೂ ಹೇಳಹೆಸರಿಲ್ಲದಾಗಬೇಕು.**

ಕನ್ನಡ ಸಾಹಿತ್ಯ ನವನೂತನ ಕರ್ನಾಟಕದ ನಿರ್ಮಾಣಕ್ಕೆ ಮೀಸಲಾಗಬೇಕು. ಜಾಗೃತ ಕರ್ನಾಟಕವೆಂದರೆ ಜಾಗೃತ ಭಾರತ. ಭಾರತ ಸರ್ವಾಂಗ ಸುಂದರವೂ ಪರಿಪುಷ್ಟವೂ ಆಗಬೇಕಾದರೆ ಕರ್ನಾಟಕ ಸರ್ವಾಂಗಸುಂದರ, ಪರಿಪುಷ್ಟವಾಗಬೇಕು. ಈ ವಾತಾವರಣ ಬೆಳೆಯುವುದಕ್ಕೆ ಕನ್ನಡ ಸಾಹಿತಿಗಳ ಜವಾಬ್ದಾರಿ ಹಿರಿದು. ಧರ್ಮ, ಅರಸರ ಸೆರಗನ್ನು ಹಿಡಿದು ಅಂಬೆಗಾಲಿಕ್ಕುತ್ತಿರುವ ಪ್ರತಿಗಾಮಿಗಳ ಸಾಹಿತ್ಯ ತನ್ನ ಹಂಸಗೀತೆಯನ್ನು ಹಾಡಬೇಕು.

ನಮ್ಮ ನೋಟ ಅರಮನೆ, ಗುರುಮನೆಯನ್ನು ಬಿಟ್ಟು ಚಾಲ್, ಗುಡಿಸಲುಗಳ ಕಡೆ ತಿರುಗಬೇಕು.

ಕನ್ನಡ ನಾಡಿನ ಬಹುಸಂಖ್ಯಾತರು ಹಳ್ಳಿಗರು ಮತ್ತು ಶ್ರಮಜೀವಿಗಳು. ಆದರೆ ಅವರನ್ನು ಮೂಗುದಾರ ಹಾಕಿ ನಡೆಸುತ್ತಿರುವವರು ಮಧ್ಯಮವರ್ಗದ 'ಬೂರ್ಜ್ವಾ' (Bourgeosie) ಗಳು. ನಮ್ಮ ಸಾಹಿತಿಗಳು ಈ ಬೂರ್ಜ್ವಾಗಳೇ. ಅವರ ಗುರಿ, ನೋಟವೆಲ್ಲಾ ಬೂರ್ಜ್ವಾ ಸರ್ವಾಧಿಕಾರಿತ್ವವನ್ನು ಸಂರಕ್ಷಿಸುವುದು. ಬೂರ್ಜ್ವಾ ಸರ್ವಾಧಿಕಾರಿತ್ವವೂ, ಬಂಡವಾಳಗಾರರ ಸುಲಿಗೆ ವಿಧಾನವೂ ಹೋಗ ಬೇಕಾದರೆ ಸಾರ್ವತ್ರಿಕ ಅಕ್ಷರ ಪ್ರಚಾರ, ವಯಸ್ಕರ ಶಿಕ್ಷಣಗಳೇ ಯೋಗ್ಯ ಸಾಧನಗಳಾಗಿವೆ. ಈ ಕೆಲಸವನ್ನು ನಮ್ಮ ವಿದ್ಯಾರ್ಥಿಗಳು ಕೈಗೊಳ್ಳಬೇಕು. ಈ ದಾಸ್ಯಾಗಾರಗಳಾಗಿರುವ ಕಾಲೇಜು, ಹೈಸ್ಕೂಲು ಶಿಕ್ಷಣವನ್ನು ಸಾಕುಮಾಡಿ, ಜನಪದದ ಉತ್ಕರ್ಷಹೇತುವಾದ ಸಾರ್ವತ್ರಿಕ ಅಕ್ಷರಪ್ರಚಾರವನ್ನು ವಿದ್ಯಾರ್ಥಿಗಳು ತಮ್ಮ ಜೀವನಾದರ್ಶ ಮಾಡಿಕೊಳ್ಳಬೇಕು.

ಆಧುನಿಕ ಕನ್ನಡ ಸಾಹಿತ್ಯ

ಆಧುನಿಕ ಕನ್ನಡ ಸಾಹಿತ್ಯ ಬಹುಮಟ್ಟಿಗೆ ನಿರರ್ಥಕವಾದ ಮಧ್ಯಮ ವರ್ಗ ಸಾಹಿತ್ಯ; ತರುಣ ತರುಣಿಯರ ಅಪಕ್ವ ಪ್ರಣಯದ ಚೆಲ್ಲಾಟಗಳಿಂದ ತುಂಬಿದೆ. ಜಾನಪದ ದೃಷ್ಟಿ ಅದರಲ್ಲಿ ಶೂನ್ಯ. ಹಳ್ಳಿಗರನ್ನು ನಾವು ಸಾಕಷ್ಟು ಗಮನಿಸಿಲ್ಲ. ಕೆ. ವಿ. ಪುಟ್ಟಪ್ಪನವರ ಅದ್ಭುತ ಕಾದಂಬರಿ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ', ಕೋ. ಶಿ. ಕಾರಂತರ 'ಚೋಮನ ದುಡಿ' - 'ಮರಳಿ ಮಣ್ಣಿಗೆ', ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರ 'ಹಳ್ಳಿಯ ಕಥೆಗಳು' ಚಿತ್ರಗಳು ಬಿಟ್ಟರೆ ಬೇರೆ ಸಾಹಿತ್ಯವಿಲ್ಲ. ಹಳ್ಳಿಯ ಶ್ರಮಜೀವಿಗಳ ಸಹಜ ಚಿತ್ರವನ್ನು ಪುಟ್ಟಪ್ಪನವರೂ, ಗೊರೂರ ರವರೂ ಕೊಟ್ಟಿದ್ದಾರೆ. ಆದರೆ ಸಾಲದು. ನೂರಾರು ಲೇಖನಿಗಳು ಈ ಹಾದಿಯಲ್ಲಿ ಹರಿಯಬೇಕು. ಭಿನ್ನದೃಷ್ಟಿಗಳ, ವಿವಿಧ ಸಮಾಜಗಳ, ವಿವಿಧ ಸಂತಾಪಗಳ ರಕ್ತಚಿತ್ರ ನಮ್ಮ ಚಿತ್ತವನ್ನೆದುರಿಸಬೇಕು. ಹಳ್ಳಿಗರ ಪರಿಸ್ಥಿತಿಯನ್ನು ಪೃಥಃಕರಿಸಿ ಡಿ. ಕೃಷ್ಣಅಯ್ಯಂಗಾರ್ಯರು ಎರಡು

ಉತ್ತಮ ಗ್ರಂಥಗಳನ್ನು ಬರೆದಿದ್ದಾರೆ. ಇಂತಹ ಗ್ರಂಥಗಳು ನೂರರಗಟ್ಟಳೆ ಬರಬೇಕು. ಪ್ರತಿ ಮನೆಯನ್ನು ಅವು ಸೇರಬೇಕು.

ಕೂಲಿಗಾರರ ಜೀವನ, ಸಂಕಷ್ಟ ನಮ್ಮ ಲೇಖಕರಿಗೆ ಮುಚ್ಚಿದ ಕದ. ಅವರನ್ನು ಮನುಷ್ಯವರ್ಗಕ್ಕೆ ಸೇರಿಸುವ ಔದಾರ್ಯವನ್ನೂ ನಾವು ತೋರಿಸಿಲ್ಲ.

ಕುಮಾರ ವೆಂಕಣ್ಣ, ಎಸ್. ಅನಂತನಾರಾಯಣ

ಕೂಲಿಗಾರ ಸಾಹಿತ್ಯ ಇವರ ಕವಿತೆಗಳು, ಕೆ. ಶ್ರೀಕಂಠೇಶ್ವರನ್ ಅವರ 'ಪಗಾರ ದಿನ', ನಾಟಕ ಮತ್ತು ಕೆಲವು ಕಥೆಗಳು, ಅ. ನ. ಕೃ. ಅವರ 'ಸಾಹಿತ್ಯ ರತ್ನ' ಬಿಟ್ಟರೆ ಕೂಲಿಗಾರರ ಜೀವನವನ್ನು ಚಿತ್ರಿಸುವ ಬೇರೆ ಸಾಹಿತ್ಯವೇ ನಮ್ಮಲ್ಲಿಲ್ಲ. ಕೂಲಿಗಾರರ ಸಂಬಂಧವನ್ನು ಬೆಳಸಿಕೊಂಡು, ಅವರ ಬಗ್ಗೆಯೂ, ಅವರಿಗೆ ಬೇಕಾದುದೂ ಆದ ಸಾಹಿತ್ಯವನ್ನು ಹೇಗೆ ಸೃಷ್ಟಿಸಬಹುದೆಂಬುದರ ಬಗ್ಗೆ ಯುಗಪುರುಷ ಲೆನಿನ್ * ಕೆಲವು ಅಮೂಲ್ಯ ಸಲಹೆಗಳನ್ನಿತ್ತಿದ್ದಾನೆ. ಕನ್ನಡ ಸಾಹಿತಿಗಳ ಲಕ್ಷ್ಯ ಸ್ವಲ್ಪ ಆ ಕಡೆ ಹೊರಳಲಿ.

---

* "From whom did Lenin learn to speak and write in such a popular style? He learned from Pisarev, whose works he had read much of at one time, and from Chernyshevsky. *But he learnt most from the workers themselves.* He talked with them for hours, inquiring about all the petty details of their life in the factory, listening carefully to their casual remarks, and to the questions they put. He adjusted his observation to their level of knowledge, so that he could find out just what they did not understand on any given question, and why.

But while working hard to assure that he conveyed his ideas to the workers in the clearest and best possible form, Ilyich at the same time remonstrated against all vulgarisation, all attempts to narrow the question down for the workers, to simply its substance.

Ilyich wrote in *What is to be done?* (1901–1902) "I am far from denying the necessity for popular Literature for the workers, and especially popular (but of course not vulgar)

ಪ್ರಗತಿಶೀಲ ಸಾಹಿತಿಗಳ ಗುರಿ ಕೇವಲ ಸಾಹಜಿಕವಾದ ಸಾಹಿತ್ಯವನ್ನು ನಿರ್ಮಾಣ ಮಾಡುವುದೇ ಅಲ್ಲ. ಸಾಹಿತ್ಯದಲ್ಲಿ ನೈಸರ್ಗಿಕತೆಯೂ ಇರಬೇಕು, ಅಜೇಯಶಕ್ತಿಯೂ ಇರಬೇಕು. ಅದು ನಮ್ಮ ಜನತೆಯ ಸಂಸ್ಕೃತಿ, ಆಶೆ, ಆಶಯ, ಸುಖ ದುಃಖಗಳ ಕನ್ನಡಿಯಾಗಿರಬೇಕು. ಸಾಹಿತಿ ಜನತೆಯ ಮಾರ್ಗದರ್ಶಕನಾಗಬೇಕು. ತನ್ನ ಬಾಳಿನಿಂದ, ಭಾವನೆಯಿಂದ, ವಿಚಾರದಿಂದ. ಈ ಉದ್ದೇಶದಿಂದ ಹೊರಗೆ ನಿಂತ ಸಾಹಿತ್ಯ ಸತ್ತಸಾಹಿತ್ಯ. ಅದ

---

literature for the especially backward workers. But what annoys me is that pedogogics are confused with questions of politics and organisation. You, gentlemen, who talk so much about the 'average workers', as a matter of fact rather insult the workers by your desire to *talk down* to them, to stoop to them when discussing labour politics or labour organisation. Talk about serious things in a serious manner; leave pedogogics to the pedagogues, and not to politicians and organisers!

Three years latter in June (1905) Vladimir Ilyich returned to the question alluded to in *What is to be done?* and wrote:

"In the political activity of a Social-democratic party there always is, and will be, a certain amount of tutoring; it is necessary to train the entire class of employed workers in their role as fighters for the emancipation of entire humanity from all oppression. It is necessary to continually to teach ever new strata of this class. We must be capable of approaching the rawest, undeveloped member of this class - those less touched by our science, and the science of life - in such a way as to get closer to them. We must be able, with restraint and patience, to educate them to Social - democratic consciousness. In so doing we must not turn our teaching into dry dogma, we must instruct not by books alone, but also by *participating in the day-to-day struggle of these very same raw, these very same undeveloped, strata of the proletariat.*"

(Italics mine - a. n. k.)

—From N. K. Krupskaya's "MEMOIRS OF LENIN"

ರಿಂದ ಸಾಹಿತಿಯು ಚಾಪಲ್ಯ ಪೂರಣವಾಗಬಹುದಲ್ಲದೆ ದೇಶಕ್ಕಾಗಲಿ ಜನತೆಗಾಗಲಿ ಏನೂ ಪ್ರಯೋಜನವಾಗಲಾರದು. ಈಗ ಕನ್ನಡದಲ್ಲಿ ಹಿರಿಯರಿಂದ ಬರುತ್ತಿರುವ ಸಾಹಿತ್ಯದ ಬಹ್ವಂಶ ಸತ್ತಸಾಹಿತ್ಯವೆನ್ನುವುದಕ್ಕೆ ಇದುವರೆಗೆ ಅವುಗಳಿಗೆ ಸಿಕ್ಕಿರುವ ಪ್ರೋತ್ಸಾಹವೇ ಸಾಕು. ಹಿರಿಯರ ಸ್ನೇಹಿತರ, ಶಿಷ್ಯರನ್ನುಳಿದು ಅದು ಬೇರೆಯವರಿಗೆ ಬೇಕಿಲ್ಲ. ಜನಪದ ಅವುಗಳನ್ನು ಚಿಮುಟದಿಂದಲೂ ಎತ್ತಿಹಿಡಿಯುವುದಿಲ್ಲ. ಒಂದು ಸಾವಿರ ಪ್ರತಿ ಮಾರಾಟವಾಗಬೇಕಾದರೆ ೧೦-೧೨ ವರ್ಷಗಳು ಹಿಡಿಯುತ್ತವೆ. ಪಠ್ಯಪುಸ್ತಕ ಸಮಿತಿಯ ವರದ ಹಸ್ತವಿಲ್ಲದಿದ್ದರೆ ಇಂದಿನ ಸಾಹಿತ್ಯಪ್ರಪಂಚ ಶೂನ್ಯವಾಗುತ್ತಿತ್ತು. ಸಮಿತಿಗೆ ಬೇಕಾದುದು 'ಮಡಿ ಸಾಹಿತ್ಯ'. ಅದನ್ನು ಪೂರೈಸುವವರು ದೊಡ್ಡ ಅಧಿಕಾರಗಳಲ್ಲಿರುವ ನಾಲ್ಕು ಜನ ಹಿರಿಯರು. ಕಾಲುಶತಮಾನದ ಉತ್ಕಟ ಪ್ರಸಾರವಾದರೂ ಕನ್ನಡ ಪುಸ್ತಕಗಳ ವ್ಯಾಪ್ತಿ ಸಾವಿರವನ್ನು ಮೀರದಿರುವುದರ ಉತ್ತರವಾದಿತನ ಈ ಹಿರಿಯರದು ಮತ್ತು ಅವರು ಅನುಸರಿಸಿದ ಸ್ವಾರ್ಥ, ಸಂಕುಚಿತ ನೀತಿಯದು. ಇವರ ಧೋರಣೆಯಿಂದ ನಮ್ಮ ಜನ ಇನ್ನೂ 'ಹಲ್ಲಿ ಶಕುನ' 'ನಲವತ್ತುಮಂದಿ ಚೋರರ ಕಥೆ' 'ಕೃಷ್ಣ ಪಾರಿಜಾತ' ಓದುವ ಸ್ಥಿತಿಯನ್ನು ದಾಟಿಲ್ಲ. ರವೀಂದ್ರರ ಹಾಡುಗಳನ್ನು ಬಂಗಾಳದ ಹಳ್ಳಿಗರು ಹಾಡಿಕೊಂಡು ಕುಣಿಯುತ್ತಾರೆ. ವಲ್ಲತ್ತೋಳರ ಕಾವ್ಯವನ್ನು ಓದದ, ಓದಿಸಿ ಕೇಳದ ಮಲಯಾಳಿಯಿಲ್ಲ. ಆದರೆ ಕನ್ನಡನಾಡಿನ ಹಳ್ಳಿಗರು ಇನ್ನೂ ಜೈಮಿನಿ ಭಾರತದ 'ಸೀತಾ ವನವಾಸ', ಕುಮಾರವ್ಯಾಸನ 'ಕರ್ಣಕಥೆ'ಯಲ್ಲೇ ಕುಳಿತಿದ್ದಾರೆ. ನಮ್ಮ ಕವಿಗಳು ಹಾಡುವುದು ಆತ್ಮಪ್ರಶಂಸನಾ ಗೀತೆಗಳನ್ನು, ನಮ್ಮ ಗಮಕಿಗಳು ಹಾಡುವುದು ಕರ್ಣಶೂಲೆ ತರುವ ಕರ್ಣವೃತ್ತಾಂತ... ಎರಡು ದಶಕಗಳಿಂದ ಇದು ನಡೆದುಬಂದಿದೆ. ಇಂದಿನ ಸಾಹಿತ್ಯನಾಯ... ದಲ್ಲಿ ಇನ್ನು ಹತ್ತುದಶಕಗಳಾದರೂ ಈ ಪರಿಸ್ಥಿತಿ ಸುಧಾರಿಸುವುದಿಲ್ಲ.

ರಷ್ಯಾದ ಮೇಲ್ಪಂಕ್ತಿ

ಸ್ವಲ್ಪ ರಷ್ಯಾದ ಕಡೆ ಕಣ್ಣುಹೊರಳಿಸುವ. ೧೯೧೭ ಅಕ್ಟೋಬರ ತಿಂಗಳಲ್ಲಿ ರಷ್ಯಾದ ಮಹಾಕ್ರಾಂತಿಯನ್ನು ಲೆನಿನ್ ಸಾಧಿಸಿದ. ಅಂದಿನಿಂದ ಅದರ ಸ್ವರೂಪವೇ ಬದಲಾಯಿಸಿತು. ಎರಡು ದಶಕಗಳಲ್ಲಿ ಸೋವಿಯಟ್ಟರು ನಿರಕ್ಷರತೆಯನ್ನು ರಷ್ಯಾದಲ್ಲಿ ತೊಡೆದುಹಾಕಿದರು. ಇಂದು ಮನೆಮನೆಯಲ್ಲಿ

ಗಾರ್ಕಿ, ಪುಷ್ಕಿನ್, ಷೇಕ್ಸ್‌ಪಿಯರ್. ರಷ್ಯಾದಲ್ಲಿ ಆಗಿರುವ ಗ್ರಂಥಪ್ರಸಾರ ಈ ಅಂಕೆಗಳಿಂದ* ವಿಶದವಾಗುತ್ತದೆ :

ಗ್ರಂಥಕರ್ತ	ಸಾವಿರಗಳಲ್ಲಿ ಸಂಖ್ಯೆ	ಎಷ್ಟು ಭಾಷೆಗಳಲ್ಲಿ
ಚೆಕಾಫ್	೧೫,೩೨೬	೫೬
ಹೆರ್ಜೆನ್	೧,೩೧೨	೨
ಗೊಗೋಲ್	೭,೭೩೧	೩೩
ಗಾರ್ಕಿ	೩೯,೮೯೬	೬೫
ಪುಷ್ಕಿನ್	೨೯,೮೪೦	೭೨
ಟಾಲಸ್ಟಾಯ್	೨೦,೯೧೬	೫೭
ಟರ್ಗಿನೀವ್	೯,೯೦೬	೩೯

ರಷ್ಯಾ ಓದುವ ಇತರ ದೇಶಗಳ ಗ್ರಂಥಕರ್ತರು (ಸಾವಿರಗಳಲ್ಲಿ)

ಗ್ರಂಥಕರ್ತರು	೧೮೯೪—೧೯೧೬	೧೯೧೭—೪೦
ಮೋಪಸಾ	೧,೫೧೭	೩,೨೩೪
ಡಿಕನ್ಸ್	೮೫೦	೨,೦೮೬
ಷೇಕ್ಸ್‌ಪಿಯರ್	೬೧೧	೧,೨೦೯
ಷಿಲ್ಲರ್	೪೫೫	೫೨೫
ಜೊಲಾ	೯೩೯	೨,೧೦೯
ಹ್ಯೂಗೋ	೪೬೬	೧,೮೮೬
ರೊಮೇ ರೋಲಾ	೨೪	೨,೦೩೬
ಬೈರನ್	೧೭೮	೪೮೮
ಬಾಲ್‌ಜಾಕ್	೧೦೬	೧,೭೪೩
ಗಯಟೆ	೨೪೬	೪೮೨
ಆನತೋಲ್ ಫ್ರಾನ್ಸ್	೫೨೩	೧,೭೮೮

* ಈ ಸಂಖ್ಯಾವಿವರಗಳನ್ನು ಮಾರಿಸ್ ಹಿಂಡಸ್ ಅವರ 'ಮದರ್ ರಷ್ಯಾ' ಗ್ರಂಥದಿಂದ ಉದ್ಧರಿಸಿದ್ದೇವೆ.

ಅನುವಾದಗಳ ಮಾರಾಟ

ಪರ್ಲ್ ಬಕ್	:	೧,೪೦,೦೦೦
ಅಪ್ಟನ್ ಸಿಂಕ್ಲೇರ್	:	೨೬,೩೩,೦೦೦
ಜ್ಯಾಕ್ ಲಂಡನ್	:	೬೪,೨೮,೦೦೦
ಮಾರ್ಕ್ ಟ್ವೇನ್	:	೨,೦೦೪,೮೫೦
ಓ ಹೆನ್ರಿ	:	೧೧,೪೪,೩೧೦
ಪಾಲ್ ಡಿ ಕ್ರುಯಿಫ್	:	೯,೦೦,೦೦೦

ಕನ್ನಡಕ್ಕೆ ಈ ಸಂಖ್ಯೆಗಳನ್ನು ಹೋಲಿಸಿನೋಡುವ ಕೆಲಸವನ್ನು ಓದುಗರಿಗೇ ಒಪ್ಪಿಸಿಬಿಡುತ್ತೇವೆ.

ನಮ್ಮ ಸಾಹಿತ್ಯ, ಜನಜೀವನ, ಸ್ವಾತಂತ್ರ್ಯ, ಎಲ್ಲಾ ಒಂದಕ್ಕೊಂದು ಸರಪಳಿಯಂತೆ ಬಿಗಿದುಕೊಂಡಿದೆ. ಒಂದನ್ನುಳಿದು ಒಂದು ಬಾಳಲು ಶಕ್ಯವಿಲ್ಲ. **ಸ್ವಾತಂತ್ರ್ಯವಿಲ್ಲದೆ ಸಾಹಿತಿ ಬದುಕಲಾರ, ಸಾಹಿತಿಯಿಲ್ಲದೆ ಸ್ವಾತಂತ್ರ್ಯ ಸಿದ್ಧಿಸಲಾರದು, ಊರ್ಜಿತವಾಗಲಾರದು.**

ಪ್ರಗತಿಶೀಲರ ಗುರಿ - ಗಮ್ಯ ಎಲ್ಲಾ ಭಾರತ. ಭಾರತದ ಸ್ವಾತಂತ್ರ್ಯ ಮೊದಲು ಸಿದ್ಧಿಸಬೇಕು. ಅನಂತರ ಇತರ ಯೋಚನೆ.

ಉಪಸಂಹಾರ ರಾಜಕಾರಣದ ಬಗ್ಗೆ ನಾವು ತಳೆದಿರುವ ಧೋರಣೆಯನ್ನು 'ರಷ್ಯಾದ ಮುನ್ನಡೆ' ಗ್ರಂಥಕ್ಕೆ ನಾವು ಬರೆದಿರುವ ಮುನ್ನುಡಿಯಿಂದ ಉದ್ಧರಿಸುತ್ತೇವೆ :

"ನಮ್ಮ ರಾಜಕೀಯ ಮಿತವಾದಿಗಳು (Liberals) ಪ್ರತಿಯೊಂದಕ್ಕೂ ಇಂಗ್ಲಂಡನ್ನೇ ಆದರ್ಶವಾಗಿ ಪರಿಗ್ರಹಿಸಿರುವಂತೆ ನಮ್ಮ ದೇಶದ ವಿಧವಿಧ ರಾಜಕೀಯ ಬಣಗಳು ಜರ್ಮನಿ, ಜಪಾನ್, ಅಮೇರಿಕಾಗಳಿಂದ ನಮ್ಮ ಉದ್ಧಾರವಾಗುತ್ತದೆಂದು ಭಾವಿಸುತ್ತಾರೆ. ಹಾಗೇ ರಷ್ಯಾದ ಕಡೆ ನೋಡುವವರೂ ಉಂಟು. ಜರ್ಮನಿ, ಅಮೇರಿಕಾ, ಜಪಾನ್, ರಷ್ಯಾ ಯಾವ ದೇಶದಿಂದಲೂ ಹಿಂದೂಸ್ಥಾನದ ಉದ್ಧಾರವಾಗುವುದಿಲ್ಲ. ನಮ್ಮ ಶಕ್ತಿ, ಸಾಮರ್ಥ್ಯ, ತ್ಯಾಗ, ಪರಾಕ್ರಮಗಳನ್ನವಲಂಬಿಸಿದೆ ನಮ್ಮ ಸ್ವಾತಂತ್ರ್ಯ.

ಇಂಗ್ಲೆಂಡಿನ ಸ್ವಾತಂತ್ರ್ಯಧೋರಣೆ, ಮಿಲ್‌ಬರ್ಕ್ ಇವರ ಆದರ್ಶವಾದದಿಂದ ನಮಗೆ ಬೆಳಕು ಬಂದಿದೆ. ಜರ್ಮನಿಯ ಕಾರ್ಲ್‌ಮಾರ್ಕ್ಸನ ಜನತಾವಾದ

ನಮ್ಮ ಹೃದಯವನ್ನು ಹಿಡಿದಿದೆ. ಅಮೇರಿಕಾ, ಜಪಾನ್ ದೇಶೀಯರ ವ್ಯವಹಾರ ನೈಪುಣ್ಯವನ್ನು ಕಂಡು ಬೆರಗಾಗಿದ್ದೇವೆ. ರಷ್ಯಾದ ಮೇಲ್ಪಂಕ್ತಿ, ಧೋರಣೆಗಳಿಂದ ಕಲಿಯತಕ್ಕದ್ದು ಬಹಳವಾಗಿದೆ. ಎಲ್ಲ ದೇಶಗಳ ಬಗೆಬಗೆಯ ದೀಪಗಳನ್ನು ಕೊಂಡು ನಮ್ಮ ಕೂಡುವ ಮನೆಯನ್ನು ಅಲಂಕರಿಸೋಣ. ಆದರೆ ನಮ್ಮ ದೇವರ ಮುಂದೆ ಹಚ್ಚಿಡಲು ಹರಳೆಣ್ಣೆ ಕುಡಿದ ನಂದಾದೀಪವೇ ಬೇಕು. ನಮ್ಮ ಆತ್ಮಪ್ರಣತೆಯಲ್ಲಿ ಬಾಳದೀವಿಗೆ ಹಚ್ಚಿ ಸ್ವಾತಂತ್ರ್ಯದೇವಿಯನ್ನು ಆರಾಧಿಸಬೇಕು. ಭಾರತೀಯನಿಗೆ ಇದಕ್ಕಿಂತಲೂ ಶ್ರೇಯಸ್ಕರವಾದ ಮಾರ್ಗ ಇನ್ನೊಂದಿಲ್ಲ."

ಇದೇ ನಮ್ಮ ಧೋರಣೆ – ಇದೇ ನಮ್ಮ ಘೋಷಣೆ – ಇದೇ ನಮ್ಮ ತಾಯ್ನೆಲದ ಅಮರ ಅಮಲ ಸಂದೇಶ.

* * *

ಈ ಗ್ರಂಥವನ್ನು ಒಂದು ರೂಪಕ್ಕೆ ತರಲು ಹಲವು ಗೆಳೆಯರು ನೆರವಾಗಿದ್ದಾರೆ. ಕೆಲವರು ಪ್ರಗತಿಶೀಲ ಸಂಘದ ಸದಸ್ಯರು, ಕೆಲವರಲ್ಲ. ಅವರೆಲ್ಲರಿಗೂ,

ವಂದನೆ

ನನಗೆ ಎಲ್ಲ ರೀತಿಯಲ್ಲಿಯೂ ಸಹಕಾರ ನೀಡಿದ ಗೆ|| ಕುಮಾರ ವೆಂಕಣ್ಣನವರಿಗೂ, ಇದರಲ್ಲಿ ಉದ್ಧೃತವಾಗಿರುವ ಲೇಖನಗಳನ್ನು ಎತ್ತಿ ಪ್ರಕಟಿಸಲನುಮತಿಯಿತ್ತ ಸಂಪಾದಕರುಗಳಿಗೂ, ಪ್ರಕಟನೆಯ ಭಾರವನ್ನು ಹೊತ್ತ ಕರ್ನಾಟಕ ಸಾಹಿತ್ಯ ಮಂದಿರದ ಒಡೆಯರಿಗೂ, ಬಹು ಸ್ವಲ್ಪಕಾಲದಲ್ಲಿ ಮುದ್ದಾಗಿ ಮುದ್ರಿಸಿಕೊಟ್ಟ ಟೌನ್ ಪ್ರೆಸ್ ಒಡೆಯರಿಗೂ ನಮ್ಮ ಹೃತ್ಪೂರ್ವಕ ವಂದನೆ ಸಲ್ಲತಕ್ಕುದಾಗಿದೆ.

'ಅನ್ನಪೂರ್ಣ' ವಿಶ್ವೇಶ್ವರಪುರ,
ಬೆಂಗಳೂರು ನಗರ

ಅ. ನ. ಕೃಷ್ಣರಾಯ

ವಿಷಯಾನುಕ್ರಮಣಿಕೆ

ಪುರೋಗಾಮಿ ಸಾಹಿತ್ಯ

ಅ. ನ. ಕೃಷ್ಣರಾಯ

ಸಾಹಿತ್ಯದ ಶಬ್ದದ ವ್ಯಾಖ್ಯೆಯನ್ನು ನಾಲ್ಕಾರು ಶಬ್ದಗಳಲ್ಲಿ ಮಾಡು ವುದು ಮಸ್ಸಾಧ್ಯ. ಜೀವನವೆಷ್ಟು ವಿಸ್ತಾರವೂ, ವಿಶಾಲವೂ ಆಗಿದೆಯೋ ಸಾಹಿತ್ಯವೂ ಅಷ್ಟೇ ವಿಸ್ತಾರವೂ ವಿಶಾಲವೂ ಆಗಿದೆ. ಆದರೆ ಇಂದು 'ಸಾಹಿತ್ಯ' ಒಂದು ಸಂಕ್ಷಿಪ್ತ ಅರ್ಥವನ್ನು ನಿಯೋಜಿಸಿಕೊಂಡು ವಿಶಾಲತೆ ಯನ್ನು ಮರೆಯುತ್ತ ಬಂದಿದೆ. ಈ ಸಂಕ್ಷಿಪ್ತತೆ ಎಲ್ಲ ಸಾಹಿತ್ಯಗಳಿಗಿಂತ ಕನ್ನಡ ಸಾಹಿತ್ಯಕ್ಕೆ ಹೆಚ್ಚು ಅನ್ವಯಿಸುತ್ತದೆನ್ನಬಹುದು.

ಈ ಶತಮಾನದ ಆರಂಭದಲ್ಲಿ ಧಾರ್ಮಿಕ ಸಾಹಿತ್ಯವನ್ನು ಪ್ರತಿಷೇದಿ ಸಿದ ನಿಸರ್ಗ ಸಾಹಿತ್ಯ ಆರಂಭವಾಯಿತು. ಜನಜೀವನದ ಆಗುಹೋಗು ಗಳನ್ನೂ, ಸುಖದುಃಖಗಳನ್ನೂ ಚಿತ್ರಿಸುವ ಸಾಹಿತ್ಯರೀತಿಯ ಆವಿಷ್ಕಾರ ವಾಯಿತು. ಹಿಂದೆ ಜೈನ, ವೀರಶೈವ, ಬ್ರಾಹ್ಮಣ ಸಾಹಿತ್ಯಗಳು ಹುಟ್ಟಿ ದಾಗ ಹೊಸ ಮಾರ್ಗದ ಆವಿಷ್ಕಾರವನ್ನೇ ನಿರ್ದೇಶಿಸಿದವು. ಬರುಬರುತ್ತ ಅವು ಹೇಗೆ ಒಂದು ವ್ಯೂಹದಲ್ಲಿ ಸಿಕ್ಕಿಕೊಂಡು ತೊಳಲಾಡಿದವೋ ಹಾಗೆಯೇ ಯುಗಾರಂಭದಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯವೂ ಆಗುತ್ತ ಬಂದಿದೆ ಹೆಸರುಗಳು ಬದಲಾಯಿಸಬಹುದು, ಸನ್ನಿವೇಶಗಳು ವ್ಯತ್ಯಾಸ ಹೊಂದ ಬಹುದು; ಕೃತಕ ಜೀವನದಿಂದ ಸಾಹಿತ್ಯ ಕವಿಯ ಕಣ್ಣಿಗೆ ಬಿದ್ದ ಸಾಮಾ ಜಿಕ ಜೀವನದ ಕಡೆಗೆ ಹೊರಳಿರಬಹುದು. ಆದರೆ ಸಾಹಿತ್ಯದ ಬುನಾದಿಯೂ ಸ್ಫೂರ್ತಿಕೇಂದ್ರವೂ ಪರಂಪರೆಯ ಶೃಂಖಲೆಯಿಂದ ಜಾರಿಕೊಂಡಿಲ್ಲ.

ಸಾಹಿತ್ಯದ ಬಾಳುಸಿರು ಸ್ವಾತಂತ್ರ್ಯ. ವೈಯಕ್ತಿಕ ಹಾಗೂ ಸಾಮು ದಾಯಿಕ ಜೀವನಗಳ ಸ್ವಾತಂತ್ರ್ಯಭಾವನೆಯು ಮೈವೆತ್ತು ನಿಂತರೇ ಉತ್ತಮ ಸಾಹಿತ್ಯ ಆ ನಾಡಿನಿಂದ ಹೊರಬೀಳುವುದು. ರಾಜಕೀಯ ಸ್ಥಿತಿಗತಿಗಳಿಂದ ನಮ್ಮ ದೇಶ ಪರದಾಸ್ಯದ ಹಿಮ್ಮಡಿಯ ಕೆಳಗೆ ಸಿಕ್ಕಿ ನರಳುತ್ತದೆ. ರಾಲ್ಫ ಫಾಕ್ಸ್, ಸಾಸೂನ್, ಓವನ್ ಮೊದಲಾದ ಆಂಗ್ಲಸಾಹಿತಿಗಳು ಫ್ರಾನ್ಸ್, ಸ್ಪೈಯಿನ್ ದೇಶಗಳ ಸ್ವಾತಂತ್ರ್ಯಕ್ಕಾಗಿ ತಮ್ಮ ತ್ರಿಕರಣವನ್ನು ಧಾರೆಯೆರೆದರು. ಅವರು ಪರದೇಶಗಳ ಸ್ವಾತಂತ್ರ್ಯ ಸಂಪಾದನೆಗೆ ತಮ್ಮನ್ನು ಮೀಸಲುಮಾಡಿ

ಕೊಂಡ ಮೇಲ್ಪಂಕ್ತಿ ಹಾಗಿರಲಿ, ನಾವು ನಮ್ಮ ದೇಶಕ್ಕೇ ಆತ್ಮಾರ್ಪಣ ಮಾಡುವ ಪರಿಸ್ಥಿತಿಯೂ ಬಂದಿಲ್ಲ. ರಾಜಕೀಯ ಅಸ್ವಾತಂತ್ರ್ಯತೆಯು ದೇಶದ ನಾಳನಾಳಗಳಲ್ಲಿ ತನ್ನ ವಿಷವಾಯುವನ್ನು ಹಬ್ಬಿಸಿರುವುದಲ್ಲದೆ, ಹಕ್ಕಿಯಂತೆ ಹಾರಬಲ್ಲ ಸಾಹಿತಿಯ ಜೀವದುಸಿರನ್ನು ಮೆತ್ತಗೆ ಮಾಡುತ್ತಿದೆ.

ರಾಷ್ಟ್ರದಲ್ಲಿ ಸ್ವಾತಂತ್ರ್ಯ, ಸಮತೆ, ಸೌಹಾರ್ದ್ರಭಾವನೆಯನ್ನು ಮೂಡಬೇಕಾದುದು ಕವಿಯ ಕೆಲಸ. ಗ್ರೀಸ್, ಫ್ರಾನ್ಸ್, ಇಂಗ್ಲೆಂಡ್ ದೇಶಗಳ ಇತಿಹಾಸಗಳಲ್ಲಿ ದಿಗ್ವಿಜಯಕ್ಕೆ ಹೊರಟ ದಳಪತಿಯ ಪಕ್ಕದಲ್ಲಿ ಕವಿಯ ಸ್ಥಾನವನ್ನು ನಾವು ನೋಡಬಹುದು. ಕನ್ನಡ ಸಾಹಿತಿಗಳಿಗೆ ಕಾವ್ಯ, ದೇಶಗಳೆಂದರೆ ಪರಸ್ಪರ ವಿರುದ್ಧವಾದ ಅಂಶಗಳೆಂಬ ಕಲ್ಪನೆ ಮೂಡಿದ ಹಾಗೆ ಕಾಣುತ್ತದೆ. ಕಾವ್ಯಕ್ಕೂ, ನಾಡಜೀವನ, ಸಾಮಾಜಿಕ ಜೀವನಗಳಿಗೂ ಈಗ ಯಾವ ಸಂಬಂಧವೂ ಇರುವುದಿಲ್ಲ. ಜನತೆಯ ಮನಸ್ಸನ್ನು ಕ್ಷಣಿಕವಾದ ಸುಖದಲ್ಲಿ ಇರಿಸಬೇಕೆಂಬ ಆಸೆಯನ್ನು ಬಿಟ್ಟು ಹೆಚ್ಚಿನ ಆಸೆ-ಆಶಯಗಳು ಮೂಡಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕವಿ, ದೇಶದ ಗುರುವಾಗುವ ಮಾತು ಹಾಗಿರಲಿ, ದೇಶದ ಇತಿಹಾಸಕಾರ ಕೂಡ ಆಗಲಾರ.

ಇದೇ ಬಗೆಯ ಅಸಹಾಯಕತೆಯನ್ನು ಸಾಮಾಜಿಕ ರಂಗದಲ್ಲಿ ಕಾಣಬಹುದು. ಕವಿ, ಆತಂಕ ಅಂಕುಶಗಳ ಅಂಜಿಕೆಯಿಲ್ಲದೆ ರಸ–ವಿಚಾರ ರಂಗಗಳಲ್ಲಿ ಹಾರಾಡುವ ಹಕ್ಕಿ. ಧರ್ಮ, ಸಾಮಾಜಿಕ ನೀತಿ, ವ್ಯಕ್ತಿಸಿದ್ಧಾಂತಗಳು ಯಾವವೂ ಅವನಿಗೆ "ಇದಮಿತ್ಥಂ" ಅಲ್ಲ. ಅವನ ಪ್ರಯೋಗಶಾಲೆಯಲ್ಲಿ ಅವು ಬೆಂದು, ಬಡಿಸಿಕೊಂಡು, ಹದವಾಗಿಯೇ ಜಾರಬೇಕು. 'ನಮ್ಮ ಇಂದಿನ ಸಾಹಿತ್ಯದ ಧರ್ಮದೇವತೆ' ಆಚಾರ! ರೂಢ ಮಾರ್ಗವನ್ನೇ ಮತ್ತೆ ಮತ್ತೆ ತುಳಿದು, ಅದರಿಂದ ಒಂದು ಹೆಜ್ಜೆ ಮುಂದಿಟ್ಟರೂ ಎಲ್ಲಿ ಏನಾಗುವುದೋ ಎಂಬ ಭಯದಿಂದ ಆವೃತವಾಗಿರುವ ಲೇಖಕರ ಗುಂಪು!! ಎಂದೋ ಯಾರಿಗೋ ಯಾವ ಸಂದರ್ಭದಲ್ಲಿಯೋ ಅನ್ವಯಿಸಿದ ತತ್ತ್ವ ಅನಂತಾನಂತವಾಗಿ ಸತ್ಯವಾಗಿರುವುದು ಸಾಧ್ಯವಿಲ್ಲವೆಂಬುದು ನಮ್ಮ ಕವಿಗಳ ಮನಸ್ಸಿಗೆ ಬಾರದು. ಕಾಲಚಕ್ರ ಅವರ ಭಾಗಕ್ಕೆ ನಿಂತುಬಿಟ್ಟಿದೆ. ಪ್ರಗತಿಯ ಪರಿಸರಿಯ ಶೋಭೆಗಿಂತಲೂ ತಮ್ಮ ವೈಯಕ್ತಿಕ ದೃಷ್ಟಿಯೇ ಹಿರಿದೆಂಬ ಮತ ಸಾಹಿತಿಗಳ ಮನಸ್ಸಿನಲ್ಲಿ ದೃಢವಾಗಿ ಬೇರೂರಿದೆ.

ಪುರೋಗಾಮಿ ಸಾಹಿತ್ಯ ಈ ಮನೋಭಾವನೆಯ ಪ್ರತಿಕ್ರಿಯೆಯಾಗಿ ಹುಟ್ಟಿರುವುದು ಮಾತ್ರವಲ್ಲದೆ ಒಂದು ಭವ್ಯವಾದ ಧ್ಯೇಯವನ್ನು ತನ್ನ ಮುಂದೆ ಇಟ್ಟುಕೊಂಡಿದೆ.

ಪುರೋಗಾಮಿ ಸಾಹಿತಿಗಳು ಮಾನವತೆಯನ್ನು ತಮ್ಮ ಧರ್ಮವನ್ನಾಗಿ ಸ್ವೀಕರಿಸಿದ್ದಾರೆ. ಈ ಕಸೋಟಿಯ ಮೇಲೆ ಜಗತ್ತಿನ ನೀತಿ, ಧರ್ಮ, ಸಾಮಾಜಿಕ ತತ್ತ್ವಗಳನ್ನು ಅರೆದು ನೋಡಿ, ಅವುಗಳೊಳಗಿನ ಮಿಥ್ಯ ಹಾಗೂ ಗೌಣ ವಿಷಯಗಳನ್ನು ಹೊರಗೆಡವಲು ಅಂಜುವುದಿಲ್ಲ.

ಪುರೋಗಾಮಿ ಸಾಹಿತಿಗೆ ತಾನು ಹುಟ್ಟಿದ ಧರ್ಮ, ಬೆಳೆದ ವಾತಾವರಣ ಮುಖ್ಯವಲ್ಲ. ಜಗತ್ತಿನ ಜೀವನವನ್ನೆಲ್ಲಾ ಒಂದುಗೂಡಿಸುವ ತಂತು ಯಾವದೋ ಅದೇ ಅವನ ಧರ್ಮ. ಅದರ ಸಲುವಾಗಿ ಅವನು ತನ್ನ ಹುಟ್ಟಿನ ಕಟ್ಟನ್ನು ಹರಿಯಲು ಹಿಂಜರಿಯುವುದಿಲ್ಲ.

ಪುರೋಗಾಮಿ ಸಾಹಿತಿ ತನ್ನ ಕಾರ್ಯಕ್ಷೇತ್ರ ರೂಢಿಮೂಲವಾದ ಕೆಲವು ತತ್ತ್ವಭಾವನೆಗಳೆಂದು ಬಗೆಯುವುದಿಲ್ಲ. ಅವನು ತೆರೆದ ಕಣ್ಣವನು. ಜಗತ್ತಿನಲ್ಲಿ ಕಾಣುವ ಹಾಗೂ ತನ್ನ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುವ ಪ್ರತಿಯೊಂದು ವಿಷಯವನ್ನೂ ತನ್ನ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಳ್ಳುತ್ತಾನೆ. ಅವನ ಹೃದಯಮಂದಿರದ ಕಿಟಕಿಗಳೆಲ್ಲವೂ ತೆರೆದವುಗಳಾಗಿರುತ್ತವೆ; ಬೆಳಕು ಎಲ್ಲಿಂದ ಬಂದರೂ ಅವನು ಸ್ವೀಕರಿಸಲು ಸಿದ್ಧನಾಗಿರುತ್ತಾನೆ.

ಪುರೋಗಾಮಿ ಸಾಹಿತಿ ಶ್ರಮಜೀವಿ. ಕಂಡವರ ರಕ್ತ ಹೀರಿ ಉಂಡು ಹಿರಿಯನಾಗಿ, ಬಲಿಷ್ಠನಾಗಿ ಮೆರೆಯಬೇಕೆಂಬ ಆಸೆ ಅವನಿಗಿಲ್ಲ. ಸಮಾಜದ ರಕ್ತೋಪಜೀವಿಗಳನ್ನು ಅವನು ಎಂದಿಗೂ ತನ್ನ ಸ್ನೇಹವರ್ಗಕ್ಕೆ ಸೇರಿಸಿಕೊಳ್ಳುವುದಿಲ್ಲ. ದುಡಿಮೆಯೇ ತನ್ನ ಭವ್ಯಕರ್ತವ್ಯವೆಂದು ಅವನು ಭಾವಿಸುತ್ತಾನೆ.

ಪುರೋಗಾಮಿ ಸಾಹಿತಿ ಇಂದಿನ ಜಗತ್ತು ಈಗ ಇರುವುದಕ್ಕಿಂತಲೂ ಹೆಚ್ಚು ಸುಂದರವಾಗಬೇಕೆಂದು ಬಯಸುತ್ತಾನೆ. ಅದರ ಸಲುವಾಗಿ ಅವನು ಸುಧಾರಣೆ, ಪ್ರಗತಿ, ಮೌಢ್ಯನಿರಸನಗಳನ್ನು ಬಯಸುತ್ತಾನೆ.

ಪುರೋಗಾಮಿ ಸಾಹಿತ್ಯ ಹಾಗೂ ಅದರ ತತ್ತ್ವಗಳು ನಮ್ಮನ್ನು ವಿಚಾರ ಸ್ವಾತಂತ್ರ್ಯದ ಹೆಬ್ಬಾಗಿಲಿಗೇ ಒಯ್ಯುತ್ತವೆ. ಅಲ್ಲದೆ ಜಗತ್ತಿನ ಅನಂತ ವಿಭಿನ್ನತೆಗಳನ್ನು ಹೋಗಲಾಡಿಸಿ ಒಂದುಗೂಡಿಸುವ ತಂತು ಇದೇ ಎಂಬ ಸತ್ಯವನ್ನು ಮನವರಿಕೆ ಮಾಡಿಕೊಡುತ್ತದೆ.

ಕನ್ನಡ ಸಾಹಿತಿಗಳ ಮುಂದೆ ಈಗ - ಜಗತ್ತು ಒಂದು ಹೊಸ ಸ್ವರೂಪವನ್ನೇ ತಳೆದುಕೊಳ್ಳುತ್ತಿರುವಾಗ - ಮೂರು ಮಹಾ ಪ್ರಶ್ನೆಗಳು ನಿಂತಿವೆ. ಸಾಹಿತಿಗಳೇ! ನಿಮ್ಮ ಆತ್ಮಾನಂದಕ್ಕಾಗಿ ಕಾವ್ಯ, ಕಥೆಗಳನ್ನು ಬರೆದುಕೊಂಡು ತೃಪ್ತರಾಗುವಿರೋ - ಇಲ್ಲ - ಜಗತ್ತಿಗೆ ಆನಂದಾನುಭವವನ್ನುಂಟುಮಾಡಲು ನಿಮ್ಮ ಸಾಹಿತ್ಯವನ್ನು ನಿವೇದಿಸುವಿರೋ? – ಚಿತ್ತದಾಸ್ಯದ ಶೃಂಖಲೆಯೇ ಸ್ವರ್ಗವೆಂದು ಭಾವಿಸಿರುವಿರೋ, ವಿಚಾರದ ಹಾದಿಯಲ್ಲಿ ಹೋಗಿ ಸ್ವಾತಂತ್ರ್ಯ ಜೀವನದ ಅನುಭವ ಪಡೆಯುವಿರೋ? – ರೂಢಿಯ ಮೌಢ್ಯವನ್ನು ಕಡಿದು ಜನರ ಬಾಳುವೆಯು ಪ್ರಗತಿಪಥದಲ್ಲಿ ಮುನ್ನುಗ್ಗಲು ಸಹಾಯಕರಾಗುವಿರೋ ಇಲ್ಲ. ಅವರನ್ನೂ ಈ ಅಂಧಕೂಪದಲ್ಲಿ ಹಾಕಿ ಕೊಳೆಸುವಿರೋ?

ಪ್ರಗತಿ ಪಂಥ

ವಿಶ್ವಕರ್ನಾಟಕ, ೨೩-೪-೪೪

೧೯೪೩ನೆಯ ಮೇ ತಿಂಗಳಲ್ಲಿ 'ಅಖಿಲ ಭಾರತ ಪ್ರಗತಿ ಪಂಥದ ಲೇಖಕರ ಪರಿಷತ್ತೊಂದು ಮುಂಬಯಿಯಲ್ಲಿ ನಡೆಯಿತು. ಈ ಪರಿಷತ್ತನ್ನು ನಡೆಸುವ ಕಾರ್ಯದಲ್ಲಿ ಭಾರತದ ಕಮ್ಯೂನಿಸ್ಟ್ ಪಕ್ಷದವರು ನಾಯಕತ್ವ ವಹಿಸಿದರು. ಹಲವರು ಟೀಕಾಗಡೆಯನ್ನು ಉಗ್ರವಾಗಿ ತಿರುಗಿಸಲಾರಂಭಿಸಿದರು.

"ರಾಜಕೀಯ ಸೂರೆಗಾರರು ಎಲ್ಲ ಕ್ಷೇತ್ರಗಳಲ್ಲೂ ಪ್ರವೇಶ ಮಾಡುತ್ತಿದ್ದಾರೆ. ಈಗ ಸಾಹಿತ್ಯಕ್ಷೇತ್ರಕ್ಕೆ ಬಂದರು. ಪ್ರಗತಿ ಪಂಥದ ಲೇಖಕರನ್ನೆಲ್ಲ ಒಟ್ಟಿಗೆ ತರುವದಾಗಿ ಅವರು ಹೇಳುತ್ತಿದಾರೆ. 'ಗಂಡಸಿಗೇಕೆ ಗೌರಿ ದುಃಖ' ವೆಂಬ ನಾಣ್ಣುಡಿಯೊಂದುಂಟು. ರಾಜಕಾರಣದಲ್ಲಿ ತೊಡಗಿರುವವರು ಸಾಹಿತ್ಯರಾಜ್ಯ ಪ್ರವೇಶ ಮಾಡುವುದರಿಂದ ಮಹಾ ಅಪಕಾರ ಮಾಡಿದ ಹಾಗಾಗುತ್ತದೆ. 'ಕಮ್ಯೂನಿಸ್ಟರ' ತತ್ವಗಳು, ನಂಬಿಕೆಗಳು, ಆಚಾರ ವಿಚಾರಗಳಿಂದ ನಿರ್ಮಲ ಸಾಹಿತ್ಯವನ್ನು ಕಲ್ಮಲಗೊಳಿಸುವದು ಸರಿಯಲ್ಲ.

ಒಂದು ಪಂಥದ ರಾಜಕೀಯ ಪಕ್ಷದವರು ತಮ್ಮ ಪಂಥತತ್ವಪ್ರಚಾರಕ್ಕಾಗಿ ಸಾಹಿತಿಗಳನ್ನೂ, ಸಾಹಿತ್ಯವನ್ನು ದುರುಪಯೋಗ ಮಾಡಿಕೊಳ್ಳುವ ಸಂಭವವಿದೆ. ಅವರ ಚಟುವಟಿಕೆಗಳಿಂದ ಸಾಹಿತ್ಯ, ಕಲೆಗಳಿಗೆ ಕೆಟ್ಟಕಾಲ ಬಂದಹಾಗಿದೆ" ಮುಂತಾಗಿ ಹೇಳುತ್ತ ಬಂದರು.

(೧) ಗಾಂಧೀಜಿ, ಮಹದೇವಭಾಯಿ, ಮುನಿಷಿ, ಸರೋಜಿನಿದೇವಿ, ಲೋಕಮಾನ್ಯ ತಿಲಕ್, ರಾಜಾಜಿ, ವಿ. ವಿ. ಎಸ್. ಅಯ್ಯರ್, ಎನ್. ಸಿ. ಕೇಳ್ಕರ್, ಇನ್ನೂ ನೂರಾರಲ್ಲ, ಸಾವಿರಾರು ಮಂದಿ ರಾಜಕಾರಣಪಟುಗಳು ಶ್ರೇಷ್ಠ ಸಾಹಿತಿಗಳೆನಿಸಿ ಜನಾಂಗದ ಮನಸ್ಸಿನ ಮೇಲೆ, ವಿಚಾರ ಶಕ್ತಿಯ ಮೇಲೆ, ಸೌಂದರ್ಯಾನುಭವದ ಮೇಲೆ ತಮ್ಮ ಪ್ರತಿಭಾಮುದ್ರೆಯನ್ನೊತ್ತಿದ್ದಾರೆ. ಉಪಕಾರಿಗಳು ಯಾರು, ರಾಜಕಾರಣರೋ? ಉದಾಸೀನರೋ?

(೨) ಈಗಾಗಲೆ ಕನ್ನಡದಲ್ಲಿ ಎಲ್ಲ (ಪ್ರಾಂತ್ಯ ಭಾಷೆಗಳಲ್ಲೂ ಇದೇ ರೀತಿಯಾಗಿ ರಾಜಕೀಯ ಸಾಹಿತ್ಯ ನಿರ್ಮಾಣವಾಗಿದೆ) ರಾಜಕಾರಣಕ್ಕೆ

ಸಂಬಂಧಪಟ್ಟ ಪುಸ್ತಕಗಳು ಎಷ್ಟೋ ನಿರ್ಮಾಣವಾಗಿ, ಪ್ರಕಟವಾಗಿವೆ. ಈ ಗ್ರಂಥಗಳಿಂದ ಕನ್ನಡ ಸಾಹಿತ್ಯದ ಬಲ, ಭಾಗ್ಯ, ಉಪಯೋಗ ಹೆಚ್ಚಿಲ್ಲವೆ?

(೩) ಶುದ್ಧ ಸಾಹಿತ್ಯವು ಲಲಿತ; ರಾಜಕೀಯ ಸಾಹಿತ್ಯವು ವೀರ; ಧಾರ್ಮಿಕ ಸಾಹಿತ್ಯವು ವಿರಕ್ತ. ಸಾಹಿತ್ಯಕ್ಕೆ ಎಲ್ಲ ಸ್ವರೂಪಗಳೂ ಬೇಕು. ಕಾಲಧರ್ಮಕ್ಕೆ ತಕ್ಕಂತೆ ಸಾಹಿತ್ಯವೂ ಉಸಿರಾಡಬೇಕು.

(೪) ರಾಜಕೀಯ ಕೆಲಸಗಾರರು ಸಾಹಿತ್ಯ ಪ್ರವೇಶ ಮಾಡಬಾರದೆಂದು ವಿಧಿಸುವುದಾದರೆ ನಾನಾ ಮತೀಯರಿಗೂ ಈ ವಿಧಿಯನ್ನೇ ಪ್ರಯೋಗಿಸಬೇಕಾಗುತ್ತದೆ. ಹಿಂದೆ ಜೈನರೂ, ವೀರಶೈವರೂ, ವೈಷ್ಣವರೂ ಸಾಹಿತ್ಯ ಪ್ರವೇಶಮಾಡಿದರು. ಆದರಿಂದ ಕನ್ನಡ ಸಾಹಿತ್ಯಕ್ಕೆ ಉಪಕಾರವಾಯಿತೊ ಅಪಕಾರವಾಯಿತೊ?

(೫) ಇದು ಪ್ರಜಾತಂತ್ರದ ಯುಗ. ಸ್ವಾತಂತ್ರ್ಯಾಪೇಕ್ಷೆ, ಸಾಧನ ಸಾಹಸದ ಯುಗ. ರಾಷ್ಟ್ರಜೀವನವೆಲ್ಲ ರಾಜಕೀಯದಿಂದ ಲಿಪ್ತವಾಗಿದೆ. ಇದರಿಂದ ಯಾರಿಗೂ ಬಿಡುಗಡೆ ಇಲ್ಲ; ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಪ್ರತಿಯೊಬ್ಬರೂ ರಾಜಕೀಯ ಕುಲಗೋತ್ರಕ್ಕೆ ಸೇರಿದವರೆ.

ಆದಕಾರಣ ವೀರಸಾಹಿತಿಗಳು ಯಾವ ರಾಜಕೀಯ ಸಂಘವನ್ನು ಅಸ್ಪೃಶ್ಯವರ್ಗಕ್ಕೆ ಸೇರಿಸಬೇಕಾಗಿಲ್ಲ.

ಇಂಗ್ಲೆಂಡಿನಲ್ಲಿ, ಫ್ರಾನ್ಸಿನಲ್ಲಿ, ಅಮೆರಿಕದಲ್ಲಿ ರಾಜಕಾರಣ ಪಟುಗಳು, ಗ್ರಂಥ ನಿರ್ಮಾಣಮಾಡದೆ ಹೋಗಿದ್ದರೆ ಇಂಗ್ಲೆಂಡಿನ ಜನರಿಗೆ ಸ್ವಾತಂತ್ರ್ಯ ಬರುತ್ತಿತ್ತೆ? ಬ್ರಿಟಿಷ್ ಸಾಮ್ರಾಜ್ಯ ನಿರ್ಮಾಣವಾಗುತ್ತಿತ್ತೆ? ಫ್ರಾನ್ಸಿನ ಮಹಾವಿಪ್ಲವ ಸಾಧ್ಯವೆನಿಸುತ್ತಿತ್ತೆ? ಅಮೆರಿಕವೊಂದು ಪ್ರಬಲ ಜನಾಂಗವಾಗುತ್ತಿತ್ತೆ? ಬಂಡವಾಳಗಾರರ ಕಲ್ಪನಾರಚನೆಗಳ, ಪ್ರಭುತ್ವಗಳ ತಲೆಗಳನ್ನು ತಿರ್ರನೆ ತಿರುವಿರುವ, ಮಾನವಕುಲವಿದುವರೆಗೆ ಕಾಣದ ರಷ್ಯದ ರಕ್ತವಿಪ್ಲವಕ್ಕೆ ಬಹಳ ಮಟ್ಟಿನ ಕಾರಣಕರ್ತರು ಸೋವಿಯಟ್ ಸಾಹಿತಿಗಳು, ಕಲಾವಿದರು. ಅವರು ಎಲ್ಲ ನಾಗರಿಕರ ಹೃದಯಗಳನ್ನು ಆಕರ್ಷಿಸಿ, ಅಲ್ಲಾಡಿಸುತ್ತಿದ್ದಾರೆ.

ಪುರೋಗಾಮಿ ಸಾಹಿತ್ಯ

ಶ್ರೀ. "ರಾಜ."

ಇತ್ತೀಚಿಗೆ "ಪುರೋಗಾಮಿ ಸಾಹಿತ್ಯ" ವು ಯಾವದು ? ಎಂಬ ವಿಷಯ ವಾಗಿ ಬಹಳ ಚರ್ಚೆಯು ನಡೆದಿದೆ. ಅನೇಕ ವಿದ್ವಾನ್ ಲೇಖಕರು ಈ ಚರ್ಚೆ ಯಲ್ಲಿ ಭಾಗವಹಿಸುತ್ತಿದ್ದಾರೆ. ಪುರೋಗಾಮಿ ಸಾಹಿತಿಗಳ ಸಂಘಗಳು ಕೂಡ ಅಲ್ಲಲ್ಲಿ ಸ್ಥಾಪಿಸಲ್ಪಡುತ್ತಿವೆ. ಮೊನ್ನೆ ಮೊನ್ನೆ ಮುಂಬಯಿಯಲ್ಲಿ ಅಖಿಲ ಭಾರತ ಪುರೋಗಾಮೀ ಲೇಖಕರ ಪರಿಷತ್ತು ನೆರೆದಿತ್ತು. 'ಪುರೋಗಾಮಿ ಸಾಹಿತ್ಯ' ವು ಯಾವದು ಎಂಬುದನ್ನು ನಿಶ್ಚಿತವಾಗಿ ಹೇಳುವದು ಯಾರಿಗೂ ಸಾಧ್ಯವಾಗಿಲ್ಲ. ಈ ವಿಷಯವಾಗಿ ಅನೇಕ ಮತಭೇದಗಳು ಕಂಡುಬರು ತ್ತವೆ. ಈ ಚರ್ಚೆಯಲ್ಲಿ ಭಾಗವಹಿಸಿದ ಕೆಲವರು ಈ ವಿಷಯವನ್ನು ಬದಿ ಗಿರಿಸಿ ತಮ್ಮ ಪಾಂಡಿತ್ಯದ ಪ್ರಭಾವವನ್ನು ತೋರಿಸಲು ಪ್ರಯತ್ನಪಟ್ಟಿರುತ್ತಾರೆ.

ಪುರೋಗಾಮಿ ಸಾಹಿತ್ಯವೆಂದರೇನು ಎಂಬುದನ್ನು ತಿಳಿಯಲು ಸಾಹಿತ್ಯ ವೆಂದರೇನು ಹಾಗೂ ಸಾಹಿತ್ಯದ ಉದ್ದೇಶವೇನು ಎಂಬುದನ್ನು ನಾವು ತಿಳಿಯ ಬೇಕು. 'ಸಾಹಿತ್ಯ' ಈ ಶಬ್ದದ ವ್ಯಾಖ್ಯೆಯನ್ನು ಹೇಳಲು ಅನೇಕರು ಪ್ರಯತ್ನ ಪಟ್ಟಿರುವರು. ಅವರ ವ್ಯಾಖ್ಯೆಗಳಿಂದ ಅವರಿಗೇ ಸಮಾಧಾನವಾಗಿಲ್ಲ. ಒಬ್ಬ ಇಂಗ್ಲೀಷ್ ಲೇಖಕನು ಕೇವಲ ಎರಡು ಶಬ್ದಗಳಲ್ಲಿ 'ಚಿರಸ್ಮರಣೀಯ ಶಬ್ದ ಗಳು' ಎಂದು 'ಸಾಹಿತ್ಯ' ದ ವ್ಯಾಖ್ಯೆಯನ್ನು ಮಾಡಿರುವನು. ಇನ್ನು ಬೇರೆ ಕೆಲವರು ಸುದೀರ್ಘವಾದ ಗ್ರಂಥಗಳನ್ನೇ ಬರೆದಿರುವರು. 'ಯಾವ ವಾಕ್ಯ ಸಮೂಹವು ಅದನ್ನು ಹೇಳಿದ, ಅಥವಾ ಬರೆದ, ಒಬ್ಬಿಬ್ಬರ ಪ್ರಯೋಜನಕ್ಕೆ ಮಾತ್ರವೇ ಅಲ್ಲದೇ ಇತರ ಬಹುಜನರಿಗೆ ಕೊಂಚ ಕಾಲವಾದರೂ, ಕೊಂಚ ಮಟ್ಟಿಗಾದರೂ ಪ್ರಯೋಜನಕರವಾಗುವದಾಗಿ ಅವರು ಶ್ರದ್ಧೆಯಿಂದ ಓದಿ ವಿಚಾರಮಾಡಲು ಅರ್ಹವೆಂದೆನಿಸುವದೋ ಅಂತಹದನ್ನು ಸಾಹಿತ್ಯವೆಂದು ಕರೆಯಬಹುದು.

ಸಾಹಿತ್ಯದ ಉದ್ದೇಶವೇನು ಎಂಬದನ್ನು ನಿಶ್ಚಯಿಸುವಾಗ ಕೂಡ ಅನೇಕ ಮತಭೇದಗಳು ಕಂಡುಬರುವವು. ಕೆಲವರು ಸಾಹಿತ್ಯದ ಉದ್ದೇಶ ಕೇವಲ ಮನೋರಂಜನವೆಂದು ಹೇಳುವರು. ಕೆಲವರು ನೈತಿಕ ಶಿಕ್ಷಣವು

ಸಾಹಿತ್ಯದ ಉದ್ದೇಶವೆಂದು ಹೇಳುವರು. ನೈತಿಕ ಸತ್ಯವು ಸಾಹಿತ್ಯದ ಆತ್ಮವು. ಚಿತ್ತಾಕರ್ಷಕವಾಗಿ ಬರೆಯುವದು ಅಥವಾ ಬರೆಯದಿರುವದು ಗೌಣವಿರುವದು. (John Morley) ಸಾಹಿತ್ಯದಲ್ಲಿ ಓಜಸ್ಸು ಹಾಗು ರಸ ಇವು ಪ್ರಧಾನವಾಗಿರಬೇಕು. ತಂತ್ರ ಹಾಗು ಅಲಂಕಾರ ಇವು ಗೌಣವಾಗಿರಬೇಕು. ಈ ವಿಷಯವನ್ನು ಚರ್ಚಿಸುವಾಗ 'ಕಲೆಯು ಕಲೆಗಾಗಿ—ಬೇರೆ ಯಾವುದಕ್ಕಾಗಿಯೂ ಅಲ್ಲ' ಎಂಬ ವಿಷಯವಾಗಿ ಅನೇಕ ಜನರಿಂದ ನಡೆದ ವಾದವಿವಾದವು ನಮ್ಮ ಲಕ್ಷ್ಯಕ್ಕೆ ಬಾರದೇ ಇರದು. ಕಲೆಯು ಕಲೆಗಾಗಿ ಇರದೇ ಜೀವನದ ಸಲುವಾಗಿ ಇರುತ್ತದೆ ಎಂದು ಟಾಲಸ್ಟಾಯನು ಹೇಳಿರುವನು. ಕಲಾವಂತನು ತನ್ನ ಕಲಾಕೃತಿಯ ಮೂಲಕ ರಸಿಕನ ಅಂತರಂಗವನ್ನು ಪ್ರವೇಶಿಸುವನು. ಇದರ ಸದುಪಯೋಗವನ್ನು ಮಾಡಿಕೊಂಡು ಕಲಾವಂತನು ರಸಿಕನ ಜೀವನವನ್ನು ಉಚ್ಚವನ್ನಾಗಿ ಮಾಡಲು ಪ್ರಯತ್ನಿಸಬೇಕು. ಕಲೆಗಳು ಮಾನವೀ ಜೀವನದ ವಿಕಾಸಕ್ಕಾಗಿ, ಉನ್ನತಿಗಾಗಿ ಹಾಗೂ ಸಾಫಲ್ಯಕ್ಕಾಗಿ ಇವೆ. ಕಲೆಯ ಮುಖಾಂತರ ಉಚ್ಚಭಾವನೆ ಹಾಗು ಉದಾತ್ತ ವಿಚಾರಗಳು ಪ್ರಸಾರವಾಗಬೇಕು. ಕಲೆಯಿಂದ ಆಗುವ ಪ್ರಚಾರವು ಹೆಚ್ಚು ಹೃದಯಸ್ಪರ್ಶಿ ಹಾಗು ಪ್ರಭಾವಶಾಲಿಯಾಗುವದು. ಯಾವ ಕಲೆಯು ಜೀವನದ ಉನ್ನತಿಗಾಗಿ ಹಾಗು ವಿಕಾಸಕ್ಕಾಗಿ ನೆರವಾಗುವದಿಲ್ಲವೋ ಅದನ್ನು ಹೀನಕಲೆಯೆಂದು ಕರೆಯಬಹುದು. 'ಜೀವನದ ಸಲುವಾಗಿ ಕಲೆ' ಎಂಬ ತತ್ವವು ಪ್ರಸಾರವಾಗುವದು. ಸಮಾಜದ ಉನ್ನತಿಗೆ ಪೋಷಕವಾಗಿರುವದು. ಕಲೆಗೆ ಅನ್ವಯಿಸುವ ವಿಚಾರಗಳೇ ಸಾಹಿತ್ಯಕ್ಕೂ ಅನ್ವಯಿಸುವವು. ಸಾಹಿತ್ಯವು ಜನ ಜೀವನದ ಕೈಗನ್ನಡಿ. ಸಾಹಿತ್ಯವನ್ನು ಓದುವದರಿಂದ ಮನಸ್ಸಿನ ಮೇಲೆ ಪರಿಣಾಮವಾಗಿ, ಅದರ ಸಂಸ್ಕಾರದ ಮೂಲಕ ವಾಚಕನಿಗೆ ಆತ್ಮಶೋಧನೆಯಾಗಿ ಅವನ ಜೀವನದ ವಿಕಾಸವಾಗಬೇಕು. ಇದೇ ಸಾಹಿತ್ಯದ ಉದ್ದೇಶವು.

ಜೀವನವು ಸುಖಮಯವಾಗಲು ಭೌತಿಕ ವಿಷಯಗಳ ಸಲುವಾಗಿ ಮನುಷ್ಯನು ಯಾವಾಗಲೂ ಹೋರಾಡುತ್ತಿರುವನು. ಹಾಗು ಈ ರೀತಿಯ ಸುಖಕ್ಕಾಗಿ ಹೋರಾಡುವಾಗ ಅವನು ತನ್ನ ನೆರೆಹೊರೆಯವರೊಡನೆ ತನ್ನ ಹೋರಾಟಕ್ಕೆ ಪೋಷಕವಾಗುವಂತೆ ಸಂಬಂಧವನ್ನು ಬೆಳೆಸಿಕೊಂಡು ಬರು

ವನು. ಇದು ಸಮಾಜವನ್ನು ಕಟ್ಟಲಿಕ್ಕೆ ನೆರವಾಗುವದು. ರೈತ-ಜಮೀನದಾರ, ಗುಲಾಮ-ಒಡೆಯ, ಕೂಲಿಕಾರ-ಭಾಂಡವಲಗಾರರು ಈ ಪ್ರಕಾರ ಭೇದಭಾವಗಳಾಗಿ ಸಮಾಜದ ಸೌಖ್ಯಕ್ಕೇ ಆತಂಕಗಳು ಬರುವವು. ಆಗ್ಗೆ ನೊಂದವರು ಹೊಸ ವಿಚಾರ, ಹೊಸ ಸ್ಫೂರ್ತಿ, ಹೊಸ ಆದರ್ಶಗಳನ್ನು ಹೊರಗೆಡವುವರು. ಅದೇ ಪುರೋಗಾಮಿ ಸಾಹಿತ್ಯವೆಂದು ಅನಿಸಿಕೊಳ್ಳುವದು. ಹಳೇ ವಿಚಾರಗಳನ್ನೆ ಎತ್ತಿಹಿಡಿಯುವವರು ಮಂದಗಾಮಿಗಳೆಂದು ಅನಿಸಿಕೊಳ್ಳುವರು. ನೊಂದ ಹೃದಯದಿಂದಲೇ ನಿಜವಾದ ಸಾಹಿತ್ಯವು ಉದಯವಾಗುವದು (ಶೋಕಃ ಶೋಕತ್ವಮಾಗತಃ).

'ಧ್ಯೇಯನಿಷ್ಠೆಯನ್ನು ಜಾಗ್ರತಮಾಡುವ, ಪರಿಸ್ಥಿತಿಯ ಮೇಲೆ ವಿಜಯವನ್ನು ದೊರಕಿಸಲು ಪ್ರೇರಣೆಮಾಡುವ ಹಾಗು ಕರ್ತವ್ಯದ ಸಲುವಾಗಿ ಇಂದ್ರಿಯಸುಖದ ತ್ಯಾಗವನ್ನು ಮಾಡಲು ಪ್ರಕೋಪಿಸುವ ಸಾಹಿತ್ಯವೇ ಪುರೋಗಾಮಿ ಸಾಹಿತ್ಯವು' ಎಂದು ಒಬ್ಬ ಲೇಖಕನು ಹೇಳಿದ್ದಾನೆ. ಸಾಹಿತ್ಯವು ಧ್ಯೇಯವಾದಿಯಾಗಿರಬೇಕು; ಧ್ಯೇಯನಿಷ್ಠೆಯನ್ನು ಜಾಗೃತಮಾಡುವಂತೆ ಇರಬೇಕು; ಕರ್ತವ್ಯದ ಆನಂದದ ಅರಿವನ್ನುಂಟುಮಾಡುವಂತೆ ಇರಬೇಕು. ಸಾಹಿತ್ಯದಲ್ಲಿ ವ್ಯವಹಾರವಾದಕ್ಕಿಂತ ಧ್ಯೇಯವಾದವು ಪ್ರಾಮುಖ್ಯವಾಗಿರಬೇಕು. ಆತ್ಮಸ್ಫೂರ್ತಿಯಿಂದ ಹೊಸ ಧ್ಯೇಯಸೃಷ್ಟಿಯನ್ನು ನಿರ್ಮಿಸುವದೇ ಪುರೋಗಾಮಿ ಸಾಹಿತ್ಯದ ಮುಖ್ಯ ಲಕ್ಷಣವಾಗಿದೆ.

ಜನಮನವನ್ನು ತಯಾರು ಮಾಡುವದು ಹಾಗು ಜನಮನವನ್ನು ಕಾರ್ಯೋದ್ಯುಕ್ತವನ್ನಾಗಿ ಮಾಡುವದು ಪುರೋಗಾಮೀ ಸಾಹಿತ್ಯದ ಕರ್ತವ್ಯವಾಗಿದೆ. ಸಾಮಾನ್ಯ ಜನತೆಯಲ್ಲಿ ಸುಪ್ತವಾಗಿದ್ದ ಅಸಾಮಾನ್ಯ ಆತ್ಮಶಕ್ತಿಯನ್ನು ಜಾಗ್ರತಮಾಡುವದೇ ಪುರೋಗಾಮಿ ಸಾಹಿತ್ಯವು.

ಸಾಹಿತ್ಯವು ಕೇವಲ ಉಚ್ಚವರ್ಗದ ವಿಲಾಸ ಸಾಮುಗ್ರಿಯಾಗಬಾರದು. ಜನರ ಆಶೆ–ಆಕಾಂಕ್ಷೆಗಳಿಗನುಸಾರವಾಗಿ ಸಾಹಿತ್ಯ ನಿರ್ಮಾಣವಾಗಬೇಕು. ಜನರಲ್ಲಿ ಸೇರಿ, ಅವರ ಸಮಸ್ಯೆಗಳನ್ನು ತಿಳಿದುಕೊಂಡು ಅವರ ಜೀವನವನ್ನು ಪ್ರಗತಿಪಥದ ಮೇಲೆ ತರುವದು ಪುರೋಗಾಮಿ ಸಾಹಿತಿಯ ಕರ್ತವ್ಯವಾಗಿದೆ. ಕೇವಲ 'ಅರ್ಥ' ಅಥವಾ 'ಕಾಮ'ಗಳಿಂದ ಪ್ರೇರಿತವಾದ ಸಾಹಿತ್ಯವು ಪುರೋಗಾಮಿಯೆಂದು ಅನಿಸಿಕೊಳ್ಳಲಾರದು. ಪುರೋಗಾಮಿ ಸಾಹಿತ್ಯದ

ನಿರ್ಮಾಣಕ್ಕೆ ಜನಜೀವನದ ಆಳವಾದ ಅಭ್ಯಾಸವು ಎಷ್ಟು ಅವಶ್ಯವೋ ಅಷ್ಟೇ ಮಾನಸಶಾಸ್ತ್ರ ಹಾಗೂ ಸೌಂದರ್ಯ ಶಾಸ್ತ್ರಗಳ ಅಭ್ಯಾಸವೂ ಅವಶ್ಯವಾಗಿರುತ್ತದೆ. ಜಗತ್ತಿನಲ್ಲಿ ಅಸಂಖ್ಯಾತರಾಗಿರುವ ಪೀಡಿತರ ಮನೋವೇದನೆಯನ್ನು ತಿಳಿದುಕೊಳ್ಳುವದಕ್ಕೋಸುಗ ಮಾನಸಶಾಸ್ತ್ರದ ಅವಶ್ಯಕತೆ ಇದೆ. ಜಗತ್ತನ್ನು ಸುಂದರವಾಗಿ ಹೇಗೆ ಮಾಡಬಹುದು ಎಂಬುದನ್ನು ಅರಿಯಲು ಸೌಂದರ್ಯಶಾಸ್ತ್ರದ ಅವಶ್ಯಕತೆ ಇದೆ. ವರ್ಗದ್ವೇಷ, ವಂಶದ್ವೇಷ, ಬಡತನ, ಪರಾಧೀನತೆ, ಹಿಂಸಾತ್ಮಕ ಯುದ್ಧ ಮೊದಲಾದ ಅನೇಕ ಕುರೂಪಗಳು ಈಗಿನ ಜಗತ್ತಿನಲ್ಲಿ ಕಂಡುಬರುತ್ತವೆ. ಈ ಕುರೂಪ ಸಂಗತಿಗಳು ಜಗತ್ತಿನಲ್ಲಿ ಇಲ್ಲದಂತಾಗಿ ಜಗತ್ತನ್ನು ಸುಂದರವನ್ನಾಗಿ ಮಾಡುವದು ಪುರೋಗಾಮೀ ಸಾಹಿತ್ಯದ ಉದ್ದೇಶವಾಗಿರುತ್ತದೆ.

ಪುರೋಗಾಮಿ ಸಾಹಿತ್ಯ ನಿರ್ಮಾಣವು ಸಾಧಾರಣತಃ ನವಯುವಕರಿಂದಲೇ ಸಾಧ್ಯವೆಂದು ಹೇಳಬಹುದು. ಯುವಕರು ಸ್ವಾಭಾವಿಕವಾಗಿಯೇ ಪ್ರಗತಿಪ್ರಿಯ ಹಾಗು ಪ್ರಗತಿಶೀಲರಿರುತ್ತಾರೆ. ಅವರ ದೃಷ್ಟಿ ಭೂತಕಾಲಕ್ಕಿಂತ ವರ್ತಮಾನಕಾಲದ ಮೇಲಿಂದ ಭವಿಷ್ಯಕಾಲದೆಡೆಗೆ ಹೆಚ್ಚು ಒಲಿದಿರುತ್ತದೆ. ವಯಸ್ಸಾದವರಿಗೆ ಪ್ರಿಯವಾದ ಹಾಗು ಅವಶ್ಯವಾದ ಸಮಸ್ಯೆಗಳು ಈಗ ಬಿಡಿಸಲ್ಪಟ್ಟಿವೆ. ಹಾಗು ಅವರ ಕಲ್ಪನೆಯಲ್ಲಿ ಕೂಡ ಇರಲಾರದ ಕೆಲವು ಸಮಸ್ಯೆಗಳು ಈಗ ತರುಣರೆದುರು ಇರುವದು ಸ್ವಾಭಾವಿಕವಿದೆ. ಈ ಸಮಸ್ಯೆಗಳನ್ನು ತರುಣರು ಬಿಡಿಸುವದು ಅವರ ಆದ್ಯಕರ್ತವ್ಯವಾಗಿದೆ. ಪುರೋಗಾಮಿ ಸಾಹಿತ್ಯವು ಇಲ್ಲಿ ಅವರಿಗೆ ನೆರವಾಗುವದು. ಸಭೆ-ಸಮ್ಮೇಲನಗಳಲ್ಲಿ ಸ್ವಯಂ ಸೇವಕರಾಗಿ ದುಡಿಯುವದಕ್ಕಿಂತಲೂ ಸ್ವತಃಸಾಹಿತಿಗಳಾಗಿ ಸಭೆ-ಸಮ್ಮೇಲನಗಳಲ್ಲಿ ಭಾಗವಹಿಸುವದು ಇಂದಿನ ಯುವಕರ ಮುಖ್ಯಕರ್ತವ್ಯವಾಗಿದೆ. ಜಗತ್ತಿನಲ್ಲಿಯ ವಿಷಮತೆ ಹಾಗು ಆಕ್ರಮಣ ಇವುಗಳ ಕ್ರೂರ ಹಾಗೂ ಅಸಹ್ಯವಾದ ಬತ್ತಲೆ ಕುಣಿತ ನಿವಾರಣೆಯಾಗುವವರೆಗೆ ನಾನು ಸ್ವಸ್ಥ ಕುಳಿತುಕೊಳ್ಳುವದಿಲ್ಲವೆಂದು ಹೇಳಿದ ರೋಮೇಲೋಲಾ ಇವನ ಮಾತುಗಳನ್ನು ಯುವಕರು ತಮ್ಮ ಬೀಜವಾಕ್ಯ' ಗಳನ್ನಾಗಿ ಮಾಡಿಕೊಳ್ಳಬೇಕು.

ಮನುಷ್ಯನಿಗೆ ಪ್ರಾಣವಾಯುವಿನ ಅವಶ್ಯಕತೆಯು ಎಷ್ಟು ಇದೆಯೋ ಅಷ್ಟೇ ಸಾಹಿತ್ಯಕ್ಕೆ ಸರ್ವಾಂಗೀಣ ಸ್ವಾತಂತ್ರ್ಯದ ಅವಶ್ಯಕತೆ ಇದೆ. ಭೌತಿಕ

ಹಾಗು ಆತ್ಮಿಕ ಸ್ವಾತಂತ್ರ್ಯದ ಹೊರತು ಸಾಹಿತ್ಯದ ಬೆಳವಣಿಗೆ ಆಗುವದು ಶಕ್ಯವಿಲ್ಲ. ಜೀವನವು ಸಮೃದ್ಧವಾಗಲು ಸಂಪೂರ್ಣ ಸ್ವಾತಂತ್ರ್ಯದ ಅವಶ್ಯಕತೆ ಇದೆ. ಅದರಂತೆಯೇ ಜೀವನದಲ್ಲಿ ನವರಸವನ್ನು ತುಂಬಿ ಹರಿಸುವಂತೆ ವಿಸ್ತಾರವಾಗಲು ಸಾಹಿತ್ಯಕ್ಕೆ ಸಂಪೂರ್ಣ ಸ್ವಾತಂತ್ರ್ಯವು ಅವಶ್ಯವಿದೆ.

ಸಾಹಿತ್ಯದಲ್ಲಿ ಕಾಣದ ಸಂಕೋಲೆ

ತ. ರಾ. ಸುಬ್ಬರಾಯ

ಸಾಹಿತ್ಯ ಸರಸ್ವತೀ ಕ್ಷೇತ್ರ, ಕಲ್ಪನಾವಿಲಾಸದ ವಿಹಾರಭೂಮಿ ; ಸ್ವಾತಂತ್ರ್ಯ ಸೀಮೆ. ಇಲ್ಲಿಯ ಸೃಷ್ಟಿಕರ್ತ ಕವಿ 'ನಿರಂಕುಶ.' ಸಾಹಿತ್ಯ ಕ್ಷೇತ್ರದಲ್ಲಿ ತನ್ನ ಸೃಷ್ಟಿಕಾರ್ಯದಲ್ಲಿ ವಿಹಾರಮಾಡುವಾಗ ಆತನಿಗೆ ಯಾವ ಗಡಿಯ ತಡೆಯೂ ಇಲ್ಲ. ಕವಿ ಕೂಲಿಯ ಆಳಲ್ಲ ; ಸ್ವಚ್ಛಂದ ವಿಹಂಗಮ. ಹೃದಯದ ಭಾವರಾಗದ ಗತಿಗೆ, ಆರೋಹಣ ಅವರೋಹಣದ ನಡೆಗೆ ಅನುಸಾರವಾಗಿ ಎದೆಯಿಂದ ಬಂದುದನ್ನು ಎದೆ ಮುಟ್ಟುವಂತೆ ಬರೆಯುವ ವಿಹಾರಿ ; ಕೊಟ್ಟ ಅಳತೆಗೆ ಬಟ್ಟೆ ಹೊಲಿಯುವ ದರ್ಜಿಯಲ್ಲ. ಇದು ಸಾಧಾರಣವಾಗಿ ಎಲ್ಲರೂ ಕವಿ, ಸಾಹಿತ್ಯ ಎಂದರೆ ತಿಳಿದುಕೊಂಡಿರುವ ರೀತಿ. ಎಂತಲೇ ಸಾಹಿತ್ಯದಲ್ಲಿ ಶೃಂಖಲೆ ಎಂದಾಗ ಅದು ವಿರೋಧಾಭಾಸವಾಗೇ ಕಂಡೀತು. ಆದರೂ ಸಾಹಿತಿಯ ಕಾಲನ್ನು ಬಿಗಿದ ಶೃಂಖಲೆಗಳಿವೆ ; ಅವನಿಗೆ ಅರಿವಾಗದಂತೆಯೇ ಅವು ಅವನನ್ನು ಬಂಧಿಸಿವೆ. ಎಂತಲೇ ಅವನ್ನು ಕಾಣದ ಶೃಂಖಲೆ ಎಂದದ್ದು.

ಶೃಂಖಲೆ ಇವೆ ಎಂದು ಹೇಳಿದರೆ ಸಾಕೆ ? ಇದೆ ಎಂದು ಸಕಾರಣವಾಗಿ ತೋರಿಸಬೇಡವೆ ? ನಿಜ. ಅದನ್ನು ಪ್ರಮಾಣಮಾಡಿ ಕೊಡಬೇಕು. ಈ ಮಾತು ಮುಗಿಸಿದ ಮೇಲೆ ನಮ್ಮ ಸಾಹಿತಿಯನ್ನು ಎಷ್ಟು ಬಗೆಯ ಸಂಕಲೆ ಬಿಗಿದಿವೆ, ಅದರಿಂದ ಬಿಡಿಸಿಕೊಂಡು ಕವಿ ಹೇಗೆ ನಿರಂಕುಶನಾಗಬಹುದು ಎಂಬುದನ್ನು ವಿವೇಚಿಸಬಹುದು.

ನಾನಿಲ್ಲಿ ಚರ್ಚಿಸುತ್ತಿರುವುದು ಸಾಧಾರಣವಾಗಿ ಭಾರತೀಯ ಸಾಹಿತ್ಯ, ವೈಯಕ್ತಿಕವಾಗಿ ಕನ್ನಡ ಸಾಹಿತ್ಯ. ನಮ್ಮ ದೇಶದ ಸಾಹಿತ್ಯ ಈಗ ಸುಮಾರು ಇಪ್ಪತ್ತೈದು ವರ್ಷದಿಂದ ಪ್ರಗತಿಗಾಮಿಯಾಗಿದೆ, ವಿಸ್ತಾರವಾಗಿ, ನಾನಾ ಮುಖವಾಗಿ ಬೆಳೆಯುತ್ತಿದೆ ಎಂದು ಜನ ಆಡಿಕೊಳ್ಳುತ್ತಾರೆ. ಇದು ಬರೀ ಆಡಿಕೆಯ ಮಾತೇ ಹೊರತು ಸತ್ಯವಲ್ಲ. ಇದು ಗೊತ್ತಾಗುವುದು ಬೇರೆ ದೇಶದ ಸಾಹಿತ್ಯದೊಂದಿಗೆ, ಅದು ಈ ಇಪ್ಪತ್ತೈದು ವರ್ಷದಲ್ಲಿ ಹೊಂದಿದ ಪ್ರಗತಿಯೊಂದಿಗೆ ಹೋಲಿಸಿ ನೋಡಿದಾಗಲೇ. ನಮ್ಮ ಸಾಹಿತ್ಯ

ಬೆಳೆಯಬೇಕೆಂದರೆ ಈ ಹೋಲಿಕೆ ಅಗತ್ಯ. ಬೇರೆಯವರ ಅದ್ಭುತ ಪ್ರಗತಿಯೊಂದಿಗೆ ನಮ್ಮದನ್ನು ಹೋಲಿಸಿಕೊಂಡು, ನಾವೂ ಅಷ್ಟು ಬೆಳೆಯಲಿಲ್ಲವಲ್ಲಾ ಎಂಬ ಅತೃಪ್ತಿ, ಬೆಳೆಯಬೇಕು ಎಂಬ ಬಯಕೆ ನಮ್ಮಲ್ಲಿ ಬಂದರೆ, ಆಗಲೇ ನಮ್ಮ ಮುನ್ನಡೆಯೂ ಆರಂಭವಾಗುವುದು. ಏಕೆಂದರೆ ಕಲಾವಿದನ ಅತೃಪ್ತಿ ಪ್ರಗತಿಯ ಸಂಕೇತ. ಹೀಗೆ ಬೇರೆಯವರಿಗೆ ಹೋಲಿಸಿಕೊಂಡರೆ ನಮ್ಮಲ್ಲಿ ಏನಿದೆ? ಬರೀ ಸಹರಾ ಮರುಭೂಮಿ ಒಂದೆರಡು ವೈಯಕ್ತಿಕ ಅಪವಾದಗಳನ್ನು ಬಿಟ್ಟರೆ, ನಮ್ಮ ಸಾಹಿತ್ಯ ಹಿಂದೆ ಇದ್ದ ಹಾಗೇ ಇದೆ; ಏನೂ, ಎಲ್ಲೂ ಬೆಳವಣಿಗೆಯಾಗಿಲ್ಲ. ಇದು ನಿತ್ಯ ಅತೃಪ್ತನ ನಿರಾಶಾವಾದದ ನುಡಿಯಲ್ಲ; ಸತ್ಯದ ನಗ್ನ ಚಿತ್ರ. ಕವಿತೆಯಲ್ಲಾಗಲಿ, ಕಥೆಯಲ್ಲಾಗಲಿ, ಕಾದಂಬರಿ ರಂಗದಲ್ಲಾಗಲಿ, ಶುದ್ಧ ಸಾಹಿತ್ಯ ಕ್ಷೇತ್ರದಲ್ಲಾಗಲೀ ಏನು ಪರಿಣಾಮಕಾರಿಯಾದ ಪ್ರಯೋಗಗಳಾಗಿವೆ, ಏನು ಪ್ರಗತಿ ಕಂಡುಬರುತ್ತದೆ? ಈಗಿನ ಸಾಹಿತ್ಯದ ಸಿಂಹಾವಲೋಕನಮಾಡಿ, ಹಿಂದಿನದರೊಂದಿಗೆ ತುಲನೆಮಾಡಿ ನೋಡಿ. ಕಟ್ಟಡದಲ್ಲಾಗಲಿ, ವಸ್ತುವಿನಲ್ಲಾಗಲೀ ಏನಾದರೂ ನೂತನ ವೈವಿಧ್ಯ, ವಿಶಿಷ್ಟತೆ ಕಂಡುಬರುತ್ತದೆಯೇ?

ಕಥೆ, ಕಾದಂಬರಿಯ ಕಟ್ಟಡ ಓಬೀರಾಯನ ಕಾಲದ್ದು. ಸ್ವಲ್ಪ ವರ್ಷಗಳ ಹಿಂದೆ ಯಾವ ಅದೃಷ್ಟವೋ, ದುರಾದೃಷ್ಟವೋ, ಯಾರ ಪ್ರಭಾವವೊ, ನಮ್ಮ ಸಾಹಿತ್ಯ ಸ್ವಲ್ಪ ಹೊಸ ದಾರಿ ಹಿಡಿದು ನಮ್ಮ ಸಾಹಿತ್ಯದಲ್ಲಿ ಸಣ್ಣ ಕಥೆಗಳ ಯುಗ ಪ್ರಾರಂಭವಾಯಿತು. ಆಯಿತು. ಅಲ್ಲಿಗೇ ನಿಂತಿತು. ಸಣ್ಣ ಕಥೆಗಳಲ್ಲಿ ಶ್ರೀ ಆನಂದ ಸಂಸಾರ ಜೀವನದ ಸರಸ ಪ್ರಣಯದ ವಸ್ತುವನ್ನು ಕಥೆಯಲ್ಲಿ ತಂದು ತೋರಿದರು. ಶ್ರೀನಿವಾಸರ ಕಥೆಗಳು, ಗೋಪಾಲಕೃಷ್ಣರಾಯರ ದಾಂಪತ್ಯ ಜೀವನದ ಕಥೆಗಳು—ಇಂಥವೇ ಇನ್ನೊಂದೆರಡು. ಅಲ್ಲಿಂದ ಇಲ್ಲಿಯವರೆಗೂ ಬರುತ್ತಿರುವ ಬಹುಭಾಗದ ಕಥೆಗಳೆಲ್ಲಾ ಪ್ರಣಯದ ಹುಚ್ಚಾಟ ಕಚ್ಚಾಟಗಳೇ; 'ಅನಂತ ತ್ರಿಕೋಣದ'ದ ಅನಂತ ಆಭಾಸಗಳೇ; ಬರೀ ಗಾರ್ಧಭ ಪ್ರಣಯದ ಗೋಳು. ಎಲ್ಲೋ ಅಲ್ಲೊಂದು ಇಲ್ಲೊಂದು ಮುಗಿಲಿನಲ್ಲಿ ಮಿಂಚಿನ ಗರಿ ಕಂಡ ಹಾಗೆ ನಾವೀನ್ಯಪೂರ್ಣವಾದ, ವಿಚಾರ ಪ್ರಚೋದಕವಾದ, ಕಥೆಗಳು ಬಂದಿವೆ. ಈ ಅಪರೂಪ

ಅಪವಾದಗಳು ಸಾಧಾರಣ ನಿಯಮವನ್ನೇ ಸ್ಪಷ್ಟೀಕರಿಸುತ್ತವೆ. ಇದು ಕಥೆಯ ವ್ಯಥೆ.

ಕವಿತೆಯಂತೂ ಇದ್ದದ್ದೂ ಅಧ್ವಾನ. ಆ ಉದ್ಯಾನದ ತುಂಬಾ ಕೋಗಿಲೆಯ ಕೂಗು, ವಿರಹಿಣಿಯ ಕೊರಗು, ನಿಟ್ಟುಸಿರು, ವಸಂತ, ಪ್ರಣಯ ಕೇಳಿ ಇವುಗಳ ಕೋಲಾಹಲ: ಸರಳ ರಗಳೆಯ ಬರಿ ರಗಳೆ. ನೆರೆಯ ನಾಡಾದ ಆಂಧ್ರ, ತಮಿಳರಲ್ಲಿ ನವ್ಯ ಸಾಹಿತ್ಯದ ಕ್ರಾಂತಿಯಾಗುತ್ತಿದ್ದರೆ, ಕನ್ನಡಕ್ಕೆ ಮಾತ್ರ ಕುಂಭಕರ್ಣನ ನಿದ್ರೆ. ಶ್ರೀ ಕೆ. ವಿ. ಪುಟ್ಟಪ್ಪನವರ ಕೆಲವು ಕವನ, ರಾಜರತ್ನಂರ 'ಯೆಂಡಕುಡುಕನ ಪದ್ಯಗಳು' ಬೇಂದ್ರೆಯವರ ಕೆಲವು ತುತ್ತಿನ ಚೀಲದ ಕವನ, ವಿ. ಸಿ. ಯವರ ಒಂದೆರಡು ಪದ್ಯ, ಕಾರಂತರ ಒಂದೆರಡು ಪ್ರಯೋಗ ಬಿಟ್ಟರೆ—ಉಳಿದದ್ದೆಲ್ಲಾ ಬಾಳುವ ಶಕ್ತಿಯಿಲ್ಲದ ಬೀಳುಗವನಗಳು.

ಕಾದಂಬರಿಯಲ್ಲೂ ಇದೇ ಹಾಡೆ. ಇದರಲ್ಲಂತೂ ಬೆರಳಮೇಲೆ ಎಣಿಸಬಹುದಾದಷ್ಟು ಉತ್ತಮ ಕೃತಿಗಳು ಬಂದಿವೆ. ಶ್ರೀನಿವಾಸರ 'ಸುಬ್ಬಣ್ಣ', ಅ. ನ. ಕೃಷ್ಣರಾಯರ 'ಸಂಧ್ಯಾರಾಗ' ಕಾರಂತರ 'ಚೋಮನ ದುಡಿ' ಕೆ. ವಿ. ಪುಟ್ಟಪ್ಪನವರ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ದೇವುಡುರ 'ಅಂತರಂಗ' ಗೋಕಾಕರ 'ಇಜ್ಜೋಡು'—ಮತ್ತೆ ಕೆಲವು. ಇಷ್ಟು ಬಿಟ್ಟರೆ ಉಳಿದವು ಪೇಜು ತಿನ್ನಲು ಹುಟ್ಟಿದ, ಅಮೃತಾಂಜನ ಇಟ್ಟುಕೊಂಡು ಓದಬೇಕಾದ ಕಾದಂಬರಿಗಳು.

ವಿಮರ್ಶಾ ಸಾಹಿತ್ಯ, ವೈಜ್ಞಾನಿಕ, ಶೈಕ್ಷಣಿಕ ಸಾಹಿತ್ಯ, ವಿಚಾರ ಸಾಹಿತ್ಯ, ರಾಜಕೀಯ ಸಾಹಿತ್ಯ, ನಾಟಕ ಇವು ನಮ್ಮಲ್ಲಿ ಬೆಳೆದೇ ಇಲ್ಲವೆಂದರೆ ಅತಿಶಯೋಕ್ತಿಯೇನಲ್ಲ. ನಾಟಕದಲ್ಲಿ ಕಾರಂತ, ಜಾಗೀರದಾರ, ರಾಜಕೀಯ ಸಾಹಿತ್ಯದಲ್ಲಿ ಸಿದ್ದವನಹಳ್ಳಿ ಕೃಷ್ಣಶರ್ಮ, ತಿರುಮಲೆ ತಾತಾಚಾರ್ಯ ಶರ್ಮ—ಇನ್ನು? ಹೆಸರೇ ಜ್ಞಾಪಕ ಬರುವುದಿಲ್ಲ ಹೇಳಹೊರಟರೆ; ಇದ್ದರೆ ತಾನೇ. ಉಳಿದವುಗಳ ಹಾಡೂ ಇಷ್ಟೆ.

ನಮ್ಮ ಸಾಹಿತ್ಯದಲ್ಲಿ ಇರುವುದೊಂದೇ: ಏನೂ ಇಲ್ಲದುದರ ಅನಂತ ಅಭಾವ.

ಹೀಗೇಕೆ ?

ನಮ್ಮ ಸಾಹಿಗಳು ತಾವು ಹೇಳಿಕೊಳ್ಳುವಷ್ಟು 'ನಿರಂಕುಶ'ರಾಗಿದ್ದರೆ, ಅವರು, ಅವರೇ ತಿಳಿದುಕೊಂಡಿರುವಷ್ಟು ಸ್ವತಂತ್ರರಾಗಿದ್ದರೆ ಈ ಕ್ಷಾಮವೇಕೆ ? ಇಲ್ಲವುದಂತೂ ಬೇಕಾದಷ್ಟು ; ಇರುವುದೂ ಅಪೂರ್ಣ ; ಹೀಗೇಕೆ ? ಇದಕ್ಕೆ ಕಾರಣ ಸಾಹಿತಿಗೆ ಅರಿವಾಗದಂತೆಯೇ ಅವನ ಕಾಲಿಗೆ ಬಿಗಿದ ಸಂಕೋಲೆಗಳು. ತಾನು ಸ್ವತಂತ್ರ ಎಂದುಕೊಂಡ ಸಾಹಿತಿ ಹತ್ತಾರು ಬಗೆಯ ಪಾರತಂತ್ರ್ಯಕ್ಕೆ ಸಿಕ್ಕಿ ನರಳುತ್ತಿರುವ ಗುಲಾಮ.

ಈ ಬಂಧನಗಳಲ್ಲಿ ಎರಡು ಬಗೆ: ಕೆಲವು ನಾವೇ ಕಟ್ಟಿಕೊಂಡವು ; ಮತ್ತೆ ಕೆಲವು ತಾವಾಗಿ ಬಂದು ನಮ್ಮ ಹೆಗಲ ಮೇಲೆ ಹೇರಿಕೊಂಡವು. ಈ ಎರಡು ಬಗೆಯ ಬಂಧನಗಳೂ ಒಂದರೊಡರೊಂದು ಹಾಸು ಹೊಕ್ಕಾಗಿ ಬೆರೆತುಕೊಂಡು ಬಿಡಿಸಲು ಬರದಾಗಿವೆ. ಎಂತಲೇ ಎರಡನ್ನೂ ಒಂದೇ ಸಲವೇ ಪರಿಶೀಲಿಸಬೇಕು.

ಈಗ ಶೃಂಖಲೆಗಳಾವುವೆಂದು ಪರ್ಯಾಲೋಚಿಸೋಣ.

ಸಾಹಿತ್ಯ ಬಾಳಿನ ವಿಮರ್ಶೆ ಎಂದ ವಿಮರ್ಶಕ ಮ್ಯಾಥ್ಯೂ ಆರ್ನಾಲ್ಡ್. 'ಬಾಳಿನ ಭವ್ಯ ದೃಶ್ಯವೊಂದನ್ನು ಕಂಡಾಗ ಕಲಾವಿದನ ಎದೆಯಲ್ಲಿ ಪ್ರಚೋದಿತವಾಗುವ ಕಲೆ ಉತ್ತಮ ಸಾಹಿತ್ಯ' ಎಂದ ಅರ್ನೆಸ್ಟ್‌ರೈಮಂಡ್, 'ಶ್ಲೋಕಃ ಶೋಕತ್ವ ಮಾಗತಾಃ' ಎಂದ ಆದಿಕವಿ ವಾಲ್ಮೀಕಿ, ಸಾಹಿತ್ಯದ ಸತ್ಯವನ್ನು ಜಗತ್ತಿಗೇ ಸಾರಿದರು ' ಕೀಟ್ಸ್ ' ಹೂವಿನ ಹಾಗೆ ಹೃದಯದಿಂದ ಕವಿತೆ ಅರಳಿ ಬರಬೇಕು, ಎಂದ. ಸರ್ ವಾಲ್ಟರ್ ಸ್ಕಾಟ್ಸ್. ಸಾಲ ತೀರಿಸಲು ಗ್ರಂಥ ಬರೆದುದಕ್ಕೆ 'ಕೂಲಿಕವಿ' ಎಂದು ಬೈರನ್ ಕನಲಿದ. ರಾಜಕೀಯವನ್ನು ಬಿಟ್ಟು ಬೇರೆ ಕಲೆಯೇ ನನಗಿಲ್ಲ ಎಂದರು ಗಾಂಧೀಜಿ. ಇವರೆಲ್ಲರೂ ತಮ್ಮ ತಮ್ಮ ಮಾತಿನಲ್ಲಿ ಸಾಹಿತ್ಯದ ದಾರಿ ತೋರಿದರು. ಇಂದಿನ ಕನ್ನಡ ಸಾಹಿತ್ಯ, ಸಾಹಿತಿ ಇದೆಲ್ಲದಕ್ಕೂ ತಪ್ಪಿದ ಅಡಬಿಡಂಗಿ, ಮೇಲೂ ಹೋಗದೆ ಕೆಳಗೂ ಇಳಿಯಲಾಗದೆ ನಿಂತ ನೆಲೆಯಲ್ಲಿ ಗೋಳಿಟ್ಟು ಕೊಳೆಯುತ್ತಿರುವ ತ್ರಿಶಂಕು. ಇದಕ್ಕೆ ಕಾರಣ ನಮ್ಮನ್ನು ಬಿಗಿದ ಸಂಕೋಲೆ.

ಈ ಸಂಕೋಲೆಗಳ ಸ್ಮಶಾನವನ್ನು ಸಿಂಹಾವಲೋಕನಮಾಡಿದರೆ, ಎಲ್ಲಕ್ಕಿಂತ ಬಲವಾಗಿ, ಎಲ್ಲಕ್ಕಿಂತ ಭೀಮಾಕಾರವಾಗಿ ಕಾಣುವ ಜೇಡಿ 'ರಾಜ

ಕೀಯ' ಬೇಡಿ. ಜನತೆಗೆ ದಾಸ್ಯದ ಬೇಡಿ ಬಿಗಿದಾಗ ಅವರ ಕಲಾವಿಕಸನವೂ ಕುಗ್ಗಲೇ ಬೇಕು; ಇದು ವಿಶ್ವನಿಯಮ. ಸೀಸೆಯಲ್ಲಿಟ್ಟ ಹೂವು ಅರಳಿ ಪರಿಮಳ ಬೀರೀತೆ? ಎಲ್ಲಿಯ ಮಾತು? ಸಾಹಿತ್ಯ ಬಾಳನ್ನು ಬಿಂಬಿಸಬೇಕು, ಬಾಳಿನ ವಿಮರ್ಶೆಯಾಗಬೇಕು, ಜೀವನದ ತೇರಿನ ಸಾರಥಿಯಾಗಬೇಕು. ನಿಜ. ಈ ಹೊತ್ತು ಅದು ಸಾಧ್ಯವಿದೆಯೆ? ನಮ್ಮ ಬಾಳಿನಲ್ಲಿ ಈ ಹೊತ್ತು ಕಾಣುವುದು ದಾಸ್ಯದ ವಿಷಫಲ, ಅದರ ಸಹಸ್ರ ಶನಿ ಸಂತಾನ. ಸೃಷ್ಟಿಶೀಲರಾದ ಸಾಹಿತ್ಯ ಇದನ್ನು ಸೃಷ್ಟಿಸಬೇಕು, ಬಿಂಬಿಸಬೇಕು, ವಿಮರ್ಶಿಸಬೇಕು; ಬಿಡುಗಡೆಯ ಆದರ್ಶ ತೋರಿಸಬೇಕು. ಕಯ್ಯೂರಿನ ದೇಶಭಕ್ತರ ಜೀವದಾನದ ಕಥೆ ಉತ್ತಮ ಕಾದಂಬರಿಯಾದೀತು, ಸತ್ಯಾಗ್ರಹದ ಕಥೆ ದಿವ್ಯ ಕಾವ್ಯವಾದೀತು, ದಾಸ್ಯ ವಿಮೋಚನೆಗಾಗಿ ಹೋರಾಡಿದ ಗಂಡು ಹೆಣ್ಣುಗಳ ಬಗ್ಗೆ ಸಾವಿರ ಕವನ ಕಟ್ಟಬಹುದು, ಕೋಟಿ ಕಥೆ ಬರೆಯಬಹುದು. ಮಹಾ ಪುರುಷರು ಜನಿಸಿರುವ, ಜನಿಸುತ್ತಿರುವ ಪರ್ವಕಾಲ ಇದು. ಇಂಥ ಕಾಲದಲ್ಲಿ ಜೀವನ ಚರಿತ್ರೆ ಬರೆಯಲು ಯಾವ ಬರ? ಎಲ್ಲದರಲ್ಲೂ ಹೊಸಗಣ್ಣು ತೆರೆಯುತ್ತಿದೆ. ವಿಚಾರ ಸಾಹಿತ್ಯ ಬರೆಯಲು ವಸ್ತು ಅಭಾವವಿಲ್ಲ. ಆದರೂ ಸಾಹಿತ್ಯದ ಬರ ತೀರಿಲ್ಲ. ಏಕೆ? ಇದಕ್ಕೆ ಕಾರಣ ಸಾಹಿತಿಗಳನ್ನು ಬಿಗಿದ ರಾಜಕೀಯ ಸಂಕೋಲೆ. ಜನತೆಯ ಅಜ್ಞಾನದಲ್ಲಿ ಕೊಬ್ಬುತ್ತಿರುವ ಪರದೇಶೀ ಪ್ರಭುತ್ವ, ಸಾಹಿತಿ ಜನತೆಯ ಕಣ್ಣು ತೆರೆಸುವ ಸಾಹಿತ್ಯ ಸೃಷ್ಟಿ ಮಾಡಿದರೆ ಸುಮ್ಮನೆ ಬಿಟ್ಟೀತೇ? ಭಾರತ ರಕ್ಷಣಾ ಶಾಸನದಂಥ ನಿರಾಕಾರ ಭೂತ ಸೃಷ್ಟಿ ಮಾಡಿ ಬಾಯಿ ಬಿಗಿಯುತ್ತಿದೆ; ಬಹಿಷ್ಕಾರದ ಬ್ರಹ್ಮಾಸ್ತ್ರ ಪ್ರಯೋಗಮಾಡಿ ವಧೆ ಮಾಡುತ್ತದೆ. ಇದು ಪರಾಡಳಿತಕ್ಕೆ ನಾವು ತಲೆಬಾಗಿರುವುದರ ಪ್ರಭಾವ.

ಇದಲ್ಲದೆ ಶತಮಾನಗಳ ದಾಸ್ಯದ ಪರಿಣಾಮವಾಗಿ ನಮ್ಮ ಜನದಲ್ಲೇ ಒಂದು ಬಗೆಯ ಕ್ಲೈಬ್ಯ, ಹಗ್ಗ ಕಂಡು ಹಾವು ಎಂದು ಹೆದರುವ ಸಲ್ಲದ ಭೀತಿ ಮೂಡಿದೆ. ಏನು ಬರೆದರೆ ಹೇಗೋ ಏನೋ? ಈ ಕ್ಷಣಗಂಡ, ನಿತ್ಯ ಅಪತ್ತಿನ ಭೀತಿ ನಮ್ಮ ಜನರಲ್ಲಿ ಮುನ್ನುಗ್ಗುವ ಎದೆಗಾರಿಕೆಯನ್ನೇ ಹಾಳು ಮಾಡಿದೆ; ಎಲ್ಲದರಲ್ಲೂ. ಇದು ಪರಕೀಯ ದಾಸ್ಯದ ಇಬ್ಬಗೆಯ ಪರಿಣಾಮ.

ರಾಜಕೀಯ ದಾಸ್ಯದ ಅಪರಿಹಾರ್ಯ ಪರಿಣಾಮ ಆರ್ಥಿಕ ದಾಸ್ಯ. ಹೊನ್ನಿನ ಹೊಗೆ ಹಾಯುತ್ತಿದ್ದ ದೇಶದಲ್ಲಿ, ಅಡಿಗೆ ಒಲೆಗಳಲ್ಲಿ ಕೂಡ

ಈ ಹೊತ್ತು ಹೊಗೆಯಾಡುತ್ತಿಲ್ಲ, ನಮ್ಮೆಲ್ಲ ಬುದ್ಧಿ, ಪ್ರತಿಭೆ, ಶಕ್ತಿಗಳನ್ನು ನಾವು ಹೊಟ್ಟೆ ತುಂಬಿಸಿಕೊಳ್ಳಲು ಉಪಯೋಗಿಸಬೇಕಾಗಿದೆ. ಸಾಹಿತಿಗೂ ಬಿಟ್ಟಿಲ್ಲ ಈ ಕಾವು. ಹೊಟ್ಟೆಗೆ ಹಿಟ್ಟು ಹಾಕದೆ ಜುಟ್ಟಿಗೆ ಮಲ್ಲಿಗೆಯ ಹೂವು ಮುಡಿದುಕೊಳ್ಳಲು ಆದೀತೇ? ಆ ಯೋಚನೆಯಾದರೂ ಬಂದೀತೇ? ಮೊದಲು 'ಪಿಂಡ'ದ ಯೋಚನೆ, ಏನುಮಾಡಬೇಕು? ಒಂದೇ ದಾರಿ: ಸರಕಾರಿ ಚಾಕರಿ. ಎಲ್ಲಕ್ಕೂ ಮೊದಲು ಕಾಣುವುದು ಈ ವಿಘ್ನೇಶ್ವರ ವಿಗ್ರಹ. ಆ ಯಂತ್ರಕ್ಕೆ ಒಮ್ಮೆ ಮೈ ಮನಸು ಕೊಟ್ಟಮೇಲೆ ಉಳಿದದ್ದಕ್ಕೆಲ್ಲಾ ಎಳ್ಳು ನೀರು ಬಿಡಬೇಕಾದದ್ದೆ. ಆದರೂ ಈ ಹೊತ್ತು ನಮ್ಮಲ್ಲಿ ಸಾಹಿತ್ಯ ಸೃಷ್ಟಿಯಾಗುತ್ತಿರುವುದು ಸರಕಾರೀ ನೌಕರರಿಂದಲೇ. ಅವರೊಬ್ಬರಿಗೇ ಇದು ಸಾಧ್ಯ. ಅವರ ಬರಡಾದ ಮಿದುಳಿನಿಂದ, ಮೇಲಿನಿಂದ ಬುಡದವರೆಗೂ ಹೆದರಿಕೆಗೆ, ಅಧಿಕಾರಕ್ಕೆ ಸಿಕ್ಕು ಸತ್ತ ಅವರ ನಿರ್ಜೀವ ಪ್ರತಿಭೆಯಿಂದ ಯಾವ ಬಗೆಯ ಸಾಹಿತ್ಯ ಸೃಷ್ಟಿಯಾಗಬೇಕು. ಅಷ್ಟೇ ಬರಡಾದ, ನಿರ್ಜೀವವಾದ ವಿಫಲ ಸಾಹಿತ್ಯ. ಇನ್ನು ಒಂದು ಜಾತಿಯ ಜನ ಸಾಹಿತ್ಯ ಸೇವೆ ಮಾಡುತ್ತಿದಾರೆ. ಅವರಾರು ಗೊತ್ತೆ. ಊಟ ತಿಂಡಿಯ ಯೋಚನೆಯಿಲ್ಲದ, ಯೋಚನೆ ಮಾಡಲು ಅಗತ್ಯವಿಲ್ಲದ ಕಾಲೇಜು ಬಾಲಕರು. ಅವರದು ಪ್ರಣಯದ ಪತಂಗದಾಟ. ನಮ್ಮ ಸಾಹಿತ್ಯದಲ್ಲಿ ಬೀಸುತ್ತಿರುವುದೆಲ್ಲಾ ಇದೇ ಸೊಂಕು ಗಾಳಿಗಳೇ.

ಇದು ಬರೆಯುವವರ ಬವಣೆಯಾದರೆ, ಅಚ್ಚಿನ ಅಚ್ಚೇ ಒಂದು ರೀತಿ. ಬರೆಯುವವರು ಕಡಮೆ; ಬರೆದದ್ದೂ ಜನಕ್ಕೆ ಬೇಡದ್ದು. ಬೇಡದನ್ನಾದರೂ ಕೊಂಡು ಓದಬೇಕೆಂಬ ಕಟ್ಟಲೆಯೇನು? ಜನಕೊಳ್ಳುವುದಿಲ್ಲ. ಜನ ಕೊಳ್ಳದೆ ಅಚ್ಚಿಗೆ ಹಾಕಿದ ಹಣ ಸ್ಮಶಾನಕ್ಕೆ ಹೋದ ಹೆಣದ ಹಾಗೇ. ಫಲ: ಅಚ್ಚಿನ ಮನೆಗೆ ವ್ಯಾಪಾರವಾಡಿ; ಬರೆದವನಿಗೆ ಅರೆಹೊಟ್ಟೆ. ಹೀಗಾಗಿ ಇನ್ನು ವ್ಯಾಪಾರ ಬೇಕೇನು? ಇದಕ್ಕೆ ಒಂದೇ ದಾರಿ: ಜನಕ್ಕೆ ಬೇಕಿರಲಿ, ಬಿಡಲಿ ಬಲಾತ್ಕಾರವಾಗಿ ಓದಲೇಬೇಕಾದುದನ್ನು ಬರೆಯುವುದು. ಅದಾವುದು ಗೊತ್ತೆ? 'ಪಠ್ಯ ಪುಸ್ತಕ ಸಾಹಿತ್ಯ.' ಯಾವ ಪ್ರಕಾಶಕರನ್ನು ಕೇಳಿದರೂ 'ಪಠ್ಯಪುಸ್ತಕವಾಗುವ ಪುಸ್ತಕ ಬರೆದುಕೊಡಿ' ಎನ್ನುತ್ತಾರೆ. ಪಠ್ಯಪುಸ್ತಕವಾಗುವುದೂ ಒಂದು ದೊಂಬರಾಟ. ಪಠ್ಯಪುಸ್ತಕವಾಗುವುವೆಲ್ಲಾ ಜರತಾರಿ ಪೇಟದವರು

ಬರೆವವು ; ಇಲ್ಲವೇ ಆ 'ಮಠ'ದವರು ಮುದ್ರೆಯೊತ್ತಿದವು. ಹೀಗಾಗಿ ತಾನು ಬರೆದ ಸಾಹಿತ್ಯದಿಂದ ಹೊಟ್ಟೆ ತುಂಬಿಸಿಕೊಳ್ಳಬೇಕೆಂದರೆ ಗುಲಾಮಗಿರಿಯ ಗುರುತಾದ ಜರತಾರೀ ಪೇಟದ ಡವಾಲೀ ಹಾಕಿಕೊಳ್ಳಬೇಕು! ಹಾಗಾಗಿ ಬರೆದದ್ದು ಸಾಹಿತ್ಯವಲ್ಲ, ಸಾಹಿತ್ಯದ ಆಭಾಸ; ಇದೊಂದು ವಿಷಚಕ್ರ. ಇದು ನಮ್ಮನ್ನು ಬಿಗಿದ ಆರ್ಥಿಕ ದಾಸ್ಯದ ಪರಿಣಾಮ.

ಇದರ ಜೊತೆಗೆ ಸಾಮಾಜಿಕ ಸಂಕೋಲೆಯೂ ಸೇರಿಕೊಂಡಿದೆ. ಇದು ಎದ್ದು ಕಾಣಿವುದು ವಿಷಯಸಾಹಿತ್ಯದ ವಿಷಮ ಚಿತ್ರದಲ್ಲಿ. ಆರ್ಥಿಕ ದಾಸ್ಯ ರಾಜಕೀಯ ದಾಸ್ಯಗಳೂ ಇದಕ್ಕೆ ಹೂವು ಹಾಕಿವೆ.

ನಮ್ಮಲ್ಲಿ ನೂರು ಕುಲ, ನೂರು ಮತ, ಸಾವಿರ ಸಂಪ್ರದಾಯ. ಒಂದೊಂದೂ ಮುಳ್ಳುಬೇಲಿ ಬಿಗಿದ ಕಾವಲುಗಳು. ಬ್ರಾಹ್ಮಣನಿಗೆ ಹರಿಜನರ ವಿಷಯ ಗೊತ್ತಿಲ್ಲ, ಅಧಿಕಾರಿಗೆ ಜನರ ಪರಿಚಯವಿಲ್ಲ, ಸಾಹುಕಾರನಿಗೆ ಬಡವನ ಗೋಳು ಗೊತ್ತಿಲ್ಲ, ಹೆಣ್ಣಿಗೆ ಗಂಡಿನ ಪರಿಚಯವಿಲ್ಲ, ಗಂಡಿಗೆ ಹೆಣ್ಣನ್ನು ಅರಿತುಕೊಳ್ಳುವ ಸಹಾನುಭೂತಿಯಿಲ್ಲ; ಒಬ್ಬೊಬ್ಬರೂ ತಮ್ಮ ತಮ್ಮ ಬಣ್ಣದ ಕನ್ನಡಕ ಹಾಕಿಕೊಂಡು ನೋಡುತ್ತಾರೆ. ಇನ್ನು ಸಾಹಿತ್ಯದಲ್ಲಿ ವಾಸ್ತವಿಕತೆ ಎಲ್ಲಿಂದ ಬರೆಯಬೇಕು. ಹಳ್ಳಿಯನ್ನು ನೋಡದವನು, ಕೂಲಿಗಾರರನ್ನು ಕಾಣದವನು, ಬಡವರ ನಡುವೆ ಬೆರೆಯದವನು ಅವನ್ನೇನು ಬಣ್ಣಿಸಿಯಾನು, ಮಣ್ಣು; ಹೀಗಾಗಿ ನಮ್ಮನ್ನ ನಾವು ಕಾಣದುದನ್ನು ಬಣ್ಣಿಸುವ ವಿಫಲಚಪಲವೇ ಹೆಚ್ಚಿದೆ. ಕಡಲನ್ನೆ ಎಂದೂ ಕಾಣದ ಷಡಕ್ಷರಿ, ಸಾಂಪ್ರ ಗಂಭೀರ ಸಾಗರವನ್ನು 'ಅಂಭಃಕುಂಭೀನ ಕುಂಭೀನ ಸಮುಕರ' ಎಂದು ಅಲ್ಲದ ಮೃಗಾಲಯವಾಗಿ ಬರೆದಹಾಗೇ ತಾನೇ ಬರೆಯಬೇಕು. ಫ್ರಾನ್ಸಿನ ರಾಣಿ ಮೇರಿ ಅಂಟಾಯಿನೆಟ್ ರೊಟ್ಟಿ ಇಲ್ಲದೆ ನರಳುತ್ತಿರುವ ಬಡವರನ್ನು ನೋಡಿ 'ರೊಟ್ಟಿ ಇಲ್ಲದಿದ್ದರೆ ದ್ರಾಕ್ಷಾರಸ ಕುಡಿಯಲಿ' ಎಂದು ಹಸಿವಿನ ಪರಿಹಾರ ಮಾರ್ಗವನ್ನು ತೋರಿದಳಂತೆ. ಮುಲ್ಕ್‌ರಾಜ್ ಆನಂದ 'ಮನೆಗೊಂದು ನಲ್ಲಿ ಇಡಿಸಿ, 'ಫ್ಲಷ್' ಕಕ್ಕಸು ಕಟ್ಟಿಸಿದರೆ ಹರಿಜನ ಸಮಸ್ಯೆ ತೀರುತ್ತದೆ' ಎಂದ ಪರಿಹಾರೋಪಾಯವೂ ಇದೇ ಮೂರ್ಖ ಮಾರ್ಗಕ್ಕೇ ಸೇರಿದ್ದಲ್ಲವೇ? ಕಾಲಿನ ಜೋಡು ತಲೆಗೆ ಹಾಕೋ ಅಲಂಕಾರಮಾಡುವ ಆಭಾಸಾಲಂಕಾರ ನಮ್ಮ ಸಾಹಿತ್ಯದಲ್ಲಿ

ಬರದಿರಬೇಕೆಂದರೆ, ಪ್ರತಿಯೊಬ್ಬರೂ ಅವರು ಅರಿತುದನ್ನು ಮಾತ್ರ ಬರೆಯ ಬೇಕು. ಹಾಗೆಂದು ಬಡವರಿಗೆ, ಹಳ್ಳಿಯವರಿಗೆ ತಮ್ಮ ಜೀವನವನ್ನು ಚಿತ್ರಿಸಲು ಸಾಧ್ಯವಿದೆಯೆ? ಇಂಗ್ಲೀಷಿನಲ್ಲಿ ಹೋಟೆಲು ಮಾಣಿ ತನ್ನ ಆತ್ಮ ಕಥೆ ಬರೆದಿದ್ದಾನೆ. ನಮ್ಮಲ್ಲಿ ಇದು ಆದೀತೆ? ಅಚ್ಚಿಸುವುದಿರಲಿ, ಓದುವುದಿರಲಿ ರಲಿ, ಮೊದಲು ಬರೆಯಲೇಬೇಕಾದ 'ಓ' ನಾಮ ಜ್ಞಾನ ಎಷ್ಟು ಜನಕ್ಕಿದೆ. ನಮ್ಮಲ್ಲಿ ಬಹು ಜನ ನಿರಕ್ಷರ ಕುಕ್ಷಿಗಳು. ಹೆಸರಿನ ಬದಲು ಕಠಾರಿ ಗುರುತು ಹಾಕುವ ಜನ ಕಥೆಯೇನು ಬರೆದಾರು? ಬೇರೆಯವರು ಬರೆದದ್ದನ್ನಾದರೂ ಓದುವುದು ಸಾಧ್ಯವಿದೆಯೇ ಇವರಿಗೆ? ಇದು 'ಇಬ್ಬಾಯ ಕೂರಸಿ.' ಹೆಚ್ಚು ಜನ ಕಲಿತು ಬರೆಯದೆ ಹೆಚ್ಚು ಸಾಹಿತ್ಯವೂ ಸೃಷ್ಟಿಯಾಗದು; ಕೊಂಡು ಓದುವವರೂ ಕಡಮೆ. ಈ ಸಮಸ್ಯೆ ತೀರಿದಂದು ಸಾಹಿತ್ಯದ ಅರಕೆಯೂ ತೀರುತ್ತದೆ. ಇದಕ್ಕೆ ಸರಕಾರ ಸಮಾಜ ಎರಡೂ ಕೂಡಿಯೆ ಪ್ರಯತ್ನ ಮಾಡಬೇಕು. ಆದರೆ ನಮ್ಮಲ್ಲಿ ಇದು ಸಾಧ್ಯವಿಲ್ಲ. ಈ ಹೊತ್ತು ನಮ್ಮ ಸಮಾಜಕ್ಕೆ ಅಗತ್ಯವಾದುದು, ಸರಕಾರಕ್ಕೆ ಅಪಥ್ಯವಾಗಿದೆ. ಸರಕಾರ ನಮ್ಮದಾದರೆ ತಾನೇ ಮುಂದಿನ ಮಾತು? ಅದುವರೆಗೂ ಇದೂ ಒಂದು ನಮ್ಮ ಸಾಹಿತ್ಯವನ್ನು ಬಲವಾಗಿ ಬಿಗಿದ ಸರಪಳಿ.

ಇವೆಲ್ಲಾ ಸ್ವಲ್ಪ ಸೂಕ್ಷ್ಮವಾಗಿ ನೋಡಿದರೆ ಕಾಣುವ ಸರಪಳಿಗಳು. ಇನ್ನೂ ಒಂದಿದೆ: ರೇಶಿಮೆಯ ದಾರದಂತೆ, ಸಣ್ಣಗೇ ಕೊರೆದು ಕತ್ತು ಮುರಿಯುವ ಸರಪಳಿ. ಇದು ಸಾಹಿತ್ಯದಲ್ಲಿ ಮಡಿಯ ಮಠದವರದು; ಆಚಾರಶೀಲರು ಹಾಕಿದ ಲಾಗ. ತಮ್ಮ ಪಾಲಿಗೆ ರಾಜಕೀಯ ಸಾಹಿತ್ಯ ತಿನ್ನ ಬಾರದ ಹಣ್ಣಾಗಿರುವ ಕೆಲವು ಜನ ಆಚಾರ್ಯ ಪೀಠದಲ್ಲಿ ಕುಳಿತು 'ರಾಜಕೀಯಕ್ಕೂ ಸಾಹಿತ್ಯಕ್ಕೂ ಸಂಬಂಧವಿಲ್ಲ' ಎಂದು ಮುಠ್ಠಾಳ ಸಂಪ್ರದಾಯಗಳನ್ನು ಸೃಷ್ಟಿ ಮಾಡುತ್ತಿದ್ದಾರೆ. ಇವರು ಮಾಡುವುದು ಅನ್ನವಿಲ್ಲದ ಜನಕ್ಕೆ ಜನ್ನನ ಉಪನ್ಯಾಸ; ಕೊಡುವುದು ಮನೆಯಿಲ್ಲದ ಜನಕ್ಕೆ ಮಂಗರಸನ ಪ್ರಬಂಧ. ಇವರೆಲ್ಲಾ ಸ್ವಯಂ ನಿರ್ಮಿತ ಆಚಾರ್ಯ ಪುರುಷರು. ಇವರ ಕೈಯಲ್ಲಿ ನಾಲ್ಕು ಕಾಸಿದೆ. ಹತ್ತು ಜನಕ್ಕೆ ಬೆನ್ನು ತಟ್ಟಿ ತಮ್ಮ ಹಿಂಬಾಲಕರನ್ನಾಗಿ ಮಾಡಿಕೊಂಡು ತಮ್ಮದೇ ಮಠ ಕಟ್ಟಿಕೊಂಡಿದ್ದಾರೆ. ಈ 'ದಿಡ್ಡಿಯ ಬಾಗಿಲಿ'ನಲ್ಲಿ ನುಸಿಯುವ ಸಾಹಿತಿ ಸಾಹಿತಿಯನಾಗುವುದೇ ಸಾಧ್ಯವಿಲ್ಲ; ಇವರ

ನಾಪ್ರೆ ಬೇಕದೆ ಸಾಹಿತ್ಯವಾಗಿದ್ದರೂ ಅದು ಸಾಹಿತ್ಯವೆನಿಸಿಕೊಳ್ಳುವುದಿಲ್ಲ ಇವರೂ ಸಾಹಿತ್ಯಕ್ಕೆ ಒಂದು ಬಗೆಯ ಶೂಲ. ಇಂಥವೇ ಕಾಣದ, ಆದರ ಮಾರಕವಾದ ಸರಪಳಿ ಸಾವಿರ ಇವೆ ನಮ್ಮ ಸಾಹಿತ್ಯಕ್ಕೆ, ಸಾಹಿತಿಗೆ.

ಈ ಕೋಟಿ ಬಾಲಗ್ರಹ ಪೀಡೆ ಕಳೆಯದೆ ನಮ್ಮ ಸಾಹಿತ್ಯ ಬೆಳೆಯುವುದ ಸಾಧ್ಯವಿಲ್ಲ. ಇದೆಲ್ಲದಕ್ಕೂ ಅಡಿಯಾಗಿ, ಹಿನ್ನೆಲೆಯ ನೆರಳಾಗಿ ರಾಜಕೀಯ ಭೂತ ಹೆಡೆಯಾಡಿಸುತ್ತಿದೆ. ಈ ಕಾಳಿಂಗ ಮರ್ದನವಾಗದೆ ನಮಗೆ ಮುಕ್ತಿ ಯಿಲ್ಲ. ನಮ್ಮ ಜನರಲ್ಲಿ ವಿದ್ಯೆ ಹೆಚ್ಚಾಗಬೇಕು, ಬರೆಯುವವರು, ಬರೆದ ವನ್ನು ಓದುವವರು ಹೆಚ್ಚಾಗಬೇಕು, ದೇಶದ ಹಣ ಜನರ ಕೈಲೇ ಉಳಿಯ ಬೇಕು, ಸಾಹಿತಿಯ ಹೊಟ್ಟೆಗೆ ಸರಕಾರೀ ಚಾಕರಿಯೇ ರಹದಾರಿಯಾ ಬಾರದು, ಸಮಾಜವನ್ನು ಬಿಂಬಿಸಿ, ವಿಮರ್ಶಿಸಿ. ಬಾಳಿಗೆ ಮಾರ್ಗದರ್ಶಿ ಯಾದ ಸಾರ್ಥಕ ಸಾಹಿತ್ಯ ನಮ್ಮಲ್ಲಿ ಬೆಳೆಯಬೇಕು ಎಂದರೆ—ಇದೆಲ್ಲದಕೂ ರಾಜಕೀಯ ಬಂಧವಿಮೋಚನೆಯೊಂದೇ ದಾರಿ. ಇದಕ್ಕಾಗಿ ಸಾಹಿ ಸ್ವಾತಂತ್ರ್ಯಸೇನೆಯ ಮೊದಲ ಸಿಪಾಯಿಯಾಗಬೇಕು. ತತ್ಕಾಲಕ್ಕೆ ಕೂರಸಿಯೆ ಕಂಟ, ನೆತ್ತರೇ ಮಸಿ; ನಾವು ದೇಶಕ್ಕಾಗಿ ಮಾಡುವ ಬಲಿದಾನವೇ ಬರೆಯ ಬಹುದಾದ ಮಹಾ ಕಾವ್ಯ.

ದೇಶಕ್ಕೆ ಬಡಿದಿರುವ ಪರದೇಶೀ 'ಗ್ರಹ' ತೊಲಗುವವರೆಗೂ ಸಾಹಿ ತ್ಯಕ್ಕೆ ಹಿಡಿದಿರುವ ಗ್ರಹಣದಿಂದ ಮುಕ್ತಿಯಿಲ್ಲ. ಅದುವರೆಗೂ 'ನಿರಂಕುಶ ನೆಂದುಕೊಂಡಿರುವ ಸಾಹಿತಿ ಸಾವಿರ ಸರಪಳಿ ಬಿಗಿದ ಗುಲಾಮ!

ಕನ್ನಡ ಸಾಹಿತಿಗಳೆಲ್ಲಿ?

ಕುಮಾರ ವೆಂಕಣ್ಣ

ಭಾರತದಲ್ಲಿ ನಿಜವಾದ ಲೇಖಕರು, ಸಾಹಿತಿಗಳು—ಇರುವರೇ ಎಂಬ ಪ್ರಶ್ನೆಗೆ ಇದೀಗ ಉತ್ತರ ಬರುತ್ತಿದೆ. ಇಂದಿನ ಭಾರತದ ಸ್ವಾತಂತ್ರ್ಯವನ್ನು ಪರಿಶೀಲಿಸಿದರೆ ಭಾರತದ ಸಾಹಿತಿಗಳ ಸಂಖ್ಯೆ ನಮಗೆ ತಿಳಿದುಬರಬಹುದು.

ಕವಿ ಹೃದಯದಿಂದ ಹೊರಟ ಭಾವನೆಯನ್ನು ವ್ಯಕ್ತಪಡಿಸುತ್ತಾನೆ. ಅದೇರೀತಿ ಸಕಲ ಕಲಾವಿದರೂ ಕೂಡ. ಸುತ್ತಲಿನ ವಾತಾವರಣಕ್ಕನು ಗುಣವಾಗಿ, ತನಗೆ ಜನ್ಮವಿತ್ತ ನಾಡು ಹಾಗೂ ತನ್ನನ್ನು ಮೇಲೆತ್ತಿ ಬೆಳೆಸಿದ ಜನತೆಗಾಗಿ ಕವಿಯ ಹೃದಯ ಕರಗಲು ಅಥವಾ ಅರಳಲು ಅದಕ್ಕನುಗುಣ ವಾದ ಕಾವ್ಯ ಕೃತಿ ಹೊರ ಬರುತ್ತದೆ. ಕವಿಗಳೆಲ್ಲ ಪ್ರಕೃತಿಯ, ಹಾಗೂ ಪ್ರಪಂಚದ ಸಕಲ ವಿಷಯಗಳನ್ನೂ ವಿವೇಚಿಸಿದ್ದಾರೆ. ಸಮಾಜದ ಅಗ್ನಿಕುಂಡದ ತಾಂಡವವನ್ನು ಚಿತ್ರಿಸಿದ್ದಾರೆ, ಇವನ್ನೆಲ್ಲ ಕಂಡು, ಕೇಳಿ ಓದಿದ ಜನತೆ ಕವಿಯನ್ನು ಕೊಂಡಾಡಿದೆ. ಆತನಿಗೆ ಹೃದಯವಿದೆ, ಆತ ಜನಜೀವನದ ಕೈಗನ್ನಡಿ, ಹೆಚ್ಚಿನ ವ್ಯಕ್ತಿ ಎಂದಿದ್ದಾರೆ.

ಕನ್ನಡನಾಡು ಇಂತಹವರನ್ನು ಹೊಂದಿದೆ. ನಮ್ಮಲ್ಲಿ ಮಹಾಕವಿಗ ಳಿದ್ದಾರೆ, ಕತೆಗಾರರಿದ್ದಾರೆ, ಕಾದಂಬರಿಕಾರರಿದ್ದಾರೆ, ಪ್ರಬಂಧಕಾರರಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ತುಂಬಾ ಹೆಸರು ಗಳಿಸಿ, ಉಚ್ಚಸ್ಥಾನವನ್ನು ಸಂಪಾದಿಸಿ ದವರಾಗಿದ್ದಾರೆ. ಸಾಹಿತ್ಯ ಪರಿಷತ್ತು ಅನೇಕ ಲೇಖಕರನ್ನು ಬೆಳಸಿ, ಬೆಳ ಗಿದೆ. ಸಾಹಿತ್ಯ ಹರಡಿ, ಹಬ್ಬಿದೆ, ಬೆಳೆದಿದೆ—ತರುಣನಾಗಿ!

ಆದರೆ ಬೆಳೆಯುತ್ತಿದೆಯೇ? ನಮ್ಮ ನಾಡಿನ ಸಾಹಿತ್ಯ ೧೯೩೩-೩೪ರ ಮಟ್ಟದಿಂದ ಒಂದು ಹೆಜ್ಜೆಯೂ ಮುನ್ನಡೆದಿಲ್ಲ. ಕಳೆದ ಹತ್ತು ವರ್ಷಗಳ ಸಾಹಿತ್ಯವನ್ನು ನೋಡಿದರೆ ಇದರ ಸ್ಥಿರ ರೀತಿಯು ವ್ಯಕ್ತವಾಗುತ್ತದೆ. ಇದ ರಲ್ಲಿ ಬೆಳವಣಿಗೆಯಿಲ್ಲ; ಬೆಳವಣಿಗೆಯ ಲಕ್ಷಣವಿಲ್ಲ; ಬದಲು-ಸಾಹಿತ್ಯ ಸಂಸಾರಿಯಂತಾಗಿದೆ. ತನ್ನ ಸಂಸಾರವೇ ಸಕಲವೆಂದುಕೊಂಡು ಮನೆಯೊ ಳಗೇ ಮುದುರುವ ಜಪ್ಪನಿಗನಂತಾಗಿದೆ. ಭಾವನೆ ಬರಡಾಗಿದೆ; ಬೆಳವಣಿಗೆ

ಸಾಯುತಿದೆ. ಕಾಲದೊಡನೆ. ಪರಿಸ್ಥಿತಿಯೊಡನೆ, ಸಮಾಜದೊಡನೆ ಕವಿಗಳೂ, ಸಾಹಿತ್ಯವೂ ಬೆಳೆಯಲಿಲ್ಲ. ಮಾತ್ರವಲ್ಲ ಹಿನ್ನಡೆಯುತ್ತಿದೆ. ಸಮಾಜವನ್ನು ಮುಚ್ಚಿ, ಜನತೆಯನ್ನು ಎಚ್ಚರಿಸಿದವರು ಒಂದು ಹೆಜ್ಜೆ ಹಿನ್ನಡೆದ ಧರ್ಮದ ಅಫೀಮನ್ನು ಜನತೆಗೆ ಹುಣ್ಣಿಸತೊಡಗಿದ್ದಾರೆ.

ಇದಕ್ಕೆ ಕಾರಣವೇನು?—ಎಂದರೆ, ಒಂದೇ! ನಮ್ಮ ಲೇಖಕರ ವಿಚಾರದಲ್ಲಿನ ಮಹಾಜನರ ಭಾವನೆ ತಪ್ಪು. ಅವರಿಗೆ ಹೃದಯವಿಲ್ಲ ಹೃದಯವಿದ್ದಿದ್ದರೆ ಅವರು ನಮ್ಮ ದೇಶಕ್ಕಾಗಿ, ಜನತೆಗಾಗಿ ಪರಿತಪಿಸುತ್ತಿದ್ದರು. ಅವರ ಹೃದಯ ಸಂಸಾರದಲ್ಲಿ, ಧನದ, ಧರ್ಮದ, ಸ್ವಾರ್ಥದ ಅನೀತಿಯಲ್ಲಿ, ಹುದುಗಿಹೋಗಿದೆ. ರಾಜರ ವೈಭವಕ್ಕಾಗಿ, ಕುರುಡು ಕಾಮಕ್ಕಾಗಿ, ಧರ್ಮದ ಅಫೀಮಿಗಾಗಿ ದುಡಿವ ಕವಿಗಳಾಗಿದ್ದಾರೆ—ಇವರು. ದೇಶ ಜನತೆಗಾಗಿ ಇವರ ಹೃದಯ ಕರಗುತ್ತಿಲ್ಲ! ಬಂಡವಾಳಿಗರ ತಾಡನದಿಂ ನರಳುವ ರೈತ–ಕೂಲಿಗಳ ಸಂಕಟದಲ್ಲಿ, ಬಂಡವಾಳಿಗರು ಧರ್ಮದ ಕಟ್ಟಿ ಮಹಾಜನರನ್ನು ಕಟ್ಟಿ ನಡೆಸುತ್ತಿರುವ ಹಿಂಸೆಯ ವಿರುದ್ಧ ಹೋರಾಟದಲ್ಲಿ ದೇಶದ ಶೇಕಡ ೯೦ ರಷ್ಟು ಮಂದಿಯ ಸ್ವಾತಂತ್ರ್ಯ ಹೋರಾಟದಲ್ಲಿ, ಇಂದು ನಮ್ಮ ದೇಶದಲ್ಲಿ ಹರಡಿ ಹಬ್ಬಿ ದಿನಕ್ಕೆ ಸಾವಿರಾರು ಮಂದಿಯನ್ನು ಬಲಿ ತೆಗೆದುಕೊಳ್ಳುತ್ತಿರುವ ಹಸಿವೆಯ ದಾವಾನಲದಲ್ಲಿ ಸಹಕರಿಸಿದ ಲೇಖಕರು ಎಲ್ಲಿದ್ದಾರೆ? ಜನತೆಗೆ ಈ ದುರಂತದಿಂದ ದೂರವಾಗಲು ದಾರಿ ತೋರಿದವರಾರು? ಜನತೆಯೊಂದಿಗೆ ದುಃಖಿಸಿದವರಾರು?

ಜನತೆಯ ಸುಖ—ದುಃಖಗಳಲ್ಲಿ ಸಹ ಭಾಗಿಗಳಾಗಿ, ಅದರ ನಿತ್ಯ ಜೀವನದ ಹೋರಾಟದಲ್ಲಿ ಭಾಗಿಯಾಗಿ, ಜನತೆಯಿಂದ ಸ್ಫೂರ್ತಿಯನ್ನು ಪಡೆದು ಅವರಿಗಾಗಿ ಬರೆದು-ಹಾಡುವ ಬದಲು ನಮ್ಮ ಸಾಹಿತಿಗಳು ಹೃದಯವಿಲ್ಲದವರಾಗಿದ್ದಾರೆ. ಮನೆ ಹೊತ್ತಿ ಉರಿಯುತ್ತಿರುವಾಗ, ಆ ಮನೆಯಲ್ಲಿನ ನಮ್ಮ ಜನ ಸಾಯುವ ಸ್ಥಿತಿಯಲ್ಲಿರುವಾಗ, ಮನೆ ಯಾರಿಗೆ ಸೇರಬೇಕೆಂಬ ವಾಗ್ವಾದಕ್ಕಿಳಿದಿದ್ದಾರೆ. ಬಿಜಾಪುರ, ಬಳ್ಳಾರಿ, ಅನಂತಪುರಗಳಲ್ಲಿ ಹಸಿದು ಸಾಯುತ್ತಿರುವ ಜನತೆಯ ವಿಚಾರದಲ್ಲಿ ನಮ್ಮ ಗಮನವಿಲ್ಲ. ಬದಲಾಗಿ ಅಲ್ಲಿ ಯಾವ ಬಾವುಟ ಹಾರಬೇಕೆಂಬ ವಿಷಯದಲ್ಲಿ ಹೋರಾಟ ಸಾಗುತ್ತಿದೆ. ಅನ್ನ ಕೊಡಲು ತಾವಾಗಿ ಮುನ್ನಡೆಯದಿದ್ದರೂ, ಇತರರು ಕೊಡ ಬಾರದಂತೆ

ತಡೆವ ಸಾಹಸ ನಮ್ಮದು; ಕರ್ತವ್ಯ ವಿರೋಧಿಗಳಾಗಿದ್ದೇವೆ. ಜನತೆಯನ್ನು ಮರೆತು ಜನರನ್ನು ಮರ್ದಿಸುವ ವರ್ಗದ ಬಾಲ ಹಿಡಿದಿದ್ದೇವೆ.

ನಮ್ಮ ಜನತೆ ಕವಿಗಳು, ಸರಕಾರ—ಸಕಲವೂ ಧರ್ಮ ದೇವತೆಗಳ ಅಫೀಮಿನಿಂದ ಕುರುಡಾಗಿವೆ. ದೇವರನ್ನು ಬೇಡುವ, ದೇವರಿಗೆ ಕಾಣಿಕೆಯ ಲಂಚ ಕೊಡುವ ಹುಂಬತನ ನಮ್ಮನ್ನು ಬಿಟ್ಟಿಲ್ಲ. ಸಕಲ ವಿಚಾರಕ್ಕೂ ಮೇಲೆ ತಲೆಯೆತ್ತಿ ಬೇಡುವ ನೀತಿ! ಅದೇ ರಾಜಕಾರಣದಲ್ಲಿ ಸ್ವರಾಜ್ಯ ಜನ್ಮಸಿದ್ಧ ಹಕ್ಕು. ಅದನ್ನು ನಾವು ನಮ್ಮ ಶಕ್ತಿಯಿಂದ, ಸಂಘಟನೆಯಿಂದ ಕಸಿದುಕೊಳ್ಳ ಬೇಕು. ಆದರೆ, ಅದಕ್ಕಾಗಿ ಬೇಡುತ್ತಿದ್ದೇವೆ ನಾವು! ಅದೇ ರೀತಿ ಇಂದಿನ ಘೋರ ಉಪವಾಸ—ಮರಣಗಳಿಗೆ ಯಾರನ್ನೋ ಕಾರಣವಾಗಿಸಿದ್ದೇವೆ. ನಾವು, ನಮ್ಮ ಹುಂಬತೆ, ಅನೈಕ್ಯ, ನಮ್ಮಲ್ಲಿನ ಬಂಡವಲಿಗರ ಸ್ವಾರ್ಥ, ಇವುಗಳಿಂದಾಗಿ ನಡೆವ ಸರಕಾರದ ಅನರ್ಥ ಇವೆಲ್ಲಾ ಕಾರಣವಲ್ಲವೇ? ಆಗರೆ ದೇವರು, ದುರದೃಷ್ಟ, ಸರಕಾರ ಕಾರಣವೆನ್ನುವ ಮಂದಿ ಅದೆಷ್ಟಿಲ್ಲ? ಸರ ಕಾರ ಅನ್ನ ಕೊಡುವುದಾದರೆ ನಮಗೇಕೆ ಸ್ವಾತಂತ್ರ್ಯ? ಇಂತಹ ಹಲವಾರು ನೀತಿಗಳನ್ನು ನಾವು ವಿವೇಚಿಸಬೇಕು. ಮೇಲೆ ನೋಡಿದರೆ ನಮ್ಮ ಕಣ್ಣು ಕುರುಡು, ಭಾವನೆ ಬರಡು, ಹೃದಯ ಕಲ್ಲಾಗುವುದು. ಕನ್ನಡ ಕವಿಗಳ ಇಂದಿನ ದುಸ್ಥಿತಿಗೆ ಇದೇ ಕಾರಣ. ನಾವೆಲ್ಲ ಕೆಳಕ್ಕೆ ನೋಡೋಣ! ನಮ್ಮನ್ನು ನಮ್ಮ ವಿಶಾಲ ಜನತೆಯನ್ನು ನೋಡೋಣ! ಅವರಲ್ಲಿ ಭರವಸೆ ಇಟ್ಟು, ಅವರ ಸಂಘಟಿತಶಕ್ತಿಯಿಂದ ಮುನ್ನಡೆಯೋಣ. ಜನರ ಸಂಕಟಕ್ಕಾಗಿ ನೊಂದು, ಅವರ ದುಃಖ ನಿವಾರಣೆಗಾಗಿ, ಏಳಿಗೆಗಾಗಿ ಹೋರಾಡೋಣ!

ಕನ್ನಡ ನಾಡಿನ ಸಾಹಿತಿಗಳು ಎಚ್ಚರಗೊಳ್ಳಬೇಕು. ಸುಪ್ತಾವಸ್ಥೆಗೆ ಇದು ಕಾಲವಲ್ಲ. ಇನ್ನು ನಿಂತಲ್ಲೇ ನಿಂತರೆ, ಹತ್ತು ವರ್ಷಗಳ ಹಿಂದಿನ ಮೆಟ್ಟಿಲಲ್ಲೇ ನಿಂತು, ಅದೇ ದೃಷ್ಟಿಯಿಂದಲೇ ಬರೆದು, ತಾನೂ ಒಬ್ಬ ಲೇಖಕ—ಕವಿ—ಎಂದು ಸಾಗಿದರೆ ಸಾಲದು. ಆ ಕವಿತ್ವ—ಲೇಖನ ಗಳೂ ಉಳಿಯಲಾರದು. ಸ್ಮಶಾನದಲ್ಲಿ ನಿಂತು ಹಾಡಿದ ನೀತಿಯಾಗಬ ಹುದು; ಜನತಾದ್ರೋಹಿಯಾಗಬಹುದು. ಕರ್ತವ್ಯದ ದಾರಿಯಲ್ಲಿ ಮುನ್ನ ಡೆಯಬೇಕು. ಹೊರತಾಗಿ ವಿರೋಧಿಸುವವರೂ, ತಾಟಸ್ಥ್ಯ ಮಾರ್ಗವನ್ನು ಅನುಸರಿಸುವವರೂ ಕೂಡ ಜನತೆಯ ದಾರಿಯ ವಿರೋಧಿಗಳೇ ಆಗುತ್ತಾರೆ.

ತಾವೇ ರಚಿಸಿಕೊಂಡು ನಿಂತ ಗದ್ದುಗೆಗಳಿಂದ, ನಾಡಿನ ಸಾಹಿತಿಗಳು ಕೆಳ ಕ್ಕಿಳಿಯಬೇಕು. ಜನತೆ ಬೇರೆ ಗತಿಯಿಲ್ಲದೆ ನಿಮ್ಮ ಕೃತಿಗಳನ್ನೆತ್ತಿದರು, ಹೊರತು ಅವರ ಕೈದೀಪವೆಂದಲ್ಲ! ಆದುದರಿಂದ ತಾವು ಸಾಹಿತಿಗಳೆನ್ನುವ ಎದೆಗಾರಿಕೆ ಇಂದಿನ ನಮ್ಮ ಸಾಹಿತಿಗಳಿಗೆ ಇರಲಾರದು. ಆ ಸ್ಥಾನಕಕ್ಕಾಗಿ ಅವರು ದುಡಿದಿಲ್ಲ. ಬಡಜೀವಿಗಳಿಗೆ, ರೈತ ಕೂಲಿಗಳಿಗೆ ಸೇವೆ ಸಲ್ಲಿಸಿಲ್ಲ.

ಇಂದಿನ ಘೋರ ಸಮರ ಲೋಕವನ್ನೇ ಕುಲಿಮೆಯಲ್ಲಿಟ್ಟು ಕರಗಿಸು ತ್ತಿವೆ. ಕಲ್ಮಷಗಳೆಲ್ಲ ಹಾರುತ್ತಿವೆ. ಪುಟಕ್ಕಿಟ್ಟ, ಅಪ್ಪಟ ಜಗತ್ತು ಈ ಸಮರಾ ನಂತರದಲ್ಲಿ ನಮಗೆ ದೊರೆಯಲಿದೆ. ಆದರೆ, ಅದಕ್ಕಾಗಿ ನಾವು ದುಡಿಯ ಬೇಕು. ಈ ಹೋರಾಟದಲ್ಲಿ ನಾವೂ ಸೇರಿ, ನಮ್ಮ ಶಕ್ತಿ ಹೆಚ್ಚಿಸಿ, ಹೃದಯ ವನ್ನು ವಿಶಾಲಗೊಳಿಸೋಣ! ಇತ್ತ ಭಾರತ ಭೀಕರ ಬಿರುಗಾಳಿಗಳಿಗೆ ಸಿಲು ಕಿದೆ. ಜನತೆಯ ದಾಸ್ಯಭಾವನೆ, ಹುಂಬತನ, ಧಾರ್ಮಿಕರ ಅನೀತಿ, ಸ್ವಾರ್ಥ ಲಾಲಸೆಗಳೇ ಮುಂತಾದ ನೂರಾರು ಬಗೆಯ ಕಶ್ಮಲಗಳನ್ನು ನೀಗಿ ಭಾರತವನ್ನು ಪುತ್ಥಳಿಯಾಗಿಸುವ ಸಂದರ್ಭವಿದೆ. ಜನತೆಗಾಗಿ ಹೋರಾಡಿ, ಜನತೆಯ ಆ ಪವಿತ್ರ ಲೋಕವನ್ನಿಲ್ಲಿ ಸಾಧಿಸೋಣ. ಸ್ವರ್ಗವನ್ನು ಭೂಮಿಗೆ ಇಳಿಸೋಣ!

ಸಾಹಿತ್ಯದಲ್ಲಿ ಜನತಾದೃಷ್ಟಿ

ಎಸ್. ಅನಂತನಾರಾಯಣ

" ಲಲನೆಯರ ಲಾವಣ್ಯ ಬಾಲೆಯರ ಬೆಡಗು
ರಮಣಿಯರ ರತಿರೂಪ ಬಣ್ಣಿಸಲುಬಹುದೆ?
ನಾವು ಪರದಾಸ್ಯದಲಿ ಕೊಳೆತು ನಾರುತಲಿ
ಗೋಳಿಡುತ ನಿಮಗಾಗಿ ಕೂಗುತಿರಲು! "

ಜನತೆಗೆ ಸಾಹಿತ್ಯದಲ್ಲಿ ಸ್ವಲ್ಪವೂ ಆಸಕ್ತಿಯಾಗಲೀ, ಅಭಿರುಚಿಯಾಗಲೀ ಇಲ್ಲ. ಜನತೆಗೂ ಸಾಹಿತ್ಯಕ್ಕೂ ಎಲ್ಲಿಯ ಸಂಬಂಧ ಎಂಬ ಭಾವನೆ ಬಹಳ ಜನರಲ್ಲಿ ಬೇರೂರಿದೆ. ಆದರೆ ಇದು ತಪ್ಪು ಅಭಿಪ್ರಾಯ. ನಮ್ಮ ನಾಡಿನ ಜನಪದ ಗೀತಗಳನ್ನು ಕೇಳಿದವರು ಯಾರೂ ಅಂತಹ ತಪ್ಪು ಮಾಡಲಾರರು. ಜನತೆಗೂ ಸಾಹಿತ್ಯಕ್ಕೂ ಯಾವ ಸಂಬಂಧವೂ ಇಲ್ಲವೆನ್ನುವವರು ಜನತೆಯೊಂದಿಗೆ ಕೂಡಿ, ಓಡಾಡಿ ಅದರ ಮನಸ್ಸನ್ನರಿತವರಲ್ಲ. ನಿಜವಾಗಿ ನೋಡಿದರೆ ಜನತೆಗೆ ಸಾಹಿತ್ಯದಲ್ಲಿ ಅಪಾರ ಅಭಿರುಚಿ ಇರುವುದು ತಿಳಿಯುತ್ತದೆ. ಆದರೆ ಆ ಅಭಿರುಚಿಯ ಅಭಿವೃದ್ಧಿಗೆ ಅವಕಾಶ ಮಾತ್ರ ಇಲ್ಲ.

ಜನತೆಗೆ ಸಾಹಿತ್ಯದಲ್ಲಿ ಅಭಿರುಚಿ ಇಲ್ಲವೆಂದೇ ಅಭಿಮತವಿರುವವರು ಬಹಳ ಮಂದಿ ಸಾಹಿತ್ಯದಲ್ಲಿ ವ್ಯವಸಾಯ ಮಾಡಿದ್ದಾರೆ. ಅವರ ಅಭಿಮತದಲ್ಲಿ ಸಾಹಿತ್ಯ ಮಧ್ಯಮ ವರ್ಗದವರ ಸ್ವತ್ತು. ಅದರಿಂದ ಆ ಸಾಹಿತಿಗಳು ಜನತೆಯೆಂದರೆ ಕೀಳು ಎಂಬ ದುರ್ಭಾವನೆಗೆ ಬಲಿ ಬಿದ್ದು ಜನತೆಯನ್ನು ದೂರವಿರಿಸಿದ್ದಾರೆ. ಜನತೆಯನ್ನು ತಮ್ಮಿಂದ ದೂರವಿರಿಸುವುದೊಂದೇ ಅಲ್ಲ–ತಮ್ಮ ಸಾಹಿತ್ಯದಿಂದಲೂ ದೂರವಿರಿಸಿದ್ದಾರೆ. ಇದರಿಂದ ನಷ್ಟ ಅಷ್ಟಿಷ್ಟಲ್ಲ. ಅವರ ಸಾಹಿತ್ಯ ಅಮರ ಸಾಹಿತ್ಯವಲ್ಲ. ಅವರು ಚಿತ್ರಿಸುವ ಜೀವನ ಮಧ್ಯಮ ವರ್ಗದವರದು. ಮಧ್ಯಮ ವರ್ಗದ ಪ್ರೇಮ, ದ್ವೇಷ, ಕೋಪ ತಾಪ ಸುಖ ದುಃಖಗಳನ್ನು ಮಾತ್ರ ಅವರು ಚಿತ್ರಿಸಿದ್ದಾರೆ. ನಿಜವಾದ ಜನತೆಯ ಸೋಂಕು ಕೂಡ ಅದರಲ್ಲಿಲ್ಲ. ಅಪ್ಪಿ ತಪ್ಪಿ ಎಲ್ಲಾದರೂ ಜನತೆಯ ಜೀವನ ಚಿತ್ರ ಬಂದರೆ ಅದರಲ್ಲಿ ಜನತೆಯನ್ನು ಎಷ್ಟು ಕೀಳಾಗಿ ಕಾಣಲು ಸಾಧ್ಯವೋ ಅಷ್ಟು ಕೀಳಾಗಿ ಕಂಡಿದ್ದಾರೆ. ಇದರಿಂದ ಜನತೆಗೆ ಅಂತಹ ಸಾಹಿತ್ಯ ಒಗ್ಗುವುದಿಲ್ಲ.

ತಾವು ಮೇಲು, ಜನತೆ ಕೀಳು ಎಂಬ ಮನೋಭಾವನೆಯನ್ನು ತುಂಬಿಟ್ಟು ಕೊಂಡು ಜನತೆಯ ವಿಚಾರ, ಆಚಾರಗಳನ್ನು ತಮ್ಮ-ಮಧ್ಯಮವರ್ಗದ ವರ ಆಚಾರ ವಿಚಾರಗಳ ಅಳತೆಗೋಲಿನಿಂದ ಅಳೆಯುತ್ತಾರೆ. ಸರಿ! ಅವು ಹೀನವೆಂದು ದೂರ ದೂಡುತ್ತಾರೆ. ಜನತೆಗೆ ಇಂತಹ ಸಾಹಿತ್ಯದಿಂದ ಏನೂ ಪ್ರಯೋಜನವಿಲ್ಲ. ಇದರಿಂದ ಜನತೆಯಲ್ಲಿ ಒಂದು ರೀತಿಯ 'ದೀನ ನಾನು' ಮನೋಭಾವ ಹುಟ್ಟಿ ನಾಡಿಗೇ ಕೇಡುಕಾಗುವುದು!

ನೀಲಗಗನದ ಸೊಗಸು, ಹಕ್ಕಿಗಳ ಹಾಡಿನ ಮಾಧುರ್ಯ ಇವು ಎಲ್ಲ ರಿಗೂ ಆಹ್ಲಾದಕರ, ಆನಂದದಾಯಕ, ಆದರೆ ಹಗಲು ಹುಟ್ಟುವ ಮುಂ ಚೆಯೇ ಕಾರ್ಖಾನೆ ಸೇರಿ ಕುಲುಮೆಯ ಕಾವಿನಲ್ಲಿಯೇ, ಯಂತ್ರದ ಗುಡುಗಿ ನಲ್ಲಿಯೇ ರಾತ್ರಿ ಮುಸುಕುವವರೆಗೂ ದುಡಿದು ಸುಸ್ತಾಗಿ, ಸೊರಗುವ ಕೂಲಿಗಾರನಿಗೆ ಅವುಗಳನ್ನು ನೋಡುವುದಕ್ಕಾಗಲೀ ಕೇಳುವುದಕ್ಕಾಗಲೀ ಪುರುಸೊತ್ತೆಲ್ಲಿ? ಅರ್ಧ ನಿಮಿಷ ಹೊತ್ತಾದರೆ ಅನ್ನಕ್ಕೇ ಸೊನ್ನೆ ಬೀಳುವ ಅವನಿಗೆ ಇವಕ್ಕೆಲ್ಲಾ ಆರಾಮವಿದೆಯೇ? ಆ ವಿಚಾರ ಚಿಂತಿಸಲು ಅವನಿಗೆ ಬೇಕಾದುದು ನಿಸರ್ಗ ಸೌಂದರ್ಯ ವರ್ಣನೆಯಲ್ಲ! ಹೆಂಗಳೆಯರ ರೂಪವರ್ಣನೆಯಲ್ಲ! ಅವನ ಕಣ್ಣಿನ ಮುಂದೆಯೇ ಅವನ ಹೆಂಡಿರು ಮಕ್ಕಳು ಒಂದು ಹೊತ್ತಿನ ಅನ್ನಕ್ಕಾಗಿ, ಒಂದು ತುತ್ತು ಕೂಳಿಗಾಗಿ ದುಡಿದು ಬಾಡುವುದನ್ನು ಕಾಣುವ ಅವನಿಗೆ ಹೆಂಗಳೆಯರ ರೂಪಲಾವಣ್ಯಗಳ ವರ್ಣನೆ ಯೇಕೆ? ಒಂದು ತುಣುಕು ರೊಟ್ಟಿಗೋಸ್ಕರ ಮೇಲಧಿಕಾರಿ—ಮೇಸ್ತ್ರಿ-ಮ್ಯಾನೇಜರ್ ಕಾಮಕ್ಕೆ ಬಲಿಯಾಗಿ ಎಳೆತನದಲ್ಲಿಯೇ ಮುಪ್ಪಾಗುವ ಹೆಂಗಸರನ್ನು ದಿನೇ ದಿನೇ ನೋಡುತ್ತಿರುವ ಅವನಿಗೆ ಪ್ರೇಮದ ಮಹಿಮೆ ವಿಶ್ವಪ್ರೇಮ ಇವುಗಳು ಹಿಡಿಯುತ್ತವೇನು? ರೈತನಿಗೂ ಅಷ್ಟೆ-ದಿನಬೆಳಗಾದರೆ ಹೊಲದ ಚಿಂತೆ, ತನ್ನ ಮೇಲಿನ ಅಧಿಕಾರಿಗಳ ಅತ್ಯಾಚಾರ, ಜಮೀನುದಾರರ ಅನ್ಯಾಯಾಚರಣೆ ಇವುಗಳ ನಡುವೆ ಸಿಕ್ಕಿರುವ ಅವನಿಗೆ ಮಧ್ಯಮವರ್ಗದವರ ಸಾಹಿತ್ಯ ಅರ್ಥವಿಲ್ಲದ ಕೂಗು! ಜನತೆಗೆ-ಕೂಲಿಗಾರನಿಗೆ ಮತ್ತು ರೈತನಿಗೆ ಬೇಕಾದ ಸಾಹಿತ್ಯವೇ ಬೇರೆ. ಅವರಿಗೆ ಯಾವಾಗಲೂ ಮುಂದಿರುವ ಕಷ್ಟ ಗಳ ಬೆಟ್ಟಗಳನ್ನು ಹಿಟ್ಟು ಮಾಡಲು ಹುಮ್ಮಸ ಕೊಡುವ ಸಾಹಿತ್ಯ ಬೇಕು. ಅವರಿಗೆ ನಿಜ ಜೀವನ ಚಿತ್ರ ಬೇಕು. ಜನತೆಯೊಂದಿಗೆ ಒಂದಾಗಿ, ಅದರೊಂ

ದಿಗೇ ಜೀವಿಸಿ, ಚಿಂತಿಸಿ, ಕೂಡಿ ಆಡಿ ಕಲಿತು, ಅದರ ಕಷ್ಟ ನಷ್ಟ, ಸಾವು ನೋವುಗಳನ್ನು ಅರಿತವರಿಗೆ ಮಾತ್ರ ಆ ಸಾಹಿತ್ಯ ಕೊಡಲು ಸಾಧ್ಯ. ಇಂದು ಜನತೆಗೆ ಬೇಕಾದುವನ್ನು ಕೊಡಲು ಅಂತಹ ಸಾಹಿತಿಗಳಿಗೆ ಮಾತ್ರ ಚೈತನ್ಯವಿದೆ. ಸಂಗ್ರಾಮದಲ್ಲಿ ಸೆಕೆಯ ಸೊರಗಿ ಸಾಯುತ್ತಿರುವವನಿಗೆ ಶಾಂತಿಗೀತ ಕೊಡುವುದೂ ಒಂದೆ-ಕೂಳುಕೇಳಿದವನಿಗೆ ಕಗ್ಗಲ್ಲು ಕೊಡುವುದೂ ಒಂದೆ !

ಸಾಹಿತ್ಯ ಸಮಾಜದ ಮುಂದಿರುವ ಸಮಸ್ಯೆಗಳನ್ನು ತನ್ನ ಸಮಸ್ಯೆಯನ್ನಾಗಿಸಿಕೊಂಡು ಅವುಗಳ ಪರಿಹಾರ ಮಾಡಿದರೆ ಮಾಡಿದರೆ ಮಾತ್ರ ಅದು ನಿಜವಾದ ಸಾಹಿತ್ಯ. ಆಗ ಮಾತ್ರ ಅದು ಜೀವಂತ ಸಾಹಿತ್ಯವಾಗಬಹುದು. ನಮ್ಮ ಇಂದಿನ ಸಮಾಜದ ಅತ್ಯಂತ ದೊಡ್ಡ ಸಮಸ್ಯೆಯಾವುದು. ಎಲ್ಲರ ಮುಂದೂ ನಿಂತು ರೌದ್ರ ನೃತ್ಯ ನರ್ತಿಸುತ್ತಿರುವ ಪೆಡಂಭೂತ ಯಾವುದು. ಅದು ವರ್ಗ ಕಲಹ [Class war] ಸಮಾಜದಲ್ಲಿ ಇಂದು ಎರಡೇ ಎರಡು ವರ್ಗಗಳಾಗಿವೆ. ಒಂದು ದುಡಿಸುವವರು-ಎರಡನೆಯದು ದುಡಿಯುವವರು ! ಇಂದು ನಮ್ಮ ಮುಂದೆ ಕಾಣುವ ದೃಶ್ಯ ಈ ಎರಡು ವರ್ಗಗಳ ಅನವರತ ಯುದ್ಧ. ದುಡ್ಡಿದ್ದವರು, ದುಡ್ಡಿಲ್ಲದವರ ಮೇಲೆ ಮಾಡುವ ಅತ್ಯಾಚಾರ, ಅವರ ಪ್ರತೀಕಾರ ಇದೇ ಇಂದಿನ ಸಮಾಜದ ದೊಡ್ಡ ಸಮಸ್ಯೆ. ಹೇಗೆ ಬಂಡವಾಲಿಗರು ಉಳಿದವರನ್ನು ದಾಸರನ್ನಾಗಿಟ್ಟುಕೊಟ್ಟು ದುಡಿಸಿ ತಮ್ಮ ಹೊಟ್ಟೆ ಬೆಳಿಸುತ್ತಿದ್ದಾರೆ. ಹೇಗೆ ತುತ್ತನ್ನಕ್ಕೋಸ್ಕರ ಜನ ಅವರಿಗೆ ತುತ್ತಾಗುತ್ತಾರೆ. ಅವರಿಗೆ ಅಲ್ಲಿಂದ ಮೋಕ್ಷ ಹೇಗೆ ಇದೇ ಸಾಹಿತಿಯ ಮುಂದೆ ಮೊದಲು ಬಂದು ನಿಲ್ಲುವ ದೃಶ್ಯಗಳು ! ಸಾಹಿತ್ಯ ಕಾಲಕ್ಕೆ ತಕ್ಕಂತೆ ಬದಲಾಯಿಸುತ್ತದೆ. ಜನತೆಗೆ ಹೊಂದಿಕೊಂಡು ಸಾಹಿತ್ಯ. ಮಧ್ಯಮ ವರ್ಗದವರ ಮತ್ತು ಬಂಡವಾಲಿಗರ ಯುಗ ಮುಗಿದು ಇಂದು ಜನತಾಯುಗ ಪ್ರಾರಂಭವಾವಾಗಿದೆ !

ಸಾಹಿತಿ ಜನತೆಗಿರುವ ಕಷ್ಟನಷ್ಟಗಳನ್ನೆಲ್ಲಾ ತಿಳಿದು ಚಿತ್ರಿಸಿದರಷ್ಟೇ ಸಾಲದು. ಬರಿಯ ಅಷ್ಟಕ್ಕೇ ಬಿಟ್ಟಲ್ಲಿ ಅದರಿಂದ ಹೆಚ್ಚು ಅನಾನುಕೂಲವೇ ಸಂಭವಿಸುವುದು. ಆ ಕಷ್ಟಗಳು ಅವರನ್ನು ಧೀಗೆಡಿಸದಂತೆ ನೋಡಿಕೊಳ್ಳುವುದೂ ಸಾಹಿತಿಯ ಕರ್ತವ್ಯ. ಜನತೆಯಲ್ಲಿ ನಿರಾಶಾವಾದವಾಗಲಿ ನಿರಸನ

ವಾದವಾಗಲೀ ಹರಡದಂತೆ ನೋಡಿಕೊಳ್ಳುವುದು ಸಾಹಿತಿಯ ಕೆಲಸ. ಜನತೆಯನ್ನು ಕಷ್ಟಗಳಿಂದ ಪಾರುಗೊಳಿಸಲು ಸುಗಮವಾದ ಹಾದಿ ತೋರುವುದರಲ್ಲೇ ಸಾಹಿತಿಯ ನಿಜವಾದ ಕೈ ಚಳಕ, ಕರ್ತವ್ಯ. ಲೆನಿನ್ ಹೇಳಿರುವಂತೆ ಯಾವ ಸಾಹಿತ್ಯವೇ ಆಗಲಿ ಸಾಹಿತ್ಯವೆನ್ನಿಸಿಕೊಳ್ಳಬೇಕಾದರೆ ಅದು ಜನತೆಯ ಕ್ರಾಂತಿಗೆ ಸಹಕಾರಿಯಾಗಬೇಕು. ಜನತೆಯ ಕ್ರಾಂತಿಯೆಂದರೆ ಜನತೆಯ ಮನಸ್ಸಿನ ಕ್ರಾಂತಿ. ಜನತೆಗೆ ಸುಲಭವಾಗಿ ಹೊಸ ಹೊಸ ವಿಚಾರಗಳನ್ನು ತಿಳುಹಿಸಬೇಕು. ಇದುವರೆಗೂ ಮಧ್ಯಮವರ್ಗದವರ ಸೊತ್ತಾಗಿಯೇ ಉಳಿದಿರುವ ವಿಜ್ಞಾನ ಮುಂತಾದ ಶಾಸ್ತ್ರಗಳು ಅದಕ್ಕೆ ದಕ್ಕುವಂತಾಗಬೇಕು. ಆಗಲೇ ಜನತೆಯಲ್ಲಿ ಕ್ರಾಂತಿಯಾಗಲು ಸಾಧ್ಯ. ಜನತೆಗೆ ತನ್ನಲ್ಲಿ ಅಡಗಿ ನಿದ್ರಿಸುತ್ತಿರುವ ಶಕ್ತಿಯ ಅರಿವಾಗಿ ಅದು ಅತ್ಯಾಚಾರ, ಅನ್ಯಾಯಗಳನ್ನು ಕಿತ್ತೊಗೆಯುವ ಕಾರ್ಯದಲ್ಲಿ ನಿರತವಾಗುವಂತೆ ಮಾಡುವ ಸಾಹಿತ್ಯ ಜನತೆಗೆ ಬೇಕು. ಅಂತಹ ಸಾಹಿತ್ಯ ದೊರೆತಾಗ ಜನತೆ ಮೇಲೇರಿ ಜನತೆಯ ನಾಡು ಸ್ಥಾಪಿಸಲು ಸಾಧ್ಯ. ಎಲ್ಲಿಯವರೆಗೂ ಜನತೆ ಬಂಡವಾಲಿಗರ ಕೈಕೆಳಗೆ ಕೊರಗುವುದೋ ಅಲ್ಲಿಯವರೆಗೂ ಸಾಹಿತ್ಯ ಕೂಡ ರೆಕ್ಕೆಯಿಲ್ಲದ ಹಕ್ಕಿಯಂತಿರುವುದು. ಸಾಹಿತ್ಯ, ಸೌಂದರ್ಯಗಳಿಗೆ ಸಲ್ಲಬೇಕಾದ ಸ್ಥಾನ ನಿಜವಾಗಿಯೂ ಸಲ್ಲಬೇಕಾದಲ್ಲಿ ಅದು ಜನತೆಯ ನಾಡಿನಲ್ಲಿ ಮಾತ್ರ ಸಾಧ್ಯ! ಆ ಜನತೆಯ ನಾಡನ್ನು ಸ್ಥಾಪಿಸಿ ತನ್ನದನ್ನು ತಾನು ಪಡೆಯಲು ಸಾಹಿತ್ಯ ದುಡಿಯಬೇಕು. ಸಿರಿತನದ ಆಳಾಗಿರುವುದಕ್ಕಿಂತ ಬಡತನದ ಗೆಳೆಯನಾಗಿರುವುದು ಮೇಲು. ಅಂದು ಮಾತ್ರ ಸಾಹಿತ್ಯಕ್ಕೆ ಜೀವ ಬಂದೀತು. ಒರಿಸ್ಸಾದ ಕವಿ ಸುಚೀನಾಥರಾಯ್‌ರವರು ಈ ಅರ್ಥವನ್ನು ಬಹಳ ಸೊಗಸಾಗಿ ಹೇಳಿದ್ದಾರೆ. ಅವರ ಕವನದ ಒಂದೆರಡು ಸಾಲುಗಳೊಂದಿಗೆ ಈ ಲೇಖನವನ್ನು ಮುಗಿಸುತ್ತೇನೆ.

" ಅಂದುಮಾತ್ರವೆ ಗೆಳೆಯ, ಅಂದುಮಾತ್ರವೆ ಜಗನಿ,
ಕೂಳ್ಕೇಳಿದವರಿಂಗೆ ಕಗ್ಗಲ್ಲು ಕೊಡುವುದನು
ನಿಲ್ಲಿಸಿದ ದಿನ ಮಾತ್ರ ಸೌಂದರ್ಯ ದೇವತೆಯು
ತನ್ನ ನಿಜ ವೈಭವದಿ ಮೆರೆಯುವಂತಾಗುವಳು "

ಭಾರತೀಯ ಜನತಾರಂಗಭೂಮಿ ಮತ್ತು ಪ್ರಗತಿಶೀಲ ಲೇಖಕರು

ಕುಳುಕುಂದ ಶಿವರಾಯ

ಕಾರ್ಯದರ್ಶಿ, ಜನತಾರಂಗಭೂಮಿ. ಮಂಗಳೂರು ಸಮಿತಿ.

ಹೊಸ ವ್ಯವಸ್ಥೆಯ ಪ್ರಸವಕಾಲವಾದ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಜನ ಜೀವನವನ್ನು ಅಲ್ಲೋಲಕಲ್ಲೋಲ ಮಾಡುತ್ತಿರುವ ಹಲವು ಶಕ್ತಿಗಳಲ್ಲಿ ಭಾರತೀಯ ಜನತಾರಂಗಭೂಮಿಯ ಆಂದೋಲನವೂ ಒಂದು. ಹತ್ತಾರು ಮಹಾರಾಜರ–ಹತ್ತಾರು ಶ್ರೀಮಂತರ- ಆಸೆ ಲಾಲಸೆಗಳಿಗೆ ಪೋಷಕವಾಗಿರುತ್ತಿದ್ದ ಭಾರತೀಯ ಕಲೆಯಿಂದು ಅಧಃಪತನದ ಗಂಡಾಂತರದಲ್ಲಿದೆ. ಮಿಲಿಯಾಂತರ ಜನ ಆ ಕಲೆಯನ್ನು ಉಳಿಸಲೆತ್ನಿಸುತ್ತಿದ್ದಾರೆ.

ಅವರು ಉಳಿಸುತ್ತಿರುವ ಕಲೆ ಮಾತ್ರ ಹೊಸ ರೂಪವನ್ನು ತಳೆಯುತ್ತಿದೆ!

ನಾಲ್ಕಾರು ಗವಿ ಗುಹೆಗಳಲ್ಲಿ, ಶಾಸ್ತ್ರೀಯ ವಿಜ್ಞಾನದ ಬಂಧನದಲ್ಲಿ ಹೇಳುವ- ಕೇಳುವರಿಲ್ಲದೆ, ನಶಿಸಿಹೋಗುತ್ತಿದ್ದ ನೃತ್ಯಕಲೆಯನ್ನು ಜನತೆ ತನ್ನದಾಗಿ ಸ್ವೀಕರಿಸಿದೆ. ಬಂಗಾಲದ ಜನಜೀವನದ ದುರಂತ ಚಿತ್ತಪ್ರಸಾದ, ಸುಧೀರ ಕಾಸ್ತಗಿರರಂತಹ ಚಿತ್ರಕಾರರನ್ನು ಬೆಳಕಿಗೆ ತಂದಿದೆ. ಪ್ರೇಮ–ಆಲಾಪನೆಗಳ 'ಸಂಗೀತರತ್ನ ಆಸ್ಥಾನವಿದ್ವಾನ'ಗಳ ಸಂಗೀತ ಮುಂಬಯಿ ಬಂಗಾಳಗಳ ಮಜೂರರ, ಆಂಧ್ರ–ಕೇರಳಗಳ ಕಿಸಾನರ ದಲಿತಧ್ವನಿಯಲ್ಲಿ ಮಾರ್ದನಿಗೊಳ್ಳುತ್ತಿದೆ. ಆ ಇತಿಹಾಸದ ಚಿತ್ರಗಳು ನಾಟಕಗಳ ವಸ್ತುಗಳಾಗತೊಡಗಿವೆ. ಚೈನೀಯ ನಾಟಗಳ ಅಪೂರ್ವ ಶಕ್ತಿ-ಸಾಮರ್ಥ್ಯ, ರಷ್ಯದ ಸ್ವತಂತ್ರ ಕಲಾವಿದರ ಪ್ರದರ್ಶನ ನೈಪುಣ್ಯ ನಮ್ಮ ಪುರೋಗಾಮಿಗಳ ಮನಸ್ಸಿಗೆ ತಟ್ಟಿದೆ! ವಿಚಾರ ಕ್ರಾಂತಿಗೆ ಎಡೆಗೊಟ್ಟಿದೆ.

ಇನ್ನೂ ನಮ್ಮ ಕಲಾ ಸಂಪತ್ತು ಶ್ರೀಮಂತರ ಮಹಾರಾಜರ ಕಾಲಕ್ಷೇಪದ ಸಾಧನವಾಗಬೇಕೆ ?

ಇನ್ನೂ ದೇಶದ ಸ್ವಾತಂತ್ರ್ಯ ಸಂಗ್ರಾಮ–ಅಂತರರಾಷ್ಟ್ರೀಯ ಮಹಾ

ಸಮರಗಳಲ್ಲಿ, ಹೊಸ ಜಗತ್ತಿನ ನಿರ್ಮಾಣದ ಬೃಹದ್‌ಯತ್ನದಲ್ಲಿ, ನಮ್ಮ ಕಲಾ ಸಂಪತ್ತು ಸಹಾಯಕವಾಗದೆ ಹೋಗಬೇಕೆ?

ಭಾರತದ ಮೂಕ ಮಿಲಿಯಗಳಲ್ಲಿ ಅಲ್ಲೊಂದು ಇಲ್ಲೊಂದು ಸ್ವರ-ಹೀಗೆ ನೂರಾರು ಸ್ವರ-ಮುಷ್ಟಿಯೆತ್ತಿ "ಇಲ್ಲ!" ವೆನ್ನುತ್ತಿದೆ.

"ಕಲೆ ಕಲೆಗಾಗಿಯಲ್ಲ! ಜನತೆಗಾಗಿ!" ಎಂಬ ಘೋಷ ಜನತಾ ರಂಗಭೂಮಿಯ ಸ್ಥಾಪನೆ-ಬೆಳೆವಣಿಗೆಗಳಿಗೆ ಕಾರಣವಾಗಿದೆ.

ಅರೆ ಹೊಟ್ಟೆಯ ಕೂಗನ್ನು ಕುರಿತು ಕವಿತೆ ಬರೆಯಬಲ್ಲ ಕವಿ, ಜನತಾ ರಂಗಭೂಮಿಯ ಅಂಗಣದಿಂದ ತನ್ನ ಕೃತಿಯನ್ನು ಹಾಡಿಸುತ್ತಾನೆ. ಜನತೆಯ ಜೀವನವನ್ನು ಚಿತ್ರಿಸಿ, ವಿಚಾರ ಕ್ರಾಂತಿಯನ್ನು ತೆರಳಿಸಿ ಪ್ರಗತಿಶೀಲ ಲೇಖಕನು ಬರೆದ ನಾಟಕವನ್ನು ಜನತಾರಂಗಭೂಮಿ ಆಡುತ್ತಿದೆ! ಜನರ ಸಂಕಷ್ಟವನ್ನು ಚಿತ್ರಿಸುತ್ತ ಉಷಾರಾಣಿ ಅನುದಾಸಗುಪ್ತರು ನರ್ತಿಸುತ್ತಿದ್ದಾರೆ.

ಹೀಗೆ ಪ್ರಗತಿಶೀಲ ಲೇಖಕರ ಸಹಾಯ-ಸಹಕಾರಗಳಿಂದ ಭಾರತೀಯ ಜನತಾರಂಗಭೂಮಿ ಬೆಳೆಯುತ್ತಿದೆ.

"ಇದೆಲ್ಲ ಬರಿಯ ಕಲ್ಪನೆ ಮರುಳು" ಎನ್ನುವ ಕಲಾಶಾಸ್ತ್ರಿಗಳಿಗೆ ನಮ್ಮ ದೇಶದಲ್ಲಿ ಬರಗಾಲವಿಲ್ಲ. ಕೊಚ್ಚಿ ಮಹಾರಾಜರ ಆಡಿಯಾಳಾಗಿ ತನ್ನ ಕಲಾ ಮಂಡಲವನ್ನು ನಡೆಸುತ್ತಿದ್ದು, ಅವರ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ದೇವದಾಸಿ ಪದ್ಧತಿಯನ್ನು ಎತ್ತಿ ಹಿಡಿದ ಮಹಾಕವಿ ವಲ್ಲತ್ತೋಳರೇ ಈಗ ಜನತೆಯಬಳಿಗೆ ಬಂದಿರುವುದು; ಆಲ್ಮೋರದ ಮಹಾ ಶಿಖರದಿಂದಿಳಿದು ಉದಯಶಂಕರರು ಜನನಿವಾಸಕ್ಕೆ ಸಮೀಪದಲ್ಲಿ ಇರತೊಡಗಿರುವುದು. ಈ ಎರಡು ದೃಷ್ಟಾಂತಗಳು ಶಾಸ್ತ್ರಿಗಳ ಬಾಯಿ ಮುಚ್ಚಿಸಬಲ್ಲುವು.

ಇಲ್ಲ; ಯಥಾರ್ಥ-ವಾಸ್ತವ ವಿಷಯವೆಂದರೆ, ಕೆರಳುತ್ತಿರುವ ವಿಷಯವೆಂದರೆ, ಕೆರಳುತ್ತಿರುವ ಜನತೆಯ ವಿಚಾರ ಶಕ್ತಿಯೊಡನೆ, ನಮ್ಮ ಕಲೆಗಳು ಹೊಸ ರೂಪವನ್ನು ತಾಳುತ್ತಿವೆ.

ಭಾರತೀಯ ಜನತಾರಂಗಭೂಮಿ

೧೯೪೩ ರಲ್ಲಿ ಭಾರತೀಯ ಜನತಾರಂಗಭೂಮಿ ಸಮಿತಿ ಮುಂಬಯಿಯಲ್ಲಿ ರೂಪುಗೊಂಡಿತು. ಜವಾಹರರು ಆಗ ಸಂದೇಶ ಕಳುಹಿಸಿ, ಆ

ಹೊಸ ಆಂದೋಲನಕ್ಕೆ ಯಶಸ್ಸನ್ನು ಕೋರಿದರು. ಆದರೆ ಆ ವರ್ಷ ಆಗಸ್ಟಿನ ಬಳಿಕ ದೇಶದಾದ್ಯಂತ ಉಂಟಾದ ಅನಾಹುತ, ಸರಕಾರದ ಅಮಾನುಷ ಮರ್ದನ, ಸಮಿತಿಯನ್ನು ಶಕ್ತಿ ಗುಂದಿಸಿದುವು. ದೇಶವು ತನ್ನ ಮೇಲೆ ಬಿದ್ದ ಆಘಾತದಿಂದ ಚೇತರಿಸಿದಂತೆಯೇ ಜನತಾರಂಗಭೂಮಿ ಸಮಿತಿಯೂ ಬಲಗೊಂಡು ೧೯೪೩ ಮೇ ತಿಂಗಳ ೨೫ ರಂದು ಪ್ರಥಮದ ಸಮ್ಮೇಳನವನ್ನು ಜರುಗಿಸಿತು. ಕರ್ಣಾಟಕವನ್ನೂ ಕೂಡಿ ವಿವಿಧ ಪ್ರಾಂತಗಳವರು ಅದರಲ್ಲಿ ಭಾಗವಹಿಸಿದರು. ಮುಂಬಯಿ, ಬಂಗಾಳ, ಪಂಜಾಬ್, ಆಂಧ್ರ ಸಂಯುಕ್ತ ಪ್ರಾಂತ ಮತ್ತು ಮಲಬಾರ್ ಪ್ರತಿನಿಧಿಗಳು ವರದಿಗಳನ್ನೊಪ್ಪಿಸಿದರು. ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಪ್ರೊ|| ಹಿರೆನ್ ಮುಖರ್ಜಿಯವರು ಜನತಾರಂಗಭೂಮಿಯ ಮುಂದಿದ್ದ ಕಷ್ಟದ ಹಾದಿಯನ್ನು ತೋರಿಸಿಕೊಟ್ಟು, ಸುಂದರ ಭವಿಷ್ಯತ್ತನ್ನು ಚಿತ್ರಿಸಿದರು.

ಆಗಲೇ ಭಾರತೀಯ ಪ್ರಗತಿಶೀಲ ಲೇಖಕರ ಸಮ್ಮೇಳನ ಜರುಗುತ್ತಿದ್ದಾಗ, ಜನತಾರಂಗಭೂಮಿಯವರು ಪರೇಲಿನಲ್ಲಿ ತಮ್ಮ ನಾಟಕಗಳನ್ನಾಡಿದರು.

ಪ್ರಗತಿಶೀಲ ಲೇಖಕರ ನೆರವಿನಿಂದ ಮುಂದೊತ್ತಬೇಕೆಂಬುದು ಜನತಾರಂಗಭೂಮಿ ಸಮಿತಿಯು ತನ್ನ ಸಮ್ಮೇಳನದಲ್ಲಿ ಸ್ವೀಕರಿಸಿದ ಪ್ರಧಾನ ನಿರ್ಣಯಗಳಲ್ಲೊಂದು.

ಕರ್ಣಾಟಕದಲ್ಲಿ ಈ ಚಳವಳಿ

ಅ. ಭಾ. ಜನತಾರಂಗಭೂಮಿ ಕಾರ್ಯಕಾರಿ ಸಮಿತಿಯಲ್ಲೊಬ್ಬರಾದ ಕುಮಾರ ವೆಂಕಣ್ಣ ಅವರು ಬೆಂಗಳೂರಿನಲ್ಲಿರುವರು. ಮೈಸೂರಿನ ಸಮಿತಿಗೆ ಶ್ರೀಮತಿ ಕೇಸರಿ ಕೇಶವನ್ ಅವರು ಕಾರ್ಯದರ್ಶಿಯಾಗಿದ್ದಾರೆ. ಬೆಂಗಳೂರಿನಲ್ಲಿ ಹಿಂದೊಮ್ಮೆ ತಾವೇ ಆರಂಭಿಸಿದ ಕಾರ್ಯವನ್ನು ಅವರೀಗ ಮೈಸೂರಲ್ಲಿ ಮುಂದೊತ್ತುತ್ತಿದ್ದಾರೆ. ಶ್ರೀ ಶಿವರಾಮ ಕಾರಂತರು ಮಂಗಳೂರು ಸಮಿತಿಯ ಉದ್ಘಾಟನೆಯನ್ನು ೧೯೪೩ ರ ಆಗಸ್ಟಿನಲ್ಲಿ ನೆರವೇರಿಸಿದರು. ಅದೀಗ ತನ್ನ ಕಾರ್ಯಕಲಾಪಗಳನ್ನು ಮಾಡುತ್ತಿದೆ.

ಕರ್ಣಾಟಕದಲ್ಲಿ ಪ್ರಗತಿಶೀಲ ಲೇಖಕರ ಚಳವಳವೂ ಹೊಸತು ; ಎಳೆಯದು. ಈ ನಾಡಿನಲ್ಲಿ ಇನ್ನೂ ಶಿಶುವಾಗಿರುವ ಜನತಾರಂಗಭೂಮಿ ಪ್ರಗತಿಶೀಲ ಲೇಖಕರ--ಕಲಾವಿದರ ಯತ್ನದಿಂದ ಮುಂದೆ ಸಾಗಲಿದೆ.

ಸಾಹಿತ್ಯವೂ ಲೈಂಗಿಕ ವಿಜ್ಞಾನವೂ

ವೈದ್ಯಭಾನು ದ. ಕೃ. ಭಾರದ್ವಾಜ.

'ಇಂದು ಸಾಹಿತ್ಯದಲ್ಲಿ ಅಶ್ಲೀಲತೆ' ಎಂಬೊಂದು ವಿಚಾರವು ಹಲವು ಜನ ಸಾಹಿತಿಗಳ ತಲೆಯಲ್ಲಿ ಮಥಿಸವಾಗುತ್ತಿವೆ. ಇಲ್ಲಿ 'ಸಾಹಿತ್ಯ' ಮತ್ತು 'ಅಶ್ಲೀಲತೆ' ಎಂಬೆರಡು ಪದಗಳ ವಿಚಾರವು ವಿವೇಚನೀಯವಾಗಿದೆ. 'ಸಾಹಿತ್ಯ' ಎಂದರೆ ಕೆಲವರು ಬರೆದ ಕಥೆಗಳು, ಕವನಗಳು ಎಂದು ಕೆಲವರು ಅರ್ಥಮಾಡಿಕೊಂಡಿರುವರು. ಅದಕ್ಕೆ ಹಿಂದಿನ ಕಾಲದ ವಿದ್ಯಾನಾಥ, ದಂಡಿ, ವಾಮನ, ವಾಗ್ಭಟ, ಭೋಜ, ಮಮ್ಮಟ, ಜಗನ್ನಾಥ ಇವರೇ ಮೊದಲಾದ ಕಾವ್ಯಶಾಸ್ತ್ರಕಾರರ ವಚನಗಳೆ ಆಧಾರವಾಗಿರುವಂತೆ ಹೇಳುವರು. ಆ ಆಧಾರದಿಂದಲೆ ಹಿಂದಿನ ಕಾವ್ಯ ಗ್ರಂಥಗಳನ್ನು ನೋಡಿದರೆ ಅವು 'ನವರಸ ರುಚಿಕ' ವಾಗಿಯೆ ರಚಿತವಾಗಿರುವವು. ಆ 'ನವರಸ' ಗಳನ್ನು ಇಲ್ಲಿ ವಿವರಿಸಬೇಕಾಗಿಲ್ಲ. ಆದರೆ ಅವುಗಳಲ್ಲಿ ಶೃಂಗಾರ ರಸ ಪ್ರಧಾನವಾದ ಕಾವ್ಯಗಳಿಗೆ ಮಾನವರೆಲ್ಲರು ತಲೆದೂಗಿರುವರು. ಜಗನ್ನಾಥ ಪಂಡಿತನು "ರಮಣೀಯಾರ್ಥ ಪ್ರತಿಪಾದಕ ಶಬ್ದಃ ಕಾವ್ಯಂ" ಎಂದು ಹೇಳಿರುವನು. ಇಲ್ಲಿ ರಮಣೀಯಾರ್ಥ ಪ್ರತಿಪಾದಕವೆಂಬ ಪದಗಳು ಪಾರಿಭಾಷಿಕವಾದವು. ಅವುಗಳ ಭಾವಾರ್ಥವೇನೆಂದರೆ—"ಸುಂದರವಾದ ಪದಗಳಿರಬೇಕು. ಕೇವಲ ಅನುಭವಿಸಿ ತಿಳಿಯತಕ್ಕ ವರ್ಣನೆಗೆ ಅತೀತವಾದ ರಮಣೀಯವಾದ ಭಾವಗಳನ್ನು ಅವು ಹುಟ್ಟಿಸಬೇಕು. ಅಂತಹ ರಸಸಮುಚ್ಚಯವೆ ಕಾವ್ಯವೆನಿಸುವುದು." ಕಾವ್ಯವು ಗದ್ಯವಾಗಿದ್ದರೂ ಇರಬಹುದು, ಪದ್ಯವಾಗಿದ್ದರೂ ಇರಬಹುದು, ಎರಡೂ ಮಿಶ್ರವಾಗಿಯೂ ಇರಬಹುದು. ಈ ದೃಷ್ಟಿಯಿಂದಲೆ "ಸು ಕವಿತಾ ಸಾ ವನಿತಾ ಯಸ್ಯಾಃ ಶ್ರವಣೇನ ದರ್ಶನೇನಾಪಿ । ಕವಿಹೃದಯಂ ವಿಟ ಹೃದಯಂ ಸರಲಂ ತರಲಂ ಚ ಸತ್ವರಂ ಭವತಿ ॥" ಎಂದು ಕವಿಯು ಹಾಡಿರಬಹುದು. ವನಿತೆಯ ದರ್ಶನದಿಂದಾಗುವ ಪರಿಣಾಮವು ಕವಿತೆಯ ಶ್ರವಣದಿಂದಾಗಬೇಕು ಎಂದು ಹೇಳಿದೆ. ಆದುದರಿಂದಲೇ ಶೃಂಗಾರ ರಸ ಪ್ರಧಾನವಾದ ಕಾವ್ಯಗಳಿಗೆ ಮಾನವರ ಮನಸ್ಸು ಸೋಲುವುದೆಂದು ತೋರುವುದು! ಆ ಶೃಂಗಾರಮಯ ಕಾವ್ಯಗಳಲ್ಲಿ ಸ್ತ್ರೀಯು

ಅಂಗಾಂಗ, ಸ್ವಭಾವ, ನಡೆ, ನುಡಿಗಳ ವರ್ಣನೆಗಳು ಕಂಡುಬರುವವು. ಇವು ಗಳಾವುವೂ ಅಶ್ಲೀಲವೆನಿಸದು. ಏಕೆಂದರೆ, ಆ ಅಂಗಾಂಗ ವರ್ಣನೆಗಳಲ್ಲಿ ಮನಸ್ಸನ್ನುದ್ರೇಕಿಸುವ ವರ್ಣನೆಗಳಿರುವವೇ ಹೊರತು, ಆ ಅಂಗಾಂಗಗಳಲ್ಲಿ ಒಳಗೆ ಯಂತ್ರದಂತೆ ಕೆಲಸ ಮಾಡುತ್ತಿರುವ ಅವಯವಗಳ, ಅವುಗಳ ಸ್ವಭಾವದ ವರ್ಣನೆಗಳಿರುವುದಿಲ್ಲ. ಏಕೆಂದರೆ, ಅವುಗಳ ವರ್ಣನೆಯಿಂದ, ಮನಸ್ಸಿಗೆ ಜಿಗುಪ್ಸೆಯುಂಟಾಗಬಹುದು, ಜೀವನವು ನೀರಸವೆನಿಸಬಹುದು. ಆದ್ದರಿಂದ ಸಾಹಿತ್ಯಕಾರರೆನಿಸಿದವರೆಲ್ಲ ಅವರ ಗೊಡವೆಗೆ ಹೋಗಿಲ್ಲ. ಮತ್ತೆ ಪುರುಷಪಾತ್ರ ವಿಚಾರ ವರ್ಣನೆಯಲ್ಲಿಯೂ ಇದೇ ಬಗೆಯು ಕಂಡುಬರುವುದು. ಆದರೆ ಅವರ ಅಂಗಾಂಗ ವರ್ಣನೆಗಿಂತ ಉದಾರತೆ, ಶೌರ್ಯಾದಿಗಳ ವರ್ಣನೆಯು ಹೆಚ್ಚಾಗಿ ಕಂಡುಬರುವುದು. ಪುರುಷ ಸಾಹಿತಿಗಳೆ ಪ್ರಧಾನರಾಗಿರುವುದರಿಂದ ಈ ಬಗೆಯಾಗಿದೆಯೊ ಏನೊ? ಸ್ತ್ರೀ ಸಾಹಿತಿಗಳು ಮುಂದಾಗಿದ್ದರೆ ಬಗೆಯು ಬೇರೆಯಾಗುತ್ತಿತ್ತೋ ಏನೊ? ಹೀಗಾಗಿ ನಮ್ಮಲ್ಲಿ ನಲ್ಲ ನಲ್ಲೆಯರ ಒಡನಾಟದ ವರದಿಯೆ ಸಾಹಿತ್ಯವಾಗಿ ಪರಿಣಮಿಸಿರುವುದು. ಪೂರ್ವಕಾಲದ ಸಾಹಿತಿಗಳು ಸಾಹಿತ್ಯಶಾಸ್ತ್ರದ ನಿಯಮಗಳನ್ನು ಬರೆವಾಗ ಕಾಲವು ಬೇರೆಯಾಗಿತ್ತು. ಆಗ ರಸ ಕವಳದ ಕಾಲವಾಗಿತ್ತು. ಹೊಟ್ಟೆ ತುಂಬಿದ ಬಳಿಕ ಶೃಂಗಾರವು ರುಚಿಸುವುದು ಸಹಜವಾಗಿದೆ. ಆಗಿನ ಕಾಲದ ಮೇಲ್ಪಂಕ್ತಿಯನ್ನನುಸರಿಸಿದರೆ ನಮಗೆ ಮೇಲೆ ಉದಹರಿಸಿದಂತಹ ರಸಕವಳದ ಕಾಲದ ಸಾಹಿತ್ಯವೇ ದೊರೆಯುಬೇಕು! ಆದರೆ ಕಾಲವು ಈಗ ಬದಲಾಯಿಸಿದೆ. ಈಗ ಕಸವೇ ಕವಳವಾಗಿರುವ ಕಾಲ. ಆ ಹೀನ ಕವಳವೂ ದೊರೆಯುದೇ, ಮನೋವೃತ್ತಿಯನ್ನು ಬದಲಾಯಿಸುವ ನವರಸಗಳಲ್ಲಾವದೊಂದು ರಸವೂ ಉಕ್ಕದೆ, ಕೇವಲ ಕಣ್ಣೀರಿಗೆ ಬದಲಾಗಿ ರಕ್ತವನ್ನು ಬಸಿದು ಅಸುವನ್ನು ನೀಗಲನುವಾಗಿರುವ ಕಾಲವಿದು. ಇದಕ್ಕೆ ಕಾರಣ—ನಮ್ಮ ಈಗಿನ ಶಿಕ್ಷಣ ಕ್ರಮ, ಅನುಷ್ಠಾನಹೀನವಾದ ಪಾಂಡಿತ್ಯ ಪ್ರದರ್ಶನ, ನಾಗರಿಕತೆಯ ನಾಜೂಕಿನ ಮಡಿ, ಅನುಕರಣ ಮತ್ತು ದಾಸ್ಯವೃತ್ತಿ. ಯಾವ ಜನಾಂಗದ ಸತ್ವವು ನಾಶವಾಗಿರುವುದೊ ಅಂತಹ ಜನಾಂಗದಲ್ಲಿ ಈ ದುರ್ಗುಣಗಳು ಸಹಜವಾಗಿ ನೆಲೆಯಾಗುವವು. ಬಲಹೀನವಾದ ದೇಹವು ರೋಗಕ್ಕೆ ಆಗರವಾಗಿ ನಶಿಸುವಂತೆ ಸತ್ವನಾಶದಿಂದ ಬಲಹೀನವಾಗಿರುವ ಜನಾಂಗವು

ದುರ್ಗುಣಗಳಿಗೆ ಆಗರವಾಗಿ ಕ್ಷಯಿಸುತ್ತ ಹೋಗುವುದು. ರೋಗವು ಔಷಧಿ ಕ್ರಿಯೆಯಿಂದ ನಾಶವಾಗುವಂತೆ, ಜನಾಂಗವನ್ನು ಕ್ಷಯಿಸುವ ದುರ್ಗುಣಗಳು ಕ್ರಾಂತಿಕಾರಕ ಮನೋವಿಕಾಸಕ ವಿಚಾರ ಪ್ರಚಾರ ಕ್ರಿಯೆಯಿಂದ ನಾಶ ಹೊಂದಬೇಕು. ಅಂಥಾ ವಿಚಾರ ಪ್ರಚಾರಕ್ಕೆ ಸಾಹಿತಿಗಳು ಮುಂದಾಗಿ ಬರ ಬೇಕು. ಆ ಸಾಹಿತಿಗಳು ಮೊದಲು ಮಾಡಬೇಕಾದ ಕಾರ್ಯವೆಂದರೆ, ಪ್ರಾಚೀನ ಕಾಲದ ಋಷಿಗಳು ತಮ್ಮ ಗುರುಕುಲಗಳಲ್ಲಿ ಕೊಡುತ್ತಿದ್ದ ಶಾರೀರ ಶಾಸ್ತ್ರದ ಶಿಕ್ಷಣ ಕಾರ್ಯವನ್ನು ಕೊಡುವುದು.

"ಪಾಪೇಭ್ಯೋ ರಕ್ಷಂತಾಂ । ಮನಸಾ ವಾಚಾ ಹಸ್ತಾಭ್ಯಾಂ । ಪದ್ಭ್ಯಾಂ ಉದರೇಣ ಶಿಶ್ನಾ ।"—ಎಂದರೆ "ಮನಸ್ಸು, ಮಾತು, ಕೈಗಳು, ಕಾಲುಗಳು, ಹೊಟ್ಟೆ, 'ಶಿಶ್ನ' ಇವುಗಳಿಂದ ನಾನು ಮಾಡಿದ ಪಾಪಗಳಿಂದ ರಕ್ಷಿಸಲಿ" ಎಂಬುದಿದು ಎಂಟನೆಯ ವಯಸ್ಸಿನಲ್ಲಿ ಮಗನಿಗೆ ಉಪನಯನ ಮಾಡಿ ಗುರುಕುಲಕ್ಕೆ ಕಳುಹುವುದಕ್ಕೆ ಮುಂಚಿತವಾಗಿ, ಉಪದೇಶಿಸುತ್ತಿದ್ದ ಸಂಧ್ಯಾವಂದನೆಯಲ್ಲಿ ಮೊದಲನೆಯ ಪ್ರಾರ್ಥನೆ. ಮತ್ತೆ ಆಗ 'ಬ್ರಹ್ಮಚರ್ಯ ಆಚರಿಸು, ಹನ್ನೆರಡು ವರ್ಷಕಾಲ ಬ್ರಹ್ಮಚರ್ಯೆಯಿಂದ ವೇದಾಧ್ಯಯನ ಮಾಡು" ಎಂಬ ಉಪದೇಶವೂ ಆಗುತ್ತಿತ್ತು. ಅನಂತರ ಶಿಷ್ಯನು ಗುರು ಕುಲಕ್ಕೆ ಹೋದಾಗ ಅಲ್ಲಿ 'ಶಿಶ್ನ' 'ಬ್ರಹ್ಮಚರ್ಯ' ಇವುಗಳ ವಿವರಣೆಯು ಗುರುವಿನಿಂದ ದೊರೆಯುತ್ತಿತ್ತೆಂದು ಕಾಣುತ್ತದೆ. 'ಗರ್ಭೋಪನಿಷತ್ತು' 'ಶಾರೀರಕೋಪನಿಷತ್ತು' ಎಂಬವುಗಳೇ ಅದಕ್ಕೆ ಸಾಕ್ಷಿಗಳಾಗಿವೆ. ಮತ್ತೆ 'ವೀರ್ಯಧಾರಣಾಂ ಬ್ರಹ್ಮಚರ್ಯಂ।' 'ಜೀವನಂ ಬಿಂದುಧಾರಣಾತ್ । ಮರಣಂ ಬಿಂದು ಪತನಾತ್ ।' ಎಂಬಿವೇ ಮೊದಲಾದ ನೂರಾರು ವಾಕ್ಯ ಗಳಿಂದ ಮೊದಲು ಶಾರೀರಕ, ಲೈಂಗಿಕ ಶಿಕ್ಷಣವು ದೊರೆಯುತ್ತಿತ್ತೆಂದು ಸ್ಪಷ್ಟ ವಾಗುತ್ತದೆ. ಆದರೆ ಈ 'ಶಿಶ್ನ' ಶಬ್ದವನ್ನು ಕನ್ನಡಕ್ಕೆ ಭಾಷಾಂತರಿಸಿದರೆ ಅದು ಅಶ್ಲೀಲ! ಹುಟ್ಟಿನಿಂದ ಮೊದಲ್ಗೊಂಡು ವೃದ್ಧಾಪ್ಯದಿಂದ ದುರ್ಬಲ ನಾಗುವವರೆಗೆ ಮಾನವನು ತನ್ನ ಮದುವೆ, ಮಕ್ಕಳ ಮದುವೆ, ಮೊಮ್ಮಕ್ಕಳ ಮದುವೆ ಮಾಡುತ್ತಿರುವುದೇ ಆಗಿದೆ. ಆದರೆ ಆ ಮದುವೆಗೆ ಸಂಬಂಧಿಸಿದ ಶಿಕ್ಷಣ ಕಾರ್ಯವು ಮಾತ್ರ ಯಾವ ವಿದ್ಯಾಭ್ಯಾಸ ಕ್ರಮದಲ್ಲಿಯೂ ಇಲ್ಲ. ತಂದೆ ತಾಯಿಗಳಿಂದ ಮಕ್ಕಳಿಗೆ ಆ ಶಿಕ್ಷಣವು ದೊರೆಯುವಂತಿಲ್ಲ. ಮಕ್ಕಳು

ಸಹಜವಾಗಿ ಜಿಜ್ಞಾಸುಗಳಾಗಿರುವರು. ಚಿತ್ತವೃತ್ತಿ ನಿರೋಧಶಕ್ತಿಯು ಅವರಲ್ಲಿರುವುದಿಲ್ಲ. ಆದ್ದರಿಂದ ವಿಶಾಲ ಜಗತ್ತಿನ ವಿಚಾರಗಳನ್ನು ತಿಳಿದುಕೊಳ್ಳಲು ಅವರ ಕುತೂಹಲವೆಷ್ಟಿರುವುದೆಂದು ಅವರ ತಂದೆ ತಾಯಿಗಳಿಗೆ ತಿಳಿಯುವುದು ಹೇಗೆ? ಒಂದು ವೇಳೆ ಅವರನ್ನು ಕೇಳಿದರೆ 'ಅಂಥಾ ಕೆಟ್ಟ ಮಾತುಗಳನ್ನಾಡಬಾರದಪ್ಪಾ' ಎಂದು ಅವರು ಅವರ ಕುತೂಹಲವನ್ನು ಕುಗ್ಗಿಸುವುದೂ ಉಂಟು. ಮುಂದೆ ಗತಿ! ಮಕ್ಕಳ ಅವನತಿ! ತಂದೆ ತಾಯಿಗಳಿಂದ ಪಡೆಯಲಾಗದ ಶಿಕ್ಷಣವನ್ನು ಅವರು ಗೌಪ್ಯವಾಗಿ ತಮ್ಮಷ್ಟೆ ಅನುಭವಿಗಳಾದವರಿಂದ, ಅವರ ದೇಹದ ಅವನತಿಯುಂಟಾಗುವ ರೀತಿಯಿಂದ ಅವರು ಪಡೆಯುವರು. ಹೀಗಾಗಿ ಇಂದಿನ ಪ್ರೌಢ ವಿದ್ಯಾಲಯುಗಳಿಂದ ವಿದ್ಯಾಭ್ಯಾಸವನ್ನು ಮುಗಿಸಿ ಹೊರಬೀಳುವ ಯುವಕ-ಯುವತಿಯರಲ್ಲಿ ಅರ್ಧಪಾಲು ಜನ, ಯಾರ ಎದುರಿಗೂ ಹೇಳಿಕೊಳ್ಳದ - ಹೇಳಿಕೊಳ್ಳಲು "ಅದು ಕೆಟ್ಟ ಮಾತಲ್ಲವೆ!"—ನಾಚುವ ಲೈಂಗಿಕ ರೋಗಗಳಿಂದ ಅವರು ನರಳುತ್ತಿರುವರು! ಇದು ಉತ್ಪ್ರೇಕ್ಷೆಯಲ್ಲ. ನನ್ನಲ್ಲಿ ಬಂದಿರುವ, ಬರುತ್ತಿರುವ ನೂರಾರು ಲೈಂಗಿಕ ರೋಗಿಗಳ ಸಂಖ್ಯೆಯಿಂದ ನಾನು ಹೇಳುತ್ತಿರುವೆನು. ಇಂಥಾ ರೋಗಿಗಳಿಗೆ ಹುಟ್ಟುವ ಮಕ್ಕಳು ಹೇಗೆ ದೀರ್ಘಾಯುಗಳಾಗಬೇಕು? ನಿರೋಗಿಗಳಾಗಿರಬೇಕು ಹೇಗೆ? ಇದರ ಮೇಲೆ ಈಗಿನ ಚಲಚ್ಚಿತ್ರಗಳೂ ಆ ದುರ್ಬಲಚಿತ್ತರಿಗೆ ಉದ್ರೇಕಕರವಾಗಿವೆ. ಒಟ್ಟಿನಲ್ಲಿ ಅವರ ಸುತ್ತುಮುತ್ತಣ ನಾಗರಿಕ ಮಡಿಯ ವಾತಾವರಣವು ಅವರನ್ನು ನರಕಕೂಪದಲ್ಲಿ ದೂಡಿರುವುದು. ಇದು ಕೇವಲ ನಮ್ಮ ದೇಶದಲ್ಲಿ ಮಾತ್ರವಲ್ಲ. ಪಾಶ್ಚಾತ್ಯ ದೇಶದಲ್ಲಿಯೂ ಅಂಥಾ ಸ್ಥಿತಿ ಒದಗಿತ್ತು. ಅಲ್ಲಿ ಅನೇಕ ವೈದ್ಯರು, ವೈಜ್ಞಾನಿಕರು ಮುಂದೆ ಬಂದು 'ಲೈಂಗಿಕ ಸಾಹಿತ್ಯ' ವನ್ನು ಸಮೃದ್ಧಿಯಾಗಿ ಬೆಳಸಿ ಮಕ್ಕಳ ಮನಸ್ಸು ವಿಕಾಸಗೊಳ್ಳುವ ಹಾಗೆ ಮಾಡಿದ್ದಾರೆ. ಮತ್ತೆ ಅಲ್ಲಿ ತಂದೆ ತಾಯಿಗಳೂ, ಉಪಾಧ್ಯಾಯರೂ ಇಂಥಾ 'ಲೈಂಗಿಕ ಶಿಕ್ಷಣ' ವನ್ನು ವಿದ್ಯಾಭ್ಯಾಸ ಕ್ರಮದಲ್ಲಿ ಕೊಡುವಂತೆ ಅನೇಕ ಗ್ರಂಥಗಳೂ ಹೊರಬಿದ್ದು ವಿಶೇಷ ಪ್ರಭಾವವನ್ನು ಬೀರಿವೆ. ನಮ್ಮಲ್ಲಿಯೂ ಅಂಥಾ ಲೈಂಗಿಕ ಶಿಕ್ಷಣವನ್ನು ತಂದೆ ತಾಯಿಗಳು ನೇರವಾಗಿ ಮಕ್ಕಳಿಗೆ ಹೇಳಲು ಹಿಂಜರಿದರೂ, ಆ ವಿಚಾರದಲ್ಲಿ ಶಾಸ್ತ್ರೀಯವಾಗಿ ಬರೆದಿರುವ ಪುಸ್ತಕಗಳನ್ನು ಅವರ ಕೈಲಿ ಕೊಡುವಂತಾಗಬೇಕು. ಆ

ಪುಸ್ತಕವನ್ನೋದಿ, "ಶರೀರವೆಂದರೇನು ? ಅದು ಹೇಗಾಯಿತು ? ಅದರಲ್ಲಿ ಲಿಂಗಭೇದಗಳು ಹೇಗೆ ಬಂದವು ? ಅವುಗಳ ಉದ್ದೇಶವೇನು ? ಆ ಉದ್ದೇಶ ಸಾಧನೆಯಲ್ಲಿ ಪ್ರಕೃತಿಯು—ನಿಸರ್ಗವು ಯಾವ ಪಾತ್ರವನ್ನು ವಹಿಸುವುದು ? ಶರೀರದ ವಿವಿಧ ಅವಯವಗಳ ಕೆಲಸವೇನು ? ನಾವು ಸೇವಿಸುವ ಆಹಾರದಿಂದ ಶರೀರದ ಬೆಳವಣಿಗೆ ಹೇಗೆ ಆಗುವುದು ? ಅದು ರಸ, ರಕ್ತ ಮಾಂಸಾದಿ ಭೇದಗಳನ್ನು ಹೊಂದಿ, ಕೊನೆಗೆ ವೀರ್ಯರೂಪವನ್ನು ತಳೆಯುವುದಕ್ಕೆ ಎಷ್ಟು ಕಾಲ ಬೇಕಾಗುವುದು ? ಈ ವೀರ್ಯೋತ್ಪತ್ತಿಯಲ್ಲಿ ನಿಸರ್ಗ ನಿಯಮವೇನು ? ಆ ನಿಯಮವನ್ನು ಉಲ್ಲಂಘಿಸಿ, ವೀರ್ಯವನ್ನು ವಿಶೇಷ ವೆಚ್ಚಮಾಡಿಕೊಳ್ಳುವುದರಿಂದ ಹೇಗೆ ಕ್ಷಯಾದಿ ರೋಗಗಳು ಬಂದು ಶರೀರವನ್ನು ನಾಶಗೊಳಿಸುವವು ? ಅದರ ಮಿತವ್ಯಯದಿಂದ ಹೇಗೆ ಆರೋಗ್ಯವನ್ನು ರಕ್ಷಿಸಿಕೊಳ್ಳಬಹುದು"—ಇತ್ಯಾದಿ ವಿಷಯಗಳನ್ನು ತಿಳಿದುಕೊಳ್ಳುವಂತಾಗಬೇಕು. ಇಂಥಾ ವಿಷಯ ಜ್ಞಾನವಿಲ್ಲದೆ, ಅದರ ಜ್ಞಾನವು ಮದುವೆಯಾದ ಕೂಡಲೆ ಸ್ವಾಭಾವಿಕವಾಗಿ ಬರುವುದೆಂದು ತಿಳಿದು ಈಗಿನಂತೆಯೆ ಮುಂದರಿದರೆ ನಮ್ಮ ದಾಸ್ಯವೂ ಮುಂದರಿಯುವುದು. ಮತ್ತೆ ಸ್ತ್ರೀಪುರುಷರ ಜನನೇಂದ್ರಿಯಗಳು ಕೇವಲ ಭೋಗಲೀಲೆಗಾಗಿ ಸೃಷ್ಟಿತವಾಗಿರುವ ಅಂಗಗಳೆಂಬ ತಿಳಿವಳಿಕೆಯಿಂದ ಯುವಕಯುವತಿಯರಿಬ್ಬರೂ ತಂತಮ್ಮ ಶರೀರಗಳನ್ನು ರೋಗಕ್ಕೆ ಆಗರಮಾಡುವರು. ಆದಾಗದಂತಿರಬೇಕಾದರೆ 'ಲೈಂಗಿಕ ಸಾಹಿತ್ಯ' ಗ್ರಂಥಗಳು ಹೇರಳವಾಗಿ ಹೊರಬೀಳಬೇಕು. 'ರತಿ ರಹಸ್ಯ' ಮೊದಲಾದಂತಹ ಅಶಾಸ್ತ್ರೀಯವೂ ಸ್ತ್ರೀಯ ವಿಚಾರದಲ್ಲಿ ತಪ್ಪು ತಿಳಿವಳಿಕೆಯನ್ನುಂಟುಮಾಡುವಂತಹವೂ ಆದ ಗ್ರಂಥಗಳು ನಿರ್ಮೂಲವಾಗಬೇಕು. ತಾತ್ಕಾಲಿಕ ಕಾಮೋತ್ತೇಜಕ 'ಟಾನಿಕ್' ಗಳ ಹಾವಳಿಯು ಸರಿಯಾದ ಲೈಂಗಿಕ ಜ್ಞಾನದಿಂದಲೇ ಉಂಟಾಗಬೇಕು. ಆ ಲೈಂಗಿಕ ಜ್ಞಾನಬೋಧೆಯು ಮಕ್ಕಳ ಶಿಕ್ಷಣ ಕ್ರಮದಲ್ಲಿ ಒಂದು ಅಂಗವಾಗಬೇಕು. ಆಗ ಮಾನವನ ಮುಂದಿನ ಸಂತಾನವು ಸುಧಾರಿಸುವುದು, ಪುಷ್ಟವಾಗುವುದು, ಕ್ರಾಂತಿಕಾರಕವಾಗುವುದು, ದಾಸ್ಯವೃತ್ತಿ ನೀಗುವುದು, ಸ್ವಾತಂತ್ರ್ಯವೃತ್ತಿ ತಳೆಯುವುದು. ಆಗ ಅದು ತನ್ನ ಮೇಧಶ್ಶಕ್ತಿಯಿಂದ ಪ್ರಪಂಚವನ್ನಾಳಬಹುದು. ಹಿಂದಿನ ರಸ ಕವಳದ ಕಾಲವು ಮತ್ತೆ ಒದಗಬಹುದು. ಆಗ ಮತ್ತೆ ಹಿಂದಿನ 'ರಸಗಂಗಾಧರ,' 'ಕಾವ್ಯದರ್ಶ' ಗಳ

ಅಧ್ಯಯನಕ್ಕಾರಂಭಿಸಿ, ಶೃಂಗಾರಿಕ ಸಾಹಿತ್ಯ ಸೃಷ್ಟಿಯಿಂದ ಮನರಂಜಿಸುವ ಯುಗವು ಮತ್ತೆ ಆರಂಭವಾಗಬಹುದು. ಮತ್ತೆ ಭಾರತಕ್ಕೆ ವೀರ ಸಂತಾನದಿಂದ ಸ್ವರ್ಣಯುಗವು ಪ್ರಾಪ್ತವಾಗಬಹುದು. ಸಾಹಿತ್ಯದಿಂದ ಈ ಬಗೆಯ ಪ್ರಗತಿಯನ್ನು ನಿರೀಕ್ಷಿಸಬಹುದೆ?

ಇಂದಿನ ವಿದ್ಯಾಭ್ಯಾಸಕ್ರಮದಲ್ಲಿ ಲೈಂಗಿಕ ಶಿಕ್ಷಣದ ಸ್ಥಾನ

ಡಾ॥ ದೊಡ್ಡೇರಿ ವೆಂಕಟಗಿರಾವ್, ಎಂ.ಬಿ., ಎಸ್.ಸಿ.

ಕಾಮವು ಮಾನವಜೀವನದ ಮುಖ್ಯವಾದ ಪ್ರಚೋದನಗಳಲ್ಲಿ ಒಂದು. ಅದರ ಪ್ರಭಾವವೂ ವ್ಯಾಪಕತ್ವವೂ ಮಾನವನ ಮೇಲೆ ನಿರಂತರವಾಗಿ ಬೇರೂರಿದೆ. ಕಾಮವು ಮಾನವನ ಮಾನಸಿಕ ಮತ್ತು ದೈಹಿಕ ಪ್ರವೃತ್ತಿಗಳಲ್ಲಿ ಮೂಡಿ, ಅವನ ಪ್ರತಿಯೊಂದು ನಡೆನುಡಿಗಳಲ್ಲಿ ಹರಿದಾಡಿ ಅವನ ಜೀವನದ ಆಗುಹೋಗುಗಳ ಸುಖದುಃಖಗಳ ಕಾರಣವಾಗಿದೆ. ಕಾಮದ ಈ ವ್ಯಾಪಕತ್ವವನ್ನು ಮನಸ್ಸಿನಿಂದ ಒಪ್ಪಿದರೂ ಮಾತಿನಿಂದ ಜನತೆ ಒಪ್ಪುವುದಿಲ್ಲ; ಮೆಚ್ಚುವುದಿಲ್ಲ. ಅದಕ್ಕೆ ಕಾರಣವಿದೆ. ಅವನ ಜೀವನದಲ್ಲಿ ತಾನು ಇತರರಿಗೆ ಹೇಳಲಾಗದಂತಹ, ತೋರಿಸಲಾಗದಂತಹ ಒಂದು ಒಳಜೀವನವೂ ಸೇರಿಕೊಂಡಿದೆ. ಇದು ಅವನ ಕಾಮಜೀವನ. ಈ ಕಾಮಜೀವನದ ರೀತಿ ನೀತಿಗಳು ರಹಸ್ಯವಾಗಿರದೆ ಹೊರಬಿದ್ದರೆ ಸಮಾಜದಲ್ಲಿರುವ ತನ್ನ ಘನತೆ ಗೌರವಗಳಿಗೆ ಕುಂದುಂಟಾದೀತೆಂಬ ಹೆದರಿಕೆಯಿಂದ ಅವನ್ನು ಮುಚ್ಚಿಡುತ್ತಾನೆ. ಇವರ ವಿಚಾರ ವಿಮರ್ಶೆಗಳು ಅಶ್ಲೀಲವೆಂಬ ಕಾರಣವನ್ನು ತೋರಿ ಅದರ ಹಿಂದುಗಡೆ ಕಾಮಜೀವನವನ್ನು ಸ್ವಚ್ಛಂದವಾಗಿ ನಡೆಸುತ್ತಿದ್ದಾನೆ. ಇದರ ಫಲವಾಗಿ ಅವನು ಇತರರ ಕಣ್ಣನ್ನು ಮರೆಸಿ ಅವರನ್ನು ವಂಚಿಸುವ ಭರದಲ್ಲಿ ತನ್ನನ್ನೇ ವಂಚಿಸಿಕೊಂಡು ಸಯುಕ್ತಿಕ ಪ್ರಗತಿಪರ ಜೀವನದಿಂದ ದೂರವಾಗುತ್ತಿರುವನು.

ಕಾಮ ಜೀವನದ ಎಷ್ಟೋ ಬಯಕೆಗಳೂ, ಅದಕ್ಕೆ ಸಂಬಂಧಿಸಿದ ಸುಪ್ತ ಚಿತ್ತದ ಎಷ್ಟೋ ಆಶೆ ಆಕಾಂಕ್ಷೆಗಳೂ ವಿಕೃತ ಮಾರ್ಗದಲ್ಲಿ ಹೊರಬಿದ್ದು ವ್ಯಕ್ತಿ ಮತ್ತು ಸಮಾಜಕ್ಕೆ ಘಾತಕವಾಗುವುದು. ಕಾಮೋದಯವಾದಾಗ ಬರುವ ಪ್ರವೃತ್ತಿಗಳೂ, ಮಾನವಜೀವನದ ಇಂದಿನ ಜೀವಿತವಿಧಾನಗಳೂ, ಪ್ರಯತ್ನಪೂರ್ವಕವಾಗಿ ತಡೆದ ಕಾಮದ ಫಲವಾಗಿ ಬಂದ ವಿವಿಧ ಮನೋಪ್ರಮೇಯಗಳೂ, ಸಯುಕ್ತಿಕ ಕಾಮ ಶಿಕ್ಷಣದ ಅಭಾವದಿಂದ ಬರುವ ಜೀವನದ ತೊಡಕುಗಳೂ ಇಂದು ನಮ್ಮ ಸಮಾಜದಲ್ಲಿ ಹೇರಳವಾಗಿವೆ. ಸಾಧಾರಣವಾಗಿ ಪ್ರತಿಯೊಬ್ಬನ ಕಾಮಜೀವನದಲ್ಲೂ ಇಂತಹ ಪ್ರಮೇಯಗಳಿದ್ದೇ

ಇವೆ. ಆದರೂ ಅವುಗಳನ್ನು ತಿಳಿದು ಪ್ರಯೋಗಗಳನ್ನು ಬಿಡಿಸಿ ಸಹಜ ಜ್ಞಾನವನ್ನು ಗಳಿಸಿ, ಪ್ರಗತಿಪರನಾಗಲು ಜನತೆಯು ಪ್ರಯತ್ನಿಸುತ್ತಿಲ್ಲ. ಇಂತಹ ವಿಷಯಗಳನ್ನು ಕುರಿತ ಮಾತೂ ಮತ್ತು ಸಾಹಿತ್ಯವೂ ಅಶ್ಲೀಲ-ಅಸಭ್ಯ! ಅಶ್ಲೀಲವೆಂಬ ಪದದ ಮರೆಯಲ್ಲಿ ತಮ್ಮ ಗೌರವ (?) ವನ್ನು ಕಾಪಾಡಿಕೊಳ್ಳುವ ಯೋಜನೆ!

ಹೀಗೆ ಕಾಮ ಜೀವನ ಮತ್ತು ಕಾಮ ವಿಜ್ಞಾನಗಳನ್ನು ಅಶ್ಲೀಲವೆಂದು ಬಚ್ಚಿಟ್ಟಿರುವುದರಿಂದ ಜೀವನದ ತೊಡರುಗಳು ಜನತೆಯ ಕಣ್ಣಿಗೆ ಬೀಳುವುದಿಲ್ಲ. ಆದರೂ ಇಂದು ಪ್ರಸಿದ್ಧ ವೈದ್ಯರುಗಳಿಗೂ ಕಾಮವಿಜ್ಞಾನಿಗಳಿಗೂ ಕಾಮವಿಜ್ಞಾನಕ್ಕೆ ಮೀಸಲಾಗಿರುವ ಮಾಸಪತ್ರಿಕೆಗಳಿಗೂ ಬರುವ ಪ್ರಶ್ನೆಗಳ ರಾಶಿ ರಾಶಿಯನ್ನು ನೋಡಿದವರಿಗೆ ನಮ್ಮ ಸಮಾಜದಲ್ಲಿ ಲೈಂಗಿಕ ಮತ್ತು ಕಾಮವಿಜ್ಞಾನದ ವಿಷಯವಾಗಿ ಅಜ್ಞಾನ ಎಷ್ಟಿದೆ ಎಂಬುದೂ ಅದರ ಫಲವಾಗಿ ಎಂತೆಂಥ ಅನಾಹುತಗಳಾಗುತ್ತಿವೆ ಎಂಬುದೂ ತಿಳಿಯುತ್ತದೆ.

ಇಂದು ಶಿಕ್ಷಣ ವಿಷಯದಲ್ಲಿ ನವೀನ ಶೋಧನೆಗಳು ನಡೆದು ಅನೇಕ ಸಯುಕ್ತಿಕ ಯೋಜನೆಗಳೂ ಸಾಹಿತ್ಯಗಳೂ ಹೊರಬಿದ್ದು ಸುಧಾರಣೆಗಳು ಆಗುತ್ತಿವೆ. ಜ್ಞಾನಪ್ರಸಾರ ದೃಷ್ಟಿಯಿಂದ ನಮಗೆ ಇಂದು ಬರೀ ಕತೆ ಕಾದಂಬರಿ, ಪ್ರಬಂಧಗಳನ್ನು ಒಳಗೊಂಡ ಸಾಹಿತ್ಯ ಒಂದೇ ಸಾಲದು. ಭೌತಿಕಶಾಸ್ತ್ರ, ರಸಾಯನಶಾಸ್ತ್ರ, ಮೊದಲಾದ ವಿಜ್ಞಾನ ಸಾಹಿತ್ಯದ ಅವಶ್ಯಕತೆ ಎಷ್ಟಿದೆಯೋ ಅಷ್ಟೇ ಕಾಮವಿಜ್ಞಾನ ಸಾಹಿತ್ಯದ ಅವಶ್ಯಕತೆಯೂ ಇದೆ. ಭಾರತೀಯ ದಾರ್ಶನಿಕರು ಕಾಮವಿಜ್ಞಾನವನ್ನು ಒಂದು 'ಕಲೆ' ಎಂದು ತಿಳಿದು ಅರವತ್ತುನಾಲ್ಕು ಕಲೆಗಳಲ್ಲಿ ಅದನ್ನೂ ಸೇರಿಸಿದ್ದರು. ಇತರ ಕಲೆಗಳಂತೆ, ಸಾಹಿತ್ಯಗಳಂತೆ ಕಾಮಸಾಹಿತ್ಯದ ಪ್ರಚಾರವೂ ಬೇಕು. ಜ್ಞಾನವು ಸರ್ವತೋಮುಖವಾದುದು. ಯಾವ ಒಂದು ಭಾಗವು ಊನಾದರೂ, ಹಿಂದುಳಿದರೂ, ಪರಿಪೂರ್ಣತೆಗೂ, ಪ್ರಗತಿಗೂ ಕುಂದುಂಟಾಗುವುದು. ಆದುದರಿಂದ ಸಾಮಾಜಿಕ ವಿಕಾಸದ ಪ್ರಗತಿಯ ದೃಷ್ಟಿಯಿಂದ ಸಯುಕ್ತಿಕ ಕಾಮವಿಜ್ಞಾನ ಸಾಹಿತ್ಯವೂ ಬೆಳೆದು ಬರಬೇಕು.

ಶಿಕ್ಷಣ ವಿಷಯದಲ್ಲಾದರೂ ಹೀಗೆ. ಹೊಟ್ಟೆ ಹೊರೆದುಕೊಳ್ಳಲು ಅನುಕೂಲವಾಗುವಂತಹ ವೃತ್ತಿಶಿಕ್ಷಣ ಮತ್ತು ಇತರ ಶಿಕ್ಷಣಗಳ ಜತೆಗೆ ಜೀವನ

ವನ್ನು ಸುಖಮಯವನ್ನಾಗಿಸುವ ಲೈಂಗಿಕ ಮತ್ತು ಕಾಮಶಿಕ್ಷಣವೂ ಬೇಕು. ಈಗಿರುವ ಸಾಹಿತ್ಯ ಮತ್ತು ಶಿಕ್ಷಣದ ರೀತಿಯನ್ನು ನೋಡಿದರೆ ನಾವು ಸಮುಕ್ತಿಕವಾಗಿ ಪ್ರಗತಿ ಹೊಂದಲಾರೆವು. ನಮ್ಮ ಜನತೆಯಲ್ಲಿ ಕಾಮ ಮತ್ತು ಲೈಂಗಿಕ ವಿಷಯಗಳಲ್ಲಿರುವ ಅಜ್ಞಾನದ ಮಟ್ಟವನ್ನು ನೋಡಿದರೆ, ಸಮಾಜದ ಸುಖಶಾಂತಿಗಳಿಗೆ ಈಗಿರುವುದರ ಜತೆಗೆ ಬೇರೆ ಒಂದು ರೀತಿಯ ಸಾಹಿತ್ಯ ಮತ್ತು ಶಿಕ್ಷಣವು ಬೇಕೆಂಬುದು ಗೊತ್ತಾಗುತ್ತದೆ. ಅಂದ ಮೇಲೆ ಕಾಮ ಮತ್ತು ಲೈಂಗಿಕ ಶಿಕ್ಷಣ ಮತ್ತು ಸಾಹಿತ್ಯಗಳ ಬೆಳವಣಿಗೆ ಬೇಕೆಂದಂತಾಯಿ ತಲ್ಲವೆ? ಸಹಜ ಜ್ಞಾನದಿಂದ ವಿವೇಕದೃಷ್ಟಿ ಬರುವುದಲ್ಲವೆ?

ಪ್ರಸಿದ್ಧ ಮನೋವಿಜ್ಞಾನಿಯಾದ ಫ್ರಾಯ್ಡ್‌ನ ಮತದಂತೆ ಕೇವಲ ಮೂರೇ ವರ್ಷದ ಮಗುವಿನಲ್ಲೂ ವಿಲಕ್ಷಣವಾದ ರೀತಿಯಲ್ಲಿ ಕಾಮಪ್ರಚೋದನವನ್ನು ಕಾಣಬಹುದು. ನಮ್ಮ ದೃಷ್ಟಿಗೆ ಬಾಹ್ಯಲಕ್ಷಣವು ಕೇವಲ ಸಣ್ಣ ವಿಷಯವಾಗಿ ತೋರಬಹುದು. ಮಗುವು ಜನನೇಂದ್ರಿಯವು ನೆಲಕ್ಕೆ ತಾಗುವಂತೆ ಮಲಗಿ ಹೊರಳಾಡುವುದೂ ಕೈಬೆರಳುಗಳನ್ನು ಚೀಪುವುದೂ ಮೊದಲಾದ ಲಕ್ಷಣಗಳಿಂದ ಕಾಮಪ್ರಚೋದನವನ್ನು ಕಾಣಬಹುದು. ಆದರೆ ಸಾಧಾರಣವಾಗಿ ಕಾಮೋದಯವಾಗಿ ಮೊದಲು ಅದರ ತೃಪ್ತಿಯ ಕಡೆ ಮನಸ್ಸು ಹರಿಯುವುದು. ಬಾಲ್ಯಾವಸ್ಥೆಯ ಅನಂತರ ತಾರುಣ್ಯಕ್ಕೆ ಮುಂಚೆ! ಅನುಭವಿಗಳಾದ ಅನೇಕ ಶ್ರೇಷ್ಠ ಕಾಮವಿಜ್ಞಾನಿಗಳ ಮತದಂತೆ ಹುಡುಗರಲ್ಲಿ ಸುಮಾರು ಹದಿನಾಲ್ಕು ವರ್ಷಕ್ಕೂ ಹುಡುಗಿಯರಲ್ಲಿ ಹನ್ನೆರಡು ವರ್ಷಕ್ಕೂ ಕಾಮೋದಯವಾಗುವುದೆಂದು ತಿಳಿದುಬಂದಿದೆ. ಜನರ ರೀತಿ ನೀತಿ ಜೀವಿತದ ವಿಧಾನ, ಹವ ಇವುಗಳ ಪ್ರಭಾವದಿಂದ ಈ ವಯೋಮಾನದ ಪರಿಮಿತಿಯು ಹೆಚ್ಚು ಕಡಿಮೆಯಾಗುವುದು. ಒಂದೇ ವಯಸ್ಸಿನ ಹಳ್ಳಿಯ ಹುಡುಗಿಗೂ ಪಟ್ಟಣದ ಹುಡುಗಿಗೂ ಹೋಲಿಸಿದರೆ ಅನೇಕವೇಳೆ ಪಟ್ಟಣದ ಹುಡುಗಿಯ ಕಾಮಾಂಗಗಳು ಪುಷ್ಟವಾಗಿ ಬೆಳೆದಿರುವಷ್ಟು ಹಳ್ಳಿಯ ಹುಡುಗಿಯಲ್ಲಿರುವುದಿಲ್ಲ. ಇದು ಸನ್ನಿವೇಶ ಮತ್ತು ಜೀವನದ ರೀತಿಯ ಪ್ರಭಾವ.

ಬಾಲಕ ಬಾಲಕಿಯರ ಪರಸ್ಪರ ಆಕರ್ಷಣವು ಕಾಮೋದಯದ ಮೊದಲನೆಯ ಪರಿಣಾಮ. ಕಲ್ಪನಾಶಕ್ತಿ ಮತ್ತು ಅನುಕರಣಶಕ್ತಿ ಬೆಳೆಯುವ ಮಕ್ಕಳ ಹುಟ್ಟುಗುಣ. ಸಮವಯಸ್ಸಿನ ಅಥವ ಜತೆಗಾರರಾದ ಬಾಲಕ ಬಾಲಕಿಯ

ರಲ್ಲಿ ಲಿಂಗವಿಭೇದ ಮತ್ತು ಅನುಭವಗಳ ಪರಸ್ಪರ ಪರಿಚಯಕ್ಕಾಗಿ ಪ್ರಯತ್ನಿಸುವ ಸಮಯವೂ ಇದೇ! ಕುತೂಹಲವೂ, ಪ್ರತಿಯೊಂದರ ಏಕೆ ಏನೆಂಬುದನ್ನು ತಿಳಿದುಕೊಳ್ಳಬೇಕೆಂಬುದೂ ಮಕ್ಕಳೊಡನೆ ಮೂಡಿಬಂದಿದೆ. ಈ ಸಮಯದಲ್ಲಿ ಅವರು ಕುತೂಹಲದಿಂದ ಕೇಳುವ ಪ್ರಶ್ನೆಗಳನ್ನು ಸರಿಯಾಗಿ ಉತ್ತರಿಸದೆ ಅಶ್ಲೀಲವೆಂದು ಹೆದರಿಸಿದರೆ ಅವರು ತಮ್ಮ ಪ್ರಶ್ನೆಗೆ ಬೇರೆಡೆ ಉತ್ತರ ಹುಡುಕಬಹುದು. ಆಗ ಸಯುಕ್ತಿಕ ಜ್ಞಾನವು ದೊರೆಯುವುದೆಂಬುದರ ಭರವಸೆಯಾದರೂ ಏನು? ಆದುದರಿಂದ ಈ ಕಾಲದಲ್ಲಿ – ಮಕ್ಕಳ ಕಿಶೋರಾವಸ್ಥೆಯಲ್ಲಿ ಅವರಿಗೆ ಕಾಮವಿಷಯಕವಾದ ಸಹಜಜ್ಞಾನ ಅವಶ್ಯಕತೆ ತುಂಬಾ ಇದೆ.

ಕಾಮ ಮತ್ತು ಲೈಂಗಿಕ ವಿಜ್ಞಾನದ ಸರಿಯಾದ ಜ್ಞಾನವು ಮಕ್ಕಳಿಗೆ ದೊರಕದ ಫಲವಾಗಿ ನಮ್ಮ ಬಾಲಕ ಬಾಲಕಿಯರಲ್ಲಿ ಆಗಿರುವ ಮೊದಲನೆ ಅನಾಹುತವೆಂದರೆ "ಸ್ವರತಿ." ಇದು ಕಾಮೋದಯವಾದೊಡನೆ ಬರುವ ವಿಕೃತ – ಅಥವ – ಸಹಜ ಮನೋವೃತ್ತಿಯಾಗಿರಬಹುದು. ಕಾಮತೃಪ್ತಿಗೆ ಹವಣಿಸುವುದು ಸಹಜ. ಆದರೆ ತೃಪ್ತಿಯ ರೀತಿ ಅಸಹಜವಾಗಬಹುದು. ಸ್ವರತಿ ಅಥವ ಸ್ವೋದ್ರಿಕ್ತ ಕಾಮದ ಫಲವಾಗಿ ಮಕ್ಕಳು ಎರಡು ವಿಧವಾದ ವಿಕೃತದಾರಿಗೆ ಇಳಿಯಬಹುದು. ಮೊದಲನೆಯದು ಮುಷ್ಟಿಮೈಥುನ, ಎರಡನೆಯದು "ಕಾಮುಕ ಹಗಲುಗನಸು." ಈ ಎರಡು ವಿಕೃತ ದಾರಿಗಳಿಂದಾದ ಹಾವಳಿಯನ್ನು ನೋಡಿದರೆ ಲೈಂಗಿಕ ಶಿಕ್ಷಣದ ಅವಶ್ಯಕತೆ ಮನಕ್ಕೆ ಹಿಡಿಯುತ್ತದೆ. **ನಮ್ಮ ನಾಡಿನ ಕೆಲವು ಪ್ರಸಿದ್ಧ ವೈದ್ಯರುಗಳ ಮತದಂತೆ ೧೫ರಿಂದ ೧೭ ವಯಸ್ಸಿನ ಮಕ್ಕಳಲ್ಲಿ ೧೦೦ಕ್ಕೆ ೬೫ರಂತೆ ಬಾಲಕರೂ, ೧೬ರಂತೆ ಬಾಲಕಿಯರೂ, ೧೨ರಿಂದ ೧೪ ವಯಸ್ಸಿನ ಮಕ್ಕಳಲ್ಲಿ ನೂರಕ್ಕೆ ೪೪ ಬಾಲಕರೂ ೨೦ ರಂತೆ ಬಾಲಕಿಯರೂ ಮುಷ್ಟಿಮೈಥುನ ಚಟಕ್ಕೆ ಬಲಿಯಾಗಿರುವರು!** ಮಾನಸಿಕ ಸ್ವರತಿಯ ಫಲವಾದರೂ ನಮ್ಮ ಬಾಲಕ ಬಾಲಕಿಯರ ಮೇಲೆಬಹಳವಾಗಿದೆ! ಮಾನಸಿಕ ಸ್ವರತಿ ಎಂದರೆ ಬಾಲಕನು ತನ್ನ ಮನಸ್ಸಿಗೆ ಹಿತವಾದ ಬಾಲಕಿಯನ್ನೋ, ಬಾಲಕಿಯು ತನ್ನ ಮನಸ್ಸಿಗೆ ಹಿತವಾದ ಬಾಲಕನನ್ನೋ ಮನಸ್ಸಿನಲ್ಲಿ ಕಲ್ಪಿಸಿಕೊಂಡು ಅವರೊಡನೆ ಕ್ರೀಡಿಸುವಂತೆ ಚಿತ್ರಿಸಿಕೊಳ್ಳುವುದು. ಸಿನಿಮಾ, ಕತೆ, ಕಾದಂಬರಿಗಳ ನಾಯಕ ನಾಯಕಿಯರ

ಸ್ಥಾನದಲ್ಲಿ ತನ್ನನ್ನು ಇರಿಸಿಕೊಂಡು ಅವರ ಕ್ರೀಡಾವಿಲಾಸಗಳನ್ನು ಚಿತ್ರಿಸಿಕೊಂಡು ಸುಖಪಡುವುದು. ಈ ಚಟವು ಅನೇಕ ಸಲ ತೀರ ಪರಮಾವಧಿಯನ್ನು ಮುಟ್ಟಿ ಬಾಲಕರಲ್ಲಿ ಸ್ವಸ್ಪೇಂದ್ರಿಯಕ್ಕೆ ಕಾರಣವಾಗುವುದು. ಸಹಜ ಜ್ಞಾನದ ಅಭಾವದಿಂದ ನಮ್ಮಲ್ಲಿ ಸ್ವಸ್ಪೇಂದ್ರಿಯದ ಸರಿಯಾದ ಕಾರಣ ಪರಿಣಾಮಗಳನ್ನು ತಿಳಿದವರು ಕಡಿಮೆ. ಸರಾಸರಿಯಾಗಿ ಪ್ರತಿಯೊಬ್ಬನೂ ಸ್ವಸ್ಪೇಂದ್ರಿಯವೆಂದರೆ ಹೆದರುವನು. ಅದರ ವಿಷಯವಾಗಿ ವಿಚಾರಿಸುವುದಕ್ಕೆ ಅದು "ಅಶ್ಲೀಲ" ವೆಂಬ ಭಯ! ತನ್ನ ಘನತೆ ಗೌರವಗಳಿಗೆ ಕುಂದುಂಟಾದೀತೆಂಬ ಭಯ. ಹಿರಿಯರು ಹೆದರಿಸಿಯಾರೆಂಬ ಭಯ! ಅದರ ಫಲವಾಗಿ ಅವನು ದಿನದಿನಕ್ಕೆ ಕೊರಗುವನು. ಅಶುದ್ಧ ಅವೈಜ್ಞಾನಿಕ ಔಷಧಿಗಳ ಜಾಹಿರಾತಿಗೆ ಮರುಳಾಗಿ ತನ್ನ ಆರೋಗ್ಯದನ್ನು ಕೆಡಿಸಿಕೊಳ್ಳುವನು. ಇಂತಹ ನೂರಾರು ಉದಾಹರಣೆಗಳು ಲೇಖಕನಿಗೆ ಗೊತ್ತಿವೆ. ಕನ್ನಡ ನಾಡಿನ ಪ್ರಸಿದ್ಧ ವೈದ್ಯರುಗಳಿಗೆ ತಿಳಿದಿವೆ. ಇದಕ್ಕೆ ಪರಿಹಾರವೇನು, ಮಕ್ಕಳಿಗೆ ಸರಿಯಾದ ಸಯುಕ್ತಿಕವಾದ ಲೈಂಗಿಕ ಶಿಕ್ಷಣವನ್ನು ಕೊಡುವುದು. ಅಶ್ಲೀಲವೆಂಬ ಸಂಪ್ರದಾಯಕ್ಕೆ ಶರಣರಾಗಿ ನಮ್ಮ ನಾಡಿನ ತಂದೆತಾಯಿಗಳು ತಮ್ಮ ಮಕ್ಕಳ ಬಾಳು ಹಾಳಾಗುವುದನ್ನು ಕಂಡೂ ಮೌನವಾಗಿರುವುದು ಶೋಚನೀಯ. ಕಾಮಶಿಕ್ಷಣವನ್ನು ಸಯುಕ್ತಿಕವಾದ ರೀತಿಯಲ್ಲಿ ಮಕ್ಕಳಿಗೆ ಕೊಡುವ ದಾರಿಯೊಂದನ್ನು ಹುಡುಕಿ ಅದರ ಪ್ರಚಾರಕ್ಕೆ ಪ್ರಯತ್ನಮಾಡದಿರುವುದು ಹೇಡಿತನ. ಸಯುಕ್ತಿಕ ಶಿಕ್ಷಣದ ಫಲವಾಗಿ ಬಂದ ಜ್ಞಾನದಿಂದ ಅತ್ಯಾಚಾರ ಅನಾಚಾರಗಳು ನಿಂತೇ ನಿಲ್ಲಬೇಕಲ್ಲವೆ?

ಕಾಮ ಮತ್ತು ಲೈಂಗಿಕ ವಿಷಯದಲ್ಲಿ ಸಹಜ ಜ್ಞಾನವಿಲ್ಲದುದರಿಂದ ವಿಕೃತ ದಾರಿಗಳಿಗೆ ಬಲಿಯಾಗುವುದೊಂದೇ ಅಲ್ಲ, ಸಮಾಜಕ್ಕೂ ತನಗೂ ಅಹಿತವಾದ ಅನಾರೋಗ್ಯಕರವಾದ ಮತ್ತೊಂದು ದಾರಿ ಎಂದರೆ ಸೂಳೆಗೇರಿಗೆ ಇಳಿಯುವುದು. ಕಾಮ ಮತ್ತು ಲೈಂಗಿಕ ಜ್ಞಾನವಿಲ್ಲದೆ ಇರುವುದರಿಂದಲೂ, ಪ್ರಾಣಿಗಳ ಸಂಯೋಗ, ಅನೀತಿಯುತವಾದ ಬೈಗಳು ಇವುಗಳಿಂದ ಬಂದ ಅವೈಜ್ಞಾನಿಕ ಅಪೂರ್ಣಜ್ಞಾನದಿಂದಲೂ ಸೂಳೆಗೇರಿಗಿಳಿವ ಸಂಭವವಿದೆ. ದಾಂಪತ್ಯ ಸುಖದಲ್ಲಿ ನಿರಾಶರಾದವರ, ಅವಿವೇಕಿಗಳ ವಿಷಯವನ್ನಲ್ಲ ನಾನು ಹೇಳುವುದು. ಕಾಮವಿಜ್ಞಾನದ ಸಹಜಜ್ಞಾನವಿಲ್ಲದೆ ಸೂಳೆಗೇರಿಗಳಿಗೆ ಇಳಿ

ಯುವಕರನ್ನು ಕುರಿತು ಹೇಳಿದೆ. ಸೂಳೆಗೇರಿಗೆ ಹೋಗಿ ಬಂದಮೇಲೆ ತಿಳಿದೇ ಇವೆ. ಮೇಹರೋಗ ಪ್ರಚಾರ. ಕಲ್ಕತ್ತಾ ವಿಶ್ವವಿದ್ಯಾನಿಲಯದ ಮೆಡಿಕಲ್ ಕಾಲೇಜುಗಳ ಪರೀಕ್ಷಕರಾದ ಎಚ್.ಸಿ. ಮುಖರ್ಜಿಯವರು "ಇಂದಿನ ತರುಣರು ಮತ್ತು ವಿದ್ಯಾರ್ಥಿಗಳಲ್ಲಿ ಬಹುಜನರು ಇತ್ತೀಚೆಗೆ ತುಂಬಾ ಅಧೋಗತಿಗೆ ಇಳಿಯುತ್ತಿದ್ದಾರೆ ನಾನು ಮೆಡಿಕಲ್‌ಕಾಲೇಜಿನ ಆಸ್ಪತ್ರೆಗಳನ್ನು ಪರೀಕ್ಷಿಸಿದಾಗ ಮೇಹರೋಗಗಳ ಚಿಕಿತ್ಸೆಗಾಗಿ ಬಂದಿರುವ ರೋಗಿಗಳಲ್ಲಿ ೧೦೦ಕ್ಕೆ ೭೦-೭೫ ಜನರು ಹೈಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳೆಂಬುದನ್ನು ತಿಳಿದು ಅಸಮಾಧಾನವಾಯಿತು" ಎಂದಿರುವರು. ಸಯುಕ್ತಿಕ ಪ್ರಗತಿಪರ ಜೀವನವನ್ನು ನಡೆಸಬೇಕೆಂದಿರುವವರಲ್ಲಿ ಯಾರಿಗೆ ತಾನೇ ಅಸಮಾಧಾನ ಆಗದಿರದು.

ಹಾಗಾದರೆ ಪರಿಹಾರಕ್ಕೆ ದಾರಿ ಏನು? ಅಸ್ವಭಾವಿಕ ಕಾಮತೃಪ್ತಿಯಿಂದ ನಮ್ಮ ಮಕ್ಕಳು ನಿರ್ವೀರ್ಯರಾಗಿ ಬಾಳಿಗೊಂದು ಹೊರೆಯಾಗಬೇಕೆ? ತಂದೆತಾಯಿಗಳು ಹೆತ್ತು ಹೊತ್ತು ಕಷ್ಟಪಟ್ಟು ಸಾಕಿ ಸಲಹಿದುದರ ಫಲವಾದರೂ ಏನು? ನಮ್ಮ ಮಕ್ಕಳು ಅಸ್ವಾಭಾವಿಕ ಕಾಮತೃಪ್ತಿಗಳಿಗೆ ಇಳಿಯಬಾರದೆಂದರೆ ಅದನ್ನು ತಪ್ಪಿಸುವ ದಾರಿ ಯಾವುದು? ತಿಳಿವಳಿಕೆಯೆ? ಬೆದರಿಕೆಯೆ? ಇಂಥದನ್ನು ಬೆದರಿಕೆಯಿಂದ ತಪ್ಪಿಸಲಾದೀತೆ? ಕಂಡರೆ ತಾನೆ ಬೆದರಿಸುವುದು? ಇಂತಹ ವಿಷಯಗಳು ಹೊರಗೆ ಎಷ್ಟು ಬರುವುವು? ಒಮ್ಮೆ ಹೊರಗೆ ಬಂದರೂ, ಕಂಡರೂ, ಹೆದರಿಸಿದರೆ ನಿಲ್ಲುವುದೆ? ಜನರ ಕಣ್ಣನ್ನು ಮರೆಸಿ ಕದ್ದು ಅದೇ ಅಭ್ಯಾಸವನ್ನು ಮುಂದುವರಿಸಬಹುದು. ಮುಷ್ಟಿಮೈಥುನ ಚಟಕ್ಕೆ ಬಲಿಯಾದ ಮಕ್ಕಳು ಯಾರು ಎಂಬುದನ್ನು ಸುಲಭವಾಗಿ ಕಂಡುಹಿಡಿಯಲಾದೀತೆ? ಅಥವ ಹೆದರಿಕೆಯಿಂದ ಆ ಚಟವನ್ನು ತಪ್ಪಿಸಲಾದೀತೆ? ಎಂದಿಗೂ ಇಲ್ಲ. ಮಕ್ಕಳು ಲೈಂಗಿಕ ವಿಷಯದಲ್ಲಿ ವಿಕೃತ ದಾರಿಗೆ ಇಳಿಯದಂತೆ ಮಾಡಬೇಕಾದರೆ ಅವರಿಗೆ ಕಾಮ ಮತ್ತು ಲೈಂಗಿಕ ವಿಷಯವಾಗಿ ಶಿಕ್ಷಣ ಕೊಡಬೇಕು. ಅದೊಂದೇ ದಾರಿ.

ಮಕ್ಕಳಿಗೆ ಲೈಂಗಿಕ ಮತ್ತು ಕಾಮಶಿಕ್ಷಣ ಕೊಡಬೇಕೆಂದರೆ ಯಾರು ಆ ಕೆಲಸವನ್ನು ಮಾಡಬೇಕು? ಯಾವುದೊಂದು ಕೆಲಸವೂ ಉತ್ತಮ ಫಲದಾಯಕವಾಗಬೇಕಾದರೆ ಅದನ್ನು ಯಾರು ನಿರ್ವಹಿಸುವರೋ ಅವರನ್ನವ

ಲಂಬಿಸಿದೆ! ಮಕ್ಕಳಿಗೆ ವಿದ್ಯಾಬುದ್ಧಿಗಳನ್ನು ಕಲಿಸುವವರು ತಂದೆತಾಯಿಗಳು ಮತ್ತು ಉಪಾಧ್ಯಾಯರು. ಇವರಿಬ್ಬರಲ್ಲಿ ಮಕ್ಕಳಿಗೆ ಲೈಂಗಿಕ ಶಿಕ್ಷಣವನ್ನು ಕೊಡಲು ಯಾರು ಸರಿಯಾದವರು? ಯಾರಿಗೆ ಹೆಚ್ಚು ಅನುಕೂಲ ಮತ್ತು ಅವಕಾಶಗಳಿವೆ? ಯಾರು ಲೈಂಗಿಕ ವಿಷಯಗಳನ್ನು ಅಶ್ಲೀಲವೆನಿಸಸದ ರೀತಿಯಲ್ಲಿ ಮಕ್ಕಳಿಗೆ ತಿಳಿಸಲು ಅರ್ಹರಾದವರು ಎಂಬುದನ್ನು ತಿಳಿದರೆ, ಮಕ್ಕಳಿಗೆ ಲೈಂಗಿಕ ಶಿಕ್ಷಣಕೊಡಲು ತಂದೆತಾಯಿಗಳು ತಕ್ಕವರೇ, ಉಪಾಧ್ಯಾಯನು ತಕ್ಕವನೇ ಎಂಬುದು ತಿಳಿಯುತ್ತದೆ.

ನಮ್ಮ ಸಮಾಜದಲ್ಲಿ ಕಾಮ ಮತ್ತು ಲೈಂಗಿಕ ವಿಷಯಗಳಿರುವ ತುಚ್ಛ ಭಾವನೆಯಿಂದ ತಂದೆತಾಯಿಗಳು ತಮ್ಮ ಮಕ್ಕಳಿಗೆ ಕಾಮವಿಷಯಕ ಜ್ಞಾನವು ಅಶ್ಲೀಲವೆಂದು ತಿಳಿದಿದ್ದಾರೆ. ಅದು ಅವರಿಗೆ ಪ್ರಯುಂಡು ರೂಢಿಯಾಗಿದೆ. ಈ ರೂಢಿಯನ್ನು ಮೀರುವಷ್ಟು ಚೈತನ್ಯವು ೧೦೦ಕ್ಕೆ ೯೫ ಜನ ತಂದೆತಾಯಿಗಳಿಗಿಲ್ಲ. ತಮಗೇ ಸಹಜ ಜ್ಞಾನವಿಲ್ಲದುದರಿಂದ ಉತ್ತರಕೊಡದೆ ಗದರಿಸಿ ಬಾಯಿ ಮುಚ್ಚಿಸುವರು. ಹಾಗಾದರೆ ಅವರಿಗೆ ಜವಾಬ್ದಾರಿಯಿಲ್ಲವೆ? ಇದು ಹೇಗೆ ಗೊತ್ತಾಗುವುದೆಂದರೆ, ತಾಯಿಯಾದವಳು ತನ್ನ ಮಗಳಿಗೆ ಲೈಂಗಿಕ ಶಿಕ್ಷಣವನ್ನು ಕೊಟ್ಟಿರುತ್ತಾಳೆ. ಪ್ರಸಿದ್ಧರಾದ ಅನೇಕ ಕಾಮವಿಜ್ಞಾನಿಗಳ ಮತದಂತೆ ಗಂಡಸರಿಗಿಂತ ಹೆಂಗಸರಿಗೇ ಕಾಮ ಮತ್ತು ಲೈಂಗಿಕ ಜ್ಞಾನವು ಹೆಚ್ಚಾಗುತ್ತದೆ. ಅದಕ್ಕೆ ಕಾರಣವಿಷ್ಟೆ, ತಾಯಂದಿರು ಹೆಣ್ಣುಮಕ್ಕಳಿಗೆ ರಜಸ್ರಾವ, ಅದರ ರೀತಿನೀತಿಗಳು ಮತ್ತು ಗರ್ಭ, ಗರ್ಭದಾನ ಮೊದಲಾದ ವಿಷಯಗಳನ್ನು ತಿಳಿಸುವರು. ಹೆಣ್ಣುಮಕ್ಕಳಲ್ಲಿ ೧೦೦ಕ್ಕೆ ೫೭ ಕಿಶೋರ ವಯಸ್ಸಿನಲ್ಲಿ ತಾಯಂದಿರಿಂದ ಕಾಮ ಮತ್ತು ಲೈಂಗಿಕ ಶಿಕ್ಷಣ ಸಿಕ್ಕಿದೆ. ಇನ್ನುಳಿದವರು ಹುಡುಗರು. ಅವರಿಗೆ ತಂದೆಯನ್ನು ಕೇಳಲು ಬೆದರಿಕೆ, ತಾಯಿಯೊಡನೆ ಹೇಳಲು ನಾಚಿಕೆ. ತಂದೆತಾಯಿಗಳಿಗೆ ತಮ್ಮ ಮಗನೊಡನೆ ಲೈಂಗಿಕ ವಿಷಯವಾಗಿ ಮಾತನಾಡಲು "ಏನೋ ಇದಾಗುತ್ತದೆ." ಅಂದ ಮೇಲೆ ಹುಡುಗರಿಗೆ ಲೈಂಗಿಕ ವಿಷಯವಾಗಿ ಸಹಜ ಜ್ಞಾನವು ಸಿಗುವುದು ಯಾರಿಂದ?

ಉಳಿದವರು ಉಪಾಧ್ಯಾಯರು ಮಕ್ಕಳ ಮನಸ್ಸನ್ನು ಅಭ್ಯಸಿಸಿ ಅವರಲ್ಲಿ ಉತ್ಪನ್ನವಾಗುವ ಚಟಗಳನ್ನು ತಿಳಿದು, ಅವರಿಗೆ ಲೈಂಗಿಕ ಶಿಕ್ಷಣ

ಕೊಡುವ ಚೈತನ್ಯ ಉಪಾಧ್ಯಾಯನಿಗಿವೆಯೇ? ಇದಕ್ಕೆ ಸಾಧಾರಣವಾಗಿ ಇಲ್ಲವೆಂತಲೇ ಉತ್ತರ ಹೇಳಬೇಕಾಗುತ್ತದೆ. ಏಕೆಂದರೆ,

೧. ಉಪಾಧ್ಯಾಯರೂ ತಂದೆತಾಯಿಗಳೇ—ಉಳಿದವರಂತೆ ಅವರೂ ರೂಢಿಗೆ ದಾಸರೇ.

೨. ಮಕ್ಕಳು ಕಾಮಶಿಕ್ಷಣದಿಂದ ಹಾಳಾಗುವರೆಂಬ ಭಾವನೆ ಅವರಲ್ಲೂ ಬೇರೂರಿದೆ.

೩. ಮಕ್ಕಳಿಗೆ ಯಾವ ರೀತಿಯಾಗಿ ಲೈಂಗಿಕ ಶಿಕ್ಷಣ ಕೊಡಬೇಕೆಂಬ ಜ್ಞಾನವು ಉಪಾಧ್ಯಾಯರಿಗೆ ಕಡಿಮೆ. ಏಕೆಂದರೆ ಆ ವಿಷಯಗಳು ಸಕ್ಯೂರ್ಲರ್‌ನಲ್ಲಿಲ್ಲವಾದ್ದರಿಂದ ಅದನ್ನು ಅಭ್ಯಾಸಮಾಡುವುದಿಲ್ಲ.

೪. ಕಾಮವಿಜ್ಞಾನಕ್ಕೆ ಸಂಬಂಧಪಟ್ಟ ಮನಶ್ಶಾಸ್ತ್ರವನ್ನು ಅವರು ಅಭ್ಯಾಸಮಾಡಿ ಅರಿತಿರುವುದಿಲ್ಲ.

(ಇದಕ್ಕೆ ಕೆಲವರು ಅಪವಾದವಾಗಿರಬಹುದು.)

ಅಂದಮೇಲೆ ಯಾರು ತಿಳಿಸಬೇಕೆಂಬ ವಿಷಯ ಬಿಕ್ಕಟ್ಟಿಗೆ ಬಂದಿತಲ್ಲವೆ? ಆದರೆ, ದಿನದ ಪಾಠದ ಜೊತೆಗೆ ಮಕ್ಕಳಿಗೆ ನೈತಿಕ ಶಿಕ್ಷಣವನ್ನು ಕೊಡುವವನು ಉಪಾಧ್ಯಾಯನು. ಅಂದಮೇಲೆ ಇದೂ ಅವನ ಪಾಲಿಗೇ ಸೇರಿದಂತಾಗಲಿಲ್ಲವೇ? ಮೇಲಾಗಿ ಇಂತಹ ವಿಷಯಗಳನ್ನು ಅಶ್ಲೀಲವಲ್ಲದ ರೀತಿಯಲ್ಲಿ ತಿಳಿಸಲು ಉಪಾಧ್ಯಾಯರಿಗೆ ತುಂಬಾ ಅವಕಾಶವಿದೆ. ಅವುಗಳಾವುವೆಂಬುದನ್ನು ತಿಳಿಯುವ ಮೊದಲು ಯಾವ ಉಪಾಧ್ಯಾಯರಿಗೆ ಅದರ ಹೆಚ್ಚಿನ ಜವಾಬ್ದಾರಿಯೆಂದು ನೋಡೋಣ. ಪ್ರಾಥಮಿಕ ಶಾಲೆಯ ಉಪಾಧ್ಯಾಯರಿಗೇ ಅಥವಾ ಸೆಕೆಂಡರಿ ಶಾಲೆಯ ಉಪಾಧ್ಯಾಯರಿಗೇ ಎಂಬುದನ್ನು ವಿಚಾರಿಸಬೇಕಾಗುವುದು. ಮಕ್ಕಳಿಗೆ ಕಾಮೋದಯವಾಗುವುದು ಬಾಲ್ಯದ ಅನಂತರ, ತಾರುಣ್ಯಕ್ಕೆ ಮುಂಚೆ. ಎಂದರೆ, ಸುಮಾರು ೧೪ ವಯಸ್ಸಿನಿಂದ ೧೮ ವಯಸ್ಸಿನ ಒಳಗೆ ಎಂದು ಹಿಂದೆಯೇ ಹೇಳಿದೆ.

ಅಲ್ಲದೆ ಕಾಮಲಕ್ಷಣಗಳು ಕೇವಲ ಬಾಲ್ಯದಲ್ಲಿಯೇ ಕಂಡುಬರುವುದುಂಟೆಂದೂ ಹೇಳಿದೆ. ಇಂತಹ ಸಮಯದಲ್ಲಿ ಬಾಲ್ಯದಲ್ಲಿ ಚಿಕ್ಕ ಮಕ್ಕಳಿಗೆ ಲೈಂಗಿಕ ವಿಷಯಗಳನ್ನು ಹೇಳಿದರೆ ತಿಳಿದುಕೊಳ್ಳುವ ಜ್ಞಾನವು ಎಲ್ಲಿ ಬಂದೀತು? ಮನಸ್ಸಿನ ಮಟ್ಟ ಅಷ್ಟು ಏರಿರುತ್ತದೆಯೇ? ಆದುದರಿಂದ

ದೈಹಿಕ ಮತ್ತು ಮಾನಸಿಕ ತೊಂದರೆಗಳು ಮಗುವಿಗುಂಟಾಗದಂತೆ ತಂದೆ ತಾಯಿಗಳೂ, ಪ್ರಾಥಮಿಕ ಶಾಲೆಯ ಉಪಾಧ್ಯಾಯರೂ ನೋಡಿಕೊಳ್ಳ ಬೇಕಾಗುವುದು. ಇನ್ನುಳಿದವರು ಹೈಸ್ಕೂಲು ಉಪಾಧ್ಯಾಯರುಗಳು. ಬಹು ವಾಗಿ. ೧೪ರಿಂದ ೧೮ ವಯಸ್ಸಿನ ವಿದ್ಯಾರ್ಥಿಗಳು ಇರುವುದು ಹೈಸ್ಕೂಲಿ ನಲ್ಲಿಯೇ. ಕಾಮೋದಯವಾಗಿ ತೃಪ್ತಿಯ ಕಡೆಗೆ ಮನಸ್ಸನ್ನೆಳೆಯುವುದು ಈ ವಯಸ್ಸಿನಲ್ಲಿಯೇ! ಅಂದ ಮೇಲೆ ಹೈಸ್ಕೂಲ್ ಉಪಾಧ್ಯಾಯರುಗಳಿಗೂ, ಹೈಸ್ಕೂಲ್ ಶಿಕ್ಷಣಕ್ಕೂ ಜವಾಬ್ದಾರಿಯು ಹೆಚ್ಚಿದಂತಾಯಿತು. ಅಂದರೆ ಲೈಂಗಿಕ ಶಿಕ್ಷಣವನ್ನು ಹೈಸ್ಕೂಲುಗಳಲ್ಲಿ ಕೊಡುವುದು ಒಳಿತು ಎಂದಾಯ್ತ ಲ್ಲವೇ? ಇನ್ನು ಅವಕಾಶ ದೃಷ್ಟಿಯಿಂದ ನೋಡಿದರೆ ಹೈಸ್ಕೂಲುಗಳಲ್ಲಿ ಅವ ಕಾಶ ಹೆಚ್ಚಾಗಿದೆ.

೧. ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಕುತೂಹಲ ಮಕ್ಕಳಲ್ಲಿ ಹೆಚ್ಚಿರುತ್ತದೆ.

೨. ವಿಷಯ ಗ್ರಹಣ ಮಾಡಲು ಮನಸ್ಸಿನ ಮಟ್ಟವು ಹದವಾಗಿರುತ್ತದೆ.

೩. ಜೀವಶಾಸ್ತ್ರ, ಸಸ್ಯಶಾಸ್ತ್ರ, ದೇಹವಿಜ್ಞಾನ, ಆನುವಂಶೀಯಕತೆ ಮೊದಲಾದ ಶಾಸ್ತ್ರಗಳ ಪ್ರಥಮ ಪರಿಚಯವಾಗುವುದು ಇಲ್ಲಿಯೇ, ಎಂದರೆ, ಹೈಸ್ಕೂಲಿನಲ್ಲಿಯೇ.

ಲೈಂಗಿಕ ವಿಷಯಗಳನ್ನು ಅಶ್ಲೀಲವಲ್ಲದ ಆಶ್ಚರ್ಯ ಅಸಹನೀಯ ವಲ್ಲದ ರೀತಿಯಲ್ಲಿ ಮಾಡಲು ಈ ಶಾಸ್ತ್ರಗಳು ಸಹಾಯ ಮಾಡುತ್ತವೆ. ಆದು ದರಿಂದ ಲೈಂಗಿಕ ಶಿಕ್ಷಣ ಕೊಡಲು ಹೈಸ್ಕೂಲೇ ಅನುಕೂಲಕ್ಷೇತ್ರವೆಂದಹಾಗಾ ಯಿತು.

ಹೈಸ್ಕೂಲುಗಳು ಲೈಂಗಿಕ ಶಿಕ್ಷಣವೀಯಲು ಸರಿಯಾದ ಸ್ಥಳವೆಂದಾ ಯಿತು. ಇರಲಿ, ಅಲ್ಲಿ ಯಾವ ಕ್ರಮವನ್ನು ಅನುಸರಿಸಬೇಕೆಂಬುದನ್ನು ನೋಡಬೇಕಷ್ಟೆ? ವಿಷಯವಾವುದಾದರೊಂದನ್ನು ಬೋಧನೆ ಮಾಡಲು ಉಪಾಧ್ಯಾಯನಿಗೆ ಅದರ ಜ್ಞಾನವಿರುವುದಾವಶ್ಯಕ. ಅಂತೆ, ಉಪಾಧ್ಯಾಯ ನಿಗೆ ಶಾಸ್ತ್ರೀಯವಾದ ಲೈಂಗಿಕ ಜ್ಞಾನವಿರುವುದಾವಶ್ಯಕ. ವಿದ್ಯಾರ್ಥಿಗಳ ಕಾಮಭಾವ ಚಟಗಳನ್ನರಿತು ಅಶ್ಲೀಲ ಹಾಗು ಕ್ರೂರವಲ್ಲದಂತೆ ಅವರನ್ನು ತಿದ್ದಲೂ ಬಲ್ಲವರಾಗಿರಬೇಕು. ಗಂಡು ಹೆಣ್ಣುಗಳ ಸಾಮರಸ್ಯಕ್ಕವಶ್ಯಕವಾದ

ಭಾವನೆ, ಕಾಮ ವಿಷಯದ ಬಗೆಗಿದ್ದ ಹೀನ ಭಾವನೆಗಳನ್ನು ತೆಗೆದುಹಾಕಿ, ಉಚ್ಚಧ್ಯೇಯ, ನೈತಿಕ ವೃತ್ತಿಗಳನ್ನು ಮಕ್ಕಳ ಮನಸ್ಸಿನಲ್ಲಿ ನೆಡಲು ಬಲ್ಲವರಿರಬೇಕು. ಈ ರೀತಿ ಶಿಕ್ಷಕರು ಮಕ್ಕಳಿಗರಿಯುದಂತೆಯೆ ಅವರಲ್ಲಿ ಲೈಂಗಿಕ ಹಾಗೂ ಕಾಮುಕ ವಿಷಯವಾಗಿ ಸಯುಕ್ತಿಕ ಜ್ಞಾನಹುಟ್ಟಿಸಲು ತಕ್ಕ ತರಬೇತಿಯನ್ನು ಹೊಂದಬೇಕು. ಅಂದರೆ, ಶಿಕ್ಷಕರು ಕಾಮವಿಷಯವನ್ನು ಶಾಸ್ತ್ರೀಯವಾಗಿ ಹೊಂದಲು ಮಾನಸಶಾಸ್ತ್ರ, ದೇಹವಿಜ್ಞಾನ, ಸಂತಾನ ವಿಜ್ಞಾನ, ದಾಂಪತ್ಯ ವಿಜ್ಞಾನ, ಕಾಮ ವಿಜ್ಞಾನ ಮೊದಲಾದ ಸಂಬಂಧಪಟ್ಟ ಶಾಸ್ತ್ರಗಳನ್ನು ಅಭ್ಯಸಿಸಿ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಕಲಿಸಲು ತರಬೇತು ಪಡೆಯಬೇಕಾಗುವುದು.

ಶಿಕ್ಷಣದ ರೀತಿಯು ಲೈಂಗಿಕ ಶಿಕ್ಷಣದ ತೀವ್ರವಾದಿಗಳಂತೆ ಇರಬೇಕೆಂಬುದು ನನ್ನ ಮತವಲ್ಲ. ಏಕೆಂದರೆ ಅದು ಮಕ್ಕಳಲ್ಲಿ ಅನವಶ್ಯಕವಾದ ಕುತೂಹಲವನ್ನೂ ಕುಚೇಷ್ಟೆಯನ್ನೂ ಹೆಚ್ಚಿಸಬಹುದು. ಅಲ್ಲದೆ, ಶಿಕ್ಷಕರು ಲೈಂಗಿಕ ಶಿಕ್ಷಣಕ್ಕೆಂದೇ ಒಂದು ಪೀರಿಯಡ್ಡನ್ನು ಇಟ್ಟು ಅದಕ್ಕೆ ವಿದ್ಯಾರ್ಥಿಗಳನ್ನು ಕೇಳಬನ್ನಿರೆಂದರೆ ಬಹು ತೀವ್ರಗತಿಯಾಯಿತು. ಮಕ್ಕಳ ಮನಸ್ಸನ್ನು ಕೆರಳಿಸಬಹುದಾದ ಸನ್ನಿವೇಶವೂ ಅದಾಗಬಹುದು. ಆದುದರಿಂದ ಮಕ್ಕಳ ಮನಸ್ಸು ಕೆಡದಂತೆ ಅವರಿಗೆ, ಲೈಂಗಿಕ ವಿಷಯಗಳನ್ನು ತಿಳಿದುಕೊಳ್ಳುತ್ತೇವೆ ಎಂಬ ಪರಿವೆ ಇಲ್ಲದಂತೆ ದಿನದ ಪಾಠದ ಜೊತೆಗೆ ಲೈಂಗಿಕ ಶಿಕ್ಷಣ ಕೊಡುವುದು ಒಳಿತಾಗುವುದು. ಹೈಸ್ಕೂಲುಗಳಲ್ಲಿ ಇದಕ್ಕೆ ಅವಕಾಶ ಚೆನ್ನಾಗಿದೆ. (Biology) ಬಯಾಲಜಿ ತರಗತಿಯಲ್ಲಿ ಅದಕ್ಕೆ ಸಂಬಂಧಿಸಿದ ಉಪಾಧ್ಯಾಯರು ಮೊದಲು ಹೂ, ಪರಾಗ ಅದರಿಂದ ಕಾಯಿ, ಬೀಜ ಇವುಗಳ ಉತ್ಪಾದನ ಕ್ರಮವನ್ನು ಬೋಧಿಸುವ ಸಮಯದಲ್ಲಿಯೇ ಪ್ರಾಣಿ ಮತ್ತು ಮಾನವರಿಗೆ ಸಂಬಂಧಿಸಿದ ಉತ್ಪತ್ತಿ ಕ್ರಮವನ್ನೂ ವಿವರಿಸಬಹುದು. (Physiology) ದೇಹವಿಜ್ಞಾನದ ತರಗತಿಯಲ್ಲಿ ಕಾಮಾಂಗಗಳ ಪರಿಚಯವನ್ನು ಅಶ್ಲೀಲವಲ್ಲದ ರೀತಿಯಿಂದ ಬೋಧಿಸಬಹುದು. ಅವಿವಾಹ ಮೊದಲಾದ ವಿಷಯಗಳನ್ನು ಬೋಧಿಸುವಾಗ ಮೇಹಚಾಡ್ಯಗಳಿಗೆ ಸಂಬಂಧಿಸಿದ ಕ್ರಿಮಿಗಳ ವಿಷಯವಾಗಿ ತಿಳಿವಳಿಕೆ ಕೊಡಬಹುದು. ಅಲ್ಲದೆ ಕಾಮಭಾವ, ಹಾವ ಭಾವ, ಕಾಮಸೂಚನೆ ಮೊದಲಾದ ವಿಷಯಗಳನ್ನು ಅಶ್ಲೀಲವಲ್ಲದ

ರೀತಿಯಿಂದ ಬೋಧಿಸಲು ಸಾಹಿತ್ಯ, ನಾಟಕ, ಇತಿಹಾಸ ಇತ್ಯಾದಿಗಳ ಪಾ ಮಾಡುವ ಉಪಾಧ್ಯಾಯರುಗಳಿಗೆ ತುಂಬ ಅವಕಾಶವಿದೆ.

ಮೇಲೆ ಹೇಳಿದ ವಿಷಯುಗಳ ಆಗುಹೋಗುಗಳನ್ನು ಯೋಚಿಸಿದ ಸಯುಕ್ತಿಕ ಕಾಮುಶಿಕ್ಷಣಕ್ಕೆ ಹೈಸ್ಕೂಲೇ ಅನುಕೂಲವೆಂದು ಒತ್ತಿ ಹೇಳಬಹುದು ಅಲ್ಲದೆ ಕ್ರಮವೂ ತೀವ್ರವಾಗದೆ ಅಪ್ರತ್ಯಕ್ಷ ರೀತಿಯಿಂದಾಗುವುದು.

ಇನ್ನು ಇದರಲ್ಲಿ ತಂದೆತಾಯಿಗಳ ಕೈ ಮತ್ತು ಕೆಲಸಗಳೇನಾದರು ಇದೆಯೇ, ಅದರ ಜವಾಬ್ದಾರಿ ಎಂತಹುದು ಎಂದು ನೋಡುವ. ವರ್ಷ ವರ್ಷಗಳಿಂದಲೂ ರೂಢಿಗೆ ತಲೆಬಾಗಿದ ಪೋಷಕ ಬೋಧಕ ವರ್ಗದವರು ಇನ್ನಾದರೂ ಎಚ್ಚೆತ್ತು ತಮ್ಮ ಮಕ್ಕಳಿಗೆ ಲೈಂಗಿಕ ಶಿಕ್ಷಣ ಕೊಡುವುದರ ಅವಶ್ಯಕತೆಯನ್ನೂ ಅದರಿಂದಾಗುವ ಒಳಿತನ್ನೂ ಯೋಚಿಸಿ ಸಯುಕ್ತಿಕ ರೀತಿಯಲ್ಲಿ ನಡೆಯುಬಹುದಲ್ಲವೇ? "ಆಗಲಿ, ನಮ್ಮ ಮಕ್ಕಳಿಗೆ ಲೈಂಗಿಕ ಶಿಕ್ಷಣವನ್ನು ಕೊಡಿಸುವ, ಅದರಿಂದ ಒಳ್ಳೆಯದಾದೀತೆ? ನಮ್ಮ ಉಪಾಧ್ಯಾಯರುಗಳು ಸಯುಕ್ತಿಕವಾದ ಶಿಕ್ಷಣವನ್ನು ಕೊಡಬಲ್ಲರೇ?" ಎಂದು ಕೆಲವು ತಂದೆತಾಯಂದಿರು ಕೇಳಬಹುದು. ಅದಕ್ಕೆ ಪ್ರತಿಯಾಗಿ "ಅಹುದು. ಒಳ್ಳೆಯದಾಗುವುದು; ಕೊಡಬಲ್ಲರು" ಎಂದು ಎದೆತಟ್ಟಿ ಹೇಳ ಬಹುದು. ಏಕೆಂದರೆ, ಮಕ್ಕಳ ಒಳಿತು, ಕೆಡಕುಗಳು ಪೋಷಕ, ಬೋಧಕ ರನ್ನಲ್ಲವೇ ಅವಲಂಬಿಸಿರುವುದು? ಸಯುಕ್ತಿಕವಾದ ಶಿಕ್ಷಣ ಕೊಡುವಂತೆ ಏರ್ಪಡಿಸಬೇಕಾದ ಕೆಲಸ ಪೋಷಕ ವರ್ಗದವರದು! ಡಿಸ್ಟ್ರಿಕ್ಟ್ ಬೋರ್ಡು, ಎಜುಕೇಷನ್ ಕಮಿಟಿ, ಗ್ರಾಮಪಂಚಾಯಿತಿ, ಎಜುಕೇಷನ್ ಕಮಿಟಿಯಿಂದ ಹಿಡಿದು ವಿದ್ಯಾಖಾತೆಯ ಮುಖ್ಯಾಧಿಕಾರಿಗಳವರೆಗೂ ಹೋಗಿ ಮಾತನಾಡಿ, ಮನವಿ ಮಾಡಿಕೊಳ್ಳಬೇಕು. "ನಮ್ಮ ಮಕ್ಕಳು ಭಾವೀ ಜನಾಂಗ. ಮಕ್ಕಳು ಲೈಂಗಿಕ ಸಂಬಂಧವಾದ ಅಜ್ಞಾನದಿಂದ, ಅದರಿಂದ ಬರುವ ಅವಿವೇಕದಿಂದ ದಿನ ದಿನಕ್ಕೆ ಅಧೋಗತಿಗಿಳಿಯುತ್ತಿದ್ದಾರೆ. ಅದರಿಂದಾಗಿ ಇಡೀ ದೇಶವೇ ನಿರ್ವೀಯರಾದ, ನಿರ್ವಿಣ್ಣರಾದ ಜನಾಂಗವನ್ನು ಹೊಂದುತ್ತಿದೆ. ಇದನ್ನು ತಪ್ಪಿಸಲು ಮಕ್ಕಳಿಗೆ ಸಯುಕ್ತಿಕವಾದ ಲೈಂಗಿಕ ಶಿಕ್ಷಣ ಕೊಡಿಸಲು ಏರ್ಪಾಟು ಮಾಡಿಕೊಡಬೇಕು" ಎಂಬುದಾಗಿ ಪದೇಪದೇ ಮನವಿ ಮಾಡಿಕೊಳ್ಳ ಬೇಕಾದದ್ದು ಪೋಷಕವರ್ಗದವರದು.

ಈ ಕಾರ್ಯವು ಇನ್ನೂ ಚಟುವಟಿಕೆಯಿಂದ ನಡೆಯಬೇಕಾದರೆ ಪೋಷಕರೂ, ಬೋಧಕರೂ ಸೇರಿಕೊಂಡು ಒಂದೊಂದು ಸಂಘವನ್ನು ಮಾಡಿಕೊಂಡು, ವಾರಕ್ಕೆ ಒಂದು, ಎರಡು ಹೀಗೆ ಲೈಂಗಿಕ ಶಿಕ್ಷಣದ ಅವಶ್ಯಕತೆಯನ್ನು ಕುರಿತು, ಅದನ್ನು ಚೆನ್ನಾಗಿ ಬಲ್ಲವರಿಂದ ಭಾಷಣ ಕೊಡಿಸಬೇಕು. ಒಬ್ಬ ಪೋಷಕನಿಗೆ ತಿಳಿದು, ಲೈಂಗಿಕ ಶಿಕ್ಷಣದ ಅವಶ್ಯಕತೆಯನ್ನು ಅವನು ಒಪ್ಪಿದರೆ ಸಾಕು. ಇತರರಿಗೆ ತಾವಾಗಿಯೇ ತಿಳಿಯುವುದು. ಏಕೆಂದರೆ, ಮಾನವನು ಸಂಘಜೀವಿ. ಇತರರೊಡನೆ ಕಲೆತು ಮಾತನಾಡುವುದು ಸಹಜ. ಮಾತಿನ ಭರದಲ್ಲಿ ತಾನು ಕೇಳಿ ತಿಳಿದುಕೊಂಡುದನ್ನು ಇತರರಿಗೂ ಹೇಳಿ ಒಪ್ಪಿಸುವನು. ಹೀಗೆ ಅದು ಒಬ್ಬರಿಂದೊಬ್ಬರಲ್ಲಿ ಪ್ರಚಾರವಾಗುವುದು. ಹೀಗೆ ಪೋಷಕ ಬೋಧಕ ವರ್ಗದವರು ಸಂಘಗಳನ್ನು ಏರ್ಪಡಿಸಿಕೊಂಡು ಸರ್ಕಾರದಲ್ಲಿ ತಮ್ಮ ಮನವಿಗಳನ್ನು ಹೇಳಿಕೊಂಡರೆ ಕ್ರಮೇಣ ಸರ್ಕಾರ ಮಕ್ಕಳಿಗೆ ಲೈಂಗಿಕ ಶಿಕ್ಷಣಕೊಡುವ ವಿಷಯವಾಗಿ ಆಲೋಚಿಸಿ ನಿರ್ಧಾರಕ್ಕೆ ಬಂದೇ ಬರುವುದು. ಒಟ್ಟಿನಲ್ಲಿ ಇದೆಲ್ಲವೂ ಪೋಷಕ ಮತ್ತು ಬೋಧಕ ವರ್ಗದವರು ತೆಗೆದುಕೊಳ್ಳುವ ಉತ್ಸಾಹ ಚಟುವಟಿಕೆಗಳನ್ನವೆ ಲಂಬಿಸಿದೆ. ನಮ್ಮ ದೇಶದ ದಾರಿದ್ರ್ಯ, ಅವಿದ್ಯೆ ಮೊದಲಾದವುಗಳನ್ನು ನಿವಾರಿಸಲು ಪ್ರಯತ್ನಿಸುವ ನಾವು ಲೈಂಗಿಕ ವಿಷಯದ ಅಜ್ಞಾನದಿಂದ ನರಳುತ್ತಿರುವ ನಮ್ಮ ನಾಡಿನ ಸಾವಿರಾರು ತರುಣ ತರುಣಿಯರಿಗೆ ಲೈಂಗಿಕ ಮತ್ತು ಕಾಮಶಿಕ್ಷಣವನ್ನು ಕೊಟ್ಟು ಅವರನ್ನು ಉದ್ಧಾರ ಮಾಡಬೇಕಲ್ಲವೇ ? ಅಜ್ಞಾನದಿಂದ ಸಹಜವಾಗಿ ಬರುವ ಅವಿವೇಕ ಆದರಿಂದಾಗುವ ಅಪಾರ ಅನಾಹುತ ಇವುಗಳನ್ನು ತಪ್ಪಿಸಿ ನಮ್ಮ ಭಾವೀ ಜನಾಂಗವು ಮನೋವಿಜ್ಞಾನ, ಕಾಮ ಸಂಸ್ಕೃತಿಗಳನ್ನು ತಿಳಿದುಕೊಳ್ಳುವಂತೆ ಮಾಡಿ ನಮ್ಮ ಮಕ್ಕಳನ್ನೂ, ನಮ್ಮ ಸಮಾಜವನ್ನೂ, ನಮ್ಮ ದೇಶವನ್ನೂ ಉದ್ಧಾರಮಾಡಬೇಕಲ್ಲವೇ ?

ಕೊನೆಯದಾಗಿ, ಡಾ|| ಇ. ಬಿ. ಲೌರಿ, ಎಂ.ಡಿ., ಎಂಬಾಕೆಯು ಬರೆದಿರುವ ಗಣನೀಯವಾದ ಮಾತುಗಳನ್ನು ಇಲ್ಲಿ ಬರೆದು ನಿಲ್ಲಿಸುವ

"ಪ್ರತಿಯೊಂದು ಪ್ರಾಥಮಿಕ ಹಾಗು ಉಚ್ಚವರ್ಗದ ಶಿಕ್ಷಣ ಸಂಸ್ಥೆಯಲ್ಲಿ ನಮ್ಮ ದೇಶದ ಮನುಷ್ಯ ಜನಾಂಗದ ಸುಧಾರಣೆಗೆ ಸಾಧಕವಾಗುವಂಥ ಸುಪ್ರಜಾಜನನಶಾಸ್ತ್ರದ ಮಾರ್ಗಗಳನ್ನು ಕೂಡಲೇ ಆರಂಭಿಸಬೇಕು.

ಆ ಅಭ್ಯಾಸ ಕ್ರಮದಲ್ಲಿ ಮನುಷ್ಯನನ್ನು ಅಧೋಗತಿಗೆ ಒಯ್ಯುವ ದುರ್ವೃತ್ತಿಗಳು. ವಿಷಯಲಂಪಟತನದ ದುಷ್ಪರಿಣಾಮ, ಸಾಮಾಜಿಕ ದುರಾಚಾರ ಮತ್ತು ತತ್ಪರಿಣಾಮವಾದ ಗುಹ್ಯರೋಗಗಳ ವಿಷಯಗಳು ಸಮಾವಿಷ್ಟವಾಗುತ್ತವೆ. ಆದ್ದರಿಂದ ಆಧುನಿಕ ಮನುಷ್ಯ ಪೀಳಿಗೆಯ ವಿಷಯಕ್ಕೆ ಇರುವ ಹೊಣೆಯು ತಿಳಿಯುತ್ತದೆ. ಮತ್ತು ಭಾವೀ ಮಾತಾಪಿತೃತ್ವದ ಜವಾಬ್ದಾರಿಯೂ ತಿಳಿಯುತ್ತದೆ. "ತಮ್ಮ ಮಕ್ಕಳಿಗೆ ಸಕಾಲದ ಲೈಂಗಿಕ ಶಿಕ್ಷಣ ಕೊಡುವ ಮಹತ್ವವೂ ಮನವರಿಕೆಯಾಗುತ್ತದೆ. ಶಿಕ್ಷಕರನ್ನು ತರಬೇತು ಮಾಡುವ ಪ್ರತಿಯೊಂದು ಸಂಸ್ಥೆಯೂ ಕಾಮಶಿಕ್ಷಣವನ್ನು ಸೇರಿಸುವುದು ಅತ್ಯವಶ್ಯಕವಾಗಿದೆ. ಆದುದರಿಂದ ಅವರು ತಮ್ಮ ವಿದ್ಯಾರ್ಥಿಗಳಿಗೆ ದಾರಿ ತೋರಲು ಸಮರ್ಥರಾಗುವರು. ಈಗ ಶಾಲೆಗೆ ಹೋಗುತ್ತಿರುವ ಹುಡುಗ ಹುಡುಗಿಯರನ್ನು ಲೈಂಗಿಕ ಶಿಕ್ಷಣದಿಂದ ನಾವು ಸಿದ್ಧಗೊಳಿಸಿದರೆ ಅವರ ಮುಂದಿನ ಪೀಳಿಗೆಯು ತನ್ನಷ್ಟಕ್ಕೇ ಅಭ್ಯುದಯದ ದಾರಿ ಹಿಡಿಯುತ್ತದೆ."

———:———

ಯುದ್ಧ ಮತ್ತು ಸಾಹಿತ್ಯ

ಅ. ನ. ಕೃಷ್ಣರಾಯ

ಕಳೆದ ಮಹಾಯುದ್ಧದ ಕಾಲದಲ್ಲಿ ಕನ್ನಡ ಸಾಹಿತ್ಯ ಇಂದಿನ ಸ್ವರೂಪದಲ್ಲಿ ಇನ್ನೂ ಹುಟ್ಟೇ ಇರಲಿಲ್ಲವೆಂದು ಹೇಳಬಹುದು. ಕನ್ನಡಿಗರಿಗೆ ಆ ವೇಳೆಗೆ ಇನ್ನೂ ಕರ್ನಾಟಕತ್ವದ ಕಲ್ಪನೆಯೇ ಬಂದಿರಲಿಲ್ಲ; ಅಖಿಲ ಭಾರತ ಕಲ್ಪನೆ, ವಿಶ್ವಬಾಂಧವ್ಯದೃಷ್ಟಿ ಆಗ ಕನಸಿನ ಮಾತುಗಳಾಗಿದ್ದವು. ಸಾಹಿತ್ಯ ಪ್ರಪಂಚ ಬಿ. ವೆಂಕಟಾಚಾರ್ಯರು, ಗಳಗನಾಥರು ಇವರ ಕಾದಂಬರಿಗಳಿಂದಲೂ, ನಂಜನಗೂಡು ಶ್ರೀಕಂಠಶಾಸ್ತ್ರಿಗಳು, ಬೆಳ್ಳಾವೆ ನರಹರಿಶಾಸ್ತ್ರಿಗಳು ಇವರ ನಾಟಕಗಳಿಂದಲೂ ತುಂಬಿತ್ತು. ಓದುವ ಅಭಿರುಚಿಯೇ ಇಲ್ಲದಿದ್ದಾಗ ಅವನ್ನು ಜೀವಂತವಾಹಿನಿಗಳಲ್ಲಿ ಹರಿಸುವ ಹವ್ಯಾಸವಾಗಲಿ, ಪ್ರಕೃತ ಪರಿಸ್ಥಿತಿಯ ಆವಿಷ್ಕಾರಕ್ಕೆ ಅಳವಡಿಸಿಕೊಳ್ಳುವುದಾಗಲಿ ಹೇಗೆ ಸಾಧ್ಯವಾಗಬೇಕು. ಪತ್ರಿಕಾಪ್ರಪಂಚವೂ ತಲೆದೋರಿರಲಿಲ್ಲ. ಮೈಸೂರು ಗೆಜೆಟ್, ವೃತ್ತಾಂತ ಪತ್ರಿಕೆ ಇವೇ ಜನಸಾಮಾನ್ಯದ ವಾರ್ತಾವಾಹಿನಿಗಳಾಗಿದ್ದವು. ಸ್ವತಂತ್ರ ವಿಚಾರದ ಒಂದೇ ಒಂದು ಪತ್ರಿಕೆಯೆನಿಸಿಕೊಂಡಿದ್ದ 'ಸಂಪದಭ್ಯುದಯ' ಇನ್ನೂ ಸ್ವರೂಪ ಸಂಗ್ರಹಣದಲ್ಲಿಯೇ ಹೆಣಗಾಡುತ್ತಿತ್ತು. ಅದು ಬ್ರಾಹ್ಮಣ-ಬ್ರಾಹ್ಮಣೇತರ ಸ್ವಯೂಥ ಕಲಹದ ಪರಿಮಿತಿಯನ್ನು ದಾಟಿರಲಿಲ್ಲ. ಕರ್ನಾಟಕದ ಏಕಮೇವಾದ್ವಿತೀಯ ಸಂಸ್ಥೆಯಾದ ಕರ್ನಾಟಕ ಸಾಹಿತ್ಯ ಪರಿಷತ್ತು ಜನಗಳ ಕಣ್ಣಿಗೇ ಬಿದ್ದಿರಲಿಲ್ಲ; ನಾಲ್ಕಾರು ಜನ ಪಂಡಿತರು ಆಗಾಗ್ಗೆ ಸೇರಿ ಜೈಮಿನಿ ಭಾರತ, ಸೋಮೇಶ್ವರ ಶತಕಗಳನ್ನು ಅವಲೋಕಿಸುವ ಒಂದು ಸ್ಥಾನವಾಗಿತ್ತು.

೧೯೧೪ರ ಯುದ್ಧ, ಜನತೆಯನ್ನು ಅಷ್ಟಾಗಿ ಕಲಕಲೂ ಇಲ್ಲ. ಕರ್ನಾಟಕ ತನ್ನ ಬಲಿದಾನವನ್ನರ್ಪಿಸಿತು. ಮೈಸೂರಿನ ವೀರ ಸವಾರರು ಯುದ್ಧವನ್ನು ಗೆದ್ದು ಬ್ರಿಟಿಷ್ ಸಾಮ್ರಾಜ್ಯವನ್ನು ಉದ್ಧರಿಸಿದರು. ಆದರದು ಹಳೆಯ ಚರಿತ್ರೆಯ ಒಂದು ಸ್ವಾರಸ್ಯವಾದ ಒಂದು ಪುಟದಂತಿತ್ತು. ಯುದ್ಧದ ಉತ್ತರಾರ್ಧದಲ್ಲಿ ಮಾತ್ರ ಆಹಾರ ಸಾಮಗ್ರಿಗಳ ಪರು ಬೆಲೆಯಿಂದಲೂ,

ಸಾರ್ವತ್ರಿಕವಾಗಿ ಹರಡಿದ ಇಕ್ಸ್‌ಪ್ಲ್ಯಯಂಜಾ ಸಿಡುಗಿನಿಂದಲೂ ಜನಕ್ಕೆ ಯುದ್ಧವೆಲ್ಲೋ, ಏತಕ್ಕೋ ಆಗುತ್ತಿದೆ ಎಂದು ಗೊತ್ತಾಯಿತು.

ಈ ವಿಸ್ಮೃತಿ ಸಾಹಿತ್ಯ ಪ್ರಪಂಚವನ್ನು ಸಂಪೂರ್ಣವಾಗಿ ಆವರಿಸಿತ್ತು ಕನ್ನಡತನವೇ ತಮ್ಮೆಲ್ಲ ಪ್ರಗತಿಯ ಕೇಂದ್ರವೆಂಬ ಕಲ್ಪನೆ ಜನತೆಯಲ್ಲಿ ಮೂಡುವುದಕ್ಕೆ ಬಹಳ ವರ್ಷ ಬೇಕಾಯಿತು. ೧೯೨೦ರಲ್ಲಿ ಶ್ರೀ ಆಲೂರ ವೆಂಕಟರಾಯರು 'ಗತವೈಭವ' ಗ್ರಂಥ ಬರೆದು ಈ ಕಲ್ಪನೆಯನ್ನು ಕನ್ನಡಿಗರ ಮುಂದಿಟ್ಟು ಅವರ ಕಣ್ತೆರೆದರು. ಆದರದು ಕ್ರಿಯಾಶಕ್ತಿಯನ್ನು ಪಡೆದುದು ೧೯೨೨ರಲ್ಲಿ. ಇಂಗ್ಲೀಷನ್ನೇ ನಂಬಿಕೊಂಡು ಅದೇ ತಮ್ಮ ರಕ್ತ ಮಾಂಸವೆಂದು ಭಾವಿಸಿದ್ದ ಜನಕ್ಕೆ ಇಂಗ್ಲೀಷಿನಲ್ಲಿ ಅಪಾರ ಪಾಂಡಿತ್ಯವನ್ನು ಪಡೆದು, ವಿಲಾಯಿತಿಯ ಯಾತ್ರೆಯನ್ನು ಸಾಂಗವಾಗಿ ಪೂರೈಸಿ ಹರಕ ಮುರಕು ಮನೆಮಾತಿನ ಕನ್ನಡದಲ್ಲಿ ಕೈಲಾಸಂ ಬರೆದ 'ಟೊಳ್ಳು ಗಟ್ಟಿ' ನಾಟಕ ಒಂದು ವಿನೂತನ ರಸಗಟ್ಟಿಯಾಗಿ ಕಂಡುಬಂತು. ಆಗ ಕನ್ನಡ ಭಾಷೆಯ ಉದ್ಧಾರಕ್ಕೆ ಕೆಲವರು ಕಂಕಣಬದ್ಧರಾದರು. ಶ್ರೀನಿವಾಸರು ತಮ್ಮ ಸಣ್ಣ ಕತೆಗಳನ್ನು ಪ್ರಕಟಿಸಿದರು. ಅರಮನೆ ಗುರುಮನೆಗಳಲ್ಲಿ ನಲಿ ಯುತ್ತಿದ್ದ ಸಾಹಿತ್ಯಲಕ್ಷ್ಮಿ ಮಧ್ಯಮ ವರ್ಗದ ಜನರ ಮನೆಗಳಿಗೂ ಕಾಲಿಡ ಬೇಕಾಗಿ ಬಂತು.

ವೆಂಕಟರಾಯರ ಸ್ವಾಭಿಮಾನಪೂರಿತ ಓಜಸ್ವೀ ಗ್ರಂಥ ಪ್ರಕಟವಾದ ವೇಳೆ ಕನ್ನಡದಲ್ಲಿ ಸ್ವತಂತ್ರವಾದ ಗ್ರಂಥಗಳನ್ನು ಬರೆಯಬೇಕು, ಕನ್ನಡಕ್ಕೆ ತನ್ನದೇ ಆದ ಅಸ್ತಿತ್ವ, ಸಂಸ್ಕೃತಿ, ಭಾಷಾಸೌಷ್ಟವಗಳಿವೆಯೆಂಬ ಅರಿವು ಹಲವರಿಗಾಗುತ್ತ ಬಂದಿತು. ಕವಿಗಳು, ಕತೆಗಾರರು, ಪತ್ರಿಕಾಕರ್ತರು, ಉಪನ್ಯಾಸಕರು ಕನ್ನಡ ಸಂದೇಶವನ್ನು ಒಯ್ಯುತ್ತಾ ಬಂದರು.

ಆದರೆ ಯುರೋಪಿನಲ್ಲಾಗಲಿ, ಕಾಂಟಿನೆಂಟಿನಲ್ಲಾಗಲಿ ಯುದ್ಧ ಸಾಹಿತ್ಯದ ಮೇಲೆ ಯಾವ ಪ್ರಭೆಯನ್ನು ಚೆಲ್ಲಿತೊ ಅದು ಕರ್ನಾಟಕದ ಮೇಲೆ ಬಿತ್ತರಿಸಲಿಲ್ಲ. ಇಲ್ಲಿನ ಪ್ರಯತ್ನ ಕೇವಲ ಸಾಹಿತ್ಯ ಪ್ರಕಾರಗಳನ್ನು ಮಾತ್ರ ಅವಲಂಬಿಸಿ ಕನ್ನಡದಲ್ಲಿ ಬರೆಯಬೇಕು, ಕನ್ನಡ ಪುಸ್ತಕಗಳನ್ನು ಓದಬೇಕು ಎನ್ನುವಷ್ಟಕ್ಕೆ ಮುಕ್ತಾಯವಾಯಿತು. ಯೂರೋಪಿನಲ್ಲಿ ಯುದ್ಧ ವನ್ನು ಪ್ರತಿಭಟಿಸಿದ ರೊಮೇನ್ ರೋಲಾ, ಬರ್ಟ್ರಾಂಡ್ ರಸಲ್, ಷಾ ಮೊದ

ಲಾದ ಸಾಹಿತ್ಯ ವಿಭೂತಿಗಳು ಮಾನವ ಸಂದೇಶವನ್ನು ಸಾರಿ ಯುದ್ಧದ ರಾಕ್ಷಸೀ ತಾಂಡವದ ಹೊರಗೆ ನಿಂತರು. ಕಿಪ್ಲಿಂಗ್, ರೂಪರ್ಟ್ ಬ್ರೂಕ್ಸ್ ಮೊದಲಾದ ಕವಿಗಳೂ ಬ್ರ್ಯಾಂಗ್ವಿನ್, ಆರ್ಪೆನ್ ಮೊದಲಾದ ಕಲಾವಿದರೂ ಯುದ್ಧವನ್ನು ಎತ್ತಿಹಿಡಿದು, ಸ್ವಪಕ್ಷವಾದವನ್ನು ಉಗ್ರವಾಗಿ ಸಾಧಿಸಿದರು. ನೀಷೆಯಂತಹ ಕವಿ-ತತ್ವಜ್ಞಾನಿ ಮಾನವ ಕಲ್ಯಾಣಕ್ಕಾಗಿ ಯುದ್ಧ ಅವಶ್ಯಕವಾದ ವಿಷಯವೆಂದು ಸಾರಿ ಅತಿ-ಮಾನವ ವಾದವನ್ನು ಹೂಡಿ ರಣಕಹಳೆಯ ನಿನಾದ ಜನತೆಯ ಕಿವಿಗಳ ಮೇಲೆ ನಿರಂತರವಾಗಿ ಮೂಡುವಂತೆ ಮಾಡಿದ.

ಯುದ್ಧ ಮಿತ್ರರಾಷ್ಟ್ರಗಳಿಗೆ ಅಭೂತಪೂರ್ವವಾದ ವಿಜಯವನ್ನು ದೊರಕಿಸಿಕೊಟ್ಟಿತು. ಜರ್ಮನಿ ತಲೆಯೆತ್ತದಂತಾಯಿತು. ಕೈಸರ್ ದೇಶ ಪರಿತ್ಯಾಗ ಮಾಡಬೇಕಾಯಿತು. ರಾಜ್ಯಸೂತ್ರ ಮಹಾವೀರ ಫಾನ್‌ಹಿಂಡೆನ್‌ಬರ್ಗ್‌ನ ಕೈಸೇರಿತು. ವರ್ಸೇಲ್ಸ್ ಒಪ್ಪಂದಕ್ಕೆ ಸಹಿಹಾಕಿದ ಜರ್ಮನಿ ಆತ್ಮಗೌರವವನ್ನು ನೀಗಿಕೊಂಡು ತನ್ನ ಸೋಲಿನ ದುಮ್ಮಾನವನ್ನು ಒಳಗೇ ಅನುಭವಿಸುತ್ತಿತ್ತು. ಜರ್ಮನಿ ಸತ್ತರೂ, ನೀಷೆಯ 'ಅತಿ-ಮಾನವ' ಸಾಯಲಿಲ್ಲ. ಅವನಿಗಾಗ ಬಾಲ್ಯದೆಸೆ. ಜರ್ಮನಿಯ ಪುನರುದ್ಧಾರಕ್ಕೆ ನೀಷೆಯೇ ಪ್ರವಾದಿಯೆಂಬ ಕಲ್ಪನೆ ಅವನಿಗೆ ತಲೆದೋರಿತು. 'ಮೈಯಿನ್ ಕೆಂಫ್' ಬರೆದ ಅಡಾಲ್ಫ್ ಹಿಟ್ಲರ್ ತನ್ನ ದೇಶಕ್ಕೊದಗಿದ ವಿಪತ್ತನ್ನು ಹೇಗೆ ಪರಿಹರಿಸಬೇಕೆಂದು ಗುಣಿಸುತ್ತಿದ್ದ. ದಳಿತ ಜನಾಂಗವಾಗಿದ್ದ ಜರ್ಮನಿಯಲ್ಲಿ ಬೆಂಕಿ ಒಳಗೊಳಗೇ ಕವರುತ್ತಿತ್ತು. ಈ ದಾಸ್ಯವನ್ನು ನೀಗಿಕೊಳ್ಳಬೇಕೆಂಬ ಉತ್ಕಟೇಚ್ಛೆಯ ಜತೆಗೆ ಪ್ರತೀಕಾರದ ದಳ್ಳುರಿ ಪ್ರತಿಯೊಬ್ಬ ಜರ್ಮನನನ್ನೂ ವ್ಯಾಪಿಸಿಬಿಟ್ಟಿತು.

೨

ಉರಿ ಸ್ಫೋಟನವಾಯಿತು. ಇಡೀ ಜರ್ಮನ್ ರಾಷ್ಟ್ರ ಹಿಟ್ಲರನ ನಾಯಕತ್ವದ ಕೆಳಗೆ ಮಹಾ ಬಲಿದಾನಕ್ಕೆ ಸಿದ್ಧವಾಯಿತು. ಜಗಜ್ಜೇತನಾಗಿ ಇತಿಹಾಸದ ಪುಟಗಳನ್ನು ತನ್ನ ಶೌರ್ಯ, ಸಾಹಸಗಳಿಂದ ತುಂಬಬೇಕೆಂಬ ಮಹತ್ವಾಕಾಂಕ್ಷೆ ಹಿಟ್ಲರನನ್ನು ಆವರಿಸಿತು. ಈ ಧೂಮಕೇತು ಜರ್ಮನಿಯ

ಸರ್ವಾಧಿಕಾರಿಯನಾದ. ಕಳೆದ ಯುದ್ಧದಲ್ಲಿ ರಾಷ್ಟ್ರದ ಆರ್ಥಿಕ ದುರ್ದಶೆಗೆ ಕಾರಣರಾದ ಜ್ಯೂಜನರಗಳನ್ನು ತನ್ನ ಮಹಾಯಜ್ಞಕ್ಕೆ ಬಲಿಗೊಟ್ಟ; ಮಿತವಾದಿಗಳಾಗಿದ್ದ ತನ್ನ ಬಂಧುಮಿತ್ರರನ್ನೇ ನಿಷ್ಕರುಣೆಯಿಂದ ತುಂಡರಿಸಿದ. ಇಡೀ ಯೂರೋಪಿನ ರಾಷ್ಟ್ರಗಳನ್ನೆಲ್ಲಾ ಕಬಳಿಸುತ್ತ ಬಂದು ತನ್ನಂತೆಯೇ ರಾಜ್ಯದಾಹದಿಂದ ತಪ್ತರಾಗಿದ್ದ ಜಪಾನಿಯರನ್ನೂ ಇಟಾಲಿಯನ್ನರನ್ನೂ ಕೂಡಿಸಿಕೊಂಡ. ಪ್ರಳಯದ ಕಹಳೆಯನ್ನೂದಿದ, ಜಗತ್ತನ್ನೇ ರಕ್ತಶೋಷಿತವನ್ನಾಗಿ ಮಾಡಿ, ಮಾನವತ್ವದ ಮೇಲೆ ಸಮರ ಸನ್ನಾಹ ಮಾಡಿಬಿಟ್ಟ.

ಕಳೆದ ಮಹಾ ಯುದ್ಧದಲ್ಲಿ ಅವಲಂಬಿಸಿದ್ದ ಆಲಸ್ಯ ಪ್ರವೃತ್ತಿಯನ್ನು ಹಿಂದೂಸ್ಥಾನ ತಳೆಯುವುದಕ್ಕೆ ಸಾಧ್ಯವಿಲ್ಲವಾಯಿತು. ಲಕ್ಷಾವಧಿ ಭಾರತೀಯರು ಮಿತ್ರಪಕ್ಷದ ಬಲವಾಗಿ ನಿಂತು ಆತ್ಮಾರ್ಪಣ ಮಾಡಿದರು. ಸಿಂಗಾಪುರ, ಕೊಲಂಬೋ, ಬರ್ಮ, ಕಲ್ಕತ್ತಾ ನಗರಗಳ ಮೇಲೆ ಕೆಂಡದ ಕಾರ್ಮಳೆಯಾಯಿತು. ದೇಶದಲ್ಲೆಲ್ಲಾ ಅಶಾಂತಿ ಸಾರ್ವತ್ರಿಕವಾಗಿ ಹರಡಿತು. ಪ್ರಕೃತಿಶ್ರೀಯ ಆಡುಂಬೊಲವಾದ ನಾಡಿನ ಮಕ್ಕಳು ಅನ್ನವಿಲ್ಲದೆ ಬೀದಿ ಬೀದಿಗಳಲ್ಲಿ ಸಾಯುವ ಪಾಡು ಬಂತು. ಗಜ್ಜುಗ, ಗೋಲಿ, ಬಂಗರ, ಜಾರುಗುಪ್ಪೆಗಳಲ್ಲಿ ಆಲಿಪ್ತರಾಗಿರಬೇಕಾದ ಮಕ್ಕಳು ಎ. ಆರ್. ಪಿ.ಯ ಪ್ರಮಾದಿಗಳಾಗುತ್ತ ಬಂದರು. ತುಳಸೀಪೂಜೆ, ಅನ್ನಪೂರ್ಣಾಷ್ಟಕಗಳನ್ನು ಹೇಳಿಕೊಂಡು ಹೊರಬಾಗಿಲನ್ನು ದಾಟದಿದ್ದ ಹೆಣ್ಣುಮಕ್ಕಳು ಬೆಳಿಗ್ಗೆಯಿಂದ ಸಂಜೆಯವರೆಗೂ ಕೈಯಲ್ಲಿ ಚೀಲಹಿಡಿದು ಅಕ್ಕಿ ಜೋಳಗೆ ಅಲೆಯಬೇಕಾಗಿ ಬಂತು. ವ್ಯಾಪಕವಾದ ಆಹಾರ, ಬಟ್ಟೆಯ ಪ್ರಶ್ನೆ ಅನೇಕ ಜನ ರಾಕ್ಷಸೀ ವರ್ತಕರನ್ನು ಕೋಟ್ಯಾಧೀಶ್ವರರನ್ನಾಗಿ ಮಾಡಿತು. ಕಳೆದ ಯುದ್ಧದಲ್ಲಿ ಯಾವುದು ಕೆಲ ಕಾಲ ಮಾತ್ರ ಆರ್ಥಿಕ ಪ್ರಶ್ನೆಯನ್ನಾಗಿ ನಮ್ಮನ್ನು ಪೀಡಿಸಿ ಮಾಯವಾಯಿತೋ ಅದೇ ಈಗ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಜೀವಧಾರಣ ಪ್ರಶ್ನೆಗಳಾಗಿ ನಿಂತುಬಿಟ್ಟಿವೆ. ಇದು ಕೇವಲ ಸಮಸ್ಯೆಯ ಬಾಲಪೆಸೆಯ ಚಿತ್ರ ! ಮುಂದಿದೆ ಮಾರೀಹಬ್ಬ !!

೧೯೧೪ರ ಯುದ್ಧಾನಂತರ ಹಿಂದೂಸ್ಥಾನದಲ್ಲಿ ಕೆಲವು ವಿಶೇಷ ಮಾರ್ಪಾಟುಗಳಾದವು. ಯಾವ ಕಾಂಗ್ರೆಸ್ ಸಂಸ್ಥೆ ಅದುವರೆಗೆ ಕೇವಲ ಹರಟೆಯ ಮಂದಿರವಾಗಿ, ರಾಜಭಕ್ತಿ ನಿರ್ಣಯಮಾಡುವ ಒಂದು

ಸಾಂಪ್ರದಾಯಿಕ ಸಂಘವಾಗಿತ್ತೋ ಅದು ವಿರಾಟ್ ಶಕ್ತಿಯನ್ನು ತಳೆದು ನಿಂತಿತು. ನಾಡ ಸೇವೆಗೆ ಸಹಸ್ರಾರು ಜನ ಕಲಿತವರು, ತಿಳಿದವರು ನಿಂತರು. ಅಳತೆಯಿಲ್ಲದಷ್ಟು ಬಲಿದಾನವಾಯಿತು. ನವಸ್ಫೂರ್ತಿ ಕೇವಲ ವಿದ್ಯಾವಂತರಿಗೆ ಅಡಕವಾಗದೆ ನಿರಕ್ಷರಕುಕ್ಷಿಗಳಾದ ಹಳ್ಳಿಗರು, ಕೂಲಿಗಾರರು, ಹೆಂಗಸರು ಇವರಿಗೂ ಮುಟ್ಟಿತು. ದೇಶದಲ್ಲಿ ಸ್ವದೇಶಾಭಿಮಾನಿಗಳ ಒಂದು ಬಲವಾದ ಪಡೆಯೇರ್ಪಟ್ಟಿತು. ಕಾಂಗ್ರೆಸ್ಸಿಗೆ ಬೆಂಬಲವಾಗಿ ನಿಂತು ವಿಚಾರ ಸ್ವಾತಂತ್ರ್ಯವನ್ನು ಪಸರಿಸಿದ ಕೀರ್ತಿ ವೃತ್ತಪತ್ರಿಕಾರರದು. ಕನ್ನಡ ನಾಡಿನಲ್ಲಿ ತಾಯಿನಾಡು, ವಿಶ್ವಕರ್ನಾಟಕ, ಪ್ರಜಾಮತ, ಸಂಯುಕ್ತ ಕರ್ನಾಟಕ ಪತ್ರಿಕೆಗಳು ಈ ಸ್ವಾತಂತ್ರ್ಯ ಸಂದೇಶವನ್ನು ದೇಶದ ಮೂಲೆಮೂಲೆಗಳಲ್ಲಿ ಪ್ರಸಾರ ಮಾಡಿದವು. ಹದಿನೈದು ವರ್ಷಗಳಲ್ಲಿ ಕನ್ನಡ ಪತ್ರಿಕಾ ಪ್ರಪಂಚ ಆಶ್ಚರ್ಯಕರವಾದ ಮುನ್ನಡೆಯಿಟ್ಟು ದೇಶದ ಪ್ರಥಮ ವಿದ್ಯಾಸಂಸ್ಥೆಯಾಯಿತು. ಕಾಂಗ್ರೆಸ್ಸಿನ ಸ್ವತಂತ್ರ್ಯ ವಿಚಾರ, ಪತ್ರಿಕೆಗಳ ನಿರಂತರ ಪ್ರಸಾರ ಇವುಗಳಿಂದ ಸುಪ್ತ ಕರ್ನಾಟಕವೂ ಜಾಗೃತವಾಗಿ ಅಂತರರಾಷ್ಟ್ರೀಯ ಪರಿಸ್ಥಿತಿಯ ಸೆರಗಿಗೆ ಸಿಕ್ಕಿಕೊಂಡಿರುವ ತನ್ನ ಸ್ಥಿತಿಗತಿಗಳನ್ನು ವಿಚಾರಮಾಡತೊಡಗಿತು.

ಪತ್ರಿಕಾ ಪ್ರಪಂಚದಲ್ಲಿ ಕಂಡುಬಂದ ಕ್ರಾಂತಿ ಸಾಹಿತ್ಯ ಪ್ರಪಂಚಕ್ಕೆ ಪ್ರವೇಶಿಸಲಿಲ್ಲ. ಇದರ ಕಾರಣ ಸಾಹಿತ್ಯದ ಹಿರಿಯ ಆಚಾರ್ಯರೆನಿಸಿಕೊಂಡಿದ್ದವರೆಲ್ಲಾ ಕಳೆದ ಯುಗಮಾನಕ್ಕೆ ಸೇರಿದವರಾದುದರಿಂದ ಎಂದೆನ್ನಬಹುದು. ಸಂಸ್ಕೃತ ಕನ್ನಡವಾದ, ನ–ಣ ಪ್ರಶ್ನೆಗಳಲ್ಲಿ ಅವರ ವೇಳೆ ಪಾಂಡಿತ್ಯ ಶ್ರಮಗಳೆಲ್ಲಾ ವ್ಯಯವಾಗುತ್ತ ಬಂದಿತು. ಆಚಾರ್ಯರು ಹಿಂದಿನ ಪೀಳಿಗೆಯವರು ಎಂಬುದಲ್ಲದೆ ಅವರ ಸರ್ವಾಧೀನತೆಯೂ ಈ ಸ್ಥಾವರ ಸ್ಥಿತಿಗೆ ಕಾರಣಗಳಾಗಿವೆ. ರಜತ ಮಹೋತ್ಸವವನ್ನು ಆಚರಿಸಿರುವ ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆ ಇಂದಿಗೂ ಮೈಸೂರು ಸರ್ಕಾರದ ಆಶ್ರಯದ ಬಲದ ಮೇಲೇ ನಡೆದಿದೆ. ಅದು ಹತ್ತು ಜನ ಸ್ವ-ಪ್ರಕಾಶ ಪ್ರೇಮಿಗಳ ಆವರಣದಿಂದ ಜನತೆಯ ಬಳಿಗಿನ್ನೂ ಬಂದಿಲ್ಲ. ಜನತೆ ಯಾವಾಗಲೂ ಜಡ ವಸ್ತುವೇ. ಅದು ತಾನೇ ತಾನಾಗಿ ಪರಿಷತ್ತಿನಂತಹ ಸಂಸ್ಥೆಗೆ ನೆರವಾಗಬೇಕೆಂದು ಬಯಸುವದು ಮೌಢ್ಯ. ಕಾಂಗ್ರೆಸ್ ಕೂಡ ಒಂದು ಕಾಲದಲ್ಲಿ ಇದೇ ಮನೋಭಾವವನ್ನು ತಳೆದಿತ್ತು. ಒಂದು ಸುಂದರವಾದ ಭವನದಲ್ಲಿ

ಸೇರುವದು, ಉಪನ್ಯಾಸಗಳ ಸುರಿಮಳೆ ಮಾಡುವದು, ಸಾರ್ವಭೌಮರಿಗೆ ರಾಜಭಕ್ತಿಯನ್ನು ಸಮರ್ಪಿಸುವ ನಿರ್ಣಯಮಾಡಿ ಚದುರುವದು. ಮುಂದಿನ ವರ್ಷದ ತನಕ ಯಾರಿಗೂ ಕಾಂಗ್ರೆಸ್ ಯೋಚನೆಯೇ ಇರುತ್ತಿರಲಿಲ್ಲ. ಆದರೆ ಅಹಮದಾಬಾದ್ ಕಾಂಗ್ರೆಸ್ಸಿನ ತರುವಾಯ ಅದರ ಸ್ವರೂಪ ಬದಲಾಯಿಸಿತು. ಗಾಂಧಿ, ನೆಹರು, ಸಿ. ಆರ್. ದಾಸ್, ಲಜಪತರಾಯ್, ಆಜಾದ್, ಬೋಸ್ ಮೊದಲಾದ ವೀರರು ಜನತೆಯ ಮನೆಬಾಗಿಲಿಗೆ ಕಾಂಗ್ರೆಸ್ ಸಂದೇಶವನ್ನೊಯ್ದರು. ತಮ್ಮ ಶ್ರೀಮಂತಿಕೆ, ಸಾಮಾಜಿಕ ಪ್ರತಿಷ್ಠೆ, ವಿದ್ಯಾಗೌರವಗಳನ್ನೆಲ್ಲಾ ಬದಿಗೊತ್ತಿ ಹಳ್ಳಿಗರೊಂದಿಗೆ, ಕೂಲಿಕಾರರೊಂದಿಗೆ ಸಮಭಾವನೆಯಿಂದ ವರ್ತಿಸತೊಡಗಿದರು. ಕಾಂಗ್ರೆಸ್ ಪುಷ್ಟಿಗೊಂಡು ದೇಶದ ಪ್ರತಿನಿಧಿಯಾಯಿತು. ದಲಿತರ, ನೊಂದವರ, ದೀನರ ವಾಣಿಯಾಯಿತು.

ಕಾಂಗ್ರೆಸ್ಸಿನ ವ್ಯಾಪ್ತಿಯನ್ನು ಕಾರ್ಯಬಾಹುಳ್ಯತೆಯನ್ನು ಪರಿಷತ್ತಿನಂತಹ ಸಂಸ್ಥೆ ಚಾಚೂ ಬಿಡದಂತೆ ಅನುಸರಿಸಬೇಕೆಂಬ ನಿಯಮವಿಲ್ಲ. ಸಾಧ್ಯವೂ ಅಲ್ಲ. ಆದರೆ ಪರಿಷತ್ತಿನ ಪ್ರಕೃತ ಪರಿಸ್ಥಿತಿಯಲ್ಲಿ ಅದಕ್ಕೆ ಆಗಿಂದಾಗ್ಗೆ ಕೆಲವು ಸಮಸ್ಯೆಗಳೇಳುತ್ತವೆ. ಪರಿಷತ್ತನ್ನು ನಿಜವಾಗಿ ಸಾರ್ವಜನಿಕ ವಿದ್ಯಾಕೇಂದ್ರವನ್ನಾಗಿ ಮಾಡಬೇಕಾದರೆ ಅದರೊಳಗೆ ಕಾಂಗ್ರೆಸ್ಸಿನವರು, ಕಾಮಗಾರರು, ಸಾಮ್ಯವಾದಿಗಳು, ಕಮ್ಯೂನಿಸ್ಟರು ಎಲ್ಲರಿಗೂ ಪ್ರಾತಿನಿಧ್ಯವಿರಬೇಕಾಗುತ್ತದೆ. ಕರ್ನಾಟಕದ ವಿವಿಧ ಭಾಗಗಳ ಪ್ರಾತಿನಿಧ್ಯವಲ್ಲದೆ ವಿವಿಧ ವಿಚಾರವಾದಿಗಳ ಪ್ರಾತಿನಿಧ್ಯವೂ ಒಂದು ಸಾರ್ವಜನಿಕ ಸಂಸ್ಥೆಗೆ ಅತ್ಯಗತ್ಯ. ಆಗಲೇ ಅದಕ್ಕೆ ಪ್ರಾಣವಾಯು ಸಂಚಾರವಾಗುವದು. ಆಗಲೇ ಅದಕ್ಕೆ ನಾಡಿನ ಜೀವಂತ ಸಮಸ್ಯೆಗಳನ್ನೆದುರಿಸುವ ಧೈರ್ಯ ಸ್ಥೈರ್ಯ ಮೂಡುವದು. ಜನತೆಗೂ, ಸರ್ಕಾರಕ್ಕೂ ಘರ್ಷಣೆಯೊದಗಿದ ಸಂದರ್ಭಗಳಲ್ಲಿ ಪರಿಷತ್ತು ಅನುಸರಿಸಬೇಕಾದ ನೀತಿಯೇನು? ಅಧಿಕಾರವರ್ಗದ ಬಾಲ ಬಡಿಯುತ್ತ ವಿದ್ಯಾರ್ಥಿಗಳ ಮೇಲೆ, ಕೂಲಿಗಾರರ ಮೇಲೆ ಗುಂಡಿನ ಮಳೆಕರೆದುದು ನ್ಯಾಯವೆಂದು ಭುಜತಟ್ಟುವದೇ ಅಥವಾ ಆ ರಾಕ್ಷಸೀ ವರ್ತನೆಯನ್ನು ಖಡಾಖಂಡಿತವಾಗಿ ಖಂಡಿಸುವದೇ?

ಪರಿಷತ್ತು ಸರ್ಕಾರದ ವಿರೋಧವಾಗಿ ನಿಂತು ಒಂದು ಹೋರಾಡುವ ಸಂಸ್ಥೆಯಾಗಬೇಕೆಂದು ಈ ವಾದವನ್ನು ನಾವು ಹೂಡುತ್ತಿಲ್ಲ. ಕಾಂಗ್ರೆಸ್

ಹೇಗೆ ಭಾರತೀಯ ಜನಜೀವನದ ಮೂಲಸೂತ್ರಗಳನ್ನು ವಹಿಸಿಕೊಂಡು ಅದರ ರಾಜಕೀಯ ಜೀವನವನ್ನು ನಡೆಸುತ್ತಿದೆಯೋ ಹಾಗೆ ಪರಿಷತ್ತು ಸಾಹಿತ್ಯ, ಸಂಜೀವನಗಳನ್ನು ನಡೆಸಬೇಕು. ದೇಶದಲ್ಲಿ ವ್ಯಾಪಿಸಿರುವ ವಿಚಾರ ಲಹರಿಯನ್ನು ಅಳವಡಿಸಿಕೊಂಡು ಅದು ಕ್ರಿಯಾತ್ಮಕ ಮಾರ್ಗದಲ್ಲಿ ಹೋಗುವಂತೆ ಯತ್ನಿಸಬೇಕಾದುದು ಅದರ ಕರ್ತವ್ಯ. ವಿಚಾರಕ್ಕೂ, ಸರ್ಕಾರದ ಸೂತ್ರಗಳಿಗೂ ಯಾವಾಗಲೂ ತಾಳಮೇಳ ದೊರೆಯುವುದಿಲ್ಲ. ಕನ್ನಡ ನಾಡಿನ ಸಾಹಿತ್ಯವಾಹಿನಿಯ ಪ್ರತಿಬಿಂಬವಾಗಿ ಪರಿಷತ್ತು ಇರಬೇಕೆಂದು ನಮ್ಮ ಹಿರಿಹಂಬಲ.

ಯುದ್ಧದ ಪರಿಸ್ಥಿತಿಯನ್ನು ತಿಳಿಸುವ ಸಾಹಿತ್ಯ ಜನಕ್ಕೆ ಅತ್ಯವಶ್ಯಕವಾಗಿ ಬೇಕಾಗಿದೆ. ಯುದ್ಧದ ಘೋರಸ್ಥಿತಿಯಿಂದ ಅಧೀರರಾಗದಂತೆ ಅವರು ಜೀವ ಧರಿಸಿರುವದಕ್ಕೆ ಲಲಿತ ಸಾಹಿತ್ಯವೂ ಬೇಕಾಗಿದೆ. ಸಾಹಿತಿಗಳು ಉಳಿಯಬೇಕಾದರೆ ಅವರು ತಮ್ಮ ಭಾವವಿಚಾರಗಳನ್ನು ಉಚ್ಚರಿಸಬೇಕು. ಸಾರ್ವಜನಿಕ ಸಂಸ್ಥೆಯಾದ ಪರಿಷತ್ತು ಸಾರ್ವಜನಿಕರ ಹಿತಸುಖಗಳಿಗೆ ಅವಶ್ಯಕವಾದ ಯಾವ ಕಾರ್ಯಕ್ರಮವನ್ನು ಕೈಗೊಂಡಿದೆ?

ಈ ಪರಿಸ್ಥಿತಿ ಹೆಚ್ಚು ದಿನವಿರಲಾರದು, ನಮ್ಮ ತಲೆಯ ಮೇಲೆ ಯುದ್ಧದ ಮೋಡಗಳು ಕವಿಯುತ್ತಿವೆ. ಇಂದಲ್ಲ ನಾಳೆ ಸಾರ್ವತ್ರಿಕ ಸೈನ್ಯ ಸಂಗ್ರಹ (Mobilisation) ಆರಂಭವಾಗಿಯೇ ಆಗುತ್ತದೆ. ಆಗ ಸಾಹಿತಿ ತನ್ನ ದೇಶಕ್ಕಾಗಿ ಬಲಿದಾನ ಅರ್ಪಿಸಿಕೊಳ್ಳಬೇಕಾದ ಕಾಲ ಸನ್ನಿಹಿತವಾಗುತ್ತಿದೆ. ಎಲ್ಲಕ್ಕೂ ದೇಶ ಮೊದಲು; ಅದು ಉಳಿದರೆ ಸಾಹಿತ್ಯ, ಕಲೆ, ಕೈಗಾರಿಕೆಗಳು ವರ್ಧಿಸುತ್ತವೆ. ಪರಿಷತ್ತು ತನ್ನ ನಿದ್ದೆಯಿಂದ ಎಚ್ಚರಗೊಳ್ಳಬೇಕು. ನಾಳಿನ ಆ 'ಮಹಾಭಾರತ'ಕ್ಕೆ ಇಂದಿನಿಂದ ಅಭಿಮನ್ಯುಗಳನ್ನು ಅಳವಡಿಸಬೇಕು. ದಾಸ್ಯಶೃಂಖಲೆಯಿಂದ ಬದ್ಧರಾಗಿರುವ ನಾವು ಏನು ಸೃಷ್ಟಿಮಾಡಿದರೂ ಅದಕ್ಕೆ ಒಂದು ಹಿಡಿ ಬೂದಿಗಿಂತ ಬೆಲೆಯಿಲ್ಲ. ನಮ್ಮ ಘನ ಮೇಧಾವಿಗಳು ಠಾಕೂರ, ಬೋಸ್, ರಾಮನ್, ರಾಧಾಕೃಷ್ಣನ್, ನಂದಲಾಲ ಬಸು, ಶಾಮಾಶಾಸ್ತ್ರಿ ದಾಸರೆಂಬುದನ್ನು ಮರೆಯಬಾರದು. ಸ್ವಕಲ್ಪಿತ ಮಾಯಾಪ್ರಪಂಚದೊಳಗೆ ನಾವು ಮೆರೆಯಬಹುದು. ಆದರೆ ಹೊರಗೆ ಎಲ್ಲರ ಕಣ್ಣಿನಲ್ಲಿಯೂ ನಾವು ಒಂದು ದಾಸ ಜನಾಂಗ. ನಮ್ಮ ನಾಡು ಪರತಂತ್ರ ಬಂಧನದಿಂದ

ಪಾರಾಗುವತನಕ ನಾವು ಏನು ನಿರ್ಮಾಣಮಾಡಿದರೂ ಅದು ನಿರರ್ಥಕ. ಸ್ವತಂತ್ರ ಭಾರತದಲ್ಲಿ ಹಳ್ಳಿಯ ಹುಂಬರು ಕೂಡ ಹಳಿಯಬೀಡು, ಬೇಲೂರುಗಳನ್ನು ನಿರ್ಮಾಣಮಾಡಬಲ್ಲರು. ಹಳ್ಳಿಯ ಹುಂಬರು ಅಥೆಲೊ, ಶಾಕುಂತಲ, ಡಿವೈನ್ ಕಾಮಿಡಿ, ಅಶ್ವತ್ಥಾಮನ್‌ಗಳನ್ನು ಬರೆಯಬಲ್ಲರು.

ನಾವು ಮನುಷ್ಯರಂತೆ ಬಾಳಬೇಕು ; ಸ್ವತಂತ್ರವಾಗಿ ಉಸಿರಾಡಬೇಕು ; ಈ ದ್ವಿಪಾದ ಪಶುಜೀವನವನ್ನು ಕೊನೆಗಾಣಿಸಬೇಕು. ಈ ಶಿಖಂಡಿ ಬಾಳಿಗಿಂತ ಹರಕಾರಿ ಮಾಡಿಕೊಳ್ಳುವುದು ಲೇಸು. ಭಾರತಿಗೆ ಈ ೩೫ ಕೋಟಿ ಶಿಖಂಡಿ ಶಿಶುಗಳು ಬೇಕಾಗಿಲ್ಲ. ಈ ಪ್ರೇತ ಸಮೂಹದಿಂದ ಆಕೆಗೆ ತೃಪ್ತಿಯಾಗಲಿಲ್ಲ, ಪುಲಕೇಶಿ, ಪ್ರತಾಪ, ಅಕ್ಬರ್, ರಣಜಿತ್‌ಸಿಂಗ್, ರಾಣಿ ಲಕ್ಷ್ಮೀಬಾಯಿ, ಬೆಳವಡಿ ಮಲ್ಲಮ್ಮರಂತಹ ಹತ್ತು ಮಕ್ಕಳಿದ್ದರೆ ಸಾಕು.

ಸಾಹಿತಿಗಳು ತಾವೊಂದು ಪ್ರತ್ಯೇಕ ಜನಾಂಗ. ಸ್ವರ್ಗದಿಂದ ಇಳಿದು ಬಂದ ದೇವತೆಗಳು ಎಂಬ ಮೌಢ್ಯವನ್ನು ತೊರೆಯಬೇಕು. ನಮ್ಮ ತಪಸ್ಸು, ತೇಜಸ್ಸು, ತ್ಯಾಗಗಳೆಲ್ಲಾ ದೇಶಕ್ಕೆ ಮೀಸಲಾಗಲಿ! ನಮ್ಮ ಲೇಖನಿಯಿಂದ ಜಾಗೃತಿಯ ಸ್ವಾತಂತ್ರ್ಯದ ಅಗ್ನಿಧಾರೆ ಪ್ರವಹಿಸಲಿ. ನಮ್ಮ ವಾಙ್ಮಯ ಕುರಿಗಳನ್ನು ಹರಿಗಳನ್ನಾಗಿರಸಲಿ! ನರರನ್ನು ಹರರನ್ನಾಗಿ ಮಾಡಲಿ! ಇದೇ ಸಾಹಿತಿಯ ಆತ್ಮ ಸಾಕ್ಷಾತ್ಕಾರ—ಇದೇ ಕವಿಯ ಆತ್ಮ ಸಂಸ್ಕಾರ. ಕನ್ನಡ ಕವಿ ಕೇಸರಿ ಕಲಿಕೇಸರಿಯಾಗಲಿ. ಅವನು ವೀರರ ಮೆಚ್ಚು, ವೈರಿ ಹೃದಯಗಳ ಬಿಚ್ಚಾಗಲಿ ಎಂಬುದೇ ಕನ್ನಡತಾಯಿಯ ಮೊರೆ.

ನಮ್ಮ ಸಾಹಿತ್ಯ – ಅದರ ಗುರಿ

ನಾಡಿಗೇರ ಕೃಷ್ಣರಾಯ

ಸಾಹಿತ್ಯ ಸ್ವರೂಪವನ್ನು ಅನೇಕರು ಅನೇಕ ಬಗೆಯಾಗಿ ವಿವರಿಸಿದ್ದಾರೆ. ನಮ್ಮ ದೇಶದಲ್ಲೇ ಭರತನಿಂದ ಹಿಡಿದು ಇಲ್ಲಿಯ ವರೆಗೆ ಸಾಹಿತ್ಯ ವಿಷಯದಲ್ಲಿ ಅನೇಕ ಚರ್ಚೆಗಳಾಗಿವೆ. ಅಲ್ಲದೆ ಕಾವ್ಯದಲ್ಲಿ ಅಲಂಕಾರ ಮುಖ್ಯವೆಂದು, ಗುಣ ಮುಖ್ಯವೆಂದು, ರಸ ಮುಖ್ಯವೆಂದು, ಒಬ್ಬೊಬ್ಬರು ಒಂದೊಂದು ಬಗೆಯಾಗಿ ಹೇಳಿದ್ದಾರೆ. ಸಾಹಿತ್ಯವೆಂಬುದು ಎಷ್ಟು ಗಹನವಾದ ವಿಷಯ ಮತ್ತು ಒಂದು ಮಾತಿನಲ್ಲಿ ಹೇಳಿ ಮುಗಿಸಿಬಿಡುವಷ್ಟು ಅಲ್ಲವೆಂಬುದು ಇದರಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಆನಂದವರ್ಧನನ ಧ್ವನ್ಯಾಲೋಕ ಮತ್ತು ಅದಕ್ಕೆ ಅಭಿನವ ಗುಪ್ತಾಚಾರ್ಯನ ಟೀಕೆ ಹೊರಟ ಮೇಲೆ ಕಾವ್ಯದಲ್ಲಿ ರಸವೇ ಪ್ರಾಣ ಧ್ವನಿಯೆ ಆತ್ಮವೆಂಬುದು ಬಹುಮಟ್ಟಿಗೆ ಖಚಿತವಾಯಿತು. ನಮ್ಮ ಜನರ ಅಭಿಪ್ರಾಯವೆ ಅದು ಎಂದು ಹೇಳುವಂತಾಯಿತು.

ಧ್ವನಿಯೆಂದರೆ ಕಾವ್ಯದಲ್ಲಿ ಹೇಳದೆ ಇದ್ದು ಸೂಚಿತವಾದುದು. (That which is not expressed but suggested) ಅದನ್ನು ವಿಶದವಾಗಿ ವಿವರಿಸಲು ಇಲ್ಲಿ ಸಾಧ್ಯವಿಲ್ಲ. ಒಂದು ಉದಾಹರಣೆಯಿಂದ ತಿಳಿಸಿ ಮುಂದೆ ಹೋಗುವೆವು. ಶ್ರೀರಾಮನಿಗೆ ಪಟ್ಟಾಭಿಷೇಕವಾಗುವುದು ಎಂದು ವಸಿಷ್ಠ ಋಷಿ ಸೀತೆಗೆ ತಿಳಿಸಿದಾಗ, “ಸೀತೆಯ ಮಾವನವರು ಕ್ಷೇಮ ತಾನೆ?” ಎಂದು ಕೇಳುತ್ತಾಳೆ. ಇಲ್ಲಿ ಧ್ವನಿ ಇದೆ. ಸೀತೆಯ ಪ್ರಶ್ನೆಯಲ್ಲಿ ಆಕೆಯ ಗುಣ ಸೂಚಿತವಾಗುತ್ತದೆ.

ಇನ್ನು ಕಾವ್ಯದ ಗುರಿಯ ವಿಚಾರ.

‘ಕಾವ್ಯಂ ಯಶಸೇಽರ್ಥಕೃತೇ ವ್ಯವಹಾರ ವಿದೇ ಶಿವೇತರ ಕ್ಷತಯೇ
ಸದ್ಯಃ ಪರನಿರ್ವೃತಯೇ ಕಾಂತಾಸಮ್ಮಿತತಯೋಪದೇಶಯುಜೇ’

ಎಂದು ಇಷ್ಟೊಂದು ಕಾರಣಗಳನ್ನು ಹೇಳಿದ್ದರೂ ‘ಸದ್ಯಃ ಪರನಿರ್ವೃತಯೇ’ (ತಾತ್ಕಾಲಿಕ ಆನಂದಕ್ಕಾಗಿ) ಎಂಬುದನ್ನು ಎಲ್ಲರೂ ಒಪ್ಪಿದ್ದಾರೆ. ‘ಕಾವ್ಯಮಾನಂದಮಯಂ’ ‘ಹಾಡು ಹಿಗ್ಗಿಗಾಗಿ.’

ಇಷ್ಟೆಲ್ಲ 'ಹಳಬರ' ಅಭಿಪ್ರಾಯ. ಈಗಿನ ಜನರ ಅಭಿಪ್ರಾಯ ವೇನು? ಸಾಹಿತ್ಯವೆಂದರೇನು? ಅವರ ಗುರಿ ಏನು? ಇಲ್ಲಿನವರೆಗಿದ್ದ ಅಭಿಪ್ರಾಯಗಳನ್ನು ಕೆಲವರು ಒಪ್ಪದೆ 'ಪ್ರಗತಿಶೀಲ ಸಾಹಿತ್ಯ' 'ಕ್ರಾಂತಿಕಾರಕ' ಮುಂತಾಗಿ ಹೇಳಿ ಗೊಂದಲವನ್ನೇಕೆ ಎಬ್ಬಿಸಿದ್ದಾರೆ. ಇದೇ ಜಟಿಲ ಪ್ರಶ್ನೆ.

ಪ್ರಗತಿ ಎನ್ನುವುದು ದೃಷ್ಟಿಯಲ್ಲಿಯೂ ಇದೆ, ಸೃಷ್ಟಿಯಲ್ಲಿಯೂ ಇದೆ. ದೃಷ್ಟಿಯಂತೆ ಸೃಷ್ಟಿ, ಭಾವದಂತೆ ದೇವ. ದೃಷ್ಟಿ ಹೊಸದಾದರೂ ಕಣ್ಣು ಹಳೆಯದೆ. ಪ್ರಗತಿಶೀಲ ಸಾಹಿತಿಗಳ ಗುರಿ ಮುಂದಾದರೂ ಹಿಂದನ್ನು ಅವರು ಮರೆಯುವಂತಿಲ್ಲ. ಹಿಂದಿನ ಸಾಹಿತ್ಯವನ್ನು ಮರೆತರೆ ಎಷ್ಟು ದೂರ ಮುಂದುವರಿದಿದ್ದೇವೆಂದು ಅರಿಯುವದಾದರೂ ಹೇಗೆ? ಹಿಂದು (past) ಎನ್ನುವುದು ಬೆನ್ನುಮೂಳೆಯಂತೆ ಆಧಾರಸ್ತಂಭವಾಗಿರಬೇಕು. ಹೃದಯ ಮುಖ್ಯವಾದರೂ, ಮುಂದಿನ ಬೆಳವಣಿಗೆಗೆ ಕಾರಣವಾದರೂ ಹಿಂದಿನ ಬೆನ್ನುಮೂಳೆಯನ್ನು ಮರೆಯುವಂತಿಲ್ಲ. ಮುಂದುವರಿಯಲು ಪ್ರಯತ್ನಿಸೋಣ. ಎಲ್ಲಿಂದ ಹೊರಟೆವು ಎನ್ನುವುದು ಜ್ಞಾಪಕದಲ್ಲಿರಲಿ. ಎಷ್ಟು ಮುಂದುವರಿದಿರುವೆವು ಎನ್ನುವುದು ತಿಳಿಯುತ್ತದೆ.

"ಯಾವ ಬರಹವು ನಮ್ಮನ್ನು ನಾವು ಮರೆಯುವಂತೆ ಮಾಡಿ ತಲ್ಲೀನತೆ ಮತ್ತು ತದಾತ್ಮ್ಯವನ್ನು ಹೊಂದುವಂತೆ ಮಾಡುತ್ತದೆಯೋ ಅದೇ ನಿಜವಾದ ಸಾಹಿತ್ಯ" ಎಂಬುದಾಗಿ ಆರ್ನಾಲ್ಡ್ ಬೆನೆಟ್‌ರವರು ಒಂದೆಡೆ ಹೇಳಿದ್ದಾರೆ. ನಮ್ಮಲ್ಲಿಯೂ ಅನೇಕರು ಇದೇ ಅಭಿಪ್ರಾಯ ಪಟ್ಟಿದ್ದಾರೆ. 'ಕಾವ್ಯಯೋಗ' ವೆಂದು ಸಾಹಿತಿಗಳೊಬ್ಬರು ಕರೆದಿದ್ದಾರೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ನಮ್ಮನ್ನು ನಾವು ಮರೆತು, ತಲ್ಲೀನರಾಗಿ, ತದಾತ್ಮ್ಯವನ್ನು ಹೊಂದುವಂತಿಲ್ಲ. ಎಲ್ಲೆಲ್ಲಿಯೂ ಕೂಳಿನ ಕಳಕಳಿಯ ಕೂಗು, ಅವಿದ್ಯೆಯ ಅಂಧಕಾರ, ರಣಭೈರವಿಯ ಅಟ್ಟಹಾಸದ ಭೀಕರ ನೃತ್ಯ, ಮಾನವಕೋಟಿಯ ಹತ್ಯಾಕಾಂಡ—ಇವು ನಮ್ಮನ್ನು ದುಸ್ವಪ್ನಗಳಂತೆ ಬಾಧಿಸುತ್ತಲಿವೆ. ಕಾಲಂದಿಗೆಯ ಕಿರುಗೆಜ್ಜೆಗಳ ಸಪ್ಪಳವಾಗಲೀ, ಕೋಗಿಲೆಯ ಇಂಚರವಾಗಲೀ, ಜುಳುಜುಳು ಮಂಜುಳ ನಾದದಿಂದ ಮುಂದರಿಯುವ ಮಂದಾಕಿನಿಯಾಗಲೀ, ಮಂದಗಮನೆಯರ ಮಂದಹಾಸವಾಗಲೀ ನಮ್ಮನ್ನು ಕ್ಷಣಕಾಲ ಸ್ವಪ್ನಲೋಕದಲ್ಲಿ ವಿಹರಿಸುವಂತೆ ಮಾಡಿದರೂ, ಒಡನೆಯೆ ನೈಜಲೋಕಕ್ಕೆ ಎಳೆತಂದು ನಗ್ನಸತ್ಯವನ್ನು ಎದುರಿ

ಸುವಂತೆ ಮಾಡುತ್ತವೆ. ನಮ್ಮ ಮುಂದೆ ಅನೇಕ ತೊಡಕಾದ ಬೃಹತ್ ಪ್ರಶ್ನೆಗಳು ಉದ್ಭವಿಸುತ್ತವೆ. ಸಾಹಿತ್ಯದ ಮೂಲಕ ಅವುಗಳನ್ನು ಬಿಡಿಸುವಂತೆ ಮಾಡಬೇಕು. ಇಂತಹ ಸಾಹಿತ್ಯದ ಪ್ರಚಾರ ಆಗುವಂತೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

* * *

ಜಗತ್ತಿನ ನಾಗರಿಕ ರಾಷ್ಟ್ರಗಳೊಂದಿಗೆ ನಮ್ಮನ್ನು ನಾವು ತುಲನಮಾಡಿಕೊಂಡಲ್ಲಿ ನಾವು ಎಲ್ಲ ದೃಷ್ಟಿಯಲ್ಲಿಯೂ ಎಷ್ಟು ಹಿಂದೆ ಇದ್ದೇವೆಂಬ ಅಂಶವು ಮೈಯಲ್ಲಿ ನಡಕವನ್ನುಂಟುಮಾಡುತ್ತೆ. ಮುಖ್ಯವಾಗಿ ಈಗ ನಾವು ದಾಸ್ಯ ಜನಾಂಗದವರು. ನಮ್ಮ ಸ್ವಾತಂತ್ರ್ಯಕ್ಕೆ ಸಂಚಕಾರ ಬಂದು ಒಂದೂವರೆ ಶತಮಾನಗಳು ಉರುಳಿ ಹೋಗಿವೆ. ಚೇತನಹೀನವಾದ ಜನಾಂಗಕ್ಕೆ ಜೀವಕಳೆ ತುಂಬುವಂತಹ ಸಾಹಿತ್ಯ ಇಂದು ನಮಗೆ ಬೇಕಾಗಿದೆ. ಚೀಣ ಮತ್ತು ರಷ್ಯಾ ದೇಶಗಳು ನಾವು ಈಗಿರುವಂತಹ ಸ್ಥಿತಿಯಲ್ಲಿ ಒಂದು ಕಾಲಕ್ಕೆ ಇದ್ದವು. ನಾವು ಈಗ ಎದುರಿಸುತ್ತಿರುವ ಬೃಹದ್ ಸಮಸ್ಯೆಗಳನ್ನು ಅವರು ಬಿಡಿಸಿದರು. ಹೇಗೆ? ಸಾಹಿತ್ಯವನ್ನು ಕೈಗೋಲಾಗಿ ತೆಗೆದುಕೊಂಡು ಈ ಪ್ರಶ್ನೆ ಬಿಡಿಸಲು ಹೊರಟರು. ದೇಶದ ಆರ್ಥಿಕ, ಸಾಮಾಜಿಕ, ರಾಜಕೀಯ ಇತ್ಯಾದಿ ಜನಜೀವನಕ್ಕೆ ಸಂಬಂಧಿಸಿದ ವಿಷಯಗಳನ್ನು ಜನಸಾಮಾನ್ಯರ ಕೈಗೆ ನಿಲುಕುವಂತೆ ಮಾಡಿದರು.

ಸಾಹಿತ್ಯದಿಂದ ರಾಜಕೀಯವು ಒಂದು ಹರದಾರಿ ಆಚೆ ನಿಲ್ಲಬೇಕೆಂದು ಕೆಲವರ ವಾದ. ರಾಜಕೀಯವು ಸಮಾಜದ ಬೆನ್ನೆಲುಬು. ಸಮಾಜವು ಪ್ರತಿಯೊಬ್ಬ ವ್ಯಕ್ತಿಯ ಹಿನ್ನೆಲೆಯಲ್ಲಿದೆ. ಜನಜೀವನ ಮತ್ತು ಅದರ ಅನುಭವಗಳನ್ನು ಸಾಹಿತ್ಯ ಪ್ರತಿಬಿಂಬಿಸುತ್ತೆ. ಹೀಗೆ, ರಾಜಕೀಯ ಮತ್ತು ಸಾಮಾಜಿಕ ವಿಷಯಗಳು ನಮ್ಮ ನಿತ್ಯ ಜೀವನದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿರುವಾಗ, ಈ ವಿಷಯಗಳನ್ನು ಬಿಟ್ಟುಕೊಟ್ಟು ಆಚೆಗೆ ತಳ್ಳಿ, ಬರೆದಿರುವ ಸಾಹಿತ್ಯ ನಮ್ಮ ಜೀವನದ ರನ್ನಗನ್ನಡಿಯಾಗಲು ಹೇಗೆ ತಾನೆ ಸಾಧ್ಯ?

ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸಲು ಅಥವಾ ಅದರ ರಕ್ಷಣೆ ಮಾಡಲು ಮಾತ್ರವೇ ಸಾಹಿತ್ಯದ ನೆರವನ್ನು ತೆಗೆದುಕೊಳ್ಳಬೇಕೆಂದು ಇತ್ತೀಚಿನ ಯುಗದವರ ವಾದ. ಈ ವಾದದಲ್ಲಿಯೂ ಹುರುಳಿಲ್ಲ. ಮಹಾ

ಭಾರತವಲ್ಲಿ ರಾಜಕೀಯವಿಲ್ಲವೆ ಇನ್ನೇನಿದೆ? ಗೀತೆಯಲ್ಲಿ ಸಹ ರಾಜಕೀಯವು ತುಂಬಿ ತುಳುಕಾಡಿರುತ್ತದೆ. ಜನಜೀವನ ಸರ್ವತೋಮುಖವಾಗಿ ಬೆಳೆಯುತ್ತ ಬಂದರೆ ಸಂಸ್ಕೃತಿಯು ಛಾಯಾನುವರ್ತಿಯಾಗಿ ಹಿಂಬಾಲಿಸುವುದರಲ್ಲಿ ಸಂಶಯವೇ ಇಲ್ಲ. ಅರ್ಥಾತ್ ನಮ್ಮ ಜೀವನವನ್ನು ಎಲ್ಲ ರೀತಿಯಲ್ಲೂ ಉತ್ತಮಗೊಳಿಸಿಕೊಳ್ಳುವುದು ಸಂಸ್ಕೃತಿಯ ಲಕ್ಷಣವಲ್ಲದೆ ಮತ್ತೇನು?

ನೀರು ನಿಂತಲ್ಲೆ ನಿಂತರೆ ಕೊಳೆತು ನಾರುತ್ತೆ. ಅದು ಮುಂದು ಮುಂದು ಹರಿಯುತ್ತಿದ್ದರೇ ಚೆನ್ನು. ನಮ್ಮ ಸಾಹಿತ್ಯದ ಬೆಳವಣಿಗೆ ಮುಂದು ವರಿಯದೆ ಒಂದೆಡೆಯೇ ನಿಂತಿದ್ದರಿಂದ ಅದರ ದುರ್ನಾತವನ್ನು ಸಹಿಸಲಾರದೆ 'ಪ್ರಗತಿಶೀಲ' ಸಾಹಿತ್ಯದ ಆರಂಭವಾಗಬೇಕಾಯಿತು. ಇಂದಿನ ಸಾಹಿತ್ಯ ದಲ್ಲಿ ಚೈತನ್ಯವಿಲ್ಲ, ನೀರಸವಾದುದೆಂದು ಅದನ್ನು ಬರೆಯುವವರಿಗೂ ತಿಳಿದಿದೆ. ಆದರೆ ಹೇಳಲು ಬಿಗುಮಾನ. ಅವರು ಒಂದು ತರಹೆ ಮೂಕ ಸಂಕಟದಿಂದ ತ್ರಸ್ತರಾಗಿದ್ದಾರೆ. ಈ ಸಾಹಿತ್ಯವನ್ನು ಓದುವವರ ಗೋಳೂ ಅಷ್ಟೇ. ಅವರ ದಾಹ ಅಡಗಿಲ್ಲ. ಏನೋ ಬೇಕು; ಬೇಕೆಂಬುದು ಏನು ಎಂದು ಅವರಿಗೆ ತಿಳಿಯದು. ಪ್ರಗತಿ ಪರ ಸಾಹಿತ್ಯ ಅಲ್ಲಲ್ಲಿ ಹೊರಬಿದ್ದಾಗ ಅದನ್ನು ಜನ ಆದರದಿಂದ ಬರಮಾಡಿಕೊಂಡಿದ್ದಾರೆ. ಮತ ಮತ್ತು ಧರ್ಮ ಗ್ರಂಥಗಳಂತೆ ಅವನ್ನು ಅಭ್ಯಸಿಸಿದ್ದಾರೆ. ಹೀಗಿದ್ದೂ ಇದರ ಹಿರಿಮೆಗೆ ಬೆಲೆ ಕೊಡದಿರುವುದು ಆತ್ಮವಂಚನೆಯ ಪರಮಾವಧಿಯೆಂದು ಹೇಳದೆ ಬೇರೆ ವಿಧಿಯಿಲ್ಲ.

ಎಲ್ಲ ದೇಶಗಳ ಇತಿಹಾಸವನ್ನು ಸ್ವಲ್ಪ ಸೂಕ್ಷ್ಮವಾಗಿ ನೋಡಿದಲ್ಲಿ ಒಂದು ಅಂಶವು ಸ್ಪಷ್ಟಪಡುತ್ತೆ. ಏನೆಂದರೆ, ಆಯಾ ಕಾಲದವರು ಅಂದಿನ ದೇಶ, ಕಾಲ, ಮಾನ, ಸ್ಥಿತಿಗತಿಗನುಸಾರವಾಗಿ ಬದಲಾವಣೆಗಳನ್ನು ಅಳವಡಿಸಿಕೊಳ್ಳುತ್ತ ಬಂದಿದ್ದಾರೆ. ಇದು ಮಾನವ ಧರ್ಮವೆಂದರೆ ತಪ್ಪಾಗಲಾರದು. ಪ್ರಗತಿಶೀಲ ಸಾಹಿತ್ಯವು ಸಹ ಅಂತಹ ಹೆಚ್ಚಿನ ಬದಲಾವಣೆಗಳಲ್ಲಿ ಒಂದು. ಇಂದಿನ ಬೇಡಿಕೆ ಗಳನ್ನು ಅನುಲಕ್ಷಿಸಿ ಅದು ತಲೆ ಎತ್ತಬೇಕಾಯಿತು. ಇದನ್ನು ವಿರೋಧಿಸುವ ವರು, 'ಹೊಸದು' ಎಂಬುದನ್ನೆಲ್ಲ ವಿರೋಧಿಸಬೇಕೆಂಬ ಧರ್ಮದಿಂದ ವಿರೋ ಧಿಸುತ್ತಿದ್ದಾರೆಯೇ ಹೊರತು, ಬೇರೆ ಇನ್ನಾವ ಕಾರಣವೂ ನಮಗೆ ಕಾಣ ಬರುವುದಿಲ್ಲ.

'ಪ್ರಗತಿಶೀಲ'ದ ಬಗ್ಗೆ ಅಲ್ಲಲ್ಲಿ ವಿರೋಧದ ಗುಸುಗುಸು ಕೇಳ

ಬಂದಿದೆ. ಮುಖ್ಯವಾಗಿ ಅವರು ಈ ಹೊಸ ಚಳವಳಿಯ ಬಗ್ಗೆ ಒಡ್ಡುವ ಕಾರಣಗಳು ಯಾವುಯಾವೆಂದರೆ ; ಅವರು (ಪ್ರಗತಿಶೀಲರು) ಕಮ್ಯುನಿಸ್ಟ್ ಸಂಗಡದವರ ಪ್ರಭಾವಕ್ಕೆ ಸಿಕ್ಕಿಬಿದ್ದಿದ್ದಾರೆ. ಸ್ಫೂರ್ತಿಗಾಗಿ ಯಾವಾಗಲೂ ರಷ್ಯಾದ ಕಡೆ ನೋಡುತ್ತಾರೆ; ಅವರು ನಾಸ್ತಿಕರು. ಅನೇಕ ದೊಡ್ಡ ದೊಡ್ಡ ಸಂಘ ಸಂಸ್ಥೆಗಳಲ್ಲಿ ಬೇರೆ ಬೇರೆ ವಿಚಾರಗಳ ಜನಗಳಿರುತ್ತಾರೆ. ಹೀಗೆಂದ ಮಾತ್ರಕ್ಕೆ ಅವರು ಸಂಸ್ಥೆಯಲ್ಲಿರಲು ಅರ್ಹತೆ ಪಡೆದಿಲ್ಲವೆಂದು ಹೇಳಲು ಆಗುವುದಿಲ್ಲ. ಪ್ರಗತಿಶೀಲ ಸಂಸ್ಥೆಯಲ್ಲಿ ಕಾಂಗ್ರೆಸ್, ಕಮ್ಯೂನಿಸ್ಟ್, ಲೀಗ್, ಹಿಂದೂ ಮಹಾಸಭಾ ಮತ್ತು ಪಕ್ಷಾತೀತರೂ ಸಹ ಸೇರಿದ್ದಾರೆ. ಅವರೆಲ್ಲರ ಗುರಿ ಒಂದೇ. ಈ ಕಾರಣದಿಂದ ಪ್ರಗತಿಶೀಲವು ಕಮ್ಯೂನಿಸ್ಟ್ ಪಕ್ಷದವರ ಸ್ವತ್ತೆಂದು ಹೇಳುವುದು ಮೂರ್ಖತನವೇ ಸರಿ. ಇನ್ನು ಎರಡನೆಯ ವಾದವನ್ನು ತೆಗೆದುಕೊಳ್ಳೋಣ. ಶೇಕಡ ೧೦ ರಂತೆ ಅಕ್ಷರತೆ ಇದ್ದ ರಷ್ಯಾ, ನೂರಕ್ಕೆ ನೂರರಷ್ಟು ಅಕ್ಷರತೆಯನ್ನು ಗಳಿಸಿಕೊಂಡಿರುವುದು ಆಧುನಿಕ ಕಾಲದ ಪವಾಡಗಳಲ್ಲಿ ಒಂದಾಗಿದೆ. ಮೊದಲಿದ್ದ ರಷ್ಯಾದ ಸ್ಥಿತಿಯಲ್ಲಿಯೇ ಈಗ ನಾವಿದ್ದೇವೆ. ಅವರು ಅಂತಹ ತೀವ್ರ ಮುನ್ನಡೆಯನ್ನು ಹೇಗೆ ಸಾಧಿಸಿದರೆಂಬ ಬಗ್ಗೆ ನಾವು ಅತ್ತ ಕಡೆ ಕೊಂಚ ನಮ್ಮ ಗಮನವನ್ನು ಹೊರಳಿಸಬೇಕಾಗುತ್ತದೆ. ಇದರಂತೆ, ಪ್ರಜಾಪ್ರಭುತ್ವಕ್ಕೆ ಸಂಬಂಧಪಟ್ಟ ವಿಷಯಗಳನ್ನು ತಿಳಿದುಕೊಳ್ಳುವಾಗ ನಾವು ಅಮೆರಿಕದ ಕಡೆ ತಿರುಗುವುದು ಅನಿವಾರ್ಯವಾದುದು. ಈಗ ರಷ್ಯಾದ ಕಡೆ ನಾವು ಸ್ಫೂರ್ತಿಗಾಗಿ ನೋಡುತ್ತಿದ್ದೇವೆಂದು ಹೇಳುವವರು ಅಂದು, ನಾವು ಅಮೆರಿಕದ ಕಡೆ ಸ್ಫೂರ್ತಿಗಾಗಿ ಇಣಿಕಿ ಹಾಕುತ್ತಿದ್ದೆವೆಂದು ಹೇಳುವುದು ಸ್ವಾಭಾವಿಕವಾದುದು.

ಇನ್ನು ಮೂರನೆಯ ವಾದದಲ್ಲಿ ಹುರುಳೇ ಇಲ್ಲ. ಮನುಷ್ಯ ಆಸ್ತಿಕನಾಗುವುದು ಅಥವಾ ನಾಸ್ತಿಕನಾಗುವುದು ಅದು ಅವನ ವೈಯಕ್ತಿಕ ಪ್ರಶ್ನೆ. ಪ್ರಗತಿಶೀಲ ಸಂಸ್ಥೆಗೂ ಅದಕ್ಕೂ ಯಾವ ಸಂಬಂಧವೂ ಇಲ್ಲ.

ನಾಡಿಗಾಗಿ ದುಡಿಯಬೇಕೆಂದು ಹಂಬಲಿಸುವ ಕೆಲ ಬರಹಗಾರರು ಪ್ರಗತಿಶೀಲ ಸಾಹಿತ್ಯ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ನಾಡು ನುಡಿಗಳ ಉದ್ಧಾರವೇ ಅದರ ಗುರಿ. ಪ್ರತಿ ಬರಹವೂ ಜನತೆಯನ್ನು ಜಾಗೃತಗೊಳಿಸುವ ಕೆಲಸವನ್ನು ಮಾಡಬೇಕು. ಜನಸಾಮಾನ್ಯರು, ದಲಿತರು, ಇಂದಿನ

ಆಗುಹೋಗುಗಳನ್ನು ಅರಿತು ಅವರ ಜೀವನವನ್ನು ಸುಗಮಗೊಳಿಸಿಕೊಂಡು ನಾಡಿನ ಸತ್ಪ್ರಜೆಗಳಾಗಬೇಕೆಂಬುದೇ ನಮ್ಮ ಗುರಿ. ಅಂತಹ ಸಾಹಿತ್ಯವನ್ನು ಸೃಷ್ಟಿಸಬೇಕೆಂಬುದೇ ನಮ್ಮ ಹಂಬಲ.

ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲತೆ!

ಅರ್ಚಿಕ ವೆಂಕಟೇಶ

ನಾವು ಬಾಳುವ ಅಖಿಲ ವಿಶ್ವವೇ ಪ್ರಗತಿಗಾಮಿಯಾಗಿದೆ. ಇದರ ಒಂದೊಂದು ಅಣುವಿನಲ್ಲೂ ಅದರ ಕುರುಹನ್ನು ಕಾಣಬಹುದು. ಅರೆನಿಮಿಷ ದಿಂದ ಯುಗ-ಕಲ್ಪಗಳ ಕಾಲಾವಧಿಯಲ್ಲೂ ಈ ಪ್ರಗತಿ ಅವ್ಯಾಹತವಾಗಿ-ಅಪ್ರತಿಹತವಾಗಿ ನಡೆದುಕೊಂಡು ಬಂದಿದೆ; ಬರುವುದು. ಇದು ಊಹೆ ಎಂದು ಯಾರೂ ಭಾವಿಸಬಾರದು. ಬೇಕಾದರೆ ಬೇಡವೆನ್ನುವಷ್ಟು ಸಾಧಾರಣವಾಗಿ ಉದಾಹರಣೆಗಳನ್ನು ಕೊಡಬಹುದು.

ಸ್ವಭಾವತಃ ಪ್ರಗತಿಶೀಲವಾದ ಪ್ರಪಂಚದಲ್ಲಿ ಮಾನವ ಜೀವಿ ಬಹು ಬುದ್ಧಿವಂತ ಎಂಬುದರಲ್ಲಿ ವಾದವಿಲ್ಲ. ಅದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಅಮೀಬ (Amoeba) ದಿಂದ ಮನುಷ್ಯನವರೆಗಾದ ಜೀವನದ ಉತ್ಕ್ರಾಂತಿಯ ಇತಿಹಾಸವನ್ನೇ ನೋಡಿದರೂ ಸೃಷ್ಟಿ ಸರ್ವದಾ ಎಲ್ಲದರಲ್ಲೂ ತನ್ನ ಕೈವಾಡವನ್ನು ತೋರಿಸಿ ಪ್ರಗತಿಗೆ ಪ್ರತಿಬಿಂಬ ಎಂದು ಸ್ಪಷ್ಟಪಡಿಸುತ್ತದೆ. ತೀರ ಕಾಡುಸ್ಥಿತಿಯಿಂದ ಮುಂದುವರಿದು ಬಂದ ಇಂದಿನ ಸುಸಂಸ್ಕೃತ ವರ್ಗ ಈ ಮಟ್ಟದಲ್ಲಿರಬೇಕಾದರೆ ಬಾಳ ಹೋರಾಟದಲ್ಲಿ ಎಂಥ ಘೋರ ಸಂಗ್ರಾಮ ನಡೆದಿರಬೇಕು? ಅರ್ಹವಾದುದೇ ಬದುಕಬೇಕೆಂಬ ಸೃಷ್ಟಿಯ ನಿಯಮ ಮಾನವ ಜೀವಿತಕ್ಕೆ ತಾನೆ ಹೇಗೆ ಅಪವಾದವಾದೀತು! ಒಂದು ದೃಷ್ಟಿಯಲ್ಲಿ ಕಠೋರವಾದ ಈ ನಿಯಮಕ್ಕೆ ಒಳಗಾಗಿಯೇ ಬುದ್ಧಿಪ್ರಧಾನನಾದ ಮಾನವ ಮುಂದುವರೆಯುತ್ತ ಬಂದ. ಅವನ ಸಾಂಸ್ಕೃತಿಕ ದೃಷ್ಟಿ ವಿಶಾಲವಾಗುತ್ತ, ಸ್ಪಷ್ಟವಾಗುತ್ತ ಬಂದಹಾಗೆಲ್ಲ ಅವನ ಅಂತಸ್ತು ಬಹಳ ಮೇಲಕ್ಕೆ ಬರಲಾರಂಭಿಸಿತು. ಈ ಪ್ರಯತ್ನ ಸಂತತವಾಗಿ ನಡೆದಿದೆ; ಇನ್ನೂ ನಡೆಯಲಿದೆ. ಈ ರೀತಿಯಾಗಿ ಸುಭದ್ರ ತಳಹದಿಯನ್ನು ಕಲ್ಪಿಸಿ-ನಿರ್ಮಿಸಿಕೊಂಡ ಮಾನವ ಜೀವಿ ಬಾಳಿನಲ್ಲೂ ಬಂಧುರತೆಯನ್ನು ಕಂಡು ಅದನ್ನು ಕುರಿತು ಧ್ವನಿಯೆತ್ತಲಾರಂಭಿಸಿದ. ತನ್ನ ಸಾಮಾಜಿಕ, ಆರ್ಥಿಕ, ರಾಜಕೀಯ, ನೈತಿಕ ದೃಷ್ಟಿಯ ಜೊತೆಯಲ್ಲಿಯೇ ತನ್ನ ಆತ್ಮಕತೆಯ ವಿಷಯವನ್ನು ನೆನೆದುಕೊಳ್ಳಲಾರಂಭಿಸಿದ. ಇದು ಜೀವನದೊಂದಿಗೆ ಬೆಳೆದು ಬಂದುದು; ಜೀವನವನ್ನು ಬಿಟ್ಟಿಲ್ಲ. ಹೀಗಾಗಿ ಜೀವನದ ತಿರುಳೆಲ್ಲ ಮಾನವನ ಬರೆವಣಿಗೆಯಲ್ಲೂ ಮೂಡಿತು. ಬರ

ಬರುತ್ತ ಅದು ಅನೇಕರ ದೃಷ್ಟಿಗೆ ಬಿತ್ತು. ಅದುವೇ ಸಾಹಿತ್ಯವೆಂದು ಮುಂದೆ ತೀರ್ಮಾನವಾಯಿತು.

ಹೀಗೆ ಮನುಷ್ಯನಿಂದ ಉತ್ಪತ್ತಿಯಾದ ಧ್ವನಿ ಅಥವಾ ಬಾಯುಸಿರು ಜಗತ್ತಿನ ಒಂದಂಶವಾದ ಇವನಿಂದ ಅವರ ತತ್ವಕ್ಕೆ ಹೇಗೆ ವಿರುದ್ಧವಾದೀತು! ಅಂತೆಯೇ ಮಾನವ ನಿರ್ಮಿತ ಸಾಹಿತ್ಯವೂ ಕೂಡ ಅತಿ ಪ್ರಾಚೀನಕಾಲದಿಂದಲೇ ಪ್ರಗತಿ ಪಥವನ್ನೈದಿ ಮುಂದುವರಿಯಿತು. ಇದರ ಸ್ಪಷ್ಟವಾದ ಉಲ್ಲೇಖಗಳನ್ನು ಕಾಣಬೇಕಾದರೆ ಶ್ರಮಪೂರಿತವಾದ ಸಾಹಿತ್ಯಾಭ್ಯಾಸ ಅತ್ಯವಶ್ಯ. ಅಂಥ ಜಿಜ್ಞಾಸು ನನ್ನ ಮೇಲಿನ ಮಾತನ್ನು ಮನ ಕಾಣುವುದು ರೂಪಾಯಿಗೆ ಹದಿನಾರಾಣೆ ಸತ್ಯ.

ಬೇಕಾದರೆ ಇದಕ್ಕೊಂದು ಸೂಚನೆಯನ್ನು ಇಲ್ಲಿ ಹೇಳಿದರೆ ಸೂಕ್ತವೆನಿಸಬಹುದು. ಬಹು ದೀರ್ಘಕಾಲೀನ ಸಂಸ್ಕೃತಿಯೆಂದು ಪರಿಗಣಿತವಾಗಿರುವ ನಮ್ಮ ಭಾರತೀಯ ಸಂಸ್ಕೃತಿಯನ್ನೇ ನೋಡಿ. ಅಲ್ಲಿನ ಅಪ್ರತಿಹತವಾದ ವೇದ-ಉಪನಿಷತ್ತುಗಳನ್ನೇ ನೋಡಿ! ಎಲ್ಲೆಲ್ಲೂ ವಿಜಯೋನ್ಮಾದದ ಕೆಚ್ಚು ನೆಚ್ಚು ಕಂಡುಬರುವುದು. ಉಪನಿಷತ್ತಿನ ಅನೇಕ ಮಂತ್ರಗಳನ್ನು ಓದುವಾಗ ಎಂಥವನಿಗಾದರೂ ಸ್ಫೂರ್ತಿಬರುವುದು. "ನಾನು ಬಲಿಷ್ಠನು. ನನ್ನ ತೋಳುಗಳು ಬಲಿಷ್ಠವಾಗಿವೆ. ನನ್ನ ಕಣ್ಣುಗಳು, ಮಿಾಸೆಯು ಕಾಂತಿಯುತವಾಗಿವೆ. ನಾನು ಧೃಡಕಾಯನು." ಎಂಬ ಮಿಾಮಾಂಸೆಯೇ ಅಲ್ಲಿ ಕಂಡುಬರುವುದು. ಆರ್ಯರು ಹೇಗೆ ಹೇಗೆ ವಿಜಯಿಗಳಾಗುತ್ತ ಬಂದರೋ ಅದರ ಛಾಯೆಯೆಲ್ಲ ವೇದೋಪನಿಷತ್ಸಾಹಿತ್ಯದಲ್ಲಿ ತೋರುವುದು. ಈ ಪರಿಣಾಮ–ಪ್ರಗತಿದೃಷ್ಟಿ–ಮುಂದೆ ಬಂದ ಎಲ್ಲ ಸಾಹಿತ್ಯಕಾರರಮೇಲೂ ಆಗದೆ ಹೋಗಲಿಲ್ಲ.

ಸಂಸ್ಕೃತ ಸಾಹಿತ್ಯದ ಸಾರ್ವಭೌಮನೆಂದು ನಾವು ಗೌರವಿಸುವ ಕಾಲಿದಾಸನೂ ಅಲ್ಲದೆ ಭವಭೂತಿ, ಬಾಣ, ದಂಡಿ, ಭಾರವಿ ಮೊದಲಾದ ಮಹಾ ಮಹಾ ಕವಿಗಳೂ ಕೂಡ ಸರ್ವದಾ ಪ್ರಗತಿಯನ್ನೇ ತಮ್ಮ ಕಾವ್ಯದೃಷ್ಟಿಯಲ್ಲಿಟ್ಟುಕೊಂಡಿದ್ದರು. ಇದಕ್ಕೆ ಕಾಲಿದಾಸನು ಹೇಳಿದ:—

"ಪುರಾಣಮಿತ್ಯೇವನಸಾಧು ಸರ್ವಂ" ಎಂಬ ಮಾತು ಸಾಕ್ಷಿ. ಭವಭೂತಿ ಕೂಡ:—

"ಕಾಲೋಹ್ಯಯಂ ನಿರವಧಿರ್ವಿಪುಲಾಚ ಪೃಥ್ವೀ" ಎಂದು ಹೇಳಿ ನಾನು ಈಗಿನ ನಾಲ್ಕಾರು ಮಂದಿಯನ್ನು ಮೆಚ್ಚಿಸದಿದ್ದರೂ ಹೋಗಲಿ ನನ್ನ ಕಾವ್ಯ ವನ್ನು ಓದುವವರು ಈ ವಿಶಾಲ ವಿಶ್ವದಲ್ಲಿ ಬರುತ್ತಾರೆ ಎಂದ. ಇದು ತ್ರಿಕಾಲಾ ಬಾಧಿತವಾದ ಮಾತು.

ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಯಲ್ಲೂ ಇದೇ ರೀತಿಯ ಪರಿವರ್ತನೆ ಗಳು ಕಾಲಕಾಲಕ್ಕೆ ಆಗಿವೆ. ಗ್ರೀಕ್, ರೋಮನ್ ಸಂಸ್ಕೃತಿಗಳ ಇತಿ ಹಾಸವೇ ಇದಕ್ಕೆ ಸಾಕ್ಷಿ. ಇದರಂತೆ ಧಾರ್ಮಿಕ, ರಾಜಕೀಯ ಕ್ಷೇತ್ರಗಳಲ್ಲೂ ಕಾಲಕಾಲಕ್ಕೆ ಬದಲಾವಣೆಯಾಗುತ್ತ ಬಂದಿದೆ.

ಕನ್ನಡ ಸಾಹಿತ್ಯ ಚರಿತ್ರೆಯೂ ಈ ನಿಯಮಕ್ಕೆ ಹೇಗೆ ಹೊರಗಾಗಿ ಉಳಿದೀತು. ಇಲ್ಲೂ ಕಾಲ ಕಾಲಕ್ಕೆ ಕ್ರಾಂತಿಕಾರೀ ಕವಿಗಳು ಉದಯಿಸಿ ಪ್ರಗತಿ ಪತಾಕೆಯನ್ನು ಎತ್ತಿಹಿಡಿದಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಸ್ಥೂಲವಾಗಿ ನೋಡಿದರೂ ಸಾಕು ಈ ಮಾತು ಸತ್ಯವೆಂದು ಮನಕಾಣುವುದು.

ಕನ್ನಡದಲ್ಲಿ ಮೊತ್ತಮೊದಲಿಗೆ ಸಾಹಿತ್ಯ ಬೆಳವಣಿಗೆಯ ಸಸಿಗೆ ನೀರೆರೆ ದವರು ಪ್ರಾಯಿಕವಾಗಿ ಜೈನರು. ಅವರು ಮತಪ್ರಚಾರ ದೃಷ್ಟಿಯಿಂದ ಸಾಹಿತ್ಯ ನಿರ್ಮಾಣಮಾಡಿದರೂ ಅವರು ಅನುಸರಿಸಿದುದು ಸಂಸ್ಕೃತ ಮಹಾಕವಿಗಳ ಸಂಪ್ರದಾಯವನ್ನು. ಈ ಬಗೆಯ ಕಾವ್ಯ ನಿರ್ಮಾಣ ಕನ್ನಡ ದಲ್ಲಾದರೂ ಅದು ಕೇವಲ ಪಂಡಿತರ ಸೊತ್ತಾಯಿತು. ಆದರೆ ಕನ್ನಡದ ದೃಷ್ಟಿಯಲ್ಲಿ ಅಂದಿನ ಪ್ರಗತಿ ಕಾವ್ಯ ಅದು ಎಂದು ನಾವು ಹೇಳಬಹುದು. ಮುಂದೆ ಬರಬರುತ್ತ ಈ ದೃಷ್ಟಿಯಲ್ಲಿ ಮಾರ್ಪಾಡಾಗುತ್ತ ಬಂದಿತು. ಇದನ್ನು ಈ ಮುಂದೆ ಬಂದ ಕೃತಿಗಳಿಂದ ನಿರ್ಧರಿಸಬಹುದು.

ಕನ್ನಡ ಸಾಹಿತ್ಯದಲ್ಲಿ ಪೂರ್ಣ ಪ್ರಗತಿಯನ್ನು ತೋರಿದ ಮೊದಲ ಕವಿ ಎಂದು ಹೇಳಬೇಕಾದರೆ ನಯಸೇನನ ಹೆಸರು ಮುಂದೆ ಬರುತ್ತದೆ. ಈತ ಸಕ್ಕದದ ಅನುಕರಣೆ ಮಾಡುವವರಿಗೂ, ಹಿಂದಿನ ಜಾಡನ್ನೇ ಹಿಡಿದವರಿಗೂ ತನ್ನ ಕಾವ್ಯ ಪ್ರಾರಂಭದಲ್ಲಿ ಚೆನ್ನಾಗಿ ಏಟುಕೊಟ್ಟು, ತನ್ನ ವ್ಯಕ್ತಿ ಪ್ರಭಾವ ವನ್ನು ಸಾಹಿತ್ಯದ ಕೆಚ್ಚನ್ನೂ ತೋರಿದ್ದಾನೆ. ಈತನ ಧರ್ಮಾಮೃತದಲ್ಲಿ ಇವನ ಪ್ರಗತಿ ಪ್ರಿಯತೆಯನ್ನು ಚೆನ್ನಾಗಿ ಕಾಣಬಹುದು. ಮುಂದೆ ಬಂದ ಷಟ್ಪದಿ ಕವಿಗಳಲ್ಲಿ-ಷಟ್ಪದಿ ಜನಕನೆಂದು ಹೆಸರಾಂತ ಮಹಾಕವಿ, ರಸಿಕ,

ಪಂಡಿತ ರಾಘವಾಂಕನ ಕೆಲವು ಕೃತಿಗಳಲ್ಲಿ ನಾವು ಪ್ರಗತಿ ಪ್ರಭೆಯನ್ನು ಕಾ
ಬಹುದು. ಒಂದು ದೃಷ್ಟಿಯಲ್ಲಿ ರಾಜಶೇಖರ ಕರ್ತೃ ಷಡಕ್ಷರಿಯೂ, ರಾ
ವಾಂಕನ ತಂದೆ (ಗುರು) ಹಂಪೆಯ ಹರಿಹರ ಇವರೂ ಪ್ರಗತಿಶೀಲರೆ
ಹರಿಹರನು ಚಂಪೂ ಶೈಲಿಯನ್ನು ಬಿಟ್ಟು ರಗಳೆಗಳನ್ನು ಪ್ರಾರಂಭಿಸಿದ
ಅವನು "ರಗಳೆ" ಕವಿಯೆಂದು ಜನ ನಿಂದಿಸಿದರು. ಆಗ ತನ್ನ ಪಾಂಡಿ
ವನ್ನೂ ಕವಿತಾಶಕ್ತಿಯನ್ನೂ ಜನಕ್ಕೆ ಮನದಟ್ಟುಮಾಡಿಕೊಡುವ ಉದ್ದೇ
ದಿಂದ ಹರಿಹರ "ಗಿರಿಜಾಕಲ್ಯಾಣ"ವನ್ನು ಬರೆಯಬೇಕಾಯಿತು. ಹೀ
ಪ್ರಗತಿ ಅಖಂಡವಾಗಿ ನಡೆದುಕೊಂಡು ಬಂದಿದೆ ನಮ್ಮ ಹಳಗನ್ನ
ಸಾಹಿತ್ಯದಲ್ಲಿ.

ತದನಂತರ ಪ್ರಗತಿ ಸಾಹಿತ್ಯದ ಪುತ್ಥಳಿಯೆಂದು ಹೇಳಬಹುದಾದರೆ—
ಹಿಂಡನಗಲಿದ ಗಜ - ಸರ್ವಜ್ಞ ಕವಿಯನ್ನು ತೋರಬಹುದು. ಈತ
ಜೀವನವೇ ಕ್ರಾಂತಿಯುತವಾದುದು. ಒಬ್ಬರ ಹಂಗಿಲ್ಲದೆ 'ಕರದಿ ಕಪ್ಪ
ಹಿಡಿದು-ಹರನೆಂಬ ದೈವವನಂಬಿ - ಹಿರಿನಾಡಿನಲಿ ಸಂಚರಿಸಿ' ತನ್ನ ಸಿಡಿಲ
ನುಡಿಗಳಿಂದ ಅಖಂಡ ಕರ್ಣಾಟಕವನ್ನೇ ಚೇತರಿಸಿದ ಶಕ್ತಿ, ಸಾಹಸ-ಅದಕ
ಸಲ್ಲಬೇಕಾದ ಅಗ್ರಪೂಜೆ ಎಲ್ಲವೂ ಸರ್ವಜ್ಞನಿಗೆ ಮೀಸಲು. ಒಂದು ದೃಷ್
ಯಲ್ಲಿ ಪಂಪ-ರನ್ನ-ನೇಮಿಚಂದ್ರರು ನಿರ್ಮಿಸಿದ ಸಾಹಿತ್ಯಕ್ಕಿಂತಲೂ ಸರ್ವಜ್ಞ
ಸಾಹಿತ್ಯ ಒಂದು ಹೆಜ್ಜೆ ಮುಂದು. ಸಂಸ್ಕೃತ ಅರ್ಥವಾಗದವರಿಗೆ ಪಂಪ
ರನ್ನರು ಬೇಡ. ಆದರೆ ಸರ್ವಜ್ಞ ಅವರ ನಾಲಗೆಯಲ್ಲಿ ಅನವರತ ನಲಿವ
ಈ ದೃಷ್ಟಿಯಲ್ಲಿ ಪಂಡಿತರ ಸೊತ್ತಾದ ಸಂಸ್ಕೃತಭೂಯಿಷ್ಠ ಸಾಹಿತ್
ಜನದಿಂದ ಒಮ್ಮೆ ಸಂಪೂರ್ಣ ಮರೆಯಾಗಬಹುದು. ಆದರೆ ಸರ್ವಜ್ಞನದ
ಅವರ ಸಾಹಿತ್ಯ. ಅದು ಪ್ರಗತಿಶೀಲ ಸಾಹಿತ್ಯದ ಚಿನ್ಮೂರ್ತಿ.

೧೨ ನೆಯ ಶತಮಾನದಲ್ಲಿನ ಕ್ರಾಂತಿಯನ್ನು ಕನ್ನಡ ಜನ ಎಂದೂ
ಮರೆಯುವಂತಿಲ್ಲ. ಅದು ರಾಜಕೀಯ ದೃಷ್ಟಿಯಿಂದ ಧಾರ್ಮಿಕ ದೃಷ್
ಯಿಂದ ಎಷ್ಟು ಮಹತ್ವವೋ ಅಷ್ಟೇ ಅದೇಕೆ ಅದಕ್ಕೂ ಹೆಚ್ಚಾಗಿ ಸಾಹಿತ್
ದೃಷ್ಟಿಯಿಂದ ಮಹತ್ವವಾದುದು. ಆಗ ಜಗದ್ವಿಭೂತಿ ಭಕ್ತಿಭಂಡಾರಿ ಬಸವಣ್ಣ
ಮತ್ತು ಅನೇಕ ಶಿವಶರಣ ಶರಣೆಯರು ಧಾರ್ಮಿಕ ತತ್ವಗಳ ಪ್ರಸಾರಣೆಗೆ
ಸಾಹಿತ್ಯವನ್ನು ಮುಖ್ಯಾಸ್ತ್ರವನ್ನಾಗಿ ಅಮರ್ತ್ಯಸೀಯ ಸಾಹಿತ್ಯ ಭಂಡಾರವನ್ನು

ನಿರ್ಮಿಸಿದರು. ಇದು ಸಾಹಿತ್ಯದ ಪ್ರಗತಿಶೀಲತೆಯಲ್ಲಿ ಬಹು ಮುಖ್ಯವಾದ ಮಾತು. ಕನ್ನಡ ಬಲ್ಲ ಎಲ್ಲ ಜನ ಧಾರ್ಮಿಕ ತತ್ವಗಳನ್ನು ಅರಿಯಲು ವಚನ ಸಾಹಿತ್ಯ ಸಹಾಯಮಾಡಿತು. ಅದರಿಂದ ಜನತೆಯ ಮೇಲಾದ ಪರಿಣಾಮ ಅಷ್ಟಿಷ್ಟಲ್ಲ. ಮಹಾತ್ಮ ಗೌತಮ ಬುದ್ಧದೇವ ಪಾಳೀ ಭಾಷೆಯಲ್ಲಿ ತನ್ನ ತತ್ವ ಪ್ರಚಾರಮಾಡಿ ಬರಬರುತ್ತ ಆಯಾಯ ಪ್ರಾಂತೀಯ ಜನರ ಭಾಷೆಯ ಲ್ಲಿಯೇ ಪ್ರಸಾರಕಾರ್ಯ ನಡೆಯಬೇಕೆಂದು ಒಪ್ಪಿಗೆ ಇತ್ತಂತೆ ಶಿವಶರಣರು ತಮ್ಮ ಕಾರ್ಯವನ್ನು ಸಾಹಿತ್ಯ ನಿರ್ಮಿತಿಯೊಂದಿಗೆ ಬಹಳ ಚೆನ್ನಾಗಿ ಈಡೇರಿ ಸಿದರು. ಇದು ಚರಿತ್ರೆ ಮತ್ತು ಸಾಹಿತ್ಯ ದೃಷ್ಟಿಯಿಂದ ಕೂಡ ಬಹಳ ಮಹತ್ವವಾದ ಘಟನೆ.

ಆಧುನಿಕ ಕನ್ನಡ ಸಾಹಿತ್ಯದಲ್ಲೂ ಈ ದೃಷ್ಟಿ ಕಂಡುಬರುತ್ತಲಿದೆ. ಎಲ್ಲೆಲ್ಲೂ ಪ್ರಗತಿ ಸಾಹಿತ್ಯದ ಮೊಳಗು. ಇದು ಬದುಕಿರುವ ಜನಾಂಗದ ಕುರುಹು. ಬದಲಾವಣೆ ಇಲ್ಲ ಎಂದರೆ ಬದುಕಿಲ್ಲ ಎಂದರ್ಥ. ಇದು ಸಾಹಿತ್ಯಕ್ಕಾಗಲಿ, ಜನಾಂಗಕ್ಕಾಗಲಿ ಅನ್ವಯಿಸುವ ಮಾತು.

ಇಂದು ಪ್ರಗತಿಶೀಲರ ದೃಷ್ಟಿ ಆಕಾಶದಷ್ಟು ವಿಶಾಲವಾಗಿದೆ. ಮಹಾ ಸಾಗರದಂತೆ ಗಂಭೀರವಾಗಿದೆ. ಸಾಹಿತ್ಯ ಜನರದು—ಪಂಡಿತರದಲ್ಲ ಎಂಬ ಭಾವನೆ ದೃಢವಾಗುತ್ತಿದೆ. ಅಲಂಕಾರ, ವ್ಯಾಕರಣ, ಛಂದಶ್ಶಾಸ್ತ್ರಗಳನ್ನು ಬಲ್ಲ ನಾಲ್ಕು ಜನ ಪಂಡಿತರ ರಂಜನೆಮಾಡುವುದಕ್ಕಿಂತ ಕೋಟ್ಯಾವಧಿ ಜನರ ರಂಜನೆಮಾಡುವ ಸಾಹಿತ್ಯ ಇಂದು ಬೇಕು. ಇದೇ ಈ ಕಾಲದಲ್ಲಿ ಬದುಕಬಲ್ಲುದು. ಪಂಡಿತರ ಕಾಲ ಮುಗಿಯಿತು. ಪಾಮರರ ಕಾಲವಿದು. ಪಾಮರರಿಗಾಗಿ ಸಾಹಿತ್ಯ ನಿರ್ಮಿತಿ ಆಗಬೇಕಾಗಿದೆ. ಪಾಂಡಿತ್ಯವಿಲ್ಲದವರು ಸಾಹಿತ್ಯದ ಅರಿವಿನ ದೃಷ್ಟಿಯಲ್ಲಿ ಅಸ್ಪೃಶ್ಯರಾಗಿದ್ದಾರೆ. ಈ ಕಲಂಕ ಹೋಗ ಬೇಕಾಗಿದೆ. ಓದುಬಲ್ಲ ಎಲ್ಲರೂ ಸಾಹಿತ್ಯವನ್ನು ತಿಳಿಯುವವರಾಗಬೇಕು. ಆ ಸಾಹಿತ್ಯ ಅವರ ಜೀವನದಲ್ಲಿ ಹೊಸ ಬೆಳಕನ್ನು ನೀಡಬೇಕು. ಅದರಿಂದ ಜನತೆ ಬಾಳನ್ನು ಬೀಳುಗಳೆಯುವುದರ ಬದಲು ಹರಸಬೇಕು, ಆನಂದಿಸ ಬೇಕು. ಅದುವೇ ಪ್ರಗತಿಶೀಲ ಸಾಹಿತ್ಯ! ಅದರ ಗುರಿ ಸ್ತುತ್ಯ, ವಂದನೀಯ. ಈ ಬಗೆಯ ಸಾಹಿತ್ಯ ಇಂದು ಜಯಹೊಂದುವುದು. ಉಳಿದುದು ಅಳಿವುದು. ಇದು ಸತ್ಯ; ನಿತ್ಯ.

———:———

ಜನತೆ ಮತ್ತು ಕಲೆ

ಕುಮಾರ ವೆಂಕಣ್ಣ. ನಾಟ್ಯಾಚಾರ್ಯ

ಕಲಾಮಂದಿರದಲ್ಲಿ ಸಿದ್ಧವಾಗಿ ಮಹಲು-ಅರಮನೆಗಳಲ್ಲಿ ಉಪಭೋ
ಸಲ್ಪಡುವ ವಸ್ತು ಕಲೆ ಎಂಬ ದೃಷ್ಟಿ ನಮ್ಮ ಇಂದಿನ ಸಮಾಜದಲ್ಲಿ ಇ
ಯಾರಿಗೂ ಕಾಣಿಸದ ವಿಚಾರಗಳನ್ನು ಹತ್ತುಪಾಲು ಸುಂದರವಾಗಿ ಚಿತ್ರಿ
ವುದು ನಮ್ಮ ರೂಢಿಯಾಗಿದೆ. ಆದರೆ, ಆ ಹತ್ತುಪಾಲಿಗೆ ಕಾರಣವಾ
ಅಸ್ತಿವಾರ, ಆ ಒಂದು ಪಾಲು ಯಾರಿಗೂ ಇನ್ನೂ ಕಂಡಿಲ್ಲ. ಯಾರೊ
ಕವಿ ಚಿತ್ರಿಸಿದ ಶ್ರೀರಾಮ-ಕೃಷ್ಣರ ಚಿತ್ರಗಳನ್ನು ನಮ್ಮ ಕಲಾಮಂದಿರದ
ನಾವು ಕನಸಿನಲ್ಲಿ ಕಂಡ ರೀತಿ ಚಿತ್ರಿಸುತ್ತೇವೆ. ರಾಧಾಕೃಷ್ಣರು, ಶಿವಪಾರ್ವ
ಯರು ಹೀಗೆ ನರ್ತಿಸಿರಬಹುದೆಂದು ಯಾರೋ ಕಟ್ಟಿಹಾಕಿದಾಗ ನಾವ
ಹಾಗೆಯೇ ನರ್ತಿಸುತ್ತೇವೆ. ಆ ಕಾರ್ಖಾನೆಯಲ್ಲಿ ತಯಾರಾದ ನೃ
ನಮ್ಮನ್ನು ಇನ್ನೂ ಬೆನ್ನುಬಿಡದೆ ಅಂಟಿಕೊಂಡಿದೆ. ಅಂತೆಯೇ ಒಂದ
ಸಂಗೀತ, ಒಂದು ಶಿಲ್ಪಕಲೆ ತನ್ನ ಹಿಂದಿನ ಅಚ್ಚನ್ನೇ ಇಟ್ಟುಕೊಂಡು ಅದ
ಸುತ್ತ ಸುತ್ತಿ ಸುಳಿದು ಸಾಗುತ್ತಿದೆ.

ನಮ್ಮ ಪುರಾತನ ಕಲಾ-ಸಂಸ್ಕೃತಿಗಳೂ ಇದೇ ದೃಷ್ಟಿಯಿಂದ ಇಂ
ವಿವೇಚಿಸಲ್ಪಡುತ್ತಿವೆ; ಕಾಣಲ್ಪಡುತ್ತಿವೆ. ಧರ್ಮ, ಆ ಧರ್ಮದ ಆಧಾ
ಸ್ತಂಭಗಳೆನ್ನಿಸಿಕೊಂಡು ಮೆರೆಯುವ ಒಂದು ವರ್ಗದವರಿಗಾಗಿ ಕಲೆಗ
ಉಪಯೋಗವಾಗುತ್ತಿದೆ. ಆ ವರ್ಗದವರ ಮೆಚ್ಚಿಗೆಗೆ ಒಳಗಾದುದನ್ನೇ
ಕಲಾವಿದ ಸೃಜಿಸುತ್ತಾನೆ. ಅವರ ಪ್ರಚಾರವನ್ನು, ಅವರ ಹೇಳಿಕೆ ಕೇಳಿಕೆಗ
ಪಾಂಚಜನ್ಯವನ್ನು ಆತ ಊದುತ್ತಿರುತ್ತಾನೆ. ದೇವರ ಧರ್ಮಗಳ ಪರ
ಯಾಡಿಯಲ್ಲಿ, ಧರ್ಮದೇವರುಗಳ ಹಿರಿಯ ಮಗನಾದ ಬಂಡವಲಿಗನ ವರ
ಹಸ್ತದಡಿಯಲ್ಲಿ ಬಾಳಿದರೆ ಕಲಾವಿದ ಉಳಿದು ಮೆರೆಯಬಹುದು. ಇ
ಪಾದರೆ ಆತನಿಗೆ ಸ್ಥಾನವಿಲ್ಲ, ಮಾನವಿಲ್ಲ–ಈ ಸಮಾಜದಲ್ಲಿ. ಅವನು ಕಲ
ವಿದ ಎನ್ನಿಸಿಕೊಳ್ಳದಾಗುತ್ತಾನೆ. ಅದೇ ಈ ಕಲಾವಿದ ಧನಿಕನ ಮನಸ್ಸಿ
ವಿರೋಧವಾಗಿ ಯಾವುದನ್ನಾದರೂ ಸೃಜಿಸಿದರೆ ಆಗ ಆತ ನೂರಾರು ಪೀ
ಗಳಿಗೆ ಒಳಗಾಗಬೇಕಾಗುತ್ತೆ. ಅಂತೂ ಇಂದಿಗೆ ನೂರಾರು ವರ್ಷಗಳಿಂ

ಈ ಒಂಬತ್ತು ಧರ್ಮ-ಕಲೆಯು ಪವಿತ್ರವಾದುದು ಎಂಬ ಮಾಯಾಮುಸುಕುಗಳ ಕಟ್ಟಿಗೆ ಸಿಲುಕಿದೆ. ಪ್ರಗತಿಪರ ಜನತೆ, ಅವರ ನಡುವೆ ಹುಟ್ಟಿ ಬೆಳೆದ ಕಲಾವಿದನ ಆ ಪ್ರಗತಿಪರ ಮನೋಭಾವ; ಇದನ್ನೆಲ್ಲ ಹಿಂದೆ ಎಳೆದು ಮೆಟ್ಟುವ ಪ್ರಗತಿ ವಿರೋಧಶಕ್ತಿ ಇವುಗಳೊಳಗೊಂದು ಭೀಷಣ ಸಮರ ಸಾಗುತ್ತಿದೆ. ಕಲೆಯ ಪವಿತ್ರ ಹೆಸರಲ್ಲಿ ವರ್ಗಸಮರ ನಡೆಯುತ್ತಿದೆ.

ಹೀಗೆ ಬೆಳೆದು ಬಂದ ಕಲೆ ಅನೇಕ ಬಾರಿ ತನ್ನ ಬಂಧನದಿಂದ ಬಿಡಿಸಿಕೊಳ್ಳಲು ಹವಣಿಸಿದೆ. ಆಗಾಗ ಕಲೆಯಲ್ಲೂ ಕ್ರಾಂತಿ ತಲೆದೋರಿ ಅದು ಅಲ್ಪಸ್ವಲ್ಪವಾಗಿ ತನ್ನ ಸಂಕಲಿಗಳನ್ನು ಸಡಿಲಿಸಿಕೊಂಡಿದೆ.

ಯಾವ ವರ್ಗದ ಸೊತ್ತಾಗಿ ಕಲೆ ಇತ್ತೋ ಆ ವರ್ಗ ತನ್ನ ವಿವಿಧ ಕಾರ್ಯರಂಗಗಳ ಪರಿಣಾಮವಾಗಿ ಕಲೆಯ ಕಡೆಗೆ ಸಾಕಷ್ಟು ಗಮನವೀಯದಿದ್ದಾಗ ಆ ಕಲೆ ಜನತೆಯೆಡೆಗೆ ಮಹಾಜನರೆಡೆಗೆ ಸರಿದಿದೆ. ಪರಕೀಯ ಆಕ್ರಮಣ, ದೇಶದಲ್ಲಿನ ಅಂತಃಕಲಹ ಇವುಗಳ ನಡುವೆ ಅರಸರೂ ಮಾಂಡಲಿಕರೂ ಬಂಡವಲಿಗರೂ ಸಿಲುಕಿದಾಗ, ಅವರಿಗಾಗಿ ಅವರಿಂದ ಸ್ಫೂರ್ತಿಗೊಂಡು ಕಲಾಕೃತಿಗಳಲ್ಲಿ ತೊಡಗಿದ್ದ ಕಲಾವಿದ ದಿಕ್ಕುಗಾಣದಾಗಿ ಸುಮ್ಮನಾಗಿದ್ದಾನೆ. ತಾನು ಯಾರನ್ನು ಹೊಗಳಬೇಕು, ಯಾರನ್ನು ತೆಗಳಬೇಕು; ಯಾರಿಗಾಗಿ ಬರೆಯಬೇಕು, ಯಾರಿಗಾಗಿ ಬರೆಯಬಾರದು ಎಂಬ ಸಮಸ್ಯೆಗಳಿಗೆ ಆತ ಸಿಕ್ಕುಬಿದ್ದಿದ್ದಾನೆ. ಜನತೆಗಾಗಿ ಬರೆಯೋಣವೆಂದರೆ ಆತನ ದೃಷ್ಟಿ ಆ ಕಡೆಗೆ ಹರಿದೇ ಇಲ್ಲ. ನಾಯಕರಿಗಾಗಿ ಬರೆಯುವುದೆಂದರೆ ಪಕ್ಷ ಆತ ವಹಿಸಬೇಕು. ಈ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದ ಕಲಾವಿದನ ಮೌನದಿಂದಾಗಿ ಕಲೆ ಕೆಲವರ್ಷಗಳೇ ಅಲ್ಲ, ಶತಮಾನಗಳ ಕಾಲ ಬೆಳೆಯದೆ ಉಳಿದುದಿದೆ; ಇದುವರೆಗೆ ಆಶ್ರಯವಾಗಿದ್ದ ವರ್ಗವನ್ನೇ ಬಿಟ್ಟು ಮಹಾಜನರ ಕೈಗೆ ಬಂದುದಿದೆ. ಅಥವಾ ಆಶ್ರಯದಾತರ ನುಡಿಯಂತೆ ಅಳಿದುದಿದೆ.

ಈ ದುರಂತಕ್ಕೆ, ತಡೆಗೆ ಸಿಲುಕಿ ಕಲೆಯ ಬೆಳವಣಿಗೆ ಅನೇಕ ವೇಳೆ ಕುಂಠಿತವಾಗಿದೆ. ಅದು ಒಂದು ಹೆಜ್ಜೆಯನ್ನೂ ಮುಂದುವರಿಸದ ಸ್ಥಿತಿಗೆ ಬಂದಿದೆ. ಪ್ರಚಾರದಲ್ಲಿ ಬಂದು ಆದರಣೆ ಪಡೆದು ನಿಂತಾಗ ತಡೆ ಬಂದು ಮೂಲೆಸೇರುವುದು ಅದರ ಗತಿಯಾಗಿತ್ತು. ಪುನಃ ಕಿಲುಬು ಹೋಗಿ ಶುದ್ಧವಾಗಿ ಆಶ್ರಯದಾತರ ಆದರಕ್ಕೆ ಪಾತ್ರವಾಗಿದೆ ಎನ್ನುವಾಗ ಮತ್ತೊಂದು

ತೊಡಕು ಬಂದು ಅದು ಮೂಲೆ ಸೇರಿದುದಿದೆ. ಇದೆಲ್ಲ ಆ ಆಶ್ರಯದಾತ ವರ್ಗದ ಪ್ರಸನ್ನತೆಗೇ ಕಲೆ ಕಟ್ಟಿಬಿದ್ದುದರ ಪರಿಣಾಮ. ಮಹಾಜನರಲ್ಲಿಗೆ ಅದು ಬಂದಾಗ ಇಂತಹ ತಡೆಗಳು ಅದಕ್ಕೆ ಬಂದುದನ್ನು ನಾವು ಕಾಣುತ್ತಿಲ್ಲ. ಬದಲಾಗಿ ಅದೇ ಕಲೆ ತನ್ನ ಯಾಂತ್ರಿಕ ಸ್ಥಿತಿಯನ್ನು ಬದಲಾಯಿಸಿ, ವಿವಿಧ ರೂಪಗಳನ್ನು ತಾಳಿ ಹೆಚ್ಚಿನ ಜನಾದರವನ್ನು ಪಡೆದಿದೆ. ಹಬ್ಬಿ ಹರಡಿ ಬೆಳೆದಿದೆ. ಮಹಾಜನರಲ್ಲಿ ಆ ಸ್ವಾರ್ಥಲೋಲುಪತೆಯ ಹೋರಾಟ ಸಮರಗಳಾಗಲೀ, ಆ ಕಲೆಯನ್ನು ತಮ್ಮ ಪ್ರಚಾರಕ್ಕಾಗಿ ಉಪಯೋಗಿಸಬೇಕೆಂಬ ಹಂಬಲವಾಗಲೀ, ಇಲ್ಲದಿದ್ದುದೇ ಇದಕ್ಕೆ ಕಾರಣ. ತಮ್ಮ ಸ್ಥಿತಿಗತಿಗನುಗುಣವಾಗಿ, ಜೀವನ ಸಂವಿಧಾನಕ್ಕೆ ಅನುಸಾರವಾಗಿ ಕಲೆಯನ್ನೂ ಹೊಂದಿಸಿಕೊಂಡು ಮುನ್ನಡೆವ ಮಹಾಜನರ ನೀತಿ ಕಲೆಯನ್ನು ಉಳಿಸಿ ಬೆಳೆಸಿತ್ತು.

ದೇವರ ಗುಡಿಯಲ್ಲಿ, ಅರಸನ ಮಹಾಸಭೆಯಲ್ಲಿ ಉಪಯೋಗವಾಗುತ್ತಿದ್ದ ನೃತ್ಯ ಮತ್ತಾವ ಉಪಯೋಗಕ್ಕೂ ಸಿಗದೆ ಅರಸನ ಪರಿಸ್ಥಿತಿಗೆ ಹೊಂದಿಕೊಂಡಿರಬೇಕಾಯಿತು. ಬಂಡವಲಿಗನ ಮನೆಯ ಹೆಣ್ಣಿನ ಚಿತ್ರ, ವೇಶ್ಯೆಯ ಚಿತ್ರ ಅವನ ಮೆಚ್ಚುಗೆ ಪಡೆವತನಕ ಉಳಿಯಿತು. ಬಡವ, ದುಡಿವವ, ಮಹಾಜನರು ಈ ಚಿತ್ರಗಳನ್ನು ಮೆಚ್ಚುವದಾದರೂ ಹೇಗೆ? ಅದು ಅವರ ದುಸ್ಥಿತಿಯ ಪ್ರತಿಬಿಂಬ. ಕುರುವಿನ ಮೇಲಿನ ಬೊಕ್ಕೆ! ಆದರೆ ಅದೇ ಬಡವನೆಡೆಗೆ ಬಂದ ಒಂದು ನೃತ್ಯಸಂವಿಧಾನ ಮದುವೆಯ ಮಂಗಳ ದಿನದ ಆನಂದಕ್ಕೆ ಉಪಯೋಗವಾಗಿದ್ದರೆ, ಅದನ್ನೇ ಬದಲಾಯಿಸಿ ಮರಣದ ದುಃಖದಿನಕ್ಕೂ ಪ್ರಯೋಗಿಸುವದನ್ನು ಬಡವ ಅರಿತಿದ್ದಾನೆ. ಆತನಿಗೆ ನೃತ್ಯವಾಗಿರಲಿ, ಕಲೆಯಾಗಿರಲಿ ಒಂದು ಸುಖೋಪಭೋಗವಲ್ಲ, ಒಂದು ಆನಂದದ ಸಾಧನವಷ್ಟೇ ಅಲ್ಲ. ಅದು ಅವನ, ಅವನ ಸಮಾಜದ ಹೃದಯದ ಪ್ರತಿಬಿಂಬ. ಹೃದಯದ ವಿವಿಧ ಭಾವಗಳನ್ನದು ಪ್ರದರ್ಶಿಸಬೇಕು. ಮಹಾಜನರ ಮಧ್ಯದಲ್ಲಿ – ನೂರಾರು ವಿಧವಾದ ನೃತ್ಯಗಳನ್ನೂ, ಕಲಾ ಕಸೂತಿಗಳನ್ನೂ ನಾವು ಕಂಡಾಗ, ಬಂಡವಲಿಗಸಮಾಜದಲ್ಲಿ ಒಂದೇ ವಿಧವಾದ ಯಾಂತ್ರಿಕ ಕಲೆಯನ್ನು ನಾವು ಕಾಣುತ್ತಿದ್ದೇವೆ. ಮನಕ್ಕೆ ಒಪ್ಪಿದ ಕೃತಿ ರಚಿಸಬಲ್ಲ ದುಡಿವವನಿಗೆ, ಒಂದೇ ರೀತಿಯ ಕೃತಿಯನ್ನು ಹಲವಾರು ಕಟ್ಟುಗಳಿಂದ ಕಟ್ಟಿ ಕಾಪಾಡಿಕೊಂಡು ಬಂದ ಧನಿಕರ ಕೃತಿ ಹೇಗೆ ರುಚಿಸಬೇಕು?

ಇಂತಹದೊಂದು ಪರಿಸ್ಥಿತಿ ನಮ್ಮ ಸಮಾಜದಲ್ಲಿ ಉಂಟಾದಂತೆ ದೇಶದಲ್ಲೂ ಒಂದು ಪರಿಸ್ಥಿತಿ ತಲೆಹಾಕಿದೆ. ಅರಮನೆ, ಗುರುಮನೆ, ದೇವಮಂದಿರಗಳಲ್ಲಿದ್ದ ನೃತ್ಯ ಆಶ್ರಯದಾತರ ದುರಂತಗಳಿಂದ ಮಹಾಜನರೆಡೆ ಸರಿದು ಉಸಿರುಹಿಡಿದು ಬಾಳಲೆಳಸಿದುದನ್ನು ನಾವು ಕಾಣಬಹುದು. ಹೀಗೆ ಮಹಾಜನರ ಕೈಸೇರಿದ ಭರತನಾಟ್ಯದಂತಹ ನೃತ್ಯಗಳೂ, ಹಿಂದಿನ 'ಆಶ್ರಯದಾತ' ವರ್ಗದಿಂದಲೇ ತುಚ್ಛೀಕರಿಸಲ್ಪಟ್ಟುದನ್ನೂ ನಾವು ಕಾಣುತ್ತೇವೆ. ಕಲೆಗಾದ ಈ ಆದರಕ್ಕೆ ಕಾರಣ ಅದು ಮಹಾಜನರನ್ನು ಸೇರಿದುದೇ ಹೊರತು ಅದರಲ್ಲಾದ ಕಲ್ಮಶವಲ್ಲ. ಅದೇ ರೀತಿ ಶಿಲ್ಪಕಲೆಯೂ, ಚಿತ್ರಕಲೆಯೂ ಹೇಳ ಹೆಸರಿಲ್ಲದಾದುದನ್ನೂ ನಾವಿಂದು ಕಾಣುತ್ತಿದ್ದೇವೆ. ಜಕಣಾಚಾರಿಯು ಉಳಿಯಲ್ಲಿ ನಿಂತ ಶಿಲ್ಪಕಲೆಗೆ ಇಂದು ಮಾನ್ಯತೆ ಇಲ್ಲವಾಗಿದೆ. ಆತ ನಮ್ಮ ದೃಷ್ಟಿಯಲ್ಲಿ, ಇಂದಿನ ಸಮಾಜದ ದೃಷ್ಟಿಯಲ್ಲಿ, ಕಲಾವಿದನಲ್ಲ - ಕೂಲಿಯಾಳು. ರೈತ ಗಂಡು ಹೆಣ್ಣುಗಳು ಸುಗ್ಗಿಯ ಕಾಲದಲ್ಲಿ ಕುಣಿದಾಗ ಅದನ್ನು ನಾವು ಗ್ರಾಮ್ಯ ಹುಚ್ಚಾಟ ಎನ್ನುತ್ತೇವೆ. ಅದೇ ನೃತ್ಯವನ್ನು ಆಶ್ರಯದಾತರಿಗಾಗಿ ಮೀಸಲಾಗಿಟ್ಟು, ಧನಿಕರ ಉಡಿಗೆ ತೊಡಿಗೆಗಳನ್ನು ತೊಟ್ಟು, ಪ್ರದರ್ಶಿಸಿದರೆ ಅದೊಂದು ಕಲಾಕೃತಿಯಾಗುತ್ತದೆ. ಆಶ್ರಯದಾತ ವರ್ಗ ತನ್ನ ಹೆಚ್ಚಿನ ಲಾಭದ ವ್ಯಾಪಾರವೆಡೆ ಹೊರಳಿ ಕಲೆಯನ್ನು ಕೈಬಿಟ್ಟಾಗ ಎತ್ತಿ ತನ್ನ ಗುಡಿಸಲಲ್ಲಿ ಸಲಹಿ ಉಳಿಸಿಕೊಂಡು ಬಂದ ದುಡಿವವನ ಸೇವೆ ನಾವಿಂದು ಮರೆತಿದ್ದೇವೆ. ಆತ ಭಾರತದ ಕಲೆ, ಸಂಸ್ಕೃತಿ, ಸಾಹಿತ್ಯಗಳನ್ನು ಉಳಿಸಿದ್ದಾನೆ ಎಂಬುವನ್ನು ನಾವು ತಿಳಿದಿಲ್ಲ. ವಿವಿಧ ಪರಕೀಯ ಬಿರುಗಾಳಿಗಳಿಗೆ ತುತ್ತಾಗಿ ಹಳ್ಳಿಯ ಗುಡಿ ದೇಗುಲಗಳನ್ನು ಸೇರಿದ ಭರತನಾಟ್ಯ ವೇಶ್ಯೆಯರ ಕುಣಿತವೆಂದು ಹೇಳಿಸಿಕೊಂಡಿಲ್ಲವೇ ?

ಆದರೆ ಇದೀಗ ದೇಶಪ್ರೇಮದ ಮಿಂಚು ಸಂಚರಿಸಿದುದರ ಪರಿಣಾಮವಾಗಿ ನಮ್ಮಲ್ಲೇನೂ ಇಲ್ಲ ಎಂದವರು ನಮ್ಮ ಕಡೆ ನಾವು ನೋಡುತ್ತಿದ್ದೇವೆ. ನಮ್ಮ ಕಲೆ ಸಂಸ್ಕೃತಿಗಳ ಮೇಲಿನ ಅಭಿಮಾನ ಸ್ವಲ್ಪ ಸ್ವಲ್ಪವಾಗಿ ನಮ್ಮಲ್ಲಿ ಮೂಡಿ ಬೆಳೆಯುತ್ತಿದೆ. ಪುನಃ ಕಲೆಯನ್ನು ಆಶ್ರಯದಾತ ವರ್ಗ ಎತ್ತಿದ್ದಾರೆ; ಅದು ಬೆಳಗಲಾರಂಭಿಸಿದೆ. ಜನತೆಯ ಉಡಿಯಲ್ಲಿದ್ದ ಇದು ಮಧ್ಯಮ ವರ್ಗದವರ, ಬಂಡವಲಿಗರ ಸುಪ್ಪತ್ತಿಗೆ ಎಡೆಗೆ ನಡೆದು ಬಂದಿದೆ.

ನೃತ್ಯ, ಚಿತ್ರ, ಸಂಗೀತ ಕಲೆಗಳು ಪುನಃ ಕೆಲವರ ವಸ್ತುಗಳಾಗಿ ನಿಂತಿವೆ. ಅವುಗಳ ಬೆಳವಣಿಗೆ, ಪ್ರಚಾರ ಕುಂಠಿತವಾಗಿದೆ. ಇದೀಗ ಇದೆ ಎನ್ನಿಸಿ ಕೊಂಡು ಆಶ್ರಯದಾತ ವರ್ಗದಿಂದ ಎತ್ತಲ್ಪಟ್ಟ ಕಲೆ ಹಾಗೆಯೇ ಕೆಲವರ ದಾಗಿ ಉಳಿಯಬೇಕೇ? ರಾಷ್ಟ್ರದಲ್ಲಿ ಗೊಂದಲ ಹರಡಿದಾಗಲೆಲ್ಲ ಅದು ಮೂಗು ಹಿಡಿದು ಕುಳಿತು, ಶಾಂತವಾದಾಗ ಚೇತರಿಸಿ ನಿಲ್ಲುತ್ತಿರಬೇಕೇ? ನಮ್ಮ ಕಲೆಯು ಜೀವನದಲ್ಲಿ ನಿದ್ರೆ - ಎಚ್ಚರಗಳಿರಡೇ ಇದ್ದರೆ ಸಾಕೇ? ಅದು ಬೆಳೆದು, ಹರಡಿ, ಭಾರತದ ನಾಲ್ಕೂ ಮೂಲೆಗಳನ್ನು ಮುಟ್ಟಿ, ಜನತೆಯೊಡನೆ, ಜನಜೀವನದೊಡನೆ ಬೆರೆತು ಬೆಳೆಯಬೇಡವೇ? ಅದು ಭಾರತದ ಜನತೆಯ ಪ್ರತಿಬಿಂಬವಾಗಬೇಡವೇ? ಹಾಗಿಲ್ಲವಾದರೆ ಅದು ಬೆಳೆಯಲಾರದು. ಅದರ ಕರ್ತವ್ಯ ಪೂರ್ಣವಾಗದು. ಬದಲಾಗಿ ಕಲೆಗಾಗಿ ಕಲೆ; ಕಲೆಯು ಪವಿತ್ರ ವಾದುದು; ಆನಂದ ತೃಪ್ತಿಗಾಗಿರುವುದು ಎಂಬ ಹಲವಾರು ಅಪವಾದಗಳ ನುಡಿ ಉಳಿದೀತು. ಸ್ತ್ರೀ ಪುರುಷನ ಇಚ್ಛಾಪೂರ್ತಿಗಾಗಿರುವ ವಿಲಾಸಲ ವಸ್ತು; ಬಡವ ಧನಿಕನ ಜೀತದಾಳು; ಎಂಬ ಸಮಾಜದ್ರೋಹಿಗಳ ಮಾತಿನಂತಹ ಉಕ್ತಿ ಇದಲ್ಲದೆ ಬೇರೆಯಲ್ಲ.

ಕಲೆ ಇಂದು ಉಳಿಯಬೇಕಾದರೆ ಅದು ಕೆಲವರ ಕೈಯಿಂದ ಹಲವರ ಕೈಗೆ ಬರಬೇಕು. ನಮ್ಮ ಕಲಾವಿದರು ಆಶ್ರಯದಾತರ ತಂಬುಲಕ್ಕೆ ಕೈನೀಡು ವುದನ್ನು ಬಿಟ್ಟು, ಜನತೆಯ ಆದರಕ್ಕೆ ಪಾತ್ರರಾಗಬೇಕು. ಜನತೆಯಿಂದ ತಪ್ಪಿಸಿಕೊಂಡು ಎಲ್ಲೋ ಹುದುಗಿದ ಜನಕ್ಕೆ ಕಲಾವಿಚಾರ ಹೇಗೆ ತಿಳಿಯ ಬೇಕು ಎಂದು ಮೂಗು ಮುರಿದು ಕುಳಿತುಕೊಳ್ಳುವ ಮಂದಿ ನಮ್ಮ ಸಮಾಜಕ್ಕೆ ಇಂದು ಬೇಡ. ಜನತೆ ಕಲಾವಿದನಿಗಿಂತಲೂ ಚೆನ್ನಾಗಿ ಕಲೆ ತಿಳಿದಿದ್ದಾರೆ. ಅದರ ಸವಿ ಸವಿಯಬಲ್ಲರು. ಆದರೆ, ಅದು ಮೂಕಚಿತ್ರವಾಗಿರಬಾರದು. ಯಾಂತ್ರಿಕ ನೃತ್ಯವಾಗಿರಬಾರದು. ಅದು ಜನತೆಯ ಭಾವನೆಯ, ಜೀವನದ ಪ್ರತಿಬಿಂಬವಾಗಿರಬೇಕು. ಭೋಗವಿಲಾಸದ ಜೀವಿಯ ಮನಸೆಳೆಯಬಲ್ಲ ಮೂಕ ಚಿತ್ರ ಮೂವತ್ತು ಕೋಟಿ ಸಜೀವ ದುಡಿವಾಳುಗಳೊಡನೆ ಮಾತನಾಡಲಾರದು. ರಾಷ್ಟ್ರೀಯ ಹೋರಾಟದಲ್ಲಿ ಜನ ತಲ್ಲೀನರಾದಾಗ, ದೇಶಪ್ರೇಮದ ಹೊಳೆ ಹರಿದಾಗ ಹಾಡಲಾರದ ಒಬ್ಬ ಕವಿ, ಸಂಗೀತಗಾರ ಜನತೆಯ ಸೇವಕ ನಾದಾನೇ? ಆ ದುರಂತದ ಸತ್ಯಚಿತ್ರ ಚಿತ್ರಿಸಲಾಗದ ಕಲಾವಿದನನ್ನು ಕಲಾ

ಕಾರ - ಚಿತ್ರಗಾರನೆಂದರೆ ಜನ ಹೇಗೆ ಒಪ್ಪಬಲ್ಲರು? ಆ ಶೂನ್ಯ ತಾಂಡವದ ನೃತ್ಯ ತೋರಲಾರದ ನರ್ತಕ; ಬಂಗಾಲ ಬಿಜಾಪುರಗಳ ಬರಗಾಲಕ್ಕೆ ಆಹುತಿಯಾದ ಸಹಸ್ರಾರು ಮಂದಿಯ ದುರಂತ ಚಿತ್ರಗಳ ನಾಟಕ- ನೃತ್ಯ ಎಲ್ಲಿ ನಡೆದಿದೆ? ಇದನ್ನು ನಾನು ಚಿತ್ರಿಸಲಾರೆ, ಇದಕ್ಕಾಗಿ ನನ್ನ ಕವಿತೆ ಇಲ್ಲ, ಇದೇನು ನೃತ್ಯ ಎಂದರೆ ಆ ಕಲೆ ಜನಜೀವನದಿಂದ, ದೇಶದ ಪರಿಸ್ಥಿತಿ ಯಿಂದ, ದೂರವಾಗಿದೆ ಎನ್ನಬಹುದಲ್ಲವೇ? ಅಲ್ಲಿಗೂ ಸೀತಾರಾಮರ ಚಿತ್ರ, ರಾಧಾಕೃಷ್ಣರ ನೃತ್ಯ, ಹಳ್ಳದ ದಂಡೆಯ ಹೆಣ್ಣಿನ ಮೇಲಣ ಕವಿತೆ ಕಟ್ಟುತ್ತಾ ಕುಳಿತವರನ್ನು ಜನತೆಯ ನಡುವೆಯಿದ್ದು ಜನತೆಗಾಗಿ ದುಡಿವವರೆಂದು ಹೇಳುವ ಹುಚ್ಚರಾದರೂ ಇರಬಲ್ಲರೇ? ಈ ಹಿನ್ನಡೆವ, ಪ್ರಸ್ತುತ ಪರಿಸ್ಥಿತಿ ಯಿಂದ ತಲೆತಪ್ಪಿಸಿಕೊಳ್ಳುವ ನೀತಿಯನ್ನು ನಮ್ಮ ಕಲಾವಿದರು ಬಿಟ್ಟು, ಜನ ತೆಯ ಉಸಿರಿನೊಡನೆ ತಮ್ಮ ಉಸಿರನ್ನು ಸೇರಿಸಿದಾಗಲೇ ಅವರನ್ನು ಜನತೆಯ ಕಲಾವಿದರೆನ್ನಬಹುದು. ಜನಜೀವನದೊಡನೆ ತಾವೂ ಪ್ರಗತಿಪಥದಲ್ಲಿ ಮುನ್ನಡೆಯುತ್ತಿದ್ದಾರೆ ಎನ್ನಬಹುದು.

ನಮ್ಮ ಕಲಾವಿದರು ಈ ಸಮಸ್ಯೆಯನ್ನು ತಿಳಿಯಬೇಕು. ಅರಿವಿಲ್ಲದೆ ಜನತೆಯನ್ನು ದೂರುತ್ತಾ ನಡೆಯುವುದರಿಂದ ಯಾವ ಕಲೆಯೂ ಬೆಳೆಯದು ಬೆಳಗದು. ಕಲಾಮಯ ಸಂಗೀತ, ಚಿತ್ರ, ನೃತ್ಯ ಎಂದುಕೊಂಡು ಆಶ್ರಯ ದಾತರ ಮನ ಮೆಚ್ಚಿಸುವದಕ್ಕಾಗಿ ಪ್ರಯೋಗಿಸುತ್ತಾ, ಮುನ್ನಡೆದರೆ ಆ ಕಲೆ ಕಲಾವಿದನಲ್ಲಿ ಉಳಿಯಬಹುದು, ಆಶ್ರಯದಾತರ ಮನ ಚೆನ್ನಾಗಿರುವ ತನಕ ಕೆಲವೊಂದು ಮನೆಗಳಲ್ಲೋ ಪ್ರದರ್ಶನಾಲಯಗಳಲ್ಲೋ ಮೆರೆಯಬಹುದು, ಇದ್ದಂತೆ ಉಳಿಯಬಹುದು. ನಮ್ಮ ಕಲಾವಿದರು ಈ ನೀತಿ ಬಿಟ್ಟು ಕಾರ್ಖಾ ನೆಯ ಕೂಲಿಗಾರರಿಗಾಗಿ ರೈತರಿಗಾಗಿ ಅವರ ಜೀವನದ ನಿತ್ಯದುರಂತಗಳ ಚಿತ್ರ ಚಿತ್ರಿಸಲಿ, ನಾಟಕ ಆಡಲಿ, ಕವಿತೆ ಬರೆಯಲಿ, ನೃತ್ಯ ಪ್ರದರ್ಶಿಸಲಿ. ಹಾಗಿದ್ದಾಗ ಅದು ಆಶ್ರಯದಾತರ ಅಧಿಕಾರಿಶಾಹಿ ಕಟ್ಟುಕಟ್ಟಳೆಗಳ ಸಂಕಲೆ ಗಳನ್ನು ಮುರಿದು ಸ್ವತಂತ್ರವಾಗಬಲ್ಲುದು. ಜನತೆಯನ್ನೂ ದೇಶವನ್ನೂ ಸ್ವಾತಂತ್ರ್ಯಮಾರ್ಗದೆಡೆ ಸರಿಸಬಲ್ಲುದು.

ಹಳ್ಳಿಗರಿಗೆ ಬೇಕಾದ ಸಾಹಿತ್ಯ

ಮಾ. ನಾ. ಚೌಡಪ್ಪ

ಕಳೆದ ಒಂದು ಒಂದೂವರೆ ಶತಮಾನಗಳ ಅನಾದರಣೆಯ ಫಲವಾಗಿ ನಮ್ಮ ಹಳ್ಳಿಗಳು ನಲುಗಿ ನಾಶವಾಗುವ ಸ್ಥಿತಿಗೆ ಬಂದಿವೆ. ಹಳ್ಳಿಗರು ಕಂಗಾಲಾಗಿದ್ದಾರೆ. ಅವರನ್ನು ಈ ಸ್ಥಿತಿಯಿಂದ ಉದ್ಧರಿಸಬೇಕು. ನಮ್ಮ ನಾಡಿನ ಸಂಸ್ಕೃತಿ, ಜನಜೀವನ, ಆರ್ಥಿಕ ಜೀವನಗಳಿಗೆ ಅವರು ಬೆನ್ನು ಮೂಳೆಯಾಗಿ ನಿಂತು ರಾಷ್ಟ್ರದ ಉನ್ನತಿಗೆ ಕಾರಣರಾಗುವಂತೆ ಮಾಡಬೇಕು. ಹಾಗಾದಲ್ಲಿ ಮಾತ್ರ ನಮ್ಮ ರಾಷ್ಟ್ರದ ಪ್ರಗತಿ ಸಿದ್ಧಿಸುವುದು. ಈ ಸಿದ್ಧಿಯಿಲ್ಲದ ಪ್ರಗತಿ ಬರೀ ತೋರಿಕೆ. ಮರಳಿನ ತಳಹದಿಯಮೇಲೆ ಕಟ್ಟಿದ ಮನೆ. ನಿಜ. ನೂರಕ್ಕೆ ತೊಂಭತ್ತುಮಂದಿ ಹಳ್ಳಿಗಳಲ್ಲಿ ವಾಸಮಾಡುವ ನಮ್ಮ ನಾಡಿನಲ್ಲಿ ಹಳ್ಳಿಗರ ಜೀವನವನ್ನು ಹಸನುಮಾಡದ ಯಾವ ಕೃತಿ ತಾನೆ ಪ್ರಗತಿಯಾದೀತು! ಆದ್ದರಿಂದ ಹಳ್ಳಿಗರ ಹಿತಸಾಧನೆ, ನಮ್ಮ ನಾಡಿನ ಉನ್ನತಿಯನ್ನು ಬಯಸುವವರೆಲ್ಲರೂ ಕೈಗೊಳ್ಳಬೇಕಾದ ಪ್ರಥಮ ಕರ್ತವ್ಯ. ಈ ಮಾತುಗಳು ರಾಜಕೀಯ ಆರ್ಥಿಕ ಸುಧಾರಣೆಯ ರಂಗಕ್ಕೆ ಎಷ್ಟು ನಿಕಟವಾಗಿ ಅನ್ವಯಿಸುವುವೋ ಸಾಹಿತ್ಯ ಸಂಸ್ಕೃತಿಗಳ ರಂಗಕ್ಕೂ ಅಷ್ಟೇ ನಿಕಟವಾಗಿ ಅನ್ವಯಿಸುತ್ತವೆ. ಹೀಗಾಗಿ, ಸಾಹಿತಿಯೂ ಹಳ್ಳಿಗರ ಸೇವೆಗಾಗಿ ನಡುಕಟ್ಟಬೇಕಾಗಿದೆ, ಇದು ಅವನ ಕರ್ತವ್ಯ; ಯಾವ ಹಳ್ಳಿಗರು ತೆತ್ತ ತೆರಿಗೆಯ ಸಹಾಯದಿಂದ ತನ್ನ ವಿದ್ಯೆಯನ್ನು ಗಳಿಸಿಕೊಂಡನೋ ಆ ಹಳ್ಳಿಗರಿಗಾಗಿ ಅವನು ನಡೆಸಬೇಕಾದ ಸೇವೆ.

ಈ ಸೇವೆಯ ಸ್ವರೂಪವೇನು?—ಇನ್ನೇನಿದ್ದೀತು ಸಾಹಿತ್ಯರಚನೆ. ಪ್ರಚಾರ ಎಂದು ಸುಲಭವಾಗಿ ಉತ್ತರ ಹೇಳಿಬಹುದು. ಆದರೆ ಈ ಸಾಹಿತ್ಯದ—ಹಳ್ಳಿಗರಿಗೆ ಬೇಕಾದ ಸಾಹಿತ್ಯದ ಸ್ವರೂಪ ಹೇಗಿರಬೇಕು ಎಂಬ ಪ್ರಶ್ನೆಗೆ ಆ ರೀತಿ ಸೂತ್ರ ರೂಪದಲ್ಲಿ ಉತ್ತರ ಹೇಳುವುದು ಸಾಧ್ಯವಿಲ್ಲ. ಆ ಉತ್ತರ ವಿವರಣಾತ್ಮಕವಾಗಿ ಇರಬೇಕಾದುದು ಅವಶ್ಯಕ ಮತ್ತು ಅನಿವಾರ್ಯ. ಏಕೆಂದರೆ ಇದುವರೆಗೆ, ನಮ್ಮ ಹಳ್ಳಿಗರಿಗೆಂದೇ ವಿರಾಸಲಾದ, ಅವರಿಗೆಂದೇ

ಸಿದ್ಧವಾದ ಸುಪುಷ್ಟ ಸಾಹಿತ್ಯ ಹೊರಬಿದ್ದಿಲ್ಲ. ಈಗ, ಇನ್ನುಮುಂದೆ ಸಾಹಿತಿಗಳು ಈ ಹೊಸ ಸಾಹಿತ್ಯವನ್ನು ನಿರ್ಮಿಸಬೇಕು.

ಈ ಸಾಹಿತ್ಯ ಎಂತಹುದಾಗಿರಬೇಕು ಎಂಬ ವಿಚಾರವಾಗಿ ನಾವು ಆಲೋಚಿಸತೊಡಗಿದೊಡನೆಯೇ ಪ್ರಧಾನವಾಗಿ ನಮ್ಮ ಮನಸ್ಸು ನಾಡಿನ ಭವಿಷ್ಯದ ಕಡೆಗೆ ತಿರುಗುತ್ತದೆ. ಇಂದಿನ ಮಹಾ ಯುದ್ಧದ ಬೇಗೆಯ ನಡುವೆ ಆ ಭವಿಷ್ಯದ ಅಚ್ಚು ಗಟ್ಟಿಯಾಗುತ್ತಿದೆ ಎಂಬುದು ನಮ್ಮ ಬಗೆಗಣ್ಣಿಗೆ ಗೋಚರಿಸುತ್ತದೆ; ಯುದ್ಧಾನಂತರ ಈ ಜಗತ್ತಿನ ಪ್ರಜಾವರ್ಗದಲ್ಲಿ, ಅಂತೆಯೇ ನಮ್ಮ ನಾಡಿನ ಜನರ ಜೀವನ ವಿಧಾನದಲ್ಲಿ ಆಗುವ ದೊಡ್ಡ ಬದಲಾವಣೆಗಳ ಬಹಿರ್‍ರೇಖೆ ಕಾಣುತ್ತದೆ. ಶಾಶ್ವತವಾದ ವಿಶ್ವಶಾಂತಿಗೆ ಸಹಾಯಕವಾಗುವಂತೆ ಇಡೀ ಜಗತ್ತಿನ ಆಚಾರ ವ್ಯವಹಾರವನ್ನು ಯಾವ ಅಚ್ಚಿನಲ್ಲಿ ಎರಕಹೊಯ್ಯಬೇಕೋ ಆ ಅಚ್ಚಿನ ಬಹಿರ್‍ರೇಖೆ ಇದು. ಈ ಅಚ್ಚು ಪ್ರಜಾಪ್ರಭುತ್ವ, ಸರ್ವಸಮಾನತೆಗಳ ಮಣ್ಣು ನೀರುಗಳಿಂದ ರಚಿತವಾದದ್ದು. ಜಗತ್ಕಲ್ಯಾಣ ಜಗತ್‌ಶಾಂತಿಯ ಬಯಕೆ ಕೈಗಳಿಂದ ರೂಪುಗೊಂಡಿದ್ದು. ಈ ಅಚ್ಚನ್ನು ಪುಡಿಮಾಡಲು ಬಂಡವಾಳಶಾಹಿಯ ಕೈಗಳು ಸ್ವಾರ್ಥದ ಸುತ್ತಿಗೆ ಎತ್ತಿನಿಂತಿವೆ. ಈ ಸುತ್ತಿಗೆ ಅಚ್ಚಿನಮೇಲೆ ಬೀಳದಂತೆ, ಒಂದುವೇಳೆ ಬಿದ್ದರೂ ಅಚ್ಚು ಒಡೆಯದಂತೆ ನೋಡಿಕೊಳ್ಳುವುದು ಯುದ್ಧದ ಜ್ವಾಲೆಯ ನಡುವೆ, ಜಗತ್ತಿನ ಭವ್ಯಭವಿಷ್ಯದ ರೇಖೆಗಳನ್ನು ಕಂಡಿರುವ ಪ್ರಗತಿಶೀಲರ ಕರ್ತವ್ಯ. ಈ ರೇಖೆಗಳನ್ನು ಕಂಡವರು ಹಲವಾರು ವರ್ಗದವರಿದ್ದಾರೆ. ಸಾಹಿತಿ ಇವರಲ್ಲಿ ಒಂದು ಗುಂಪಿಗೆ ಸೇರಿದವನು. ಇವನು ಪುರಾಣದ ರಕ್ತಬೀಜಾಸುರನಂಥವನು. ಇವನ ಲೇಖನಿಯ ದೇಹದಿಂದ ಹೊರಬಿದ್ದ ಕೃತಿರಕ್ತ ಪ್ರಬಲ ಭಾವಪೂರ್ಣವಾಗಿದ್ದಲ್ಲಿ ಅದು ತಕ್ಕ ಹೃದಯ, ಮನಸ್ಸುಗಳನ್ನು ತಾಗಿದರೆ ಸಾಕು, ಆ ಭಾವಪ್ರಸಾರ ರಕ್ಷಣೆಗಾಗಿ ನಡುಕಟ್ಟಿದ ದೊಡ್ಡ ಪಡೆಯನ್ನೇ ನಿರ್ಮಿಸಬಲ್ಲುದು. ಇಂತಹ ಪಡೆಯ ನಿರ್ಮಾಣಕ್ಕೆ ಸಹಾಯಕವಾದ ಸಾಹಿತ್ಯ ಇಂದು ನಮಗೆ ನಮ್ಮ ಹಳ್ಳಿಗರಿಗೆ ಬೇಕಾಗಿದೆ. ಈ ಬಯಕೆ ಭವ್ಯವಾದದ್ದು ನಿಜ. ಆದರೆ ನೂರು ಮಂದಿ ಪ್ರಜೆಗಳಲ್ಲಿ ಹದಿನೇಳು ಮಂದಿ ಮಾತ್ರ ಅಕ್ಷರಸ್ಥರಾಗಿರುವ ನಮ್ಮ ದೇಶದಲ್ಲಿ ನೂರಕ್ಕೆ ತೊಂಭತ್ತುಮಂದಿ ಇರುವ ಹಳ್ಳಿಗಳಲ್ಲಿ ಇಂತಹ ಸಾಹಿತ್ಯವನ್ನು ಪ್ರಸಾರಮಾಡುವುದಾದರೂ ಹೇಗೆ? ಸರಾಸರಿ ಲೆಕ್ಕದಲ್ಲಿ

ನೂರಕ್ಕೆ ಹದಿನೇಳುಮಂದಿ ಅಕ್ಷರಸ್ಥರೆಂದು ಹೇಳುವೆವಾದರೂ ಪಟ್ಟಣಗಳನ್ನು ಬಿಟ್ಟು ಹಳ್ಳಿಗಳನ್ನೇ ಲೆಕ್ಕ ಹಿಡಿದು ನೋಡಿದರೆ, ನಮ್ಮ ದೇಶದ ಅಕ್ಷರಸ್ಥರ ಸರಾಸರಿ ಪ್ರಮಾಣ ಇನ್ನೂ ತಗ್ಗುವುದು. ಸ್ವಲ್ಪ ಹೆಚ್ಚು ಕಡಿಮೆ ನೂರು ಮಂದಿ ಹಳ್ಳಿಗರಲ್ಲಿ ತೊಂಭತ್ತುಮಂದಿ ಅನಕ್ಷರಸ್ಥರೆಂದು ತೋರುವುದು, ಈ ಸಾರ್ವತ್ರಿಕ ಅನಕ್ಷರತೆಯನ್ನು ಆದಷ್ಟು ಜಾಗ್ರತೆ ತೊಲಗಿಸಬೇಕು. ಈ ಕೆಲಸವಾಗದೆ ನಮ್ಮ ಹಳ್ಳಿಗರಲ್ಲಿ ಪ್ರಗತಿ ಸಾಹಿತ್ಯ ಹರಡುವಂತೆ ಇಲ್ಲ. ಅಂದ ಮೇಲೆ ಅಂತಹ ಸಾಹಿತ್ಯವನ್ನು ರಚಿಸಿ ಫಲವಾದರೂ ಏನು ?

ಆದ್ದರಿಂದ ನಮ್ಮ ಜನರಲ್ಲಿ ಅಕ್ಷರತೆ ಹೆಚ್ಚಲು ತಮ್ಮಿಂದಾದ ಸಹಾಯ ವನ್ನೆಲ್ಲಾ ಒದಗಿಸುವುದು ಪ್ರಗತಿಶೀಲ ಸಾಹಿತಿಗಳ ಮೊದಲ ಕರ್ತವ್ಯವಾಗಿದೆ. ಅವರ ಪ್ರಯತ್ನದ ಫಲವಾಗಿ ಇನ್ನು ಐದುವರ್ಷಗಳೊಳಗಾಗಿ ನಮ್ಮ ದೇಶದಲ್ಲಿ ನೂರಕ್ಕೆ ಎಂಭತ್ತುಮಂದಿ ವಯಸ್ಕರಾದರೂ ಅಕ್ಷರಸ್ಥರಾದರೆ ಪ್ರಗತಿ ಸಾಹಿತಿ ಗಳು ದೊಡ್ಡ ದೇಶೋದ್ಧಾರ ಕಾರ್ಯವನ್ನು ಸಾಧಿಸಿದಂತಾಗುವುದಲ್ಲದೆ, ಯುದ್ಧಾನಂತರದ ಜಗತ್-ಪುನರ್‍ರಚನೆಯಲ್ಲಿ ನಮ್ಮ ಜನರು ಆಸಕ್ತಿಯಿಂದ ಭಾಗವಹಿಸಲು ಅವಕಾಶವಾಗುವುದು. ಜನರಲ್ಲಿ ವಿವೇಚನ ಜ್ಞಾನವೂ ತಿಳುವಳಿಕೆಯೂ ಬೆಳೆದು ನಿಜವಾದ ಪ್ರಜಾಪ್ರಭುತ್ವ ಸ್ಥಾಪನೆಗೆ ತಕ್ಕ ವಾತಾವರಣವು ಏರ್ಪಡುವುದು. ಯುದ್ಧಾನಂತರದ ನೂತನ ಜಗದ್ವ್ಯವ ಸ್ಥೆಗೆ ಸಂಬಂಧಿಸಿದ ಮುಖ್ಯ ಕಾರ್ಯಕ್ರಮಗಳಲ್ಲಿ ಇದೊಂದು. ಆದ್ದರಿಂದ ನಮ್ಮ ನಾಡಿನ ಪ್ರಗತಿಶೀಲ ಲೇಖಕರು ಈ ಕಾರ್ಯಕ್ರಮಕ್ಕೆ ನೆರವಾಗಬೇಕು. ಇದು ಅವರ ಇಂದಿನ ಕರ್ತವ್ಯ.

ಈ ಕರ್ತವ್ಯ ಸಾಧನೆಯ ಮಾರ್ಗವು ಯಾವುದು ಎಂಬುದನ್ನು ನೋಡೋಣ.

ಮೊದಲನೆಯದಾಗಿ ನಮ್ಮ ನಾಡಿನ ಬಹು ಸಂಖ್ಯಾಕರಾದ ಹಳ್ಳಿಗರಲ್ಲಿ ಅಕ್ಷರ ಪ್ರಚಾರವಾಗಬೇಕು. ಈ ಕಾರ್ಯಸಾಧನೆಗಾಗಿ ನಮ್ಮ ದೇಶದಲ್ಲಿ ಮೊಟ್ಟಮೊದಲು ತಕ್ಕ ಪುಸ್ತಕಗಳ ರಚನೆಯಾಗಬೇಕಾಗಿದೆ. ಅಕ್ಷರ ಕಲಿತ ಹಳ್ಳಿಗನು ಕೆಲವು ತಿಂಗಳುಗಳ ಅನಂತರ ತಾನು ಕಲಿತದ್ದನ್ನೆಲ್ಲಾ ಮರೆತು ಬಿಟ್ಟರೆ, ಅವನಿಗೆ ಅಕ್ಷರ ಕಲಿಸಿದ ಶ್ರಮವೆಲ್ಲವೂ ವ್ಯರ್ಥವಾಗುವುದಲ್ಲದೆ, ನಾಡಿನ ಅನಕ್ಷರತೆಯ ಸಮಸ್ಯೆ ಪರಿಹಾರವಾಗದೆ ಪೆಡಂಭೂತಾಕಾರದಲ್ಲಿ

ನಮ್ಮನ್ನು ಪೀಡಿಸುತ್ತಲೇ ಇರುವುದು. ಹೀಗಾದಂತೆ ನೋಡಿಕೊಳ್ಳಲು ನಮ್ಮ ಸಾಹಿತಿಗಳು ಅಕ್ಷರ ಕಲಿತವರ ಅಕ್ಷರತೆ ಉಳಿಯಲೂ, ಅವರ ಓದುಗಾರಿಕೆ, ಜ್ಞಾನಭಂಡಾರ ಬೆಳೆಯಲೂ ತಕ್ಕ ಸಾಹಿತ್ಯವನ್ನು ಈಗ ನಿರ್ಮಿಸಬೇಕಾಗಿದೆ; ಈ ಜ್ಞಾನವಿಸ್ತರಣದಿಂದ ನಮ್ಮ ನಾಡಿನ ಬಹು ಸಂಖ್ಯಾತರ ವ್ಯಕ್ತಿತ್ವ ಪ್ರಜಾಪ್ರಭುತ್ವ ಸ್ಥಾಪನೆ, ರಕ್ಷಣೆಗಳಿಗೆ ನೆರವಾಗುವಂತೆ ಮಾಡಬೇಕಾಗಿದೆ.

ಇಂತಹ ಸಾಹಿತ್ಯವನ್ನು ನಿರ್ಮಿಸಲು ಪ್ರಯತ್ನಿಸುವ ಲೇಖಕರು ಕೆಲವು ಅಂಶಗಳನ್ನು ತಮ್ಮ ಗಮನದಲ್ಲಿಟ್ಟುಕೊಂಡಿರುವುದು ಅವಶ್ಯಕ.

ಮೊದಲನೆಯದಾಗಿ—ಶೈಲಿಯ ವಿಚಾರವನ್ನೇ ತೆಗೆದುಕೊಳ್ಳೋಣ; ಇದು ಆದಷ್ಟು ಸುಲಭವಾಗಿ ಇರಬೇಕು, ಓದುವವನಿಗೆ ಹೆಚ್ಚು ಶ್ರಮವಿಲ್ಲದೆ ಅರ್ಥವಾಗುವಂತಿರಬೇಕು. ಈ ಮಾತು ಹೇಳುವುದು ಸುಲಭ. ಆದರೆ ಶಬ್ದಜ್ಞಾನ, ವಿಚಾರ ಜ್ಞಾನಗಳು ಹೆಚ್ಚಾಗಿ ಇಲ್ಲದ ವಯಸ್ಕರಿಗೆ ಅರ್ಥವಾಗುವಂತೆ, ರುಚಿಸುವಂತೆ ವಿಚಾರ ಸಾಹಿತ್ಯವನ್ನು ನಿರ್ಮಿಸುವುದು ತುಂಬಾ ಕಷ್ಟಸಾಧ್ಯ. ಆದರೂ ನಮ್ಮ ಸಾಹಿತಿಗಳು ಸರ್ವಶಕ್ತಿಯನ್ನು ವಿನಿಯೋಗಿಸಿ ಈ ಕೆಲಸವನ್ನು ಯಶಸ್ವಿಯಾಗಿ ಸಾಧಿಸಬೇಕು. ಪ್ರಗತಿಶೀಲರು ಈ ಕೆಲಸವನ್ನು ಸಾಧಿಸದೆ ಇದ್ದರೆ ಮತ್ತಿನ್ನಾರು ಈ ಕಾರ್ಯವನ್ನು ನಡೆಸಿಯಾರು? ಈ ತೆರನಾದ ಸಾಹಿತ್ಯ ನಿರ್ಮಾಣವಾಗದೆ ನಮ್ಮ ನಾಡಿನ ಪ್ರಗತಿ ಅಸಾಧ್ಯ.

ಅಕ್ಷರ ಕಲಿತ ವಯಸ್ಕರಿಗೆಂದು ನಾವು ಪ್ರಕಟಿಸುವ ಪುಸ್ತಕಗಳನ್ನು ಶೈಲಿ, ವಿಚಾರ, ಭಾವನೆಗಳಿಗೆ ಅನುಗುಣವಾಗಿ ವಿಂಗಡಿಸುವುದು ಅವಶ್ಯಕ. ಈ ರೀತಿ ಕೃತಿಗಳನ್ನು ಅಂತಸ್ತಿಗೆ ಅನುಸಾರವಾಗಿ ವಿಂಗಡಿಸಿ ರಚಿಸುವಾಗ ಓದುಗನ ಆಸಕ್ತಿ, ಶಬ್ದಜ್ಞಾನ, ಅನುಭವ, ವಿಚಾರಶಕ್ತಿಗಳನ್ನು ಸಾಹಿತಿಗಳು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು.

ಸಾಮಾನ್ಯವಾಗಿ ಪತ್ರಿಕೆಗಳಲ್ಲಿ ಬರುವ ಲೇಖನ ಸಮಾಚಾರಗಳಲ್ಲಿಯೂ ವಿಜ್ಞಾನ ಅಥವಾ ತತ್ವ ವಿಚಾರಗಳನ್ನು ಕುರಿತ ಪುಸ್ತಕಗಳಲ್ಲಿಯೂ ಆಗತಾನೆ ಅಕ್ಷರ ಕಲಿತಿರುವ ವಯಸ್ಕನಿಗೆ ಆಸಕ್ತಿ ಹುಟ್ಟುವುದು ಕಷ್ಟ. ಅಂತಹ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಮೊದಲು ಅವನಿಗೆ ಓದಲು ಕೊಡುವುದರಿಂದ ಅವರ ವಾಚನಾಭಿರುಚಿಯೇ ನಷ್ಟವಾಗಬಹುದು. ಆದುದರಿಂದ ಅಂತಹವರಿಗೆ ಓದಲು ಪುಸ್ತಕಗಳನ್ನು ರಚಿಸುವಾಗ ನಾವು ತುಂಬಾ ಎಚ್ಚರಿಕೆ

ಯಿಂದ ಇರಬೇಕು. ಅವರಿಗೆ ಪರಿಚಯವಿರುವ ವಿಚಾರಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಅದರಲ್ಲೂ ಕಥಾ ಸಾಹಿತ್ಯವನ್ನು ಅವರ ಕೈಯಲ್ಲಿ ಇಡುವುದೇ ಮೇಲು.

ನಮ್ಮ ನಾಡಿನಲ್ಲಿ ನೂರಕ್ಕೆ ಎಂಭತ್ತು ಮಂದಿ ಸ್ಥೂಲವಾಗಿ ರಾಮಾಯಣದ ಕಥೆಯನ್ನು ಬಲ್ಲವರಾಗಿದ್ದಾರೆ. ಆದುದರಿಂದ ಆಗತಾನೆ ಅಕ್ಷರ ಕಲಿತವರು ಓದಲು ರಾಮಾಯಣಕ್ಕೆ ಸಂಬಂಧಿಸಿದ ಕತೆಗಳನ್ನು ಒಳಗೊಂಡ ಪುಸ್ತಕವನ್ನು ರಚಿಸುವುದು ಉತ್ತಮವೆಂದು ತೋರುತ್ತದೆ. ಕಥಾವಸ್ತು ಪುರಾತನವಾದುದಾದರೂ, ಮಾನವನ ಪ್ರಧಾನ ರಾಗದ್ವೇಷಗಳಿಗೆ ಈ ಕಥಾವಸ್ತುವಿನಲ್ಲಿ ಇಂಬು ದೊರೆತಿದೆಯಾಗಿ ಈ ಕಥೆಗಳ ನಿರೂಪಣೆಯಲ್ಲಿಯೂ, ಭಾವವಿಸ್ತರಣ, ವಿಚಾರ ವಿಮರ್ಶೆಯಲ್ಲಿ ನೂತನ ಪ್ರಗತಿಶೀಲ ದೃಷ್ಟಿಯ ಪ್ರಭಾವವನ್ನು ಬೀರಲುಕೂಡ ಅವಕಾಶವಿದೆ. ನಮ್ಮ ಸಾಹಿತಿಗಳು ಈ ಅವಕಾಶವನ್ನು ಸದುಪಯೋಗಮಾಡಿಕೊಳ್ಳಬೇಕು. ರಾಮಾಯಣದ ವಿಚಾರವಾಗಿ ನಮ್ಮ ನಾಡಿನ ಪ್ರಧಾನ ಜನಾಂಗವಾದ ಹಿಂದೂ ವಯಸ್ಕರು ಜ್ಞಾನಾರ್ಜನೆಯ ಆಸಕ್ತಿಯ ಜೊತೆಗೆ ಧಾರ್ಮಿಕ ಆಸಕ್ತಿಯಿಂದಲೂ ಪ್ರೇರಿತರಾಗಿ ರಾಮಾಯಣದ ಕಥೆಯನ್ನು ಓದುವರು: ತಮ್ಮ ವಾಚನಾಭಿರುಚಿಯನ್ನೂ, ಜ್ಞಾನಾರ್ಜನಾಸಕ್ತಿಯನ್ನೂ ಬೆಳೆಸಿಕೊಳ್ಳುವರು.

ರಾಮಾಯಣ ಕಥಾ ಸಂಕಲನವಲ್ಲದೆ, ಇಡೀ ರಾಮಾಯಣವನ್ನು ಚಿಕ್ಕ ಚಿಕ್ಕ ಭಾಗಗಳಾಗಿ ರಚಿಸಿ ಪ್ರಕಟಿಸುವುದೂ ಒಂದು ಒಳ್ಳೆಯ ಕಾರ್ಯಕ್ರಮ. ಈ ರಾಮಾಯಣದ ರಚನೆಯಲ್ಲಿ ರಸವತ್ತಾದ ಕಥಾ ನಿರೂಪಣೆಯ ಜೊತೆಗೆ ಕ್ರಮಕ್ರಮವಾಗಿ ಪ್ರೌಢವಾಗುತ್ತ ಹೋಗುವ ಶೈಲಿಯಿರಬೇಕು. ಇದರಿಂದ ಆಗತಾನೆ ಅಕ್ಷರ ಕಲಿತವರು ಈ ರಾಮಾಯಣವನ್ನು ಓದಲು ಆರಂಭಿಸಿದರೆ, ಅದನ್ನು ಓದಿ ಮುಗಿಸುವ ಹೊತ್ತಿಗೆ ಅವರು ಕಷ್ಟವಿಲ್ಲದೆ ತಮ್ಮ ಭಾಷಾಜ್ಞಾನವನ್ನು ಬೆಳೆಸಿಕೊಳ್ಳಲು ಸದವಕಾಶ ಏರ್ಪಡುವುದು. ವಿಚಾರ ನಿರೂಪಣೆಕೂಡ ಈ ಗ್ರಂಥದಲ್ಲಿ ಕ್ರಮಕ್ರಮವಾಗಿ ಪ್ರೌಢವಾಗುತ್ತ ಹೋದರೆ, ಓದುಗನ ಮನೋವಿಕಾಸಕ್ಕೆ ಅದು ಸಹಾಯಕವಾಗುವುದು.

ಆಗತಾನೆ ಅಕ್ಷರ ಕಲಿತವರ ಉಪಯೋಗಕ್ಕಾಗಿ ಮೇಲೆ ಹೇಳಿದ ನೂತನ ರೀತಿಯಲ್ಲಿ ರಚಿತವಾದ ರಾಮಾಯಣ ಆ ವಿಧಾನವನ್ನೇ ಅನುಸರಿಸಿದ

ಭಾರತ ಮತ್ತು ಇತರ ಪ್ರಾಚೀನ ಕಾವ್ಯಗಳು ಇವಿಷ್ಟೆ ಸಿದ್ಧವಾದರೆ ಸಾಲದು. ಅವರ ನಿತ್ಯ ವ್ಯವಹಾರಜ್ಞಾನಕ್ಕೂ, ಸಾಹಿತ್ಯಾಭ್ಯಾಸಕ್ಕೂ ಸಹಾಯಕವಾಗು ವಂತಹ ಗ್ರಂಥಗಳ ರಚನೆ, ಸಂಪಾದನೆ ಅವಶ್ಯಕ.

ಈ ವಿಚಾರವನ್ನು ಕುರಿತು ಯೋಚಿಸುವಾಗ ನಮ್ಮ ಮನಸ್ಸು ಕಳೆದ ಕೆಲವಾರು ಶತಮಾನಗಳಿಂದ ನಮ್ಮ ಹಳ್ಳಿಗರ ನಡುವೆ ಬೆಳೆದು ಬಂದಿರುವ ಸರಳವಾದ ಆದರೆ ಸತ್ವಶಾಲಿಯಾದ ಜನಪದ ಸಾಹಿತ್ಯದ ಹೆಸರಿನಲ್ಲಿ ಈವರೆಗೆ ಶೇಖರವಾಗಿರುವ ಎಲ್ಲ ಬರವಣಿಗೆ ಮತ್ತು ಇನ್ನು ಮುಂದೆ ಗ್ರಂಥಸ್ಥವಾಗ ಬಹುದಾದ ಎಲ್ಲ ಬರವಣಿಗೆ ಉತ್ತಮ ಸಾಹಿತ್ಯವೆಂದು ಹೇಳಲು ಸಾಧ್ಯವಿಲ್ಲ. ಈ ಲೇಖನಗಳ ರಾಶಿಯನ್ನು ಶೋಧಿಸಿ ಸುಂದರ ಸಾಹಿತ್ಯ ಭಾಗಗಳನ್ನು ಮಾತ್ರ ಎತ್ತಿ ಅವುಗಳ ಸೊಗಸು ಸುಲಭವಾಗಿ ಅರ್ಥವಾಗಲು ಸಹಾಯಕ ವಾಗುವ ಮುನ್ನುಡಿ ಟಿಪ್ಪಣಿಗಳ ಸಹಿತ ಅವನ್ನು ಪ್ರಕಟಿಸಬೇಕು.

ಇದಲ್ಲದೆ, ಬಾಯಿಪಾಠದ ಮತ್ತು ಸ್ತೋತ್ರಪಾಠದ ಪುಸ್ತಕಗಳನ್ನು ಆಧು ನಿಕ ರೀತಿಯಲ್ಲಿ ಪರಿಷ್ಕರಿಸಿ ಪ್ರಕಟಿಸಬಹುದು. ಇವು ವಾಚಕರ ಶಬ್ದಜ್ಞಾನ ವನ್ನೂ, ಪ್ರಾಚೀನ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾದ ಅಂಶಗಳ ತಿಳುವಳಿಕೆಯನ್ನು ಹೆಚ್ಚಿಸುತ್ತವೆ.

ಎರಡನೆಯ ಅಂತಸ್ತಿನಲ್ಲಿ ನಮ್ಮ ರಾಷ್ಟ್ರದ ಪ್ರಮುಖ ಐತಿಹಾಸಿಕ ಘಟನೆಗಳಿಗೂ, ಮಹನೀಯರ ಚರಿತೆಗಳಿಗೂ ಸಂಬಂಧಿಸಿದ ಗ್ರಂಥಗಳನ್ನೂ, ಜಗತ್ತಿನ ಇತಿಹಾಸವನ್ನು ಸ್ಥೂಲವಾಗಿ ನಿರೂಪಿಸುವ ಸರಳ ಗ್ರಂಥಗಳನ್ನು ಸೇರಿಸಬಹುದು.

ಇದರ ಮುಂದಿನ ಮಾರ್ಗದಲ್ಲಿ ರಾಜಕೀಯ ಆರ್ಥಿಕ ವಿಚಾರಗಳಿಗೂ ವಿಜ್ಞಾನ ತತ್ವವಿಚಾರಗಳಿಗೂ ಸಂಬಂಧಿಸಿದ ಗ್ರಂಥಗಳನ್ನೂ, ಪ್ರೌಢಸಾಹಿತ್ಯ ವನ್ನೂ ಸೇರಿಸಬಹುದು.

ಅಂತು, ಅಕ್ಷರ ಕಲಿತವನನ್ನು ಬೇಜಾರುಗೊಳಿಸಿ ಅವನನ್ನು ಮತ್ತೆ ಅನಕ್ಷರತೆಗೆ ತಳ್ಳದೆ, ಅವನ ಶಬ್ದ, ಜ್ಞಾನ ಸಂಪತ್ತಿ, ವಿವೇಚನಾಶಕ್ತಿಗಳು ಬೆಳೆಯಲು ಅವಶ್ಯಕವಾದ ವಿವಿಧ ಅಂತಸ್ತಿನ ವರ್ಗದ ಗ್ರಂಥಗಳನ್ನು ರಚಿಸ ಬೇಕು. ಎಂತಹ ಗ್ರಂಥಗಳೇ ಹಳ್ಳಿಗರಿಗೆ ಬೇಕಾಗಿರುವ ಸಾಹಿತ್ಯ, ಈ ಸಾಹಿ ತ್ಯದ ಬಹಿರ್ರೇಖೆಯನ್ನು ಮಾತ್ರ ನಾನು ಸೂಚಿಸಿದ್ದೇನೆ. ಹಳ್ಳಿಗರಿಗಾಗಿ

ಹೊಸದೊಂದು ಸಾಹಿತ್ಯವನ್ನು ನಿರ್ಮಿಸಲು ಬಯಸುವ ಪ್ರಗತಿಶೀಲ ಸಾಹಿತಿಗಳೂ, ಅಕ್ಷರತೆಯೇ ನಮ್ಮ ಜನಾಂಗದ ಭಾವೀ ಹಿತದ ಜೀವಾಳವೆಂದು ನಂಬಿ ಅದಕ್ಕಾಗಿ ದುಡಿಯುತ್ತಿರುವ ಅಕ್ಷರ ಪ್ರಚಾರವಾದಿಗಳೂ ಆ ಬಹಿರ್ರೇಖೆಯನ್ನು ನೀಟಾಗಿ ತಿದ್ದಿ, ಅದಕ್ಕೆ ಬಣ್ಣ ತುಂಬಿ ಜೀವಕಳೆ ಕೊಡಬೇಕಾಗಿದೆ.

ಈ ಕೆಲಸ ಒಬ್ಬಿಬ್ಬರಿಂದ ಸಾಧ್ಯವಿಲ್ಲ. ವಿಪುಲವಾದ ಜನಸಹಾಯ, ಅಪಾರ ಧನಸಹಾಯದಿಂದ ಮಾತ್ರ ಈ ಕಾರ್ಯವನ್ನು ಸಾಧಿಸಬಹುದಾಗಿದೆ. ಅವಿಲ್ಲದಿದ್ದರೆ ನಾನು ಬರೆದಿರುವುದೆಲ್ಲಾ ಕಾಗದದಮೇಲೆ ಚಿತ್ರಿತವಾಗಿರುವ ಕನಸು ಅಷ್ಟೆ.

ಕೊನೆಯದಾಗಿ ಒಂದೆರಡು ಮಾತುಗಳು : ನಮ್ಮ ನಾಡಿನ ಪ್ರಜೆಗಳ ಜೀವನ ಹಸನಾಗಬೇಕಾದರೆ, ಅವರಲ್ಲಿ ಬರೀ ಅಕ್ಷರಜ್ಞಾನ, ವಿಚಾರಜ್ಞಾನ ಬೆಳೆದರೆ ಸಾಲದು. ಅವುಗಳ ಜೊತೆಗೆ ಸಂಸ್ಕೃತಿಯೂ ಬೆಳೆಯಬೇಕು. ಭಾರತ ಸಂಸ್ಕೃತಿ ಜಗತ್ತಿನಲ್ಲಿ ತನ್ನದೇ ಆದ ಕೆಲವು ವಿಶಿಷ್ಟ ಗುಣಗಳಿಂದ ಮೆರೆಯುತ್ತಿದೆ. ತೃಪ್ತಿ, ಸಹನೆ, ಸಹಿಷ್ಣುತೆ, ಸತ್ಯದರ್ಶನಾಕಾಂಕ್ಷೆ ಇವು ನಮ್ಮ ಸಂಸ್ಕೃತಿಯ ಮುಖ್ಯ ಲಕ್ಷಣಗಳು. ಈ ಗುಣಗಳು ಜಗತ್ತಿನ ಹಿತ ಸಾಧನೆಗೆ ಅವಶ್ಯಕವಾದುವು. ಪ್ರಜಾಪ್ರಭುತ್ವಬದ್ಧವಾದ ನೂತನ ಜಗದ್ವ್ಯವಸ್ಥೆ ಬಲವಾಗಿ ಬೇರೂರಿ ಬೆಳೆಯಬೇಕಾದರೆ ಈ ಗುಣಗಳಿಗೆ ಜಗತ್ತಿನ ಎಲ್ಲ ಭಾಗಗಳಲ್ಲೂ ಮಾನ್ಯತೆ ದೊರೆಯುವಂತಾಗಬೇಕು. ಆದ್ದರಿಂದ ನಮ್ಮ ಜನರಲ್ಲಿ ಈ ಪುರಾತನ ಸಂಸ್ಕೃತಿಯನ್ನು ಉಜ್ಜೀವಿಸಿ ಬಲಗೊಳಿಸುವುದೂ ನಮ್ಮ ಸಾಹಿತಿಗಳಿಗೆ ಸೇರಿದ ಕೆಲಸವಾಗಿದೆ.

ನಮ್ಮ ಜನರಲ್ಲಿ ರಾಜಕೀಯ ಸಾಂಸ್ಕೃತಿಕ ಆಸಕ್ತಿ ಕುಗ್ಗದಂತೆ ಸ್ಥಾನಿಕ ವಿಚಾರಗಳಿಗೆ ಅವರು ಹೆಚ್ಚು ಹೆಚ್ಚಾಗಿ ಗಮನಕೊಡುವಂತೆ ಮಾಡಲು ಈಗ್ಗೆ ಇಪ್ಪತ್ತು ಇಪ್ಪತ್ತೈದು ವರ್ಷಗಳ ಹಿಂದೆ ನಮ್ಮ ಸಂಸ್ಥಾನದ ಹಿರಿಯರೊಬ್ಬರು ಕೈಗೊಂಡ ದೊಡ್ಡ ಕಾರ್ಯವೊಂದು ಈಗ ನನಗೆ ನೆನಪಾಗಿದೆ. ಆಗ ಸಂಸ್ಥಾನದ ದಿವಾನರಾಗಿದ್ದ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ನಮ್ಮ ಜನರ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಜೀವನವನ್ನು ಸುಧಾರಿಸಲು ನಾನಾ ಕಾರ್ಯಕ್ರಮಗಳನ್ನು ಕೈಗೊಂಡರು. ಆ ಕಾರ್ಯಕ್ರಮ ವಿಧಾನಗಳ ಮತ್ತು ಅವು ಅಷ್ಟಾಗಿ ಫಲಿಸದೆ ಹೋದುದಕ್ಕೆ ಕಾರಣವಾದ ಅಂಶಗಳ

ಅಧ್ಯಯನವು ಹಳ್ಳಿಗರಿಗಾಗಿ ಹೊಸ ಸಾಹಿತ್ಯವನ್ನು ನಿರ್ಮಿಸಲು ಬಯಸು ತ್ತಿರುವ ನಮ್ಮ ಪ್ರಗತಿ ಸಾಹಿತಿಗಳಿಗೆ ಕೆಲವಾರು ವಿಚಾರಗಳಲ್ಲಿ ಕೈದೀವಿಗೆ ಯಾಗುವುದೆಂದು ನನಗೆ ತೋರುತ್ತದೆ. ನಮ್ಮ ಸಂಸ್ಥಾನದಲ್ಲಿ ಅಕ್ಷರತೆ ತಕ್ಕಷ್ಟು ಪ್ರಮಾಣದಲ್ಲಿ ಬೆಳೆಯದೇ ಹೋದುದೇ ಸರ್ ಎಂ. ವಿಶ್ವೇಶ್ವರಯ್ಯ ನವರ ಕಾರ್ಯಕ್ರಮಗಳು ಪೂರ್ಣವಾಗಿ ಫಲಿಸದೆ ಹೋದುದಕ್ಕೆ ಮುಖ್ಯ ಕಾರಣ ವೆಂದು ಹೇಳಬಹುದು.

ಈ ಕಾರಣ ಅದೇನೇ ಇರಲಿ – ಸರ್ ಎಂ. ವಿಶ್ವೇಶ್ವರಯ್ಯನವರು ಕೈಗೊಂಡ ಆ ದೊಡ್ಡ ಕಾರ್ಯಕ್ರಮ ಏನೆಂದರೆ ಸಂಸ್ಥಾನದ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿಯೂ ಪ್ರಧಾನವಾಗಿ ಸ್ಥಾನಿಕ ಆಸಕ್ತಿಯುಳ್ಳ ವೃತ್ತ ಪತ್ರಿಕೆಗಳನ್ನು ಸ್ಥಾಪಿಸಿದುದು. ಜನರಲ್ಲಿ ಅಂದು ಅಕ್ಷರತೆ ತೀರ ಕಡಿಮೆ ಯಾಗಿದ್ದುದರಿಂದ ಈ ಪತ್ರಿಕೆಗಳು ಅಲ್ಪ ಜೀವಿಗಳಾದುವು. ನಿಜ. ಆದರೆ, ಸಾರ್ವತ್ರಿಕ ಅಕ್ಷರ ಪ್ರಚಾರವಾದ ಮೇಲೆ, ಇಂತಹ ಪತ್ರಿಕೆಗಳು ಸುಪುಷ್ಟವಾಗಿ ಬೆಳೆದು, ರಾಷ್ಟ್ರಜೀವನದ ಪ್ರಮುಖ ಶಕ್ತಿಗಳಲ್ಲಿ ಒಂದಾಗಿ ಪರಿಣಮಿಸುವು ದೆಂಬುದಕ್ಕೆ ವಿದೇಶಗಳ ಸ್ಥಾನಿಕ ಪತ್ರಿಕೆಗಳೇ ಸಾಕ್ಷಿ. ಆದ್ದರಿಂದ ಇಂತಹ ಪತ್ರಿಕಾರಚನೆಯೂ, ಹಳ್ಳಿಗರಿಗೆ ಬೇಕಾದ ಸಾಹಿತ್ಯದ ಒಂದು ಅಂಗ.

ಈ ಲೇಖನದ ಮೊದಲ ಭಾಗದಲ್ಲಿ, ಇನ್ನು ಐದು ವರ್ಷಗಳೊಳಗಾಗಿ ಹಳ್ಳಿಗರಿಗೆ ಬೇಕಾದ ಸಾಹಿತ್ಯ ಸಿದ್ಧವಾಗುವುದಲ್ಲದೆ ಅವರ ಅನಕ್ಷರತೆ ಕೂಡ ಪೂರ್ಣವಾಗಿ ತೊಲಗಬೇಕೆಂಬ ಬಯಕೆಯನ್ನು ತೋರಿದ್ದೇನೆ.

ಯುದ್ಧ ರಾಷ್ಟ್ರದ ಧನಶಕ್ತಿಯನ್ನು ಹೀರುತ್ತಿರುವಾಗ ಕಾಗದಕ್ಕೆ ಕ್ಷಾಮ, ಮುದ್ರಣದ ನಿಯಂತ್ರಣ ಬಂದಿರುವಾಗ ಈ ಕಾರ್ಯಸಾಧನೆ ಆದೀತೆ?

ಆ ಪ್ರಶ್ನೆಗೆ ಉತ್ತರ ಹೇಳಲು ನಾನು ಸಮರ್ಥನಲ್ಲ. ಸಾರ್ವತ್ರಿಕ ಅಕ್ಷರಪ್ರಚಾರ ಜ್ಞಾನಪ್ರಚಾರಗಳಲ್ಲಿ ತೊಡಗಿರುವವರು ಸಮಷ್ಟಿ ರೂಪದಲ್ಲಿ ಅದಕ್ಕೆ ಉತ್ತರಕೊಡಬೇಕು. ಉತ್ತರ 'ಹೂ' ಆದರೆ ಅವರು ಗೆದ್ದರು; 'ಉಹೂ' ಆದರೆ ಅವರು ಸೋತರು.

———:———

ಕೂಲಿಕಾರರು ಮತ್ತು ಸಾಹಿತ್ಯ

ಕೆ. ಶ್ರೀಕಂಠೇಶ್ವರನ್

"ಕಿಕ್ಕಿರಿ ತುಂಬಿದೆ ಭೂಮಿಯ ಕಣಜ
ಕಕ್ಕಸ ಬಡುತಿದೆ, ಬೊಕ್ಕಸದೊಡಲು
ಬಾಳಿಗಿಂತಲೂ, ಕೂಳೆ ಮೇಲೊ ?
ಬರಿದೋ ಬರಿದು ತೆರವೋ ತೆರವು
ಬಡವರ ಬಗ್ಗರ ತುತ್ತಿನ ಚೀಲ"

—ಬೇಂದ್ರೆ.

ಕೂಲಿಕಾರರು ಯಾರು ?

ಕೂಲಿಕಾರರು ಯಾಂತ್ರಿಕಯುಗದ ಶಿಲ್ಪಿಗಳು. ಕೈಗಾರಿಕೆಯ ಸೂತ್ರಧಾರಿಗಳು. ಕೈಗಾರಿಕಾ ರಾಷ್ಟ್ರದ ಸಂಸ್ಥಾಪಕರು. ಪ್ರತಿದಿನವೂ ಕೂಳಿಗಾ ಕಂಗೆಟ್ಟು ಅಲೆಯುವವರು. ಅವರು ಸ್ಥಳೀಯರಾಗಿರಬಹುದು; ವಿದೇಶೀಯರಾಗಿರಬಹುದು. ಆ ದಿನದ ಸಂಪಾದನೆ ಆ ದಿನದ ಕೂಳು. ಕೆಲವರ ಬಿಟ್ಟರೆ ಎಲ್ಲಿಯೂ ಅವರು ಶಾಶ್ವತವಾಗಿ ನೆಲಸಿಲ್ಲ. ಅವರದು ದೊಂಬ ಜೀವನ. ಎಷ್ಟೋ ಮಂದಿ ಬೀಡುಗಳಿಲ್ಲದೆ ದಿನವೆಲ್ಲ ಶ್ರಮಿಸಿ ರಸ್ತೆಯ ಪಕ್ಕಗಳಲ್ಲಿಯೋ, ಮನೆಯ ಜಗುಲಿಗಳ ಮೇಲೆಯೋ ಮಲಗುವ ಬಾಳ್ವೆ ಅವರದು. ಎಷ್ಟೋ ಮಂದಿಗೆ ಸಂಸಾರಗಳಿಲ್ಲ. ಕೂಲಿ ಸಿಗದೆ ಬಹುಮಂದಿ ಇತರರ ಕೂಲಿಕಾರರ ಕೂಳಿಗೆ ಪಾಲಾಗಿಲ್ಲ. ಆರೋಗ್ಯವಾಗಿ ಜೀವಿಸಲು ಬೀಡಿಲ್ಲ. ಹಿಂದಿನಂತೆ ಸ್ವತಂತ್ರವಾಗಿ ಜೀವಿಸುವುದು ಹೋಯಿತು. ಸಾಕಷ್ಟು ಧನಾರ್ಜನೆಯಿಲ್ಲ. ಅದರಿಂದ ಪರರನ್ನು ಅವಲಂಬಿಸಬೇಕಾಯಿತು. ಬಾಳಿಗಿಂತಲೂ ಕೂಳೇ ಪ್ರಧಾನವಾಗಿರುವ, ಬಾಳ್ವೆಯನ್ನು ಪರಾಧೀನತೆಗೆ ಒಪ್ಪಿಸಿ ನಾಗರಿಕತೆಯನ್ನು ಮರೆಯುತ್ತಿರುವ ಬಡಬಗ್ಗರ ಗುಂಪೇ ಕೂಲಿಕಾರರು.

ಸಾಮಾನ್ಯವಾಗಿ ಸಂಸಾರ ಹೂಡಿರುವ ಕೂಲಿಕಾರರು ಎಂಟು ಅಥವಾ ಹತ್ತುಮಂದಿಯವರೆಗೂ ಒಂದು ಕೋಣೆಯಲ್ಲಿ ಜೀವಿಸಿರುವರು. ಆ ಒಂದು ಕೋಣೆಯಲ್ಲಿ ಅಡಿಗೆ, ಊಟ ಮತ್ತು ನಿದ್ರೆ. ಅದರ ಪರಿಣಾಮವಾಗಿ ರೋಗರುಜಿನಗಳಿಗೆ ಬಲಿಯಾಗಿ ಅವರ ಆರೋಗ್ಯವು ಅಧೋಗತಿಗೆ ಬಂದಿದೆ. ಉಚಿತ ವೈದ್ಯಕೀಯ ಚಿಕಿತ್ಸೆ ಕೊಡುವವರಿಲ್ಲ; ಪ್ರತ್ಯೇಕ ಆಸ್ಪತ್ರೆಗಳೂ ಇಲ್ಲ.

ಕೂಲಿಕಾರ ವರ್ಗದ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಸರಕಾರದ ಕರ್ತವ್ಯ. ಅವರು ಶುಚಿಯಾಗಿರುವುದಿಲ್ಲ. ನಿರ್ಮಲವಾದ ಬಟ್ಟೆ ಹಾಕಿಕೊಳ್ಳುವುದಿಲ್ಲ. ಪ್ರತಿದಿನ ಸ್ನಾನಮಾಡುವುದಿಲ್ಲ. ಬೆವತು ಬೆವತು ರಟ್ಟೆನಂತಾಗಿರುವ ಬಟ್ಟೆಯನ್ನು ವಾರಕ್ಕೊಮ್ಮೆ ಬದಲಾಯಿಸಿದರೆ ಹೆಚ್ಚು. ಬಟ್ಟೆಗಳನ್ನು ನೆಯ್ಯುತ್ತಾರೆ; ಆದರೆ ಚೊಕ್ಕಟವಾಗಿ ಬಟ್ಟೆ ಧರಿಸುವ ಲಭ್ಯ ಅವರಿಗಿಲ್ಲ. ಭೂಮಿಯನ್ನು ಉಳುತ್ತಾರೆ; ಸಾಕಷ್ಟು ಊಟಮಾಡಲು ಧನ್ಯರಲ್ಲ. ಐಶ್ವರ್ಯವಂತರಿಗೆ ಭವನಗಳನ್ನು ಕಟ್ಟುತ್ತಾರೆ; ಆದರೆ ಅವರು ವಾಸಮಾಡುವ ಬೀಡುಗಳು ಧನಗಳ ಕೊಟ್ಟಿಗೆಗಳಿಗಿಂತ ಬೀಳು. ದೇಶರಕ್ಷಣೆಗೆಂದು ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಾರೆ; ಆದರೆ ಅವರ ರಕ್ಷಣೆಗೆ ಒಂದಾದರೂ ಇಲ್ಲ. ಬೆವರು ಸುರಿದು ದಣಿದು ಮೈಮುರಿಯುವವರೆಗೂ ದುಡಿದು ಸಂಪಾದಿಸುವ ತುಚ್ಛ ವರಮಾನದಿಂದ ಬದುಕುವ ಬಾಳು ವ್ಯರ್ಥ.

ಸಂಬಳದ ದರಗಳು

ಎಲ್ಲಿಯೂ ನಿರ್ದಿಷ್ಟವಾದ ಸಂಬಳದ ದರವನ್ನು ನಿಗದಿಮಾಡಿಲ್ಲ. ಅದರಲ್ಲಿಯೂ ಇಂಡಿಯನ್ ಮತ್ತು ಯೂರೋಪಿಯನ್ ಎಂಬ ತಾರತಮ್ಯ ಬೇರೆ. ಇಂಡಿಯದ ಕಾರ್ಖಾನೆಯಲ್ಲಿ ಸಂಬಳದ ದರವು ಕೈಗಾರಿಕೆಯಿಂದ ಕೈಗಾರಿಕೆಗೂ, ಕಾರ್ಖಾನೆಯಿಂದ ಕಾರ್ಖಾನೆಗೂ, ಸ್ಥಳದಿಂದ ಸ್ಥಳಕ್ಕೂ ಬಹುಮಟ್ಟಿಗೆ ವ್ಯತ್ಯಾಸವಾಗುತ್ತದೆ. ೧೯೪೨ನೆಯ ಪ್ರಾರಂಭದಲ್ಲಿ ಇಂಡಿಯದ ಕಾರ್ಖಾನೆಯ ಎಲ್ಲ ಶಾಖೆಗಳಲ್ಲಿಯೂ ಮುಖ್ಯ ಉದ್ಯೋಗಗಳನ್ನು ವಹಿಸಿದ್ದ ಚತುರ ಕೆಲಸಗಾರರಿಗೆ ತುಟ್ಟಿಭತ್ಯ (Dearness allowance) ಸೇರಿಕೊಂಡು ಕೊಡುತ್ತಿದ್ದ ಪ್ರಧಾನ ಸಂಬಳದ ದರಗಳ ಸ್ಥೂಲವಾದ ಪಟ್ಟಿಯನ್ನು ಕೊಡಲಾಗಿದೆ. (ಅನುಬಂಧ ೧)

ಪಟ್ಟಿಯಲ್ಲಿರುವಂತೆ ಕೂಲಿಕಾರರು ಉದ್ಯೋಗಗಳ ಪ್ರಕಾರವಾಗಿ ಸಂಬಳ ಪಡೆಯುತ್ತಿಲ್ಲ. ಅರ್ಧಪ್ರವೀಣ ಕೆಲಸಗಾರರು ೧೨ ಆಣೆಗಿಂತ ಕಡಿಮೆಯೇ ಸಂಪಾದನೆ ಮಾಡುವುದು. ಎರಕ ಹೊಯ್ಯುವವರು ರೂ. ೧-೮-೦ ಮೇಲ್ಪಟ್ಟು ಸಂಪಾದಿಸುವುದು ಅಪೂರ್ವ. ನಮೂನೆಗಾರರಿಗೆ ರೂ. ೨-೦-೦ ಮೇಲ್ಪಟ್ಟಿಲ್ಲ; ಯಂತ್ರಕಾರರಿಗೆ ರೂ. ೧-೧೨-೦ ಗಿಂತ ಹೆಚ್ಚಾಗಿಲ್ಲ. ಸರಕಾರವು ಸಂಬಳದ ಪ್ರಮಾಣವನ್ನು ಜಾರಿಗೆ ತರುವಂತೆ ನಿರ್ಬಂಧಿಸಬೇಕು.

ಬಂಡವಾಳಗಾರರು

ಕೂಲಿಕಾರರು ನೋಡಲು ಅಸಹ್ಯರೆಂದು ನಾವು ಅಲ್ಲಗಳೆಯಬಾರದು. ನಾವೇ ಅದಕ್ಕೆ ಮೂಲ. ಅವರಿಂದಲೇ ನಾವು ಬದುಕಿರುವುದು. ಹಾಗಿರುವಾಗ ಅವನ ಯೋಗಕ್ಷೇಮವನ್ನು ನೋಡದೆ, ಹಾಗಿರಬೇಕಾದುದು ಅವನ ಕರ್ಮವೆಂದು ಭಾವಿಸಿ ಸುಮ್ಮನಿರುವುದು ಬಂಡವಾಳಗಾರನ ಮನೋಧರ್ಮ. ಶಕ್ತಿಯಿರುವಷ್ಟು ಕೂಲಿಕಾರ ಸಂತತಿಯ ಸಾರವನ್ನೇ ಹೀರಿ ಹಸಿವನ್ನು ನೀಗದಷ್ಟು ರೊಟ್ಟಿ ನೀಡದ ಎದೆ ಬಂಡವಾಳಗಾರನದು. ಇದರ ನಾಶವೇ ನಾಗರಿಕತೆ; ಅದೇ ಏಕತ್ವ!

ವಸಂತ ಸಾಹಿತ್ಯೋತ್ಸವದ ಕಾಲದಲ್ಲಿ ಶ್ರೀಮಾನ್ ಪಿ. ಹೆಚ್. ಕೃಷ್ಣರಾಯರು ಭಾಷಣಮಾಡುತ್ತ, ಅನುಭವದಲ್ಲಿ ಪ್ರಶ್ನೆಯೊಂದಕ್ಕೆ ಬಂಡವಾಳಗಾರರು ಕೊಟ್ಟ ಉತ್ತರವನ್ನು ಈ ರೀತಿ ಅವತರಿಸಿದ್ದಾರೆ. "ಸಾಹುಕಾರರೆಲ್ಲರೂ ಒಂದೇ ಜಾತಿ - ಅವರಲ್ಲಿ ಹಿಂದೂಗಳಿಲ್ಲ, ಮುಸಲ್ಮಾನರಿಲ್ಲ, ಸ್ಥಳದವರಿಲ್ಲ, ಪರಸ್ಥಳದವರಿಲ್ಲ. ಅವರ ಕೈಗೆ ಸಿಕ್ಕಿದವನು ಬದುಕುವುದು ಕಷ್ಟ."

ಪರಿಹಾರ ದ್ರವ್ಯ

ಕೆಲಸಮಾಡುವಾಗ ಗಾಯಗೊಂಡ ಎಷ್ಟೋ ಮಂದಿ ಕೂಲಿಕಾರರು ಗಿರಣಿಯಿಂದ ಅಧಿಕಾರಯುತ ಪತ್ರವನ್ನು ಪಡೆದಿದ್ದರೂ ಆಸ್ಪತ್ರೆಗಳಲ್ಲಿ ಸರಿಯಾದ ಚಿಕಿತ್ಸೆ ದೊರೆಯದೆ ಪಡುವ ಪಾಡನ್ನು ನೋಡಲು ಸಾಧ್ಯವಿಲ್ಲ. ಒಂದು ಕಡೆ ಗಾಯದ ನರಕಯಾತನೆ; ಇನ್ನೊಂದು ಕಡೆ ಸಂಬಳವಿಲ್ಲದೆ ಸಂಸಾರದ ಗೋಳು. ಏಟು ಬಲವಾಗಿದ್ದರೆ ಕಾರ್ಖಾನೆಯ ಕಾನೂನಿನ ಪ್ರಕಾರ ಪರಿಹಾರ ದ್ರವ್ಯ (Workmen's Compensation) ಬರಬೇಕಾಗುವುದು. ಕೂಲಿಕಾರನು ಸತ್ತುಹೋದರೇನೆ ಪರಿಹಾರ ದ್ರವ್ಯವನ್ನು ಗಳಿಸಲು ವರ್ಷಾಂತರವಾಗುವುದು. ಹಾಗಿದ್ದಮೇಲೆ ಒಂದುವೇಳೆ ಅವನು ನರಳುತ್ತ ಜೀವಿಸಿದ್ದರೆ ಇನ್ನೆಷ್ಟು ಕಾಲವಾಗಬಹುದು. ಅಪಘಾತದಿಂದ ಸಾಯುವ ಕೂಲಿಕಾರನಿಗೆ ಯಾವ ಸಂಬಂಧಿಕನೂ ಇಲ್ಲದೆಹೋದಲ್ಲಿ ಸರಕಾರವೇ ಪರಿಹಾರ ದ್ರವ್ಯವನ್ನು ಉಪಯೋಗಿಸಿಕೊಂಡು ಬಿಡುತ್ತದೆ. ಪರಿಹಾರ ದ್ರವ್ಯವನ್ನು ಕೂಲಿಕಾರನಿಗೆ ಎಂದು ಅಗತ್ಯವೋ ಅಂದು ಕೊಡುವಂತೆ ಏರ್ಪಾಟಾಗಬೇಕು. ಅಲ್ಲದೆ ಕೂಲಿ

ಕಾರನಾಗಲಿ ಅವನ ವಾರಸುದಾರರಾಗಲಿ ಇಲ್ಲದೆ ಹೋದಲ್ಲಿ ಪರಿಹಾರದ್ರವ್ಯವು ಕೂಲಿಕಾರನು ಸದಸ್ಯನಾಗಿರುವ ಕಾರ್ಮಿಕ ಸಂಸ್ಥೆಯ ನಿಧಿಗೆ ಸಲ್ಲುವಂತೆ ಸರಕಾರವು ನಿಯಮಿಸಬೇಕು.

ಕಾರ್ಮಿಕ ಸಂಸ್ಥೆಗಳು

ಇಂಡಿಯ ದೇಶದಲ್ಲಿ ಕಾರ್ಮಿಕ ಸಂಸ್ಥೆಗಳು ಅಸಂಖ್ಯಾತವಾಗಿವೆ. ಅವುಗಳಿಗೆ ಸರಕಾರದ ಬೆಂಬಲವಿಲ್ಲ. ಈ ಸಂಸ್ಥೆಗಳೆಲ್ಲ ಚೆನ್ನಾಗಿ ಕೆಲಸ ಮಾಡಬೇಕು. ಒಂದು ಕೇಂದ್ರ ಕಾರ್ಮಿಕ ಸಂಸ್ಥೆಯಿರಬೇಕು. ಇತರ ಸಂಸ್ಥೆಗಳು ಅದರ ಅಧೀನದಲ್ಲಿರಬೇಕು. ಕೂಲಿಕಾರರ ಹಕ್ಕುಬಾಧ್ಯತೆಗಳನ್ನೂ, ಯೋಗಕ್ಷೇಮವನ್ನೂ, ನಿರುದ್ಯೋಗ ನಿವಾರಣೆಯನ್ನೂ ನೋಡಿಕೊಳ್ಳುವುದೇ ಈ ಸಂಸ್ಥೆಗಳ ಗುರಿಯಾಗಿರಬೇಕು. ಕೂಲಿಕಾರರ ಪ್ರಕೃತ ಅಧೋಗತಿಗೆ ಈ ಕಾರ್ಮಿಕ ಸಂಸ್ಥೆಗಳೂ ಕಾರಣ. ಅವು ಸರಿಯಾಗಿ ಕಷ್ಟಪಟ್ಟು ಕೆಲಸಮಾಡುತ್ತಿಲ್ಲ. ಈ ಸಂಸ್ಥೆಗಳು ಯೋಗ್ಯವಾಗಿ ಕೆಲಸಮಾಡಲು ಸರಕಾರವು ಉತ್ತೇಜನ ಕೊಡಬೇಕು. ಏಕೆಂದರೆ ಕೂಲಿಕಾರನ ಏಳಿಗೆಯೇ ದೇಶಾಭಿವೃದ್ಧಿ.

ಸದಸ್ಯರು

ಕಾರ್ಮಿಕ ಸಂಸ್ಥೆಗಳಲ್ಲಿ ಮಹಿಳೆಯರು ಬಹುಮಂದಿ ಸದಸ್ಯರಾಗಿಲ್ಲ. ೧೯೨೭-೩೮ ರಲ್ಲಿ ೧,೧೬೬ ಮಾತ್ರ; ೧೯೩೩-೩೪ ರಲ್ಲಿ ೨,೯೯೯ ಮಂದಿ; ೧೯೩೯-೪೦ ರಲ್ಲಿ ೧೮,೬೧೨ ಅಥವಾ ಒಟ್ಟಿನ ಸದಸ್ಯತ್ವದಲ್ಲಿ ಶೇಕಡ ೩.೬ ಮಾತ್ರ. ೩೧ ನೇ ಮಾರ್ಚಿ ೧೯೪೦ ರ ವರೆಗೆ ದಾಖಲೆಯಾದ ಸದಸ್ಯರು ೬೬೬ ಕಾರ್ಮಿಕ ಸಂಸ್ಥೆಗಳಲ್ಲಿ ೧೮೮ ಬಂಗಾಳದಲ್ಲಿಯೂ, ೩೦೨ ಬೊಂಬಾಯಿಯಲ್ಲಿಯೂ, ೧೧೧ ಮದರಾಸಿನಲ್ಲಿಯೂ, ೬೫ ಪಂಜಾಬಿನಲ್ಲಿಯೂ ಇದ್ದವು. ೫೧೧,೧೦೮ ಮಂದಿ ಸದಸ್ಯರಲ್ಲಿ ೧೭೯,೩೮೧ ಜನ ರೈಲಿನಲ್ಲಿಯೂ, ೧೩೬,೬೩೧ ಜನ ಗಿರಣಿಗಳಲ್ಲಿಯೂ, ೫೨,೭೪೨ ಮಂದಿ ನಾವಿಕರಾಗಿಯೂ ಇದ್ದರು. ೧೯೪೧ನೆಯ ಅಂತ್ಯದಲ್ಲಿ ಒಟ್ಟು ೭೫೦ ಸಂಸ್ಥೆಗಳೂ, ೬,೫೦,೦೦೦ ಮಂದಿ ಸದಸ್ಯರ ಸಂಖ್ಯೆಯೂ ಇದ್ದುವು. (ಅನುಬಂಧ ೨)

ಇಂಡಿಯಾ ದೇಶದಲ್ಲಿ ಶೇಕಡ ೬೫ ಮಂದಿ ಭೂಮಿ ಉಳುವುದರಲ್ಲಿಯೇ ಆಯಿತು. ಕಾರ್ಖಾನೆಗಳಲ್ಲಿಯೂ ಲಕ್ಷಾಂತರ ಮಂದಿ ಕೆಲಸಮಾಡುತ್ತಿದ್ದಾರೆ.

ಇದುವರೆಗೆ ಕೂಲಿಕಾರರ ಸೌಖ್ಯಕ್ಕೆ ಅಗತ್ಯವಾದ ಯಾವುದೊಂದು ರಚನಾತ್ಮಕ ನೀತಿಕ್ರಮವನ್ನು ನಿರ್ಬಂಧಿಸಿಲ್ಲ. ಅದರ ಪರಿಣಾಮವಾಗಿ ಕೂಲಿಕಾರರ ಜೀವನದಲ್ಲಿ ಸಾಮ್ಯತೆಯಿಲ್ಲ. ಈ ಸಾಮ್ಯತೆ ಸೃಷ್ಟಿಯಾಗುವವರೆಗೆ ಕೈಗಾರಿಕೆಯಾಗಲಿ, ಕಾರ್ಖಾನೆಯಾಗಲಿ ರಾಷ್ಟ್ರವಾಗಲಿ ಅಭಿವೃದ್ಧಿ ಹೊಂದುವುದಿಲ್ಲ. (ಅನುಬಂಧ ೩)

ಕೂಲಿಗಾರರು ರಾಷ್ಟ್ರದ ಭಂಡಾರವನ್ನು ತುಂಬುವರು. ಆದರೆ ಅವರೆಲ್ಲರೂ ದರಿದ್ರರೆ. ವ್ಯವಸಾಯದ ಮೂಲಪುರುಷರೇ ಅವರು. ಆದರೆ ಹೊಟ್ಟೆಗಿಲ್ಲದೆ ನರಳಿ ಬಳಲಿ ಹೋಗುವರು. ಕಾಲೇಜುಗಳನ್ನು ಕಟ್ಟಿದವರೇ ಅವರು. ಆದರೆ ಅಕ್ಷರಶಃ ನಿರಕ್ಷರಕುಕ್ಷಿಗಳು. ಅವರನ್ನು ಸಮತಾವೃಷ್ಟಿಯಿಂದ ನೋಡುವುದು ನಮ್ಮ ಕರ್ತವ್ಯ. ಅವರು ಉತ್ತಮವಾದ, ಆರೋಗ್ಯಕರವಾದ ಬೀಡುಗಳಲ್ಲಿ ಜೀವಿಸುವ ಅನುಕೂಲವಾಡಿಕೊಡಬೇಕು; ವಿದ್ಯಾಭ್ಯಾಸ ಕೊಡಬೇಕು. ಆನಂದವಾಗಿ ಆರಾಮುಪಡೆಯಲು ಅವಕಾಶ ಕೊಡಬೇಕು. ಅವರ ಆರೋಗ್ಯವನ್ನು ಕಾಪಾಡಬೇಕು. ಅನುಭವವಿಲ್ಲದ ಮೂಢ (ದಬ್ಬಾಳಿಕೆಗೆ ಮೂಕರೂ ಆಗಿದ್ದಾರೆ) ಜೀವಿಗಳು ಅಪಾಯಕರ ಯಂತ್ರಗಳ ವಿಚಾರದಲ್ಲಿ ಎಚ್ಚರಿಕೆಯಿಂದಿರಲು ಪ್ರಕಟನಾಪತ್ರಿಕೆ, ತಖ್ತೆ ಮತ್ತು ಫಿಲ್ಮ್‌ಗಳ ಮೂಲಕ ಕಲಿಸಬೇಕು.

ಅಪಘಾತಗಳು

ಕಾರ್ಖಾನೆಯ ಜೀವನ ಮತ್ತು ಯಂತ್ರ ನಡೆಸುವ ವಿಧಾನದ ಪರಿಚಯವಿರದ ನೂತನ ನೌಕರರ ಮೌಢ್ಯದಿಂದ, ಇಂಡಿಯಾ ದೇಶದಲ್ಲಿ ಪದೇಪದೇ ಅಪಘಾತಗಳು ಸಂಭವಿಸುತ್ತಲೇ ಇರುತ್ತವೆ. ಭಾರತದಲ್ಲಿ ಕೂಲಿಕಾರನು ಮೌಢ್ಯತೆಗೆ ಪ್ರಖ್ಯಾತನಾಗಿರುವನು. ಬಂಡವಾಳಗಾರನು ಸ್ವಾರ್ಥಪರತೆಗೆ ಪ್ರಸಿದ್ಧಿಯಾಗಿದ್ದಾನೆ. ಈ ಮೌಢ್ಯವೇ ಅವಿದ್ಯಾವಸ್ಥೆಗೆ ಮೂಲಕಾರಣ. ಇದರ ರಕ್ಷಣೆಯೇ ಬಂಡವಾಳಗಾರನ ಗುರಿ. ಈ ಗುರಿಯೇ ಅವನ ಸ್ವಾರ್ಥಜೀವನದ ಸಾಧನ.

ಬೊಂಬಾಯಿ ಜೀವನದ ಖರ್ಚಿನ ಅನುಕ್ರಮಣಿಕೆ

(೧೯೩೩-೩೪-೧೦೦)

ತಿಂಗಳು	೧೯೩೯	೧೯೪೦	೧೯೪೧	೧೯೪೨
ಜನವರಿ	೧೦೫	೧೧೪	೧೧೭	೧೩೭
ಫೆಬ್ರವರಿ	೧೦೪	೧೧೨	೧೧೯	೧೩೫
ಮಾರ್ಚಿ	೧೦೩	೧೧೦	೧೧೯	೧೩೭
ಏಪ್ರಿಲ್	೧೦೩	೧೧೦	೧೨೧	೧೩೮
ಮೇ	೧೦೩	೧೧೧	೧೨೨	೧೪೨
ಜೂನ್	೧೦೪	೧೧೧	೧೨೨	೧೫೨
ಜೂಲೈ	೧೦೫	೧೧೩	೧೨೬	
ಆಗಸ್ಟ	೧೦೫	೧೧೪	೧೩೧	
ಸೆಪ್ಟಂಬರ್	೧೦೬	೧೧೨	೧೨೯	
ಆಕ್ಟೋಬರ್	೧೦೮	೧೧೩	೧೨೫	
ನವೆಂಬರ್	೧೦೯	೧೧೩	೧೨೬	
ಡಿಸೆಂಬರ್	೧೧೩	೧೧೫	೧೨೯	

ಮೇಲೆ ಕೊಟ್ಟಿರುವ ಖರ್ಚಿನ ವಿನಿಯೋಗದ ತಾರತಮ್ಯ ಪೂರ್ವ ಸಿದ್ಧಾಂತವು ಭಾರತದ ಕೆಲವು ಕೇಂದ್ರಸ್ಥಾನಗಳಲ್ಲಿ ಕೂಲಿಕಾರ ವರ್ಗದವರ ಜೀವನ ಪ್ರಮಾಣಗಳನ್ನು ನಿರ್ದೇಶಿಸಲು ಸಾಕಾಗುತ್ತದೆ.

ಅವಿದ್ಯಾವಸ್ಥೆಯು ಪರಿಣಾಮವಾಗಿಯೇ ಮುಷ್ಕರಗಳು ಉತ್ಪನ್ನವಾಗುವುದು. ಅನೇಕ ವೇಳೆ ವಿವೇಕಶೂನ್ಯರ ನಾಯಕತ್ವದಲ್ಲಿ ದಾರಿಗೆಡುವುವು. ಭಾರತದಲ್ಲಿ ಕೂಲಿಗಾಗಿ ಮುಷ್ಕರಗಳಾಗುವುದು ಶೇಕಡ ೪೫ ಮಾತ್ರ; ಯೂರೋಪಿನಲ್ಲಿ ಶೇಕಡ ೭೫ರಷ್ಟು ಮುಷ್ಕರಗಳಾಗುವುದು ಕೂಲಿಗಾಗಿಯೆ.

ಮುಷ್ಕರಗಳು

ಕೈಗಾರಿಕಾ ಮುಷ್ಕರಗಳ ಸಂಖ್ಯಾವಿವರಕ್ಕೆ ಬೇಕಾದ ವಸ್ತುವನ್ನು ೧೯೨೧ರಿಂದ ಈಚೆಗೆ ಮಾತ್ರ ಸಂಗ್ರಹಮಾಡಿದೆ. ಈ ಕೆಳಗಣ ಪಟ್ಟಿಯು ೧೯೨೧ರಿಂದ ಪ್ರತಿಯೊಂದು ವರ್ಷದಲ್ಲಿಯೂ ಹುಟ್ಟಿದ ಮುಷ್ಕರಗಳ ಸಂಖ್ಯೆ, ಪರಿಣಾಮವಾಗಿ ಪರಿತಾಪಪಟ್ಟ ಕೂಲಿಕಾರರ ಸಂಖ್ಯೆ ಮತ್ತು ಒಟ್ಟಿನ ಕಾಲ ನಷ್ಟವನ್ನು ವ್ಯಕ್ತಪಡಿಸುತ್ತದೆ. ಈ ಸಮಯದಲ್ಲಿ ಕಾರ್ಮಿಕ ಸಂಸ್ಥೆಗಳು ಮುಂದೆ ಬಂದು, ಕೂಲಿಕಾರರಿಗೆ ಬೆಂಬಲವಾಗಿ ನಿಂತು, ಹೋರಾಡಬೇಕು. ಮುಷ್ಕರಗಳನ್ನು ರಚನಾತ್ಮಕವಾಗಿ ನಡೆಸಿಕೊಂಡು ಹೋಗುವುದಲ್ಲದೆ, ಕೂಲಿಕಾರ ಹೊಟ್ಟೆಪಾಡನ್ನು ಮೊದಲು ನೋಡಿಕೊಳ್ಳಬೇಕು. ಇಲ್ಲದೆಹೋದರೆ ಕ್ರಮೇಣ ಕಾರ್ಖಾನೆಯ ಕೆಲಸಕ್ಕೆ ಮುಷ್ಕರದ ಗುರಿಯನ್ನು ಅರ್ಧದಲ್ಲಿಯೇ ತೊರೆದು ಹೋಗುವುದುಂಟು. ಕೂಲಿಕಾರರ ಮುಷ್ಕರವು ಜಯಪ್ರದವಾಗಬೇಕಾದರೆ ಸಂಸ್ಥೆಗಳೇ ಆಧಾರ. (ಅನುಬಂಧ ೪)

ಕೂಲಿಕಾರರ ಕ್ಷೇಮಕ್ಕಾಗಿ ಅವಿದ್ಯಾವಸ್ಥೆಯು ನಿರ್ಮೂಲವಾಗಬೇಕು. ವಿದ್ಯಾಭ್ಯಾಸ, ಸಾರ್ವಜನಿಕ ಆರೋಗ್ಯ, ವೈದ್ಯಕೀಯ ಚಿಕಿತ್ಸೆ, ಯೋಗಕ್ಷೇಮ, ಮಾನಸಿಕ ಸೌಖ್ಯ ಮತ್ತು ಬದುಕುಗಳನ್ನು ಕ್ರೋಢೀಕರಿಸುವ ರಚನಾತ್ಮಕ ಜಾತಿವರ್ಗದ ಶುಶ್ರೂಷೆಗಳ ಕಡೆಗೆ ಗಮನಕೊಡಬೇಕು. ಕೂಲಿಕಾರರು ವಿದ್ಯಾಹೀನರಾಗಿರದಂತೆ ಮಾಡಲು ವಿದ್ಯಾಪ್ರಚಾರದ ಕೇಂದ್ರಸಂಸ್ಥೆಗಳು ಹಲವಾರು ದುಡಿಯಬೇಕು.

ಗಣಿಯಲ್ಲಿ ಕೆಲಸಮಾಡುವ ೨೬ ಸಾವಿರ ಮಂದಿ ಕೂಲಿಯವರಲ್ಲಿ ೨೦ ಸಾವಿರ ತಮಿಳರಿದ್ದಾರೆ. ಬೆಂಗಳೂರು ಸಿಟಿಯಲ್ಲಿಯೂ ಸಹ ೧೮ ಸಾವಿರ ಕೂಲಿಕಾರರಲ್ಲಿ ೧೦ ಸಾವಿರ ಮಂದಿ ತಮಿಳರು. ದಂಡಿನಲ್ಲಿಯೂ ಅಷ್ಟೆ. ಈ ವಿದೇಶೀಯ ಪ್ರಭಾವದ ಪರಿಣಾಮವಾಗಿಯೇ ಕೂಲಿಯ ಪ್ರಮಾಣವು

ಅಗ್ಗವಾಗಿ ದುರ್ಗತಿಗೆ ಬಂದಿರುವುದು. ಈ ದುರ್ಗತಿಯ ಮೂಲಪುರುಷನೇ ಬಂಡವಾಳಗಾರನು. ಸ್ವಾರ್ಥವೇ ಅವನ ನಿಧಿ; ಸುಲಿಗೆಯೇ ಸಾಧನ. (ಅನುಬಂಧ ೫)

ಕೂಲಿಕಾರರ ಮಕ್ಕಳು

ಕೂಲಿಕಾರರ ಮಕ್ಕಳ ಮತ್ತು ಆಶ್ರಿತರ ಯೋಗಕ್ಷೇಮವನ್ನು ಕೂಡ ಅಲಕ್ಷಿಸಬಾರದು. ಅವರ ಕೇರಿಗಳಲ್ಲಿ ಉಚಿತವಾಗಿ ಪ್ರಾಥಮಿಕ ಶಾಲೆಗಳನ್ನು ತೆರೆಯಬೇಕು. ತಾಯಂದಿರು ಗಿರಣಿಗಳ ಕೆಲಸದಲ್ಲಿ ತೊಡಗಿರುವಾಗ ಮಕ್ಕಳ ಪಾಲನೆಯನ್ನು ನೋಡಿಕೊಳ್ಳಲು ನುರಿತ ದಾದಿಯರನ್ನು ನೇಮಿಸ ಬೇಕು, ಶಾಲೆಗೆ ಹೋಗುವ ವಯಸ್ಸಾಗದ ಚಿಕ್ಕಮಕ್ಕಳ ಪ್ರಯೋಜನ ಕ್ಕಾಗಿ ಶಿಶುವಿಹಾರಗಳನ್ನು ತೆಗೆಯಬೇಕು. ಶಾಲೆಯ ಮಕ್ಕಳಿಗೆ ಹಾಲು ಮತ್ತು ಮಧ್ಯಾಹ್ನ ಊಟ ಒದಗಿಸಬೇಕು. ಮಕ್ಕಳೇ ರಾಷ್ಟ್ರದ ಸಂಪತ್ತು. ಅವರು ಅಳಿದರೆ ಮುಂದಿನ ಭವ್ಯ ಕೂಲಿಕಾರ ಸಂತತಿಯು ಅಳಿದಂತೆಯೆ. ಸಂಸ್ಥಾನದ ಉದ್ಧಾರಕ್ಕಾಗಿ ಮಕ್ಕಳನ್ನು ಬಾಂಬು, ಹಸಿವು, ರೋಗರುಜಿನ ಗಳು, ಮೌಢ್ಯ ಮತ್ತು ಅನುಕೂಲವಾದ ಬೀಡಿನ ಕೊರತೆಗಳಿಂದ ರಕ್ಷಿಸು ವುದು ಕರ್ತವ್ಯ. ಅಷ್ಟೇ ಅಲ್ಲ, ಎಷ್ಟೋ ಕಾರ್ಖಾನೆಗಳು ಹಣ ಉಳಿಸುವ ದುರಾಸೆಯಲ್ಲಿ ವಿದ್ಯೆಕಲಿಯುವ ಹುಡುಗರನ್ನು ಸಣ್ಣ ಸಂಬಳಕ್ಕೆ ಕಾನೂನಿಗೆ ವಿರೋಧವಾಗಿ ಸೇರಿಸಿಕೊಳ್ಳುವುದು ರಾಕ್ಷಸೀಯ.

ಹೆಂಗಸರು ಅನೇಕ ಮಂದಿ ಗಿರಣಿಗಳಲ್ಲಿ ಕೆಲಸಮಾಡುತ್ತಾರೆ. ರಾತ್ರಿಯ ಹೊತ್ತು ಕೆಲಸಮಾಡಲು ಕಾನೂನು ಅವರಿಗೆ ಅವಕಾಶಕೊಟ್ಟಿಲ್ಲ. ಗಂಡನು ತರುವ ಸಂಬಳವು ಸಾಲದೆಂದು ಹೆಂಗಸು ಗಿರಣಿಗೆ ಕೆಲಸಕ್ಕೆ ಹೋಗುತ್ತಾಳೆ. ಇದರಿಂದ ತನಗಾಗಲಿ ಸಂಸಾರಕ್ಕಾಗಲೀ ಸೌಖ್ಯವಿಲ್ಲ. ಗಂಡನು ಕೂಡ ಯಾವ ಕಾರ್ಖಾನೆಯಲ್ಲಿಯೇ ಆಗಲಿ ವ್ಯಕ್ತಿತ್ವವನ್ನು ಬೆಳಸಿಕೊಳ್ಳುವುದಕ್ಕೆ ಪ್ರೋತ್ಸಾಹವಿಲ್ಲ. ಅದರಿಂದ ಅವನು ಮೇಲಿನ ತರ ಗತಿಗಳಿಗೆ ಏರುವಂತೆಯೂ ಇಲ್ಲ; ಹೆಚ್ಚಾಗಿ ಸಂಪಾದನೆ ಮಾಡುವಂತೆಯೂ ಇಲ್ಲ. ಕೂಲಿಕಾರರು ಕಾರ್ಯತತ್ಪರರಾಗಿ ವ್ಯಕ್ತಿತ್ವವನ್ನು ವಿಶಾಲಗೊಳಿಸು ವುದರಿಂದ ಬಂಡವಾಳಗಾರರಿಗೂ ಆದಾಯ ಹೆಚ್ಚಿಗೆ ಉಂಟು. ವ್ಯಕ್ತಿತ್ವ ಪ್ರದರ್ಶನಕ್ಕಾಗೆಂದು, ಕೀರ್ತಿ ಗಳಿಸಬೇಕೆಂದಾಗಲಿ, ಕೂಲಿಕಾರ ಪ್ರಪಂಚ

ವಲ್ಲಿ ತಮ್ಮ ಸಂಖ್ಯೆಯು ಹೆಚ್ಚಬೇಕೆಂಬ ಅಭಿಪ್ರಾಯದಿಂದಾಗಲಿ ಹೆಂಗಸರು ಇಂದು ಗಿರಣಿಗಳಲ್ಲಿ ಕೆಲಸಮಾಡುತ್ತಿಲ್ಲ. ಅಂತಹ ಸಾಮೂಹಿಕ ಮನೋಧರ್ಮವು ರಷ್ಯಾದ ಕೂಲಿಕಾರನಲ್ಲಿದೆ. ಅದೇ ಮನೋಧರ್ಮವು ಇಲ್ಲಿಯೂ ಜನಿಸಬೇಕು.

ವಿದೇಶೀಯ ಛಾಯೆ

ಭಾರತದಲ್ಲಿ ಕೆಲವು ಕೈಗಾರಿಕಾ ಪಟ್ಟಣಗಳೂ ೭ ಲಕ್ಷ ಗ್ರಾಮಗಳಿದ್ದರೂ ಕೂಲಿಗಾಗಿ ಜನರು ಗ್ರಾಮಾಂತರಗಳನ್ನು ತೊರೆದು ಪಟ್ಟಣಗಳ ಕಡೆಗೆ ಕ್ರಮೇಣ ಹೊರಳಲು ಪ್ರಾರಂಭಿಸಿದ್ದಾರೆ. ಅವರು ನಿರಾಶ್ರಿತರಾಗಿ ಹಿಂದಿರುಗಿ ಬರುವಾಗ ಗ್ರಾಮಗಳಿಗೆ ಅಂಟು ಸಾಗಿಸುತ್ತಾರೆ. ಸಿಫ್ಲಿಸ್ ಮತ್ತು ಗೊನೋರಿಯಾ ಎಂಬ ಭಯಂಕರ ಜಾಡ್ಯಗಳು ಇಡೀ ಜನಪದದಲ್ಲಿ ವ್ಯಾಪಿಸಲು ಕಾರಣ. ಇದನ್ನು ದೃಢೀಕರಿಸಲು ಕೂಲಿಕಾರರು ಬಹುಮಂದಿ ವಲಸೆಯಾಗಿ ಬಂದು ನೆಲಸಿರುವರು; ಅವರ ಪೈಕಿ ಮೂರು ಮಂದಿಗೆ ಒಬ್ಬ ಸಂಸಾರದ ಜೊತೆಗೆ ಬಂದಿದ್ದರೆ ಹೆಚ್ಚು. ಈ ಮಿಶ್ರಿತ ಕೂಲಿಕಾರ ಜೀವನವೇ ಇಂದು ನಮ್ಮ ಗಿರಣಿಗಳ, ಕಾರ್ಖಾನೆಗಳ ಮತ್ತು ಆಫೀಸುಗಳ ಲಕ್ಷಣವಾಗಿದೆ. ಒಂದು ಕೋಣೆಯ ವಾಸವೇ ಕೂಲಿಕಾರ ಜೀವನದ ಪದ್ಧತಿ. ಅದರಿಂದಲೇ ಅನಾಚಾರ ಮತ್ತು ವ್ಯಭಿಚಾರ.

ಯಾವ ಕಾರ್ಖಾನೆಯಲ್ಲಿಯೇ ಆಗಲಿ ವಿದೇಶೀಯ ಛಾಯೆ ಕಂಡು ಬಂದರೆ ಕೈಗಾರಿಕೆಯು ಸರಿಯಾಗಿ ಉದ್ಧಾರವಾಗುವುದಿಲ್ಲ. ವಿದೇಶೀಯರು ಎಲ್ಲಿಯೂ ಒಂದು ಕಡೆ ಶಾಶ್ವತವಾಗಿ ನೆಲಸುವುದಿಲ್ಲ. ಉದ್ಯೋಗದ ಭದ್ರತೆಯಲ್ಲಿ ಅವನಿಗೆ ನಂಬಿಕೆಯೂ ಇಲ್ಲ. ಕೈಗಾರಿಕಾಭಿವೃದ್ಧಿಗೂ, ಚಿರನೂತನ ಅಖಂಡ ಕೂಲಿಕಾರ ಜನಾಂಗ ನಿರ್ಮಾಣಕ್ಕೂ ಅಡ್ಡಿಯುಂಟು. ಅಖಂಡ ಕೂಲಿಕಾರ ಜನಾಂಗವನ್ನು ರಷ್ಯದಲ್ಲಿ ಕಾಣಬಹುದು. ರಷ್ಯವು ನಾಗರಿಕತೆಯ ಪರಾಕಾಷ್ಠತೆಗೇರಿದೆಯೆಂದರೆ ಅತಿಶಯವಾಗುವುದಿಲ್ಲ. ಸಮಭಾವ ಮತ್ತು ಸಮಜೀವನದ ಲಾಂಛನವೇ ಆಧುನಿಕ ರಷ್ಯಾ.

ಆದರ್ಶನೀಯ ರಷ್ಯಾ

ರಷ್ಯಾದೇಶದಲ್ಲಿ ಅಸಂಖ್ಯಾತ ಮತಗಳಿದ್ದವು, ಅಸಂಖ್ಯಾತ ಜನಾಂಗಗಳಿದ್ದವು; ಹಲವಾರು ಭಾಷೆಗಳಿದ್ದವು. ಪ್ರತಿಯೊಂದು ಬುಡಕಟ್ಟಿನ ಧರ್ಮ

ವನ್ನು ಲೆಕ್ಕಿಸದೆ ನಾನಾ ಭಾಷೆಗಳ ವೈಷಮ್ಯವನ್ನು ಸಿಗಿದು, ಇಂದು ಜರ್ಮನಿಯನ್ನು ಎದುರಿಸಿ ಇಡೀ ಜಗತ್ತನ್ನೇ ದಿಗ್ಭ್ರಮೆಗೊಳಿಸಿರುವ ರಷ್ಯದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಏಕತ್ವದ ಸೃಷ್ಟಿಗೆ ಕೂಲಿಕಾರರೇ ಸೂತ್ರಧಾರಿಗಳು. ಮಾನವಕೋಟಿಯ ಜಾಗ್ರತಿಗಾಗಿ ಒಂದು ಕಾರ್ಮಿಕ ರಾಷ್ಟ್ರದ ರಚನೆಗಾಗಿ ರಷ್ಯದ ವಿನ್ಯಾಸಕರ ಹಂಚಿಕೆಗಳನ್ನು ಅಭ್ಯಾಸರಂಗಕ್ಕೆ ತರಬೇಕು.

ಕೂಲಿಕಾರರ ರೀತಿನೀತಿಗಳನ್ನು ರಕ್ಷಿಸಲು, ಕೈಗಾರಿಕಾ ಶಾಂತಿಯನ್ನು ಸೃಜಿಸಲು ಅವರ ಶಕ್ತಿ ಮತ್ತು ಆರೋಗ್ಯಗಳಿಗೆ ಸಾಕಷ್ಟು ಆಹಾರವನ್ನು ನೀಡುವುದು ಅತ್ಯಾವಶ್ಯಕ. ಸಾಮಾಜಿಕ ಸೌಖ್ಯದ ಮತ್ತು ಔದ್ಯೋಗಿಕ ಇನ್ಷೂರೆನ್ಸ್‌ಗಳೂ, ಪ್ರಾವಿಡೆಂಟ್ ಫಂಡ್, ವೃದ್ಧರಿಗೆ ಪೆನ್ಷನ್ ಮತ್ತು ನಿರುದ್ಯೋಗ ನಿವಾರಣೆಗೆ ಸಹಾಯ—ಈ ಅನುಕೂಲಗಳನ್ನು ಪಾಶ್ಚಾತ್ಯದೇಶಗಳಲ್ಲಿರುವಂತೆಯೇ ಪೂರ್ಣವಾಗಿ ಕಲ್ಪಿಸಿಕೊಡಬೇಕು.

ಮುರುಕಲು ಗುಡಿಸಿಲುಗಳು

ಭಾರತದಲ್ಲಿ ಕೂಲಿಕಾರರು ಜೀವಿಸುವ ಅಸಹ್ಯವಾದ ಮುರುಕು ಮನೆಗಳು ತೃಪ್ತಿಕರವಾಗಿರುವುದಿಲ್ಲ. ಅದರಲ್ಲಿಯೂ ನಗರಗಳಲ್ಲಿ ಇನ್ನೂ ಭೀಭತ್ಸಕರವಾಗಿರುತ್ತವೆ. ಬೊಂಬಾಯಿಯ ಕಾರ್ಮಿಕಜನಸಂಖ್ಯೆಯಲ್ಲಿ ಧಾರಾಳವಾಗಿ ನೇಕಡ ೬೦ರಷ್ಟು ಜನ ಒಂದೇ ಕೋಣೆಯಲ್ಲಿ ೪ ಮಂದಿಯಂತೆ ವಾಸಿಸುತ್ತಾರೆ. ಕೆಲವು ಕಡೆ ೧೫ ಅಡಿ ಉದ್ದ ಮತ್ತು ೧೨ ಅಡಿ ಅಗಲವಿರುವ ಕೋಣೆಯೊಂದರಲ್ಲಿಯೇ ೩೦ ಮಂದಿಯುಳ್ಳ ೬ ಸಂಸಾರಗಳು ಕೂಡ ವಾಸಮಾಡಿರುವುದುಂಟು. ಅಹಮದಾಬಾದಿನಲ್ಲಿ ''ಚಾಲ್ಸ್'' (ಕೂಲಿಕಾರರ ಕೇರಿ) ಗಳಲ್ಲಿಯೂ ಅಷ್ಟೆ. ಮನೆಗಳು ಭದ್ರವಾಗಿರುವುದಿಲ್ಲ, ಶುಚಿಯಾಗಿರುವುದಿಲ್ಲ. ಮಾನಸಂರಕ್ಷಣೆಗೆ ಕೂಡ ಅಯೋಗ್ಯವಾದುವು. ಸರಕಾರವು ಚೊಕ್ಕಟವಾದ ಮತ್ತು ಅನುಕೂಲವಾದ ಬೀಡುಗಳನ್ನು ಕೂಲಿಕಾರರಿಗೆ ಕಟ್ಟಿಕೊಟ್ಟು ಲಕ್ಷ್ಯಾರ್ಹವಲ್ಲದ ಬಾಡಿಗೆಯನ್ನು ಸ್ವೀಕರಿಸಬೇಕು.

ಸಂಪಾದನೆ ಮತ್ತು ಸರಕಾರದ ಪರಿಮಾಣಕ್ಕೆ ಒಳಪಟ್ಟು ಜೀವನದ ಪ್ರಮಾಣವಿಲ್ಲ. ಈ ಸಂಬಂಧದಲ್ಲಿ ಕೆಳಗೆ ಕೊಟ್ಟಿರುವ ಅಂಕೆಗಳು ಗಮನಾರ್ಹವಾದುವು :—

ವರ್ಗಗಳು	ಬೊಂಬಾಯಿ ೧೯೩೨–೩೩	ಅಹಮದಾಬಾದು ೧೯೩೩–೩೫	ಶೋಲಾಪುರ ೧೯೨೫	ನಾಗಪುರ ೧೯೨೭	ಜಬ್ಬಲಪುರ ೧೯೨೭	ರಂಗೂನ್ ೧೯೨೮	ಮದರಾಸು ೧೯೩೮
ಆಹಾರ	೪೬.೬೦	೪೯.೩೧	೪೯.೨೫	೬೪.೧೦	೬೬.೦೦	೫೨.೭	೫೨.೬೩
ಸೌದೆ ಮತ್ತು ಬೆಳಕು	೭.೧೧	೬.೬೫	೯.೬೦	೯.೬೨	೭.೯೫	೫.೨	೬.೬೭
ಉಡಿಗೆ ತೊಡಿಗೆಗಳು	೭.೭೫	೯.೧೭	೧೧.೮೬	೧೦.೭೦	೧೦.೮೬	೧೦.೬	೪.೫೦
ಮನೆ ಬಾಡಿಗೆ	೧೨.೮೧	೧೦.೯೭	೬.೨೭	೧.೯೨	೧.೪೪	೧೩.೯	೧೧.೧೪
ಇತರ ಖರ್ಚುಗಳು	೨೫.೭೩	೨೩.೯೫	೨೩.೦೨	೧೩.೬೬	೧೩.೭೫	೧೭.೬	೨೫.೦೬
	೧೦೦	೧೦೦	೧೦೦	೧೦೦	೧೦೦	೧೦೦	೧೦೦

	ಬೊಂಬಾಯಿ	ಅಹಮದಾಬಾದ್	ಶೋಲಾಪುರ	ನಾಗಪುರ	ಜಬ್ಬಲಪುರ	ರಂಗೂನ್	ಮದರಾಸು
ಸಂಸಾರದ ಸರಾಸರಿ ಪರಿಮಾಣ	೩.೭೦	೪.೦೫	೪.೫೭	೪.೩೩	೩.೭೬	೩.೦೧	೬.೦೩
ಸರಾಸರಿ ತಿಂಗಳ ವರಮಾನ	ರೂ. ಆ. ಕಾ. ೫೦-೧-೭	ರೂ. ಆ. ಕಾ. ೪೬-೫-೦	ರೂ. ಆ. ಕಾ. ೩೯-೧೪-೧೦	....	....	ರೂ. ಆ. ಕಾ. ೫೮-೮-೩	ರೂ. ಆ. ಕಾ. ೩೭-೫-೧೧

ಸಾರ್ವಜನಿಕ ಆರಾಮು ಸೌಕರ್ಯಗಳು ಕೂಲಿಕಾರನ ಸೌಖ್ಯಕ್ಕಾಗಿ ್ಯವಹಾರದಲ್ಲಿರಬೇಕು. ದೈಹಿಕ, ನೈತಿಕ ಮತ್ತು ಮಾನಸಿಕ ಅಭಿವೃದ್ಧಿಗೆ ೂಲಿಕಾರನ ಪ್ರಯತ್ನ ಮತ್ತು ಪ್ರೇರಣೆಗಳೊಂದಿಗೆ ಬೆಂಬಲವಾಗಿ ಬಂಡ ಾಳಗಾರನ ತ್ಯಾಗವೂ ಮುಖ್ಯ. ಅಂದು ಬಂಡವಾಳಗಾರನಿಗೆ ದೇಶಬುದ್ಧಿ ುತ್ತು ಧರ್ಮಬುದ್ಧಿ ಹುಟ್ಟಿಕೊಂಡು ಕೂಲಿಕಾರನ ಪ್ರಕೃತ ಶೋಚನೀಯ ರಿಸ್ಥಿತಿಯನ್ನು ಆರ್ಥಿಕ, ಸಾಮಾಜಿಕ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ೋಡಲು ಪ್ರಯತ್ನಿಸುವನೆಂದಾಯಿತು. ದೇಶದ ಹಿತಚಿಂತನೆಯೇ ಆತನ ್ಯೇಯವಾಗಿರಬೇಕು. ಆ ಧ್ಯೇಯವಿಲ್ಲದವನು ಸ್ವಾರ್ಥಪರ.

ಕುಡುಕತನ

ಕೂಲಿಕಾರನು ಅಜ್ಞಾನಿ. ಅವನ ಅವನತಿ, ಔದಾಸೀನ್ಯ, ದಾರಿದ್ರ್ಯ, ಅನಾರೋಗ್ಯ ಮತ್ತು ಕೊಳೆಗೆ ಅವನನ್ನೇ ಜರಿದು ಪ್ರಯೋಜನವಿಲ್ಲ. ೊದಲು ಅವನಿಗೆ ಆರೋಗ್ಯಕರವಾದ ಸುಖಜೀವನ ಮಾಡುವ ದಾರಿಯನ್ನು ತೋರಿಸಿಕೊಡುವುದು ಸರಕಾರದ ಭಾರ. ಕೂಲಿಕಾರರ ಅಲ್ಪ ಜೀವನವೂ ೂಡ ಕುಡುಕತನದಲ್ಲಿಯೇ ಮುಳುಗಿಹೋಗಿದೆ. ಬರುವ ಸಂಪಾದನೆಯು ಸರಿಯಾಗಿ ಸಂಸಾರ ಜರುಗಿಸಲು ಸಾಲದು, ಹಾಗಿರುವಾಗ ಬರುವ ವರ ಮಾನವನ್ನೆಲ್ಲ ಸುರಾಪಾನಕ್ಕೆ ಧಾರೆಯೆರೆದು ಬಹು ಮಂದಿ ಕೂಲಿಕಾರರು ಅಧಮಾವಸ್ಥೆಗೆ ಬರುತ್ತಿರುವುದು ಶೋಚನೀಯ. ಸರಕಾರವು ಅದಕ್ಕೆ ಅವಕಾಶಕೊಡದೆ ಪಾನನಿರೋಧವನ್ನು ಕೂಡಲೇ ಜಾರಿಗೆ ತರಬೇಕು. ಅದರಿಂದ ಸಹಸ್ರಾರು ಮಂದಿ ಕೂಲಿಕಾರರ ಸಂಸಾರಗಳು ಉಳಿಯುವುವೆಂದು ಧಾರಾಳವಾಗಿ ಹೇಳಬಹುದು. ಅದರಲ್ಲಿಯೂ ಚಿನ್ನದ ಗಣಿಯಲ್ಲಿ ಕುಡುಕರ ಸಂಖ್ಯೆ ಅಧಿಕವಾಗಿದೆ.

ಮನೋರಂಜಕ ವ್ಯವಹಾರಗಳು

ಕೂಲಿಕಾರನ ಪರಿಸ್ಥಿತಿಯ ಕಡೆಗೆ ಹೆಚ್ಚು ಗಮನ ಕೊಡಬೇಕು. ಕಾರ್ಖಾನೆಯ ಶೀತೋಷ್ಣ ಪರಿಸ್ಥಿತಿ, ಸರಿಯಾದ ವಾಯುಸಂಚಾರ, ಬೆಳಕು, ಚರಂಡಿಗಳು, ಸಾಮಾನ್ಯ ನೈರ್ಮಲ್ಯ, ವಾಚನಶಾಲೆ, ಭೋಜನ ಶಾಲೆ, ಊಟ ಮತ್ತು ಫಲಾಹಾರ ತರಿಸಿಕೊಳ್ಳಲು ಅನುಕೂಲ, ವಿಶ್ರಾಂತಿ

ಭವನ, ಕಕ್ಕಸುಗಳು, ಬಚ್ಚಲ ಮನೆಗಳು, ಕಾರ್ಖಾನೆಯ ಹೋಟೇಲುಗಳು ವಿವಿಧ ಆಟಗಳು, ಎಲ್ಲವನ್ನು ಕಲ್ಪಿಸಿಕೊಡುವುದು ಪಾರುಪತ್ಯಗಾರನ ಕರ್ತವ್ಯ. ಆಡಲು ಬೇಕಾದ ಜಾಗ, ಕುಸ್ತಿ, ದೇಶೀಯ ಆಟಗಳು, ಬಯ ಲಾಟಗಳು, ಸಂಗೀತ ಮತ್ತು ನಾಟಕ ಪ್ರದರ್ಶನಗಳಿಗೆ ಪ್ರೋತ್ಸಾಹ ಕೊಡ ಬೇಕು. ಪಾಶ್ಚಾತ್ಯ ದೇಶಗಳಲ್ಲಿ ಪ್ರತಿಭಾಶಾಲಿ ಕೂಲಿಕಾರರ ಬುದ್ಧಿ ಬಲವನ್ನು ಗೌರವಿಸಿದ್ದಾರೆ. ಭಾರತದಲ್ಲಿ ಕೂಲಿಕಾರರು ಅಸಾಧಾರಣ ಬುದ್ಧಿ ಬಲ ಪಡೆದಿದ್ದರೂ ಜ್ಞಾನ ಪ್ರಕಾಶಕ್ಕೆ ಕಿಂಚಿತ್ ಅವಕಾಶವೂ ಇಲ್ಲ ಆರೋಗ್ಯದ ವಿಚಾರ, ಸ್ಥಳೀಯ ಪರಿಸ್ಥಿತಿ, ಆಹಾರ ಮತ್ತು ಇತರ ಮನೋ ರಂಜಕ ವ್ಯವಹಾರದ ವಿಷಯಗಳನ್ನು ಪ್ರದರ್ಶನಗಳ ಮೂಲಕ ತೋರಿಸ ಬೇಕು.

ಹಕ್ಕುಬಾಧ್ಯತೆಗಳು

ಕೈಗಾರಿಕಾಭಿವೃದ್ಧಿಗೆ ಕಾನೂನೊಂದೇ ಪ್ರಧಾನ ಸಾಧನವಲ್ಲ. ಇದರ ಸಂಬಂಧವಾಗಿ ಮಿ॥ ಬಟ್ಲರರೇ ಹೀಗೆ ನುಡಿದಿದ್ದಾರೆ. “ಜೀವಿಸಲು (ಬರಿಯ ಮುರುಕು ಗುಡಿಸಲುಗಳಲ್ಲಿ ಬದುಕುವುದೆಂದಲ್ಲ) ಕೂಲಿಕಾರರ ಹಕ್ಕುಬಾಧ್ಯತೆ ಗಳು ಸಮಾಜವನ್ನು ಅಧಿಕಾರಯುತವಾಗಿ ಕೇಳುವುದು ನ್ಯಾಯವಾದುದೆಂದು ಸರಕಾರವೂ, ಬಂಡವಾಳಗಾರನೂ ಮತ್ತು ಪ್ರಜಾಹಿತೈಷಿಗಳೂ ಅನುಭವ ಸಿದ್ಧಿಗೆ ತಂದುಕೊಳ್ಳುವುದೇ ಈಗ ಬೇಕಾಗಿರುವುದು. ಈ ಹಕ್ಕು ಬಾಧ್ಯತೆ ಗಳನ್ನು ಸಕಾಲದಲ್ಲಿ ನಿರಾಕರಿಸಿದರೆ ನಾವು ಧರ್ಮವಾಗಲಿ ಅಥವಾ ಸಾಂಸರ್ಗಿಕ ಸ್ಥಾನವಾಗಲಿ ಸಾಧಿಸಲಾರೆವು. ಕೊನೆಗೆ ವಿಕಸನೆಗೆ ಪ್ರತಿಯಾಗಿ ಕ್ರಾಂತಿಯು ಗತ್ಯಂತರವಾಗುವುದು.”

ಒಂದು ಉತ್ತಮ ಆರ್ಥಿಕ ಪರ್ಯಾಯದ ಪರಿಣಾಮಕ್ಕೆ ಸಹಕಾರಿ ಯಾದ ಸೂಚನೆಗಳು ಕಣ್ಣಿಗೆ ಬೀಳುತ್ತಿರುವುದು ನಮ್ಮ ಭಾಗ್ಯ. ಜನ ಜಾಗ್ರತಿಯ ಏಳಿಗೆ ಒಂದು ಕಡೆ ವೃದ್ಧಿಯಾಗಲು ಪ್ರಾರಂಭಿಸಿತು. ಬಂಡವಾಳ ಗಾರರ ಸಹಾನುಭೂತಿಯೂ ಕೊಂಚ ಹೆಚ್ಚಾಯಿತು. ಸರಕಾರವು ಕೂಲಿ ಕಾರರ ಹಕ್ಕುಬಾಧ್ಯತೆಗಳ ಮಾನ್ಯವಾಗಿ ಕಾಪಾಡುವ ಮನೋಧರ್ಮವೂ ವಿಶಾಲವಾಯಿತು. ಹೀಗಾಗಿ ಬಂಡವಾಳಗಾರನಿಗೂ ಕೂಲಿಗಾರನಿಗೂ

ಇರುವ ಸಂಬಂಧವೂ ಉತ್ತಮಗೊಂಡಿದೆ. ಏಕೆ? ಅವೆರಡೂ ಒಂದಾಗುವ ಕಾಲ ಬರಬೇಕು.

ಕೂಲಿಕಾರರ ಜೀವನ

ಪ್ರಕೃತ ಕೂಲಿಕಾರ ಜೀವನದ ದೌರ್ಭಾಗ್ಯ ಚಿತ್ರಿಸುವ ಅಭಿಮಾನ ಇನ್ನೂ ನಮ್ಮಲ್ಲಿ ಹುಟ್ಟಿಲ್ಲ. ಅವರ ಸಂಸಾರ, ನಡೆನುಡಿಗಳು ಒಂದು ಸಾಹಿತ್ಯ ಭಂಡಾರದ ಕಲ್ಪನೆಗೆ ಸಾಕಷ್ಟು ವಸ್ತು. ಅವರ ಅಸಹ್ಯವಾದ ಕೇರಿಗಳಿಗೆ ಹೋಗಿ ಹರಕಲು ಹಟ್ಟಿಗಳನ್ನು ಒಂದು ಬಾರಿ ನೋಡಿ. ಮನೆಗೆ ಯಜಮಾನನಾದ ನಿರುದ್ಯೋಗಿ ಕೂಲಿಯೊಬ್ಬನು ಕೂಲಿ ಕಾರ್ಯ ಸಿಗದೆಂಬ ಭರವಸೆಯಲ್ಲಿ ಗಿರಣಿಯ ಮುಂದೆ ಕೂತಿದ್ದು, ವಿವರ್ಣನಾಗಿ ಹಿಂದಿರುಗಿ ಬರುವ ದೃಶ್ಯ; ಒಂದು ಮನೆಯಲ್ಲಿ ಹಸಿವಾದರೂ ಕೂಳಿಲ್ಲದ ಕೊರಗು; ಇನ್ನೊಂದು ಮನೆಯಲ್ಲಿ ವಿಚಿತ್ರ ಮಿಶ್ರಜೀವನ—ಗಂಡನೊಂದು ಜಾತಿ ಮತ್ತು ಹೆಂಡತಿಯೊಂದು ಜಾತಿ; ಒಂದು ಮನೆಯಲ್ಲಿ ವಯಸ್ಸಾದರೂ ಮದುವೆಯಿಲ್ಲದ ಯುವತಿಯು ಪ್ರಿಯನೊಂದಿಗೆ ಕಣ್ಮರೆಯಾಗುವುದು; ಗಂಡನು ರಾತ್ರಿಯ ವೇಳೆ ಗಿರಣಿಯ ಕೆಲಸದಲ್ಲಿ ತೊಡಗಿರುವ ಸಮಯವನ್ನು ಅರಿತು ಮನೆಯ ಹೆಂಗಸು ಹಾದಿ ತಪ್ಪಿ ಹೋಗುವುದು; ಯಜಮಾನನು ಕುಡಿದು ಹೆಂಡತಿಯನ್ನು ಹೊಡೆದು ಮನೆಯಲ್ಲಿ ಗಲಭೆ ಮಾಡುವುದು; ಅರ್ಧ ಕೆಲಸ ಮಾಡಿ ಮಧ್ಯಾಹ್ನ ವಿರಾಮದಲ್ಲಿ ಹಸಿವಿನಿಂದ ಮನೆಗೆ ಬಂದರೆ, ಊಟ ಸಿದ್ಧವಾಗದೆ ಹೆಂಡತಿಯ ಮೇಲೆ ಕೋಪಗೊಂಡು ಜಗಳವಾಡುವುದು; ಅಸಭ್ಯಳಾದ ಹೆಂಡತಿಯ ಸಹವಾಸದಿಂದ ಬೇಸರಗೊಂಡ ಪತಿ; ಅವರ ರೀತಿನೀತಿ, ನಡೆನುಡಿ, ಉಡಿಗೆ ತೊಡಿಗೆಗಳು, ಹಬ್ಬಗಳು, ನೆರೆಹೊರೆಯ ಜಗಳಗಳು, ಅವರ ಮನೋವೈಶಾಲ್ಯ, ನಿಷ್ಕಾಪಟ್ಯ, ಔದಾರ್ಯ, ಗಾಂಭೀರ್ಯ, ಧರ್ಮಜೀವನದ ನಿದರ್ಶನಗಳ ಆಧಾರದ ಮೇಲೆ ಒಂದು ಆದರ್ಶನೀಯ ಸಾಹಿತ್ಯ ಪ್ರಪಂಚವನ್ನೇ ನಿರ್ಮಾಣ ಮಾಡಬಹುದು. ಕೂಲಿಕಾರರ ದುಃಖ, ದಾರಿದ್ರ್ಯ ಮತ್ತು ದುರ್ಜೀವನಗಳ ವರ್ಣನೆ ತೋರಿಸಿ ಸಾಹಿತಿಯು ಅವರ ಜೀವನವನ್ನು ಪರಿಪೂರ್ಣತೆಗೆ ತರಲು ಧಾವಿಸಬೇಕು.

ಗ್ಯಾಲ್ಸ್‌ವರ್ಧಿ "ಸ್ಟ್ರೈಕ್"

ಯೂರೋಪಿನಲ್ಲಿ ಕೂಲಿಕಾರಜನತೆಯ ಏಳಿಗೆಗೆ ಸಾಹಿತಿಗಳು

ಸಲ್ಲಿಸಿರುವ ಸೇವೆಯು ಮಾನವ ಜಾತಿಯ ಸ್ಮೃತಿಯಲ್ಲಿ ಚಿರವಾಗಿ ನಿಲ್ಲುತ್ತದೆ. ಜಾರ್ಜ್ ಗ್ಯಾಲ್ಸ್‌ವರ್ತಿಯು ರಚಿಸಿರುವ "ಸ್ಟ್ರೈಫ್" (ಹೋರಾಟ) ಎಂಬ ಮಹಾ ನಾಟಕವನ್ನು ಸದಾ ಸ್ಮರಿಸಬೇಕು. ಕೂಲಿಕಾರ ಪಕ್ಷದ ಪ್ರಧಾನ ನಾಯಕ ನಾದ ರಾಬರ್ಟ್‌ಸನ್‌ನು ಎಲ್ಲ ವಿದ್ಯಾವಂತರ ಗಮನಕ್ಕೆ ಬಾರದಿದ್ದರೂ ನಾವು ಮರೆಯಲು ಸಾಧ್ಯವೆ? ಬಂಡವಾಳಗಾರರ ಮೂಲ ಪ್ರತಿನಿಧಿಯೆನಿಸಿಕೊಂಡ ದುರಂತ ವ್ಯಕ್ತಿ ಅಂತೋಣಿಯ ಪ್ರಭಾವ ಹೋದೀತೆ? ಈ ನಾಟಕವನ್ನು ವಿಶ್ವ ಸಾಹಿತ್ಯದ ಒಂದು ಮಿಂಚೆಂದು ಪರಿಗಣಿಸಬೇಕು.

ಗೆಹಾರ್ಟ್ ಹಾಫ್‌ಮನ್ "ವೀವರ್ಸ್"

ಜರ್ಮನ್ ಕಾರ್ಮಿಕ ಜೀವನದ ಕನ್ನಡಿಯೇ "ವೀವರ್ಸ್" (ನೇಕಾರರು) ಎಂಬ ನಾಟಕ. ನೊಬೆಲ್ ಪಾರಿತೋಷಕವನ್ನು ಪಡೆದಿರುವ ಗೆಹಾರ್ಟ್ ಹಾಫ್‌ಮನ್ ಎಂಬ ಜಗದ್ವಿಖ್ಯಾತ ಜರ್ಮನ್ ಕವಿಯೇ ಈ ನಾಟಕವನ್ನು ರಚಿಸಿದುದು. ಕೂಲಿಕಾರರ ಬಾಧಾನುಭವ, ದಾರಿದ್ರ್ಯ, ಅತೃಪ್ತಿ, ವಂಶ ಪರಂಪರೆಯಿಂದ ಬಂದ ಬಂಡವಾಳಗಾರರೊಡನೆ ಕಲಹ, ಶುಷ್ಕವಾದ ಜೀತ, ದೊಂಬಿ ಇವು ಕೂಲಿಕಾರರ ಹೋರಾಟ ಅಳಿಯುವ ವರೆಗೂ ಚಿರಸ್ಮರಣೀಯವಾಗಿರುತ್ತವೆ.

ಎಮಿಲ ಜೋಲಾ "ಜರ್ಮಿನಲ್"

ಎಮಿಲ್ ಜೋಲಾ ರಚಿಸಿದ "ಜರ್ಮಿನಲ್" (ಮೊಳಕೆ) ಎಂಬ ಕಾದಂಬರಿಯು ಯುಗ ಯುಗಾಂತರಗಳಿಗೂ ಸಿಡಿಲಿನ ಪ್ರಾಯದಂತಿರುತ್ತದೆ. ಎಟಿಯನ್ ಎಂಬ ಕಾದಂಬರಿ ನಾಯಕನು ಕೂಲಿಕಾರ ವರ್ಗದ ದಾಸ್ಯ ಬುದ್ಧಿ ಯನ್ನು ಕಂಡು ರೋಸಿ ಆಶಾತೀತನಾಗಿ ಇಡೀ ಕೂಲಿಕಾರ ಜೀವನವೇ ಪತನವಾಗಿ ನೂತನ ಕ್ರಾಂತಿಕಾರ ಕಾರ್ಮಿಕ ಜನಾಂಗವು ಜನಿಸಲೆಂಬ ಹಠ ದಿಂದ ಇಡೀ ಗಣಿಯನ್ನೇ ಸಿಡಿ ಮದ್ದಿನಿಂದ ಸುಟ್ಟು ಬಿಡುವನು.

ಲೂಯಿ ಗ್ರ್ಯಾಸಿಕ್ ಗಿಬ್ಬನ್ಸ್ "ಗ್ರೆನೈಟ್"

ಸ್ಕಾಟ್‌ಲೆಂಡಿನ ಸಾಹಿತಿ ಲೂಯಿಗ್ರ್ಯಾಸಿಕ್ ಗಿಬ್ಬನ್‌ನು ಬರೆದಿರುವ "ಗ್ರೇ ಗ್ರೆನೈಟ್" (ಪ್ರಾಚೀನ ಕಗ್ಗಲ್ಲು) ಎಂಬ ಕಾದಂಬರಿಯು ನಾಗರಿಕ ದೃಷ್ಟಿಗೆ ಬೀಳದೆ ಹೋದೀತೆ? ಕಲ್ಲಿದ್ದಲು ಗಣಿಯಲ್ಲಿ ನೈಸವೆಯುವಷ್ಟು

ಮುಡಿದು, ಹೊಟ್ಟೆಗೆ ಸಾಲದೆ, ಬಟ್ಟೆಗಿಲ್ಲದೆ ಕೊರಗುವ ಕೂಲಿಕಾರರ ಕಷ್ಟ, ದುಃಖ, ಮುಷ್ಕರಗಳನ್ನು ಅಲ್ಲಗಳೆಯಲು ಸಾಧ್ಯವೆ? ಮುಷ್ಕರದ ನಾಯಕನನ್ನು ಜೈಲಿಗೆ ಹಿಡಿದೊಯ್ಯು ನ್ಯಾಯರಕ್ಷಕರಾಗಿರುವ ಪೋಲೀಸಿನವರು ಮಾಡುವ ಅತ್ಯಾಚಾರಗಳ ದೃಶ್ಯವು ಭೀಭತ್ಸವಾದುದು. ನಾಯಕನು ಒಡನಾಡಿಗಳ ಬೆಂಬಲದಿಂದ ಅದ್ವಿತೀಯ ಸಮಾನಿಕ ಸಂಸ್ಥೆಯೊಂದನ್ನು ಕಟ್ಟುವ ಉದ್ದೇಶದಲ್ಲಿ ವಿವಾಹವಾಗಬೇಕೆಂದಿದ್ದ ಪ್ರೇಯಸಿಯನ್ನು ಕೈಬಿಟ್ಟು ಕಾರ್ಯಸಾಧನೆಯಾಗದೆ ಆವೇಶದ ಭರದಲ್ಲಿ ಮಾಡಿಕೊಳ್ಳುವ ಆತ್ಮಹತ್ಯವು ಘೋರವಾದುದು.

ನಾಗರಿಕತೆಯ ಏಕತ್ವ

ಪಾಶ್ಚಾತ್ಯ ದೇಶಗಳ ಡೋಸ್ಟಿಯೇಫಿಸ್ಕಿ, ಅಪ್ಟನ್ ಸಿಂಕ್ಲೇರ್, ಮ್ಯಾಕ್ಸಿಂ ಗಾರ್ಕಿ, ಕುತ್ ಹಮ್ಸನ್, ಲಿಯಾಮ್ ಓಫ್ಲಾಹರ್ಟಿ, ಹೆನ್ರಿಕ್ ಇಬ್ಸೆನ್, ಜಾರ್ಜ್ ಬರ್ನಾರ್ಡ್ ಷಾ, ಇಬನೆಸ್ ಮೊದಲಾದ ಸಾಹಿತಿಗಳು ಕೂಲಿಕಾರ ಸಮುದಾಯದ ಪರವಾಗಿ ನಿಂತು ಹೋರಾಡಿದ್ದಾರೆ. ಇತರ ಸಾಹಿತಿಗಳಿಗೂ ಇದೇ ಮನೋಧರ್ಮವಿರಬೇಕು. ಜಗತ್ತಿನಲ್ಲಿ ಒಂದೇ ಜಾತಿ, ಒಂದೇ ಮತ, ಒಂದೇ ಭಾಷೆ, ಒಂದೇ ರಕ್ತ ಐಕ್ಯವಾದ ಮಾನವ ಪ್ರಪಂಚದ ಸೃಷ್ಟಿಯೇ ಪ್ರಾಜ್ಞವರ್ಗದ ಸಂತತಿಯ ಧ್ಯೇಯ. ಕೋಟ್ಯಾಂತರ ಜನತೆಯ ದಾರಿದ್ರ್ಯ, ಹಸಿವು, ಅಜ್ಞಾನಗಳ ನಿರ್ಮೂಲ ಪಕ್ಷವನ್ನು ವಹಿಸದ ಸಾಹಿತ್ಯವು ಸತ್ತ ಸಾಹಿತ್ಯವೆ. *

——::——

* ಈ ಲೇಖನದಲ್ಲಿ ಕೊಟ್ಟಿರುವ ಸಂಖ್ಯಾ ವಿವರಗಳನ್ನು ಬಹು ಮಟ್ಟಿಗೆ "ಲೇಬರ್ ಇನ್ ಇಂಡಿಯಾ" ಎಂಬ ವಾರ್ಷಿಕ ಪತ್ರಿಕೆಯಿಂದ ಅವತರಿಸಿದೆ.

ಅನುಬಂಧ—೧

ಉದ್ಯೋಗಗಳು	ಸಂಬಳದ ಸಾಧಾರಣ ಕಾಲಾವಧಿ	ದರಗಳು		
		ನಗರಗಳಲ್ಲಿ	ಪಟ್ಟಣಗಳಲ್ಲಿ	ಗ್ರಾಮಗಳಲ್ಲಿ
ಫೋರ್ಮನ್ (ಯುರೋಪಿಯನ್)	ತಿಂಗಳು	೫೦೦ ರಿಂದ ೭೦೦	೪೦೦ ರಿಂದ ೬೦೦	೩೫೦ ರಿಂದ ೫೫೦
,, (ಇಂಡಿಯನ್)	,,	೨೫೦ ರಿಂದ ೪೦೦	೧೫೦ ರಿಂದ ೩೦೦	೧೫೦ ರಿಂದ ೨೫೦
ಚಾರ್ಜಮನ್‌ಗಳು	,,	೧೫೦ ರಿಂದ ೨೫೦	೧೦೦ ರಿಂದ ೨೨೫	೭೫ ರಿಂದ ೨೦೦
ಮೇಸ್ತ್ರಿಗಳು	,,	೧೦೦ ರಿಂದ ೧೫೦	೮೦ ರಿಂದ ೧೧೦	೫೫ ರಿಂದ ೯೦
ಸ್ಟೀಮ್ ಇಂಜಿನ್ ಡ್ರೈವರುಗಳು	,,	೫೦ ರಿಂದ ೭೫	೪೦ ರಿಂದ ೭೦	೩೦ ರಿಂದ ೫೦
೧ನೇ ತರಗತಿ ಬಾಯ್ಲರ್ ಪರಿಚಾರಕರು	,,	೮೦ ರಿಂದ ೧೦೦	೬೫ ರಿಂದ ೮೦	೫೦ ರಿಂದ ೭೦
೨ನೇ ,, ,,	,,	೫೦ ರಿಂದ ೮೦	೪೫ ರಿಂದ ೬೦	೩೫ ರಿಂದ ೭೫
ಫೈರ್ಮನ್ನುಗಳು	,,	೪೫-೦-೦	೩೫-೦-೦	೩೦-೦-೦
ಗುಡಿಗಾರರು	ದಿನ	೪-೮-೦	....	....
ಬಡಿಗೆಯವರು—೧ನೇ ತರಗತಿ	,,	೩-೪-೦	೨-೧೨-೦	೨-೦-೦
,, ೨ನೇ ತರಗತಿ	,,	೨-೮-೦	೨-೦-೦	೨-೦-೦
ಲೈನ್‌ಮನ್‌ಗಳು	,,	೪-೦-೦	೩-೪-೦	೨-೮-೦
ಫಿಟರುಗಳು—ಉತ್ತಮ	,,	೩-೮-೦	೩-೦-೦	೨-೮-೦
,, ಸಾಮಾನ್ಯ	,,	೨-೦-೦	೧-೮-೦	೧-೪-೦

ಯಂತ್ರಕಾರರು—ಉತ್ತಮ	,,	೪-೦-೦	೩-೪-೦	....
,, ಸಾಮಾನ್ಯ	,,	೨-೮-೦	೨-೦-೦	೧-೧೨-೦
ಕಮ್ಮಾರರು	,,	೨-೧೨-೦	೨-೪-೦	೧-೧೨-೦
ಚಮ್ಮಟಿಗರು	,,	೧-೮-೦	೧-೪-೦	೧-೦-೦
ನಮೂನೆಗಾರರು	,,	೪-೦-೦	೩-೦-೦	೨-೮-೦
ಎರಕ ಹೊಯ್ಯುವವರು—ಉತ್ತಮ	,,	೩-೪-೦	೨-೧೨-೦	೨-೪-೦
,, ಸಾಮಾನ್ಯ	,,	೨-೦-೦	೧-೧೨-೦	೧-೬-೦
ರಿವೆಟ್ಟರುಗಳು	,,	೭-೧೨-೦	೨-೪-೦	೧-೧೨-೦
ಬೆಸಿಗೆ ಹಾಕುವವರು	,,	೩-೦-೦	೨-೮-೦	....
ಗಾರೆಯವರು	,,	೭-೦-೦	೧-೮-೦	೧-೪-೦
ಮೋಚಿಗಳು	,,	೧-೮-೦	೧-೪-೦	೧-೦-೦
ಯಂತ್ರಕಾರರ ಸಹಾಯಕರು	,,	೧-೮-೦	೧-೪-೦	೦-೧೪-೦
ತೂಕ ಎತ್ತುವವರು	,,	೧-೪-೦	೧-೦-೦	೦-೧೪-೦
ಅರ್ಧನುರಿತ ಕೆಲಸಗಾರರು (ಎಲ್ಲ ಉದ್ಯೋಗಗಳಲ್ಲಿ)	,,	೧-೮-೦	೧-೨-೦	೦-೧೨-೦
ಅಪ್ರವೀಣ ಕೆಲಸಗಾರರು (ಎಲ್ಲ ಉದ್ಯೋಗಗಳಲ್ಲಿ) ಗಂಡಸರು	,,	೧-೪-೦	೦-೧೪-೦	೦-೧೨-೦
,, ,,	,,	೧-೦-೦	೦-೧೦-೦	೦-೮-೦

ಅನುಬಂಧ—೨

ಬ್ರಿಟಿಷ್ ಇಂಡಿಯಾದಲ್ಲಿರುವ ದಾಖಲೆಯಾದ ಕಾರ್ಮಿಕ ಸಂಸ್ಥೆಗಳು

ವರ್ಷ	ದಾಖಲೆಯಾದ ಕಾರ್ಮಿಕ ಸಂಸ್ಥೆಗಳು	ಅಧಿಕ ಸಂಯೋಜಿಸುವ ಸಂಸ್ಥೆಗಳು		
		ಸಂಖ್ಯೆ	ಸದಸ್ಯತನ	ಆದಾಯ
				ರೂ.ಗಳು ಲಕ್ಷದಲ್ಲಿ
೧೯೨೭–೨೮	೨೯	೨೮	೧೦೦,೬೧೯	೧.೬೪
೧೯೨೮–೨೯	೭೫	೬೫	೧೮೧,೦೭೭	೩.೧೭
೧೯೨೯–೩೦	೧೦೪	೯೦	೨೪೨,೩೫೫	೪.೩೩
೧೯೩೦–೩೧	೧೧೯	೧೦೬	೨೧೯,೧೧೫	೪.೦೭
೧೯೩೧–೩೨	೧೩೧	೧೨೧	೨೩೫,೬೯೩	೪.೭೮
೧೯೩೨–೩೩	೧೭೦	೧೪೭	೨೩೭,೩೬೯	೫.೫೭
೧೯೩೩–೩೪	೧೯೧	೧೬೦	೨೦೮,೦೭೧	೫.೦೩
೧೯೩೪–೩೫	೨೧೩	೧೮೩	೨೮೪,೯೧೮	೫.೨೯
೧೯೩೫–೩೬	೨೪೧	೨೦೫	೨೬೮,೩೨೬	೫.೨೯
೧೯೩೬–೩೭	೨೭೧	೨೨೮	೨೬೧,೦೪೭	೪.೮೮
೧೯೩೭–೩೮	೪೨೦	೩೪೩	೩೯೦,೧೧೨	೬.೯೩
೧೯೩೮–೩೯	೫೬೨	೩೯೪	೩೯೯,೧೫೯	೮.೯೦
೧೯೩೯–೪೦	೬೬೬	೪೫೦	೫೧೧,೧೩೮	೧೧.೨೨

ಅನುಬಂಧ—೩

೧೮೯೪—೧೯೪೦

ವರ್ಷ	ಕೆಲಸ ನಡೆಯುತ್ತಿರುವ ಕಾರ್ಖಾನೆಗಳ ಸಂಖ್ಯೆ	ಪ್ರತಿದಿನವೂ ಕೆಲಸಮಾಡುವ ಕೂಲಿಕಾರರ ಸರಾಸರಿ ಸಂಖ್ಯೆ			
		ಗಂಡಸರು	ಹೆಂಗಸರು	ಮಕ್ಕಳು	ಒಟ್ಟು
೧೮೯೪	೮೧೫	೨೭೫,೮೦೬	೫೩,೧೨೭	೨೦,೮೭೭	೩೪೯,೮೧೦
೧೮೯೮	೧,೦೯೮	೩೩೪,೫೯೪	೬೦,೬೦೩	೨೭,೫೩೨	೪೨೨,೭೨೯
೧೯೦೨	೧,೫೩೩	೪೨೪,೩೭೫	೮೫,೮೮೨	೩೧,೩೭೭	೫೪೧,೬೩೪
೧೯೦೬	೧,೮೫೫	೫೪೬,೬೯೩	೧೦೨,೭೯೬	೪೧,೨೨೩	೬೯೦,೭೧೨
೧೯೧೦	೨,೩೫೯	೬೨೪,೯೪೫	೧೧೫,೫೪೦	೫೨,೦೨೬	೭೯೨,೫೧೧
೧೯೧೪	೨,೯೩೬	೭೪೬,೭೭೩	೧೪೪,೧೫೭	೬೦,೦೪೩	೯೫೦,೯೭೩
೧೯೧೮	೩,೪೩೬	೮೯೭,೪೬೯	೧೬೧,೩೪೩	೬೪,೧೧೦	೧೧,೨೨,೯೨೨
೧೯೨೨	೫,೧೪೪	೧,೦೮೬,೪೫೭	೨೦೬,೮೮೭	೬೭,೬೨೮	೧೩,೬೧,೦೦೨
೧೯೨೬	೭,೨೫೧	೧,೨೦೮,೬೨೮	೨೪೯,೬೬೯	೬೦,೦೯೪	೧೫,೧೮,೩೯೧
೧೯೩೦	೮,೧೪೮	೧,೨೩೫,೪೨೫	೨೫೪,೯೦೫	೩೭,೯೭೨	೧೫,೨೮,೩೦೨
೧೯೩೪	೮,೬೫೮	೧,೨೪೮,೦೦೯	೨೨೦,೮೬೦	೧೮,೩೬೨	೧೪,೮೭,೨೩೧
೧೯೩೫	೮,೮೩೧	೧,೩೬೦,೧೩೧	೨೩೫,೩೩೪	೧೫,೪೫೭	೧೬,೧೦,೯೩೨
೧೯೩೬	೯,೩೨೩	೧,೪೦೦,೨೧೦	೨೩೯,೮೭೫	೧೨,೦೬೨	೧೬,೫೨,೧೪೭
೧೯೩೭	೯,೩೩೦	೧,೪೨೭,೧೦೩	೨೩೭,೯೩೩	೧೦,೮೩೩	೧೬,೭೫,೮೬೯
೧೯೩೮	೯,೭೪೩	೧,೪೮೧,೯೧೪	೨೪೫,೦೯೯	೧೦,೭೪೨	೧೭,೩೭,೭೫೫
೧೯೩೯	೧೦,೪೬೬	೧,೪೯೮,೨೧೮	೨೪೩,೫೧೬	೯,೪೦೩	೧೭,೫೧,೧೩೭
೧೯೪೦	೧೦,೯೦೦	೧,೫೮೮,೦೦೦	೨೪೭,೦೦೦	೯,೪೦೦	೧೮,೪೪,೪೦೦

ಇವಕ್ಕೆ ಬರ್ಮಾ ಸೇರಿಲ್ಲ.

ಅನುಬಂಧ—೪

ವರ್ಷ	ಮುಷ್ಕರಗಳ ಸಂಖ್ಯೆ	ಪರಿತಾಪಪಟ್ಟ ಕೂಲಿಕಾರರ ಸಂಖ್ಯೆ	ಕೆಲಸವಿರುವ ದಿನಗಳು ನಷ್ಟವಾದ ಸಂಖ್ಯೆ
೧೯೨೧	೩೯೬	೬,೦೦,೩೫೧	೬೯,೮೪,೪೨೬
೧೯೨೨	೨೭೮	೪,೩೫,೪೩೪	೩೯,೭೨,೭೨೭
೧೯೨೩	೨೧೩	೩,೦೧,೦೪೪	೫೦,೫೧,೭೦೪
೧೯೨೪	೧೩೩	೩,೧೨,೪೬೨	೮೭,೩೦,೯೧೮
೧೯೨೫	೧೩೪	೨,೭೦,೪೨೩	೧,೨೫,೭೮,೧೨೯
೧೯೨೬	೧೨೮	೧,೮೬,೮೧೧	೧೦,೯೭,೪೭೮
೧೯೨೭	೧೨೯	೧,೩೧,೬೫೫	೨೦,೧೯,೯೭೦
೧೯೨೮	೨೦೩	೫,೦೬,೮೫೧	೩,೧೬,೪೭,೪೦೪
೧೯೨೯	೧೪೧	೫,೩೨,೦೧೬	೧,೨೧,೬೫,೬೯೧
೧೯೩೦	೧೪೮	೧,೯೬,೩೦೧	೨೨,೬೧,೭೩೧
೧೯೩೧	೧೬೬	೨,೦೩,೦೦೮	೨೪,೦೮,೧೨೩
೧೯೩೨	೧೧೮	೧,೨೮,೦೯೯	೧೯,೨೨,೪೩೭
೧೯೩೩	೧೪೬	೧,೬೪,೯೩೮	೨೧,೬೮,೯೬೧
೧೯೩೪	೧೫೯	೨,೨೦,೮೦೮	೪೭,೭೫,೫೫೯
೧೯೩೫	೧೪೫	೧,೧೪,೨೧೭	೯,೭೩,೪೫೭
೧೯೩೬	೧೫೭	೧,೬೯,೦೨೯	೨೩,೫೮,೦೬೨
೧೯೩೭	೩೭೯	೬,೪೭,೮೦೧	೮೯,೮೨,೨೫೭
೧೯೩೮	೩೯೯	೪,೦೧,೦೭೫	೯೧,೯೮,೭೦೮
೧೯೩೯	೪೦೬	೪,೦೯,೧೮೯	೪೯,೯೨,೭೯೫
೧೯೪೦	೩೨೨	೪,೫೨,೫೩೯	೭೫,೭೭,೨೮೧

ಅನುಬಂಧ—೫

ಗಣಿಗಳು : ಇಂಡಿಯಾ ದೇಶದ ಗಣಿಗಳಿಗೆ ಮುಖ್ಯ ಇನ್ಸ್ಪೆಕ್ಟರ್ ಕೊಟ್ಟಿರುವ ವಾರ್ಷಿಕ ವರದಿಗಳಿಂದ ತೆಗೆದುಕೊಂಡ ಸಾರಾಂಶ.

ವರ್ಷ	ಕಾನೂನಿಗೆ ಬದ್ಧವಾಗಿರುವ ಗಣಿಗಳ ಒಟ್ಟು ಸಂಖ್ಯೆ	ಕೆಲಸಮಾಡುವ ಕೂಲಿಕಾರರ ಸಂಖ್ಯೆ		
		ಗಣಿಯೊಳಗೆ ಕೆಲಸ ಮಾಡುವವರು	ಗಣಿ ಮೇಲೆ ಕೆಲಸ ಮಾಡುವವರು	ಒಟ್ಟು ಸಂಖ್ಯೆ
೧೯೨೪	೧,೮೦೪	೧,೬೭,೭೭೯	೯೦,೪೯೮	೨,೫೮,೨೭೭
೧೯೨೫	೨,೦೧೧	೧,೬೮,೫೫೪	೮೪,೩೦೩	೨,೫೩,೮೫೭
೧೯೨೬	೧,೮೯೭	೧,೮೯,೩೭೧	೭೦,೭೪೨	೨,೬೦,೧೧೩
೧೯೨೭	೧,೯೯೨	೧,೯೬,೩೪೧	೭೨,೭೪೨	೨,೬೯,೨೯೦
೧೯೨೮	೧,೯೪೮	೧,೯೭,೩೯೮	೭೦,೨೭೩	೨,೬೭,೬೭೧
೧೯೨೯	೧,೭೩೨	೧,೯೯,೯೦೮	೬೯,೭೮೩	೨,೬೯,೭೦೧
೧೯೩೦	೧,೬೬೯	೧,೯೧,೯೧೫	೬೦,೭೫೨	೨,೬೧,೬೬೭
೧೯೩೧	೧,೪೭೧	೧,೭೦,೬೩೮	೬೦,೧೪೪	೨,೩೦,೭೮೨
೧೯೩೨	೧,೨೫೧	೧,೫೧,೯೨೪	೫೨,೭೩೪	೨,೦೪,೬೫೮
೧೯೩೩	೧,೪೨೪	೧,೫೩,೯೪೨	೫೨,೫೬೫	೨,೦೬,೫೦೭
೧೯೩೪	೧,೬೭೫	೧,೭೦,೮೨೦	೫೮,೫೬೧	೨,೨೯,೩೮೧
೧೯೩೫	೧,೮೧೩	೧,೮೯,೨೬೩	೬೪,೭೦೭	೨,೫೩,೯೭೦
೧೯೩೬	೧,೮೭೩	೧,೯೯,೯೧೭	೬೯,೬೭೬	೨,೬೯,೫೯೩
೧೯೩೭	೧,೯೨೫	೧,೯೫,೫೫೪	೭೨,೩೦೪	೨,೬೭,೮೫೮
೧೯೩೮	೧,೯೫೩	೨,೨೩,೯೮೪	೮೨,೨೭೬	೩,೦೬,೨೬೦
೧೯೩೯	೧,೮೬೪	೨,೨೩,೪೮೬	೮೧,೮೫೮	೩,೦೫,೩೪೪

ಆಧುನಿಕ ಸಾಹಿತಿಗಳು*

ಲೇಖಕ: ಮಹಾ ಪಂಡಿತ ರಾಹುಲ ಸಾಂಕೃತ್ಯಾಯನ

ಅನುವಾದಿಕೆ: ಶ್ರೀಮತಿ ಮಾಲತಿದೇವಿ

ಅವಂತೀ ಅಥವಾ ಮಾಲವೀ ದೇಶಗಳ ಪ್ರಾಚೀನ ಭೂಮಿಯಲ್ಲಿ ಈಗ ನಮ್ಮ ಮಧ್ಯ ಭಾರತದ ತರುಣ ಲೇಖಕರು ಒಂದುಗೂಡಿದ್ದಾರೆ. ಆದರೆ ಅವಂತಿ ಎಂಬುದಾವುದು? ಮಗಧ ಸಾಮ್ರಾಜ್ಯಕ್ಕಿಂತ ಮುಂಚೆ ಭಾರತವನ್ನು ಒಂದು ಮಾಡಲು ಪ್ರಯತ್ನಿಸಿದ ರಾಜ್ಯ. ಸುಮಾರು ೨॥ ಸಾವಿರ ವರ್ಷಗಳ ಹಿಂದಿನ ಮಾತಿದು. ಬುದ್ಧನ ಕಾಲದಲ್ಲಿ ಪ್ರದ್ಯೋತ ಮಹಾಸೇನ (ಆತನಿಗೆ ಚಂಡ ಪ್ರದ್ಯೋತನೆಂದೂ ಹೆಸರುಂಟು.) ಮತ್ತು ಬಹುಶಃ ಅವನ ತಂದೆ ಈ ಕಾರ್ಯಮಾಡಲು ತೊಡಗಿದ್ದರು. ಆತನ ಸೋದರಳಿಯನು ರಾಜ್ಯವಾಳುತ್ತಿದ್ದ ಮಥುರಾಪುರಿಯವರೆಗೂ ಅವನ ಪ್ರಜಾಗಣವು ವಿಸ್ತರಿಸಿತ್ತು. ಮತ್ತೊಂದು ಕಡೆ ಅವನ ಅಳಿಯನಾದ ಕುರುವಂಶೀಯನಾದ ವತ್ಸರಾಜ ಉದಯನನು ಆಳುತ್ತಿದ್ದ ಪ್ರಯಾಗದ ಸಮೀಪದಲ್ಲಿರುವ ಕೌಶಾಂಬಿಯವರೆಗೆ. ಬಿಂಬಸಾರನ ಮರಣಾನಂತರ ಭಾವೀ ಮಗಧ ಮಹಾರಾಜ್ಯದ ಪ್ರಥಮ ಸೂತ್ರಧಾರಿಯಾದ ಅಜಾತಶತ್ರುವು ಪ್ರದ್ಯೋತನ ಪ್ರಚಂಡ ಸೇನೆಯ ಆಕ್ರಮಣದ ಗಳಿಗೆಯನ್ನೇ ನಿರೀಕ್ಷಿಸುತ್ತಿದ್ದನಲ್ಲದೆ, ಅವನ ಮಹಾ ಪ್ರಧಾನಿ ವರ್ಷಕರನು ರಾಜಧಾನಿಯ ಕೋಟೆ ಕೊತ್ತಲುಗಳನ್ನು ಭದ್ರಪಡಿಸುವುದರಲ್ಲಿ ನಿರತನಾಗಿದ್ದನು. ಆಗ ಅವಂತಿ ಮತ್ತು ಮಗಧಗಳಲ್ಲಿ ಯಾರು ಭಾರತದಲ್ಲಿ ಏಕಚಕ್ರಾಧಿಪತ್ಯವನ್ನು ಸ್ಥಾಪಿಸುವರೆಂಬ ಪಂಥವಿತ್ತು. ಆದರೂ ಭಾರತದ ಜನಪದದ ಎಲ್ಲೆಕಟ್ಟುಗಳನ್ನು ತೊಡೆದುಹಾಕಿ ಒಂದು ವಿಸ್ತಾರವಾದ ಏಕತಾಬದ್ಧ ಮಹಾರಾಷ್ಟ್ರವನ್ನೇ ಸ್ಥಾಪಿಸುವುದಕ್ಕೆ ಕಾಲಾವಕಾಶವು ಬೇಕಾಗಿದ್ದಿತು. ಪಾರಸಿಕರ ಚಕ್ರವರ್ತಿಯಾದ ಡೇರಿಯಸ್ಸನ್ನು ಸಿಂಧುನದಿಯ ದಡದ ಬಳಿ ಬಂದು ಯೂರೋಪ್, ಆಫ್ರಿಕಾ ಮತ್ತು ಏಷಿಯಾಗಳ ಸಮರ ಶಕ್ತಿಯ ಮುಂದೆ ನಿಲ್ಲಬೇಕಾದರೆ ಭಾರತೀಯರು ಒಗ್ಗಟ್ಟಾಗಬೇಕು, ಇಲ್ಲವಾದರೆ ಈ

---

* ಒಂದು ಭಾಷಣದ ಅನುವಾದ.

ದೇಶಗಳಿಗಾದ ಅವಸ್ಥೆಯೇ ಪ್ರಾಚೀನ ದೇಶವಾದ ಭಾರತಕ್ಕೂ ಉಂಟಾಗು ವುದು ಎಂಬ ಅಂಶವನ್ನು ತೋರಿಸಿಕೊಟ್ಟನು. ಆಗ ಭಾರತವು ಜಂಬೂ ದ್ವೀಪವೆಂಬ ಹೆಸರಿನಿಂದ ಪ್ರಸಿದ್ಧವಾಗಿದ್ದಿತು. ಜಂಬೂದ್ವೀಪವು ಒಗ್ಗಟ್ಟಾಗ ಬೇಕಾಗಿತ್ತು ಇಲ್ಲವೇ ಸಾಯಬೇಕಿತ್ತು. ಯಾರಾವರೊಬ್ಬರ ಭಾವಮೈದುನ ಅಥವಾ ಅಳಿಯನಾಗುವುದರಿಂದಲೇ ತೃಪ್ತಿಪಡುವಷ್ಟು ಮಟ್ಟಿಗೆ ಇಕ್ಷ್ವಾಕು ಮತ್ತು ಕುರುಗಳ ಪ್ರಾಚೀನ ವಂಶಗಳು, ಕೋಸಲ ಮತ್ತು ವತ್ಸರಾಜ್ಯಗಳ ಯೋಧರು, ಪುರಾತನ ಪರಂಪರೆಗಳ ಮತ್ತು ವ್ಯವಸ್ಥೆಗಳ ಕಾರಣಗಳಿಂದ ಕುಗ್ಗಿಹೋಗಿದ್ದುವು. ವೈಶಾಲಿ ಮತ್ತು ಉತ್ತರಾಪಥಗಳ ಅಧಿಕಾರವು ಜನರ ಕೈಯಲ್ಲಿದ್ದುದರಿಂದ ನಿತ್ಯವೂ ನೂತನ ಶಕ್ತಿಯ ಅಕ್ಷಯ ಭಂಡಾರ ಗಳಾಗಿದ್ದುವು. ಆದರೆ ರಕ್ತ ಸಂಬಂಧದಿಂದ ಸ್ಥಾಪಿತವಾದ ಎಲ್ಲೆಕಟ್ಟುಗಳು ದೂರ ಹರಡುವುದು ಸಾಧ್ಯವಿರಲಿಲ್ಲ. ಅವರು ತಮ್ಮ ಭೃತ್ಯಗಳನ್ನು ಶಿಕ್ಷಿಸುವ ಸಾಮರ್ಥ್ಯವನ್ನು ಹೊಂದಿದ್ದರೂ ಪರದೇಶದವರನ್ನು ತಮ್ಮ ಅಧೀನ ಮಾಡಿ ಕೊಂಡು ಅವರ ಮೇಲೆ ಅಧಿಕಾರ ಮಾಡುವಷ್ಟು ಶಾಸನ ಶಕ್ತಿಯನ್ನು ಪಡೆ ದಿರಲಿಲ್ಲ. ಸೋತ ರಾಜ್ಯಗಳ ಶಾಸಕರಾಗಿ ಹೊರಟ ನಾಗರಿಕರು ಪ್ರಲೋಭನ ಗಳಿಂದ ಪಾರಾಗಲು ಸಾಧ್ಯವಿರಲಿಲ್ಲ. ಆರ್ಥಿಕ ಸಾಮ್ಯವಾದದ ಯುಗವು ಇನ್ನೂ ಬಹು ದೂರದಲ್ಲಿದ್ದಿತು. ಇತಿಹಾಸದ ಅನೇಕ ಸೋಪಾನಗಳನ್ನು ದಾಟಬೇಕಿತ್ತು.

ಭಾರತದ ಏಕೀಕರಣ ವಿಚಾರದಲ್ಲಿ ಅವಂತಿ ಮತ್ತು ಮಗಧಗಳ ಮಧ್ಯೆ ಪಂಥವಿತ್ತು. ಇತಿಹಾಸರೀತ್ಯಾ ಮಗಧವೇ ಸಫಲವಾಯಿತು; ಮಗಧದ ಸಫಲತೆಯು ಕತ್ತಿಯ ಮೂಲಕವಾದರೆ, ಅವಂತಿಯದು ಹೃದಯ ಮತ್ತು ಪ್ರತಿಭೆಯದು. ಅಶೋಕನು ಅವಂತಿಯ ಉಪರಾಜನಾಗಿದ್ದು, ಶಾಸನ ಮಾಡುವ ವಿದ್ಯೆಯನ್ನು ಮಾತ್ರ ಕಲಿಯಲಿಲ್ಲ. ಕಳಿಂಗ ವಿಜಯದ ಅನಂತರ ಉದಯಿಸಿ ಪ್ರಫುಲ್ಲಿತವಾದ ಧರ್ಮವಿಜಯದ ಬೀಜವು ಅವನ ಹೃದಯದಲ್ಲಿ ಅಂಕುರಿಸಿತ್ತು. ಅದರ ಕೀರ್ತಿಯು ಅಶೋಕನಿಗೆ ಮಾತ್ರವಲ್ಲದೆ ಅವನಿಗಿಂತ ಒಂದೆರಡು ಶತಾಬ್ದಿಗಳ ಹಿಂದೆಯೇ ಇದ್ದ ಪ್ರದ್ಯೋತನ ಪುರೋಹಿತನಾದ ಕಾತ್ಯಾಯನನಿಗೆ ಸಲ್ಲಬೇಕೆಂಬ ವಿಷಯವನ್ನೇ ಚರಿತ್ರೆಯು ತಿಳಿಸುವುದಿಲ್ಲ. ಕಾತ್ಯಾಯನನು ಬುದ್ಧನ ವಿಶಾಲ ದೃಷ್ಟಿಯನ್ನೂ ಮತ್ತು ತನ್ನ ಕಾಲದ

ಅತ್ಯಂತ ಪ್ರಗತಿಪರ ಶಿಕ್ಷಣವನ್ನು ಮಧ್ಯ ದೇಶದಿಂದಾಚೆ ಹರಡಿದನು. ಅವಂತಿಯ ಧರ್ಮವಿಜಯದ ಮಹಾಕಾರ್ಯವನ್ನು ಖಡ್ಗದಿಂದಲ್ಲವೆ, ಕೇವಲ ಜ್ಞಾನದ ಮೂಲಕ ಕಾತ್ಯಾಯನನು ಮಾಡಿದನು. ಹಾಗಿಲ್ಲದಿದ್ದ ಪಕ್ಷದಲ್ಲಿ ಮಗಧದ ಖಡ್ಗಹಸ್ತದಿಂದ ಆ ಕೆಲಸವನ್ನು ಪೂರೈಸಲಾಗುತ್ತಿರಲಿಲ್ಲ. ಅಶೋಕನ ಧರ್ಮವಿಜಯದ ಕಾರ್ಯಕ್ಕೂ ಅವಂತಿಯು ಸಹಕಾರ ಹಸ್ತ ನೀಡಿತು. ಕೇವಲ ಬುದ್ಧನ ಸಂದೇಶ ಮಾತ್ರವಲ್ಲದೆ ಭಾರತದ ಉಚ್ಚ ಸಂಸ್ಕೃತಿಯು ತಾಮ್ರಪರ್ಣಿಯಾದ ಲಂಕಾದ್ವೀಪಕ್ಕೆ ಕೊಂಡೊಯ್ಯಲು ಅಶೋಕನ ಮಗ ಮಹೇಂದ್ರನು ಹೊರಟಿದ್ದು ಆಕಸ್ಮಿಕ ಘಟನೆ. ತಾಯಿಯ ಕಡೆಯಿಂದ ಮಹೇಂದ್ರನು ಅವಂತಿ ಮತ್ತು ದಶಾರ್ಣ (ಬುಂದೇಲ ಖಂಡ) ಗಳ ಸಂತಾನವಾದುದ್ದಲ್ಲದೆ, ಅವನ ವಿದ್ಯಾಭ್ಯಾಸವಾದದ್ದು ಅವಂತಿ ಯಲ್ಲೇ. ಎರಡು ಶತಮಾನಗಳಾದುವು. ಯುವನರು ಯುನಾನಿಗಳು ಬಂದು ಹೋದರು. ಶಕರು ಅವಂತಿಯಲ್ಲಾಳಿದರು. ಇದೇ ಕಾಲದಲ್ಲಿ ಭಾರತ ಜನತೆಯು ಹಿಂದುಳಿಯತಕ್ಕದ್ದಲ್ಲವೆಂಬುದನ್ನು ಭಾರತದ ಒಂದು ವೀರ ಜಾತಿಯು ಶಕ್ತಿಶಾಲಿಗಳಾದ ಶಕರೊಡನೆ ಹೋರಾಡಿ ತೋರಿಸಿ ಕೊಟ್ಟಿತು. ಆಗ ಅವರು ತಮ್ಮ ವಿಜಯದ ಗುರುತಿಗಾಗಿ ಒಂದು ಶಕೆ ಯನ್ನಾರಂಭಿಸಿದರು. ಇದೇ ವಿಕ್ರಮ ಶಕೆ. ಮಾಳವ ಗಣವು ಪ್ರಾಚೀನ ಅವಂತಿಯ ರಾಜತಂತ್ರವನ್ನು ಗಣತಂತ್ರವನ್ನಾಗಿ ಮಾಡಿತು. ಅದು ಸಮಯದ ತೊಂದರೆಗಳಿಂದ ಬಹು ಕಾಲ ನಿಲ್ಲದಿದ್ದರೂ, ಒಂದು ಶಕೆಯನ್ನು ಸ್ಥಾಪಿಸಿ, ಅಮರತ್ವವನ್ನು ಸಂಪಾದಿಸಿತು. (ಈ ಶಕೆಯನ್ನು ಬೇರೆಯವರು ಕದ್ದರು) ಈಗ ಅವಂತಿಯು ಮಾಳವಾ ದೇಶವಾಗಿದೆ. ಈ ನವ ಜಾಗ್ರತಿಯ ಸಮಯದಲ್ಲಿ ಮಾಳವದ ಚದುರಿದ ಜನಾಂಗವನ್ನು ಒಟ್ಟುಗೂಡಿಸಿ ಒಂದು ಶಕ್ತಿಶಾಲಿಯಾದ ಮಾಳವ ಗಣವು ಮುಂದೆ ಆದರೂ ಆಗಬಹುದು. ಆಗ ಲಾಭದೆಂದು ಯಾರೂ ಹೇಳಲಾರರು. ಈ ಶಕೆಯನ್ನು ಯಾವನೊಬ್ಬ ವಿಕ್ರಮನ ಕೀರ್ತಿಸ್ಥಂಭದಂತಲ್ಲದೆ, ಜನತೆಯ ಪುನಃಸ್ಥಾಪನೆಯೆಂಬ ಭಾವನೆ ಯಿಂದ ಆಚರಿಸುವ ಕಾಲವು ಬಂದರೂ ಬರಬಹುದು.

ರಾಜಕೀಯ ರಹಸ್ಯವೇನೋ ಈ ಭೂಮಿಯಲ್ಲಿ ಪ್ರಾರಂಭವಾಯಿತು; ಆದರೆ ಸಾಹಿತ್ಯ? ಅದರಲ್ಲಿಯೂ ಈ ದೇಶವು ಕೀರ್ತಿ ಪಡೆದಿದೆ. ಅವಂತಿ

ಕನ್ಯೆಯಾದ ವಾಸವದತ್ತೆಯು ಕುರುವಂಶಕ್ಕೆ ಚಕ್ರವರ್ತಿ ಪದವಿಯನ್ನೊದಗಿಸ ದಿನ್ನೂ ಕವಿಗಳಿಗೆ ಅನುಪಮ ಕಲ್ಪನೆಯನ್ನೊದಗಿಸಿಕೊಟ್ಟಳು. ಸಂಸ್ಕೃತ ಮತ್ತು ಪ್ರಾಕೃತಗಳ ಉಚ್ಚ, ಉದಾತ್ತ ನಾಯಕಿಯಾಗುವ ಸುಯೋಗವು ಪ್ರದ್ಯೋತ ಪುತ್ರಿ ವಾಸವದತ್ತೆಗೆ ಪ್ರಾಪ್ತವಾಯಿತು. ಗುಣಾಢ್ಯನು ಬೃಹತ್ಕಥೆ ಯಲ್ಲಿ ಅವಳ ಗುಣಗಾನ ಮಾಡಿದ್ದನ್ನು ಸೋಮದೇವ ಮತ್ತು ಕ್ಷೇಮೇಂದ್ರರು ಪುನರಾವರ್ತಿಸಿದರು. ಕಾಳಿದಾಸನು ಮಾಳವಿಕಾ ಎಂಬ ಹೆಸರಿನಿಂದ ಅವಳ ನೆನಪನ್ನು ತಂದನು. ಹರ್ಷನು ರತ್ನಾವಳಿಯಲ್ಲಿ ಆಕೆಯ ಆದರ್ಶದ ಭವ್ಯ ಚಿತ್ರವನ್ನು ಮೂಡಿಸಿರುವನು. ಒಬ್ಬ ವಾಸವದತ್ತೆಯನ್ನಲ್ಲದೆ, ಅವಂತಿಯ ದ್ವಿಜ ಚಾರುದತ್ತನನ್ನೂ ಸಮಾಜದ ಚಿರದೂಷಿತ ವೇಶ್ಯೆಯರ ಮಧ್ಯದಲ್ಲಿ ವಸಂತಸೇನೆಯಂತಹ ನಾರೀರತ್ನವನ್ನೂ ಜಗತ್ತಿಗೆ ಕೊಟ್ಟಿದೆ. ತನ್ನ ಪ್ರಧಾನ ಪಾತ್ರಗಳನ್ನು ಹುಡುಕಲು, ಬಾಣನು ಪಾಟಲೀಪುತ್ರ, ಕನ್ಯಾ ಕುಬ್ಜ, ಸಾಕೇತ ಮತ್ತು ವಾರಣಾಸಿ ಇವುಗಳನ್ನೆಲ್ಲಾ ಬಿಟ್ಟು ಅವಂತಿಗೆ ಬಂದು, ತನ್ನ ಕಾದಂಬರಿಯ ಚಮತ್ಕಾರವನ್ನು ತೋರಿಸಬೇಕಾಗಿ ಬಂದಿತು.

ಇಷ್ಟು ಹೇಳಿಕೆಯಿಂದ ನಮ್ಮ ಸಾಹಿತ್ಯದಲ್ಲಿ ಮಾಳವ ಭೂಮಿಯ ಸ್ಥಾನವೇನೆಂಬುದು ತಿಳಿಯುವುದು. ಅಲ್ಲದೆ ನಮ್ಮ ಸಾಹಿತ್ಯದ ಅಮರ ಕಲಾವಿದನಾದ ಕಾಳಿದಾಸ, ಅವನ ಪ್ರತಿಭೆ ಮತ್ತು ಆತನ ಶಾಕುಂತಲೆಗೆ ಜನ್ಮ ಕೊಟ್ಟಿದ್ದೂ ಮಾಳವ. ಮಾಳವವು ತನ್ನ ಭೌತಿಕ ಮೇಲ್ಮೆಗಾಗಿ ಮಾತ್ರವೇ ಪ್ರಸಿದ್ಧವಾಗಿರಲಿಲ್ಲ. ಅಲ್ಲಿ ಯಾವಾಗಲೂ ಅಕಾಲವಿರಲಿಲ್ಲ. ಅಲ್ಲಿನ ಕರಿಯ ಭೂಮಿಯು ಅನ್ನದ ಭಂಡಾರವಾಗಿತ್ತು. ಆ ದೇಶವು ತನ್ನ ಬೌದ್ಧಿಕ ಮೇಲ್ಮೆಯನ್ನು ಕಳೆದುಕೊಂಡಿಲ್ಲವೆಂದು ನಾನು ಭಾವಿಸು ತ್ತೇನೆ. ಅದರ ಭವಿಷ್ಯದ ಗರ್ಭದಲ್ಲಿ ಈಗಲೂ ಮಹಾಕವಿ ಕಾಳಿದಾಸನು ಅಡಗಿದ್ದಾನೆ. ಸಂಸ್ಕೃತಿಯ ವಾಹನ ಮಹೇಂದ್ರನು ನಿರೀಕ್ಷಣೆಯಲ್ಲಿದ್ದಾನೆ. ವಿಜಯಿಗಳ ಮಾಳವ ಗಣವು ಸಿದ್ಧವಾಗುತ್ತಿದೆ.

ಆ ವಿಚಿತ್ರ ಮಾಳವೀ ಭೂಮಿಯಲ್ಲಿ ಲೇಖಕರಾದ ನಾವು ಒಂದು ಗೂಡಿದ್ದೇವೆ. ಕೇವಲ ಸಾಹಿತಿಗಳಂತಲ್ಲ, ಭವಿಷ್ಯದ ನಿರ್ಮಾತೃಗಳಂತೆ. ವಸ್ತುತಃ ಇಬ್ಬರಿಗೆ ವ್ಯತ್ಯಾಸವಿಲ್ಲ. ನಿಜವಾದ ಸಾಹಿತಿಯೇನು ಮಾಡು

ತ್ತಾನೆ? ಪೂರ್ವದಿಂದಲೂ ಸಂಪಾದಿಸಿದ ನಿಧಿಯನ್ನು ನಮ್ಮ ಬಳಿಗೆ ತಂದು, ನಮ್ಮನ್ನು ಆ ನಿಧಿಯ ಉತ್ತರಾಧಿಕಾರಿಗಳನ್ನಾಗಿ ಮಾಡಿ, ಆ ಮೂಲ-ಧನ ದಿಂದ ಬಲಗೊಂಡು, ಮುಂಬರಲು ನಮ್ಮ ಕಾಲುಗಳಲ್ಲಿ ಶಕ್ತಿ ಮತ್ತು ನಮ್ಮ ಕಣ್ಣುಗಳಲ್ಲಿ ವಿಶಾಲ ದೃಷ್ಟಿಯನ್ನು ಕೊಡುತ್ತಾ, ಸಾಹಿತ್ಯಕಾರನು ತನ್ನ ವಾಕ್ಯಗಳಲ್ಲಿ ರಸ, ಪದಗಳಲ್ಲಿ ಲಾಲಿತ್ಯ, ಉಕ್ತಿಗಳಲ್ಲಿ ಸೂಕ್ಷ್ಮ ಸಬಲಧ್ವನಿ ಮಾತ್ರವಲ್ಲದೆ ಭವಿಷ್ಯದ ಸಂಕೇತವನ್ನು ಕೊಡುತ್ತಾನೆ. ಭವಿಷ್ಯದ ನಿರ್ಮಾಣ ಕಾರ್ಯದಲ್ಲಿ ತಾನು ಸ್ವತಃ ಶ್ರಮಿಸುವುದು ಮಾತ್ರವಲ್ಲದೆ ತನ್ನ ಉತ್ತರಾಧಿ ಕಾರಿಗಳ ಮೂಲಕ ಕಾರ್ಯ ಮಾಡಿಸುತ್ತಾನೆ. ಶೂದ್ರಕನು ತನ್ನ ಆರ್ಯಕ ಮತ್ತು ಚಾರುದತ್ತನ ಮೂಲಕ ದುಷ್ಟ ಶಾಸನವನ್ನು ನಿರ್ಮೂಲ ಮಾಡುವ ಸೂತ್ರವನ್ನು ತಿಳಿಸಿದ್ದಾನೆ.

ವಾಲ್ಮೀಕಿ, ಅಶ್ವಘೋಷ. ಭಾಸ, ಕಾಳಿದಾಸ, ಶೂದ್ರಕ, ಭವ ಭೂತಿ ಮತ್ತು ಬಾಣಭಟ್ಟ ಇವರ, ಬಿದ್ದಂತಾ ನಮ್ಮ ಸಾಂಸ್ಕೃತಿಕ ನಿಧಿಯನ್ನು ರಕ್ಷಿಸುವ ಕಷ್ಟತರವಾದ ಕಾರ್ಯವೇ ನಮ್ಮ ಸಾಹಿತಿಗಳ ಮೇಲೂ ಬಿದ್ದಿದೆ. ಅದರ ಜತೆಗೆ ನವನಿರ್ಮಾಣದ ಕಾರ್ಯವೂ ಅವರ ಮೇಲೆ ಬಿದ್ದಿದೆ. ಸಾಂಸ್ಕೃತಿಕ ನಿಧಿಯ ರಕ್ಷಣೆ ಮತ್ತು ನವನಿರ್ಮಾಣದ ಅಭಿಲಾಷೆ ಇವೇ ನಮ್ಮನ್ನು ಫಾಸಿಸಂನ ವಿರೋಧಿಗಳನ್ನಾಗಿ ಮಾಡಿವೆ. ಆ ಭಾವವು ಜಗತ್ತಿನ ಪ್ರತಿಯೊಂದು ಜಾತಿಯ ಸಂಸ್ಕೃತಿ ಮತ್ತು ನವನಿರ್ಮಾಣದ ಪ್ರಬಲ ಶತ್ರು ವೆಂಬುದನ್ನು ನಮ್ಮ ಅನೇಕ ಸಾಹಿತಿಗಳು ತಿಳಿಯದಿರುವುದು ಶೋಚನೀಯ. ಜರ್ಮನಿಯ ಫಾಸಿಸ್ಟರ ಸಿದ್ಧಾಂತವನ್ನು ಹಿಟ್ಲರ್ "ಮೆಯಿನ್ ಕಾಂಪ್"ನಲ್ಲಿ ಬರೆದಿದ್ದಾರೆ. ಆದರೂ ಅವರ ಹೃದಯ ಕಂಪಿಸದಿದ್ದರೆ ಏನೆನ್ನಬೇಕು? ಅವರು ಟಾಲ್‌ಸ್ಟಾಯ್‌ನ ಆಶ್ರಮವನ್ನು ವಿಶ್ವದ ಆ ಅಮರ ಕಲಾವಿದನ ಪವಿತ್ರ ಸಮಾಧಿಯನ್ನು ಅಪವಿತ್ರಗೊಳಿಸಿದರು. ಆದರೆ ಅವರ ಕೈ ಮತ್ತು ಕಾಲುಗಳಿಂದ ನಮ್ಮ ರವೀಂದ್ರರ ಶಾಂತಿನಿಕೇತನ ಮತ್ತು ಕವಿಕುಲ ಗುರುವಿನ ಮಧುರಸ್ಮೃತಿ ಚಿನ್ಹೆಯುಳಿಯುವ ಆಸೆಯುಂಟೆ? ಫಾಸಿಸ್ಟ ಜರ್ಮನಿ ಮತ್ತು ಜಪಾನುಗಳು ರವೀಂದ್ರರ ಸ್ವಹಸ್ತ ಲಿಖಿತ ಪುಸ್ತಕ ಮತ್ತು ಸ್ವಸಂಗ್ರ ಹೀತ ಸಾಹಿತ್ಯನಿಧಿಗಳನ್ನು ಉರಿಸಿ ಒಲೆ ಹತ್ತಿಸಿ ಟೀ ಮಾಡಿ ಕುಡಿಯುವರೇ? ಅವರು ರಷ್ಯಾ, ಪೋಲೆಂಡ್ ಮತ್ತು ಫ್ರಾನ್ಸ್‌ಗಳಲ್ಲಿ ಇದನ್ನೇ ಮಾಡಿದರು.

ಪ್ರೂರ್ವದೇಶದ ಕೊರಿಯಾದಲ್ಲಿ ಏನಾಯಿತು ಎಂಬುದು ಎಲ್ಲರಿಗೂ ಗೊತ್ತು. ಚೈನಾದಲ್ಲಿ ಅವರ ದಾನವೀ ಲೀಲೆಗಳು ಚೆನ್ನಾಗಿ ವ್ಯಕ್ತವಾಗಿವೆ. ಆಗ ನಮ್ಮ ಮಹಾ ಕವಿ ಜಪಾನಿನ ಫಾಸಿಸ್ಟ ತತ್ವದಲ್ಲಿ ತಮಗಿರುವ ವಿರೋಧ ವನ್ನು ತಮ್ಮ ವಜ್ರಲೇಖನಿಯ ಮೂಲಕ ಉತ್ತರಿಸಿದರು.

ಫಾಸಿಸ್ಟ ಜರ್ಮನಿ ಮತ್ತು ಜಪಾನು ಯಾವ ಕ್ರೂರ ಮತ್ತು ಘೃಣಿತ ಉದ್ದೇಶದಿಂದ ಈ ವಿಶ್ವ ವಿಜಯಕ್ಕಾಗಿ ಹೊರಟಿವೆ ಎಂದು ಹೇಳುವುದು ಈಗ ಅನವಶ್ಯಕ. ತಮ್ಮನ್ನು ಆರ್ಯರೆಂದು ಹೇಳಿಕೊಳ್ಳುವ ಜರ್ಮನರೂ, ತಾವು ಸೂರ್ಯದೇವನ ಔರಸ ಸಂತಾನವೆಂದು ಹೇಳಿ ಕೊಳ್ಳುವ ಜಪಾನರೂ ವಿಶ್ವವೇ ತಮಗಾಗಿ ಸೃಷ್ಟಿಸಲ್ಪಟ್ಟಿದೆಯೆಂದು ಹೇಳಿ ಕೊಳ್ಳುತ್ತಾರೆ. ಸ್ಲಾವ್‌ರಾಗಲೀ. ಆಂಗ್ಲರಾಗಲೀ, ಫ್ರೆಂಚರಾಗಲೀ, ಯುನಾನಿಗಳಾಗಲೀ ಇವರಿಗೆ ಜರ್ಮನ್ ಮಾತೆಯರು, ಜರ್ಮನ್ ಸಂತಾನ ವನ್ನು ಕೊಡಲಸಮರ್ಥರಾದಾಗ ಮಾತ್ರವೇ ಬದುಕಲು ಸಾಧ್ಯ. ಅವರ ದೃಷ್ಟಿಯಲ್ಲಿ ಯೂರೋಪಿನ ಕೆಂಪು ಬಣ್ಣದ ಜನರು ವರ್ಣಸಂಕರ ದಿಂದ ಪಶು ಮಾನವರಾದಾಗ, ಏಷ್ಯಾದ ಕರಿಯ ಜನರ ಪಾಡೇನು? ನಾವು ಈ ಪ್ರಭು ಜಾತಿಯ ಗುಲಾಮರಾಗಲು ಬದುಕಿರುವುದು. ಹಿಟ್ಲರ್ ತಾನು ಹೇಳಿದ್ದನ್ನು ರಷ್ಯಾ ಮತ್ತು ಇತರ ದೇಶಗಳಲ್ಲಿ ಕಾರ್ಯರೂಪಕ್ಕೆ ತಂದಿದ್ದಾರೆ. ಚೀನಾ ಮತ್ತು ಕೊರಿಯಾಗಳ ಜನತೆಯ ಮೇಲೆ ನಡೆಸಿದ ಅತ್ಯಾಚಾರವನ್ನು ಜಪಾನಿನ ನವ ವಿಧಾನವು ಮುಚ್ಚಿಡಲಾರದು. ಜಾತಿ, ಧರ್ಮ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಚೀನಾ ಕೊರಿಯಾಗಳು ಜಪಾನಿಗೆ ಇರುವಷ್ಟು ಹತ್ತಿರದಲ್ಲಿ ಭಾರತವಿಲ್ಲ. ನಮ್ಮ ರವೀಂದ್ರ, ಜವಹರಲಾಲ್ ಮತ್ತು ಅಜಾದ ರೊಡನೆ ಜಪಾನಿನ ವರ್ತನೆಯು ಫಾಸಿಸ್ಟರು ತಮ್ಮ ಪರಾಜಿತ ದೇಶಗಳೊಡನೆ ನಡೆಸಿದಂತೆಯೇ ಇರುವುದರಲ್ಲಿ ಸಂದೇಹವಿಲ್ಲ ಜಪಾನು ಇತರ ಜಾತಿ ಗಳಿಗಾಗಿ ನವನಿರ್ಮಾಣ ಕಾರ್ಯವನ್ನು ಕೈಗೊಳ್ಳುತ್ತಿಲ್ಲ; ಕೇವಲ ತನ್ನ ಪ್ರಭುತ್ವ ವನ್ನು ಪ್ರಪಂಚದಲ್ಲಿ ಸ್ಥಾಪಿಸಲು ಹವಣಿಸುತ್ತಿದೆ. ತನಾಕಾ ಹೇಳಿದ್ದಾನೆ—"ಮೊದಲು ಚೀನ ಮತ್ತು ಅಕ್ಕಪಕ್ಕದ ರಾಷ್ಟ್ರಗಳಾದನಂತರ ಭಾರತ, ತದ ನಂತರ ವಿಶ್ವದಲ್ಲಿ ಸೂರ್ಯದೇವನ ಸಂತಾನದ ಶಾಸನ, ಇದಕ್ಕೆ ಅಡ್ಡಿ ಬರು ವವರಿಗೆ ವಿಧಿಸುವ ಶಿಕ್ಷೆ ಎಲ್ಲದಕ್ಕಿಂತಲೂ ಘೃಣಿತಯಾತನಾಪೂರ್ಣಮೃತ್ಯು."

ಜರ್ಮನ್ ಫ್ಯಾಸಿಸ್ಟರಂತೆ ಜಪಾ್ನ ಫ್ಯಾಸಿಸ್ಟರೂ ಪೃಥ್ವಿಯನ್ನು ಸೂರ್ಯ ದೇವನ ಏಕಮಾತ್ರ ಸಂತಾನದ ವಾಸಭೂಮಿ ಎಂದು ಭಾವಿಸುತ್ತಾರೆ. ಉಳಿದವರು ಅವರ ದಾಸರು. ಜಪಾ್ನ ಸ್ತ್ರೀಯರು ಯುದ್ಧವಂಶದ ಪುತ್ರರನ್ನು ಪಡೆದರೆ ಮಾತ್ರ ಬದುಕುವ ಹಕ್ಕು. ಎಲ್ಲರೂ ಫ್ಯಾಸಿಸ್ಟರಿಗೆ ಮಾತ್ರ ಈ ಭೂಮಿಯನ್ನು ಬಿಟ್ಟುಕೊಟ್ಟು ಹೋಗಿಬಿಡಬೇಕು. ಆಗ ಅಂತಹ ನವವಿಧಾನಗಳಿಂದ ಸಾಂಸ್ಕೃತಿಕ ನಿಧಿಯ ರಕ್ಷಣೆ ಮತ್ತು ನವೀನ ಜೀವನದ ನಿರ್ಮಾಣವಾಗುವುದಾದರೂ ಎಂತು? ನಮ್ಮ ಸಾಹಿತಿಗಳು ಕಣ್ಣು ಕಿವಿ ಮುಚ್ಚಿಕೊಂಡು ಸುಮ್ಮನಿರದೆ ಮಾನವತೆಗೆ ಎಂತಹ ಜನರ ಮೂಲಕ ಮಂಜು ಮುಸುಕಿದಂತಾಗಿದೆ ಎಂಬುದನ್ನು ಚೆನ್ನಾಗಿ ನೋಡಬೇಕು. ನಮ್ಮ ರವೀಂದ್ರರು ಈ ರಹಸ್ಯವನ್ನರಿತಿದ್ದರು. ನಾವು ಅನುಸರಿಸಬೇಕಾದ ದಾರಿಯನ್ನು ತೋರಿದರು. ಅವರು ವಿದೇಶೀ ಶಾಸನದ ಅಸಹ್ಯ ಜೂಜನ್ನು ಚೆನ್ನಾಗಿ ತಿಳಿದಿದ್ದರು. ದೇಶದ ಸ್ವತಂತ್ರಕ್ಕಾಗಿ ಪ್ರತಿಕ್ಷಣವೂ ತಳಮಳಿಸುವ ಜವಹರರು – ರಾಜನೀತಿಜ್ಞ ಜವಹರರು – ಲೇಖಕ ಜವಹರರು ವಿದೇಶೀ ಶಾಸನದ ವಿರೋಧಿಗಳಾದರೂ ಫ್ಯಾಸಿಸಂಅನ್ನು ಏಕೆ ವಿರೋಧಿಸಿ ಅದರ ಅಧಃಪತನಕ್ಕಾಗಿ ಕಾತುರರಾಗಿದ್ದಾರೆ? ಫ್ಯಾಸಿಸ್ಟ್ ಜಗತ್ತಿನಲ್ಲಿ ನಮ್ಮ ಪ್ರಾಚೀನ ರಾಷ್ಟ್ರನಿಧಿಗೆ ಸ್ಥಳವಿಲ್ಲ, ನವಜೀವನದ ಆಸೆ ನಮಗಿಲ್ಲ ಮತ್ತು ನಮ್ಮ ೪೦ ಕೋಟಿ ಪ್ರಜೆಗಳಿಗೆ ನಮ್ಮ ಪುಣ್ಯಭೂಮಿಯಲ್ಲಿ (ಜನ್ಮಭೂಮಿಯಲ್ಲಿ) ಜೀವಿಸುವ ಅಧಿಕಾರವಿಲ್ಲವೆಂಬುದೇ ಕಾರಣ.

ಫ್ಯಾಸಿಸ್ಟ್ ಧೂರ್ತತೆಯು ಯುಗದ ಅಮೂಲ್ಯಕೃತಿ ಮತ್ತು ಅಭಿಲಾಷೆಯನ್ನು ಅಳಿಸುವ ಪ್ರಯತ್ನದಲ್ಲಿರುವಾಗ, ಸಣ್ಣ ತೊಂದರೆಯಾದರೂ ದುಃಖಿಸಿ, ಒದ್ದಾಡುವ ನಮ್ಮ ಜನರ ಹೃದಯವನ್ನೂ, ಲಕ್ಷಾಂತರ ಮಕ್ಕಳ, ಹೆಂಗಸರ ಮತ್ತು ವೃದ್ಧರ ಮರ್ಮಾಂತರ ಪೀಡೆಯನ್ನು ಲೆಕ್ಕಿಸದ ಅಂತಹ ಜನರನ್ನು ನಮ್ಮ ಪೂರ್ವಜರ ಉತ್ತರಾಧಿಕಾರಿಗಳನ್ನಾಗಿ ಮಾಡುವುದು ಸಾಧ್ಯವೇ?

ಫ್ಯಾಸಿಸ್ಟರ ವಿಷಯದಲ್ಲಿ ನಾವು ತಾಟಸ್ಥ್ಯಭಾವವನ್ನು ವಹಿಸುವುದು ಸಾಧ್ಯವಿಲ್ಲ; ನಮ್ಮ ಹೃದಯವು ಅದಕ್ಕೆ ವಿರೋಧಿ, ಸಾಂಸ್ಕೃತಿಕ ಪರಂಪರೆಯು ಅದನ್ನು ಸ್ವೀಕರಿಸಲಾಗದು: ನಮ್ಮ ಭವಿಷ್ಯ ಮತ್ತು ಜಾತೀಯ ಗೌರವವು ಅದನ್ನು ಸಹಿಸದು.

ಪ್ರಾಣಭಯವು ಮಾನವ ಜಾತಿಗಲ್ಲದೆ ಪಶುಗಳಿಗೂ ಉಂಟು. ಈ ಸಹಜಬುದ್ಧಿಯು ಕವಿಗೆ ತನ್ನ ಕಾವ್ಯವನ್ನು ಸುಂದರವನ್ನಾಗಿ ಮಾಡಲು ಅನೇಕ ಉಪಕರಣಗಳನ್ನು ಕೊಟ್ಟಿದೆ. ಘಾತಕ ಅತ್ಯಾಚಾರಗಳನ್ನೆದುರಿಸುವು ದರ ಮೂಲಕ ಪೀಡಿತರಿಗೆ ಪ್ರೀತಿ ಕರುಣೆ ತೋರಿ, ತಮ್ಮ ದೃಷ್ಟಿಯನ್ನು ಉಚ್ಚ ತೆಗೆ ಏರಿಸುವ ಸಮಯವಿದೇ ಆಗಿದೆ.

ದುಷ್ಟನಿಗ್ರಹಮಾಡಿ ಶೌರ್ಯವನ್ನು ಪ್ರಕಟಿಸುವ ಅವಕಾಶವಿದೆ. ಈಗ ಫ್ಯಾಸಿಸ್ಟರ ದಾನವೀ ಲೀಲೆಯ ದೃಶ್ಯ ಕಣ್ಣು ಮುಂದಿದೆ. ನಮ್ಮ ಸಾಹಿತಿ ಗಳ ಹೃದಯವನ್ನು ಪ್ರೇರೇಪಿಸಲು ಇವಕ್ಕಿಂತಲೂ ಮತ್ತಾವ ಘಟನೆ ಯುಂಟು? ಸ್ಟಾಲಿನ್‌ಗ್ರಾಡಿನ ವೀರರ ವೀರತೆಯು ಯುಗಾಂತರಗಳವರೆಗೆ ಕವಿಗಳಿಗೆ ವೀರಕಾರ್ಯವನ್ನೊದಗಿಸಲು ಪ್ರೇರೇಪಿಸಬಲ್ಲುದು; ಮತ್ತು ನಮ ಗದು ಅಸಂಬದ್ಧವಲ್ಲ. ಅವರು ಕೇವಲ ಸ್ಟಾಲಿನ್‌ಗ್ರಾಡ್ ಮತ್ತು ವ್ಹೋಲ್ಗಾ ಗಳನ್ನಲ್ಲದೆ, ಸಕಲ ಜಾತಿಗಳ ನಾಶಕರಾದ ಫ್ಯಾಸಿಸ್ಟರಿಂದ ನಮ್ಮ ಗಂಗಾ ಮಾತೆಯನ್ನು ಉಳಿಸಿದ್ದಾರೆ. ಅವರು ತಮ್ಮ ಹೃದಯಗಳೆಂಬ ಗೋಡೆ ಗಳಿಂದ ಫ್ಯಾಸಿಸ್ಟರನ್ನು ಓಡಿಸದಿದ್ದರೆ ಅವರು ವ್ಹೋಲ್ಗಾದಿಂದ ಗಂಗೆಗೆ ಬಂದಿ ದ್ದರೂ ಅವರನ್ನು ತಡೆಗಟ್ಟುವರಾರಿದ್ದರು? ನಮ್ಮ ಸಾಹಿತಿಗಳ ಹೃದಯವು ಸ್ಟಾಲಿನ್‌ಗ್ರಾಡಿನ ವೀರನಾದಕ್ಕೆ ಪ್ರತಿಧ್ವನಿ ಕೊಡಲು ಮಾನವತೆಯ ಕೋಮಲ ಭಾವನೆ ಮತ್ತು ಜಾತೀಯ ಅಭಿಮಾನಕ್ಕಾಗಿ ಸಿದ್ಧವಾಗಬೇಕು. ಸಾಹಿ ತ್ಯಕ್ಕೆ ಪ್ರೇರಣೆ ಕೊಡುವಂತಹ ಸಾಧನೆಗಳು ಈಗಿರುವುದಕ್ಕಿಂತ ಮತ್ತಾ ವಾಗಲೂ ಬಹುಶಃ ಇದ್ದಿರಲಾರವು.

ಸಾಹಿತ್ಯವು ಕೇವಲ ಪ್ರತಿಧ್ವನಿ ಕೊಡುವುದು ಮಾತ್ರವಲ್ಲ; ಅದು ಕೇವಲ ಕಲ್ಪನಾ ಜಗತ್ತಿಗೆ ಸೇರಿದ್ದಲ್ಲ; ಬಹಳ ಉಚ್ಚವಾದ ಶಕ್ತಿ. ಅದು ಶೂನ್ಯಾಕಾಶದಲ್ಲಿ ಓಡಾಡುತ್ತಿದ್ದರೆ ಮಾತ್ರ ಕಲ್ಪನಾ ಜಗತ್ತಿಗೆ ಸೇರಿರುತ್ತಿತ್ತು. ಜನಕ್ಕೆ ಸರಿಯಾದ ಭೂಮಿಯ ಆಧಾರವು ದೊರೆತಾಗ ಪ್ರಚಂಡ ಭೌತಿಕ ಶಕ್ತಿಯ ರೂಪವನ್ನು ತಾಳುತ್ತದೆ. ಆದರೆ ಅಂತಹ ಭೂಮಿಯಾವುದು? ಸಾಮಾನ್ಯ ಜನತೆ. ಸೈನಿಕ ವಿಜ್ಞಾನದ ಸಿದ್ಧಾಂತಗಳು ಜನತೆಯ ಬಾಹು ಬಲ ಮತ್ತು ಬುದ್ಧಿಯ ಅಭಿನ್ನ ಅಂಗಗಳಾಗದಿದ್ದರೆ ಕಲ್ಪನೆಯೊಡನೆ ಹಾರುವುವು. ಮಾನವ ಜಾತಿಯ ಹಿತೈಷಿಗಳು ಯುಗದಿಂದ ಒಂದು ಭವ್ಯ

ಸಮಾಜದ ನಿರ್ಮಾಣಕಲ್ಪನೆಯಲ್ಲಿ ತೊಡಗಿದ್ದರು. ಅವರು ತಮ್ಮ ಕಾಲ
ವಿಷಮತೆ, ದಾರಿದ್ರ್ಯ ಮತ್ತು ದರಿದ್ರ ಮಾನವರ ಬದಲು ಒಂದು ಸುಂದ
ಜಗತ್ತಿನ ಸೃಷ್ಟಿ ಮಾಡಲು ಕಾತುರರಾಗಿದ್ದರು. ಆದರೆ ಅವರ ಎಲ್ಲಾ ಶುಭ
ಕಾಂಕ್ಷೆಗಳು ಮತ್ತು ಸುಂದರ ಸ್ವಪ್ನಗಳೂ ಕೇವಲ ಸ್ವಪ್ನವಾಗಿ ಉಳಿದುವಲ್ಲದ
ಕಾರ್ಲ್‌ಮಾರ್ಕ್ಸನ ಅಸಂಖ್ಯ ದುಃಖಿತ ಜನತೆಗೆ ಸಾಮ್ಯವಾದದ ಕಲ್ಪನೆಯ
ಮುಂಬರಿಯಲು ಅವಕಾಶವಾಗಲಿಲ್ಲ. ಮತ್ತು ಲೆನಿನ್ನನು ಸಾಮ್ಯವಾ
ಸಿದ್ಧಾಂತಗಳನ್ನೂ ರೈತ ಕೂಲಿಗಾರರೊಡನೆ ಸ್ವಾರ್ಥಿಗಳ ಸಂಬಂಧವನ್ನೂ
ಸ್ಥಿರಪಡಿಸಲಿಲ್ಲ. ಈಗ ಸಾಹಿತಿಗಳ ಸೂಕ್ಷ್ಮ ಅನುಭವ ಮತ್ತು ದಿ
ದೃಷ್ಟಿಯೇ ಜನತೆಗೆ ನೆರವಾಗಬೇಕು. ಜನರ ಸಂಪರ್ಕದಿಂದ ಅದರ
ಅದ್ಭುತ ಶಕ್ತಿಯು ಬರುತ್ತದೆ. ಅನಂತರ ಫಾಸಿಸ್ಟ ದಾನವತೆಯನ್ನು ಎದುರಿ
ಒಂದು ಕಡೆ ರಾಷ್ಟ್ರವನ್ನೂ ಮತ್ತೊಂದೆಡೆ ರಾಷ್ಟ್ರದ ನಿಧಿಯನ್ನೂ ಕಾಪಾ
ಜನತೆಯು ಅಪಾರ ಬಲವನ್ನು ಜಗತ್ತಿಗೆ ಪ್ರದರ್ಶಿಸಬಹುದು. ಅಲ್ಲ
ಜಗತ್ತನ್ನು ಪರಿವರ್ತಿಸಬಹುದು. ಐತಿಹಾಸದಲ್ಲಿ ಸಾಹಿತ್ಯ ನಿರ್ಮಾಪಕರ
ಪ್ರತಿ ಸಂದರ್ಭದಲ್ಲಿಯೂ ಯುಗದ ಪರಿವರ್ತನಕಾರಕ ಶಕ್ತಿಯನ್ನು ಇ
ಕ್ಕಾಗಿ ಉಪಯೋಗಿಸಿದ್ದಾರೆ. ಈಗಲೂ ನವನಿರ್ಮಾಣ ಮತ್ತು ಪ್ರಗ
ಯನ್ನಪೇಕ್ಷಿಸುವವರು ಸಾಹಿತಿಗಳು ಪರಿವರ್ತನ ಶಕ್ತಿ ಕೊಡುವಂತ
ಜನತೆಯ ಕಡೆಗೆ ಸಾಗಬೇಕು. ಜನತೆಯೇ ನಮ್ಮ ಹಾದಿಯನ್ನು ಸುಗಮ
ಮಾಡುವುದು.

ಅನೇಕ ವೇಳೆ ಸಾಮಂತರು ಯುಗಪರಿವರ್ತನ ಕಾರ್ಯದಲ್ಲಿ ಸಹಾಯ
ರಾಗುತ್ತಿದ್ದರು. ಈಗಿನ ಸಾಹಿತ್ಯಿಕ ದರಬಾರಿಗಳು ಸಾಹಿತಿಗಳಲ್ಲ. ಅವರ
ವಿಜ್ಞಾನದ ಅದ್ಭುತ ಆವಿಷ್ಕಾರ, ಪ್ರೆಸ್, ಕಾಗದ, ಯಂತ್ರ, ರೇಡಿಯೋ
ಸಿನಿಮಾ ಇವುಗಳ ಮೂಲಕ ಜನರ ಸಂಬಂಧವನ್ನು ಬೆಳೆಸಲು ಅಪೇಕ್ಷಿಸ
ತ್ತಾರೆ. ಸಾಮಂತರನ್ನು ಮುಖ್ಯವೆಂದು ಈಗಿನ ಸಾಹಿತಿಗಳು ಭಾವಿಸದೆ
ಜನರ ಮನಸ್ಸನ್ನೊಲಿಸಿಕೊಳ್ಳಲು ಯತ್ನಿಸುತ್ತಾರೆ. ಆದ್ದರಿಂದ ಈಗಿನ
ಸಾಹಿತಿಗಳು ಜನ-ಸಾಹಿತಿಗಳಾಗದೆ ಗತ್ಯಂತರವಿಲ್ಲ. ಜನರ ಮನಸ್ಸಿಗೆ
ಮನೋರಂಜನೆಯನ್ನೂ ಜನಶಕ್ತಿಯಲ್ಲಿ ಸ್ಫೂರ್ತಿಯನ್ನೂ ತುಂಬಬೇಕು
ಅವರು ಸಂಘರ್ಷದಿಂದ ಹಿಮ್ಮೆಟ್ಟದೆ, ಜನರೊಡನೆ ಕೂಡಿ ಹೊಸ ನಿರ್ಮಾಣ

ಕಾರ್ಯದಲ್ಲಿ ಭಾಗವಹಿಸಬೇಕು. ಪ್ರಪಂಚದ ಟೀಕೆಮಾಡದೆ ವಿಶ್ವವನ್ನು ಬಲಾಯಿಸುವುದರಲ್ಲಿ ತಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸಬೇಕು. ಇಂತಹ ಸುಅವಸರವು ಯಾವಾಗ ದೊರೆತಿತ್ತು. ಅವರ ಸ್ವಾರ್ಥ, ಮತ್ತು ಮಹತ್ವಾಕಾಂಕ್ಷೆಗಳು ಜನರ ಆಸೆಯೊಡನೆ ಬೆರೆತಿದೆ. ಮಹಾ ಉದ್ದೇಶವು ಮುಂದಿರುವಾಗ ತುಚ್ಛ ಸ್ವಾರ್ಥಕ್ಕಾಗಿ ಒದ್ದಾಡುವುದು ಸರಿಯಲ್ಲ. ತಮ್ಮ ವ್ಯಕ್ತಿತ್ವವನ್ನು ಉಚ್ಚತರವಾಗಿ ಮಾಡಿ ಜನರ ಹಿತಕ್ಕಾಗಿ ಗಂಭೀರನಾದ ಮಾಡಬೇಕು. ಸಾಹಿತಿಗಳು ಈ ಚಿರ ಪುರಾತನ ಮತ್ತು ಚಿರ ನೂತನ ಜನಶಕ್ತಿಯೊಡನೆ ತಮ್ಮ ಸಂಬಂಧವನ್ನು ಹೇಗೆ ಸ್ಥಾಪಿಸಬಲ್ಲರು? ಇದಕ್ಕಾಗಿ ನಾವು ಜನರ ಭಾವಗಳನ್ನು ತಿಳಿಯಬೇಕು. ಅವರಿಗೆ ಬೇಕಾದ ವಿಷಯಗಳನ್ನು ತಿಳಿಸಲು ಜನಸಾಮಾನ್ಯರ ಭಾಷೆಯನ್ನುಪಯೋಗಿಸಬೇಕು. ಜನರಿಗೆ ಉಪಯೋಗವಾಗದ ಭಾಷೆಯನ್ನು ಪ್ರಯೋಗಿಸಬಾರದು. ಸಾಹಿತಿಯು ಜನರ ಜೊತೆಗಾರನು ಮಾತ್ರವಲ್ಲದೆ ಮಾರ್ಗದರ್ಶಕ. ಅವನು ಸಿಪಾಯಿಯೂ ಸೇನಾನಿಯೂ ಆಗುತ್ತಾನೆ. ಈಗಿನ ಸೇನಾನಿಯು ಮಾರ್ಗದರ್ಶಕನು, ತನ್ನ ಗೂಡಿನಿಂದ ಹೊರಗೆ ಬಂದು ಜನರೊಡನೆ ಒಂದುಗೂಡಿರಬೇಕು. ಜನರ ನಾಡಿಗಳಲ್ಲಿ, ಹೃದಯದಲ್ಲಿ, ತಲೆಯಲ್ಲಿ, ಅಂಗಾಂಗಗಳಲ್ಲಿ ಏಳುವ ಪ್ರತಿಯೊಂದು ತರಂಗದ ಅನುಭವ ಹೊಂದಿ, ಮಹಾ ಸಾಹಿತ್ಯದ ಸೃಷ್ಟಿ ಮಾಡಬಲ್ಲನು; ಸಾಕಾರ ನವನಿರ್ಮಾಣ ಮಾಡಬಲ್ಲನು. ಇದರಿಂದ ಜನರ ಮನಸ್ಸಿನಲ್ಲಿ ನಾನಾ ಪ್ರೇರಣೆಗಳುಂಟಾಗುತ್ತವೆ. ಅವನು ತನ್ನ ಅಕ್ಕಪಕ್ಕದ ವಾತಾವರಣದ ವಿಚಾರದಲ್ಲಿ ಉದಾಸೀನನಾಗಿರಬಲ್ಲನೇ? ಬಂಗಾಳದ ಭೀಷಣ ಘಟನೆ ಮತ್ತು ಜನರ ಚೀತ್ಕಾರ ಇವುಗಳಿಂದ ದೂರವಾಗಿರಲು ಸಾಧ್ಯವೇ? ಜನ ಬಲದಲ್ಲಿ ನಮಗೆ ವಿಶ್ವಾಸವಿದ್ದರೆ ನಾವು ನಿರಾಶೆ ಮತ್ತು ನಿರುಪಾಯಗಳಿಂದ ತೊಂದರೆ ಪಡುವ ಆವಶ್ಯಕತೆ ಇಲ್ಲ. ಜನರ ದುರ್ಗನು ಶಕ್ತಿಯು ಫಾಸಿಸ್ಟರ ಕ್ರೌರ್ಯವೆಂಬ ಕಾರ್ಮೋಡಗಳನ್ನು ಧ್ವಂಸಗೊಳಿಸಿ ಆಶೆಯೆಂಬ ಮಿಂಚನ್ನು ಸಂಚಾರಗೊಳಿಸುವಂತೆ ಮಾಡಬಲ್ಲುದು. ನಮ್ಮ ಈ ಅಮೋಘ ಶಕ್ತಿಯೇ ನಮ್ಮ ಭವಿಷ್ಯದ ಶ್ರೇಯಸ್ಸಿಗೆ ಆಧಾರಸ್ತಂಭವಾಗಿದೆ.

ನಮ್ಮ ಸಾಹಿತ್ಯ

[ಈಗ್ಗೆ ಏಳು ವರ್ಷಗಳ ಹಿಂದೆ ಹಿಂದಿ ಸಾಹಿತ್ಯವನ್ನು ವಿಮರ್ಶಿಸುವ ಲೇಖನವೊಂದನ್ನು ಪಂಡಿತ ಜವಾಹಿರಲಾಲ ನೆಹ್ರೂ ಅವರು ಬರೆದು ಪ್ಯಾರಿಸ್ಸಿನ ಅಂತರರಾಷ್ಟ್ರೀಯ ಲೇಖಕರ ಕಾಂಗ್ರೆಸ್ಸಿನಲ್ಲಿ (೧೯೩೫) ಚರ್ಚೆಗೆ ಬಂದ ಈ ವಿಷಯಗಳನ್ನು ಭಾರತೀಯ ಲೇಖಕರ ಮುಂದಿಟ್ಟರು. ನಮ್ಮ ಲೇಖಕರ ಗುರಿ - ನೋಟ ಈ ಹಾದಿಯಲ್ಲಿ ಓಡಬೇಕೆಂದು ಅವರ ಆಸೆ. ಸಮಾಜ, ಜೀವನಗಳ ನಿಕಟಸಂಬಂಧವನ್ನು ತೋರುವ ವಿಷಯಗಳು ಸೂಚಿತವಾಗಿವೆ. ಕನ್ನಡ ಬರೆಹಗಾರರು ಈ ಕಡೆಗೆ ಲಕ್ಷ್ಯಗೊಟ್ಟು ಪಂಡಿತರು ಸೂಚಿಸಿರುವ ವಿಷಯಗಳನ್ನು ಚರ್ಚಿಸಿ ಯಥೋಚಿತವಾದ ಕಾರ್ಯಕ್ರಮವನ್ನು ನಿಯೋಜಿಸಿಕೊಳ್ಳಬೇಕು. —ಸಂ.]

Outline of Subjects prepared for discussion at the International Congress of Writers for the Defence of Culture held in Paris in June 1935 :—

(1) Cultural Heritage
(ಸಾಂಸ್ಕೃತಿಕ ಉತ್ತರಾಧಿಕಾರ)

Tradition & Invention

ಪರಂಪರೆ ಮತ್ತು ಸಂಶೋಧನೆ

The recovery and protection of Cultural Values

ಸಾಂಸ್ಕೃತಿಕ ನಿಧಿಯ ರಕ್ಷಣೆ ಮತ್ತು ಅದರ ಉದ್ಧಾರ

The future of culture

ಸಂಸ್ಕೃತಿಯ ಭವಿಷ್ಯ

(2) Humanism (ಮಾನವತಾ)

Humanism and Nationality

ಮಾನವತಾ ಮತ್ತು ರಾಷ್ಟ್ರೀಯತಾ

Humanism and the Individual

ಮಾನವತಾ ಮತ್ತು ವ್ಯಕ್ತಿ

Proletarian Humanism

ಶ್ರಮಜೀವಿ ಮತ್ತು ಮಾನವತಾ

Man and The Machine

ಮನುಷ್ಯ ಮತ್ತು ಯಂತ್ರ

Man and Leisure
ಮನುಷ್ಯ ಮತ್ತು ವಿರಾಮ
The Writer and Workers
ಲೇಖಕ ಮತ್ತು ಕೆಲಸಗಾರರು

3. Nation and Culture (ರಾಷ್ಟ್ರ ಮತ್ತು ಸಂಸ್ಕೃತಿ)

The relations among National Cultures
ರಾಷ್ಟ್ರೀಯ ಸಂಸ್ಕೃತಿಗಳಲ್ಲಿ ಪರಸ್ಪರ ಸಂಬಂಧ
National Cultures and Humanism
ರಾಷ್ಟ್ರೀಯ ಸಂಸ್ಕೃತಿಗಳು ಮತ್ತು ಮಾನವತಾ
National Cultures and Social Classess
ರಾಷ್ಟ್ರೀಯ ಸಂಸ್ಕೃತಿಗಳು ಮತ್ತು ಸಾಮಾಜಿಕ ವರ್ಗಗಳು
Class and Culture
ವರ್ಗ ಮತ್ತು ಸಂಸ್ಕೃತಿ
The Literary expression of National Minorities
ರಾಷ್ಟ್ರೀಯ ಅಲ್ಪ ಸಂಖ್ಯಾತರ ಸಾಹಿತ್ಯೋಚ್ಚಾರ
Nationalism as opposed to National realities
ರಾಷ್ಟ್ರೀಯ ವಾಸ್ತವಿಕತೆಗೆ ವಿರುದ್ಧವಾದ ರಾಷ್ಟ್ರೀಯತೆ
War and Culture
ಯುದ್ಧ ಮತ್ತು ಸಂಸ್ಕೃತಿ
The Literature of Colonial people
ಉಪನಿವೇಶಿಕ ಜನತೆಯ ಸಾಹಿತ್ಯ
The broad public and the 'initiated'
ಸಾಧಾರಣ ಜನತೆ ಮತ್ತು ದೀಕ್ಷಿತ ಜನರು
Isolated figures and precursors
ವಿಚ್ಛಿನ್ನ ಮೂರ್ತಿಗಳು ಮತ್ತು ಅಗ್ರ ದೂತರು
Translations
ಅನುವಾದಗಳು

4. The Individual (ವ್ಯಕ್ತಿ)

The relation between the Writer and Society; opposition or agreement
ಸಮಾಜಕ್ಕೆ ವಿರುದ್ಧವಾದ ಅಥವಾ ಸಮರ್ಥನದಲ್ಲಿ ಲೇಖಕರ ಮತ್ತು ಸಮಾಜದ ಸಂಬಂಧ

The Individual as an expression of his Class
ತನ್ನ ವರ್ಗದ ಪ್ರತಿನಿಧಿರೂಪನಾದ ವ್ಯಕ್ತಿ

5. The Dignity of thought (ವಾಗ್ಧಾರೆಯ ಮರ್ಯಾದೆ)

The Nature of the Liberty of the artists
ಕಲಾವಿದರ ಸ್ವಾತಂತ್ರ್ಯ ರೀತಿ

Liberty of expression
ವಾಣಿಯ ಸ್ವಾತಂತ್ರ್ಯ

Direct and indirect forms of Censorship
ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಕತ್ತರಿ ಪ್ರಯೋಗ

Writers in exile
ಗಡೀಪಾರಾದ ಲೇಖಕರು

Illegal Literature
ನ್ಯಾಯವಿರುದ್ಧವಾದ ಸಾಹಿತ್ಯ

6. The Writer's role in Society (ಸಮಾಜದಲ್ಲಿ ಲೇಖಕನ ಭಾಗ)

His relations with the Public
ಜನತೆಯೊಂದಿಗೆ ಲೇಖಕನ ಸಂಬಂಧ

The lessons of Soviet Literature
ಸೋವಿಯೆಟ್ ಸಾಹಿತ್ಯದ ಪಾಠಗಳು

Literature and the Proletariat
ಸಾಹಿತ್ಯ ಮತ್ತು ಶ್ರಮಜೀವಿ

Writers and Youth
ಲೇಖಕರು ಮತ್ತು ನವ ಯುವಕರು

The critical value of Literature
ಸಾಹಿತ್ಯದ ವಿಮರ್ಶನಾತ್ಮಕ ಬೆಲೆ

Literature as a mirror and criticism of Society
ಸಮಾಜದ ದರ್ಪಣ ಮತ್ತು ವಿಮರ್ಶೆಯಾದ ಸಾಹಿತ್ಯ

7. Literary Creation (ಸಾಹಿತ್ಯ ಸೃಷ್ಟಿ)

The influence of Social Change on artistic forms
ಕಲಾ ರೂಪಗಳ ಮೇಲೆ ಸಾಮಾಜಿಕ ಪರಿವರ್ತನೆಯ ಪ್ರಭಾವ

Value of continuity and Values of discontinuity
ಸಾಹಿತ್ಯದಲ್ಲಿ ನಿರ್ವಿಚ್ಛಿನ್ನತೆ ಮತ್ತು ವಿಚ್ಛಿನ್ನತೆಗಳ ಪ್ರಯೋಜನ

The different forms of Literary activity
ಸಾಹಿತ್ಯ ಕಾರ್ಯಗಳ ವಿವಿಧ ರೂಪ

The Social role of Literature
ಸಾಹಿತ್ಯದ ಸಾಮಾಜಿಕ ಸ್ವರೂಪ

Imitation or creation of types
ಮಾದರಿಗಳ ಸೃಷ್ಟಿ ಅಥವಾ ಅನುಕರಣ

The Creation of Heroes
ನಾಯಕರ ಸೃಷ್ಟಿ

The New Technical means of expression
ಸಾಹಿತ್ಯ ಪ್ರತಿಪಾದನೆಯಲ್ಲಿ ಹೊಸ ಮಾರ್ಗಗಳು

8. Writers and the defence of Culture (ಲೇಖಕರು ಮತ್ತು ಸಾಂಸ್ಕೃತಿಕ ರಕ್ಷೆ)

How their efforts can be co-ordinated
ಲೇಖಕರ ಪ್ರಯತ್ನಗಳನ್ನು ಹೇಗೆ ಒಂದುಗೂಡಿಸಬಹುದು

ಅಶ್ಲೀಲ ಸಾಹಿತ್ಯ

ತಿ. ತಾ. ಶರ್ಮ.

ಆಧುನಿಕ ಸಾಹಿತ್ಯದ ಹಲವು ಸಮಸ್ಯೆಗಳು ಜನತೆಯ ಹೃದಯವನ್ನು ಕಲಕುತ್ತಿವೆ. ಆ ಸಮಸ್ಯೆಗಳಲ್ಲಿ ಸಾಹಿತ್ಯದಲ್ಲಿ ತಲೆ ಹಾಕಿರುವ 'ಅಶ್ಲೀಲ'ವೊಂದು. ಇಂದಿನ ಲೇಖಕರಲ್ಲಿ ಹಲವರು ಅಶ್ಲೀಲ ರಚನಾ ಕೌಶಲ್ಯ ತೋರಿಸುತ್ತಿದ್ದಾರೆ. ಎಲ್ಲ ಪ್ರಾಂತಗಳಲ್ಲೂ ಈ ಗುಂಪಿನ ಲೇಖಕರು ಹಲವರಾದರೂ ಇದ್ದೇ ಇದ್ದಾರೆ. ಕನ್ನಡ ನಾಡಿನಲ್ಲೂ ಹಲವರಿದ್ದಾರೆ.

ನೀತಿವಾದಿಗಳು 'ಅಶ್ಲೀಲ ಸಾಹಿತ್ಯ'ವನ್ನೆತ್ತಿ ತೋರಿಸಿ, ಅದನ್ನು ಖಂಡಿಸುತ್ತಾರೆ.

"ಈ ಬಗೆಯ ಸಾಹಿತ್ಯವು ಕೀಳು ಇಂದ್ರಿಯಗಳನ್ನು ಉದ್ರೇಕಗೊಳಿಸುತ್ತದೆ; ಜೀವನವನ್ನು ಕಶ್ಮಲಗೊಳಿಸುತ್ತದೆ; ಹೆಚ್ಚೇನು ಮಾನವನನ್ನು ಪತಿತನನ್ನಾಗಿ ಮಾಡುತ್ತದೆ. ಅಶ್ಲೀಲ ಸಾಹಿತ್ಯವು ಆರೋಗ್ಯ ದೃಢಕಾಯ ಮನಸ್ಸು ಮತ್ತು ಸಮಾಜವನ್ನು ಕುಲಗೆಡಿಸುತ್ತದೆ."

ನೀತಿವಾದಿಗಳ ಪ್ರತಿವಾದಿಗಳಾದರೋ

"ಕಲೆಗೂ ನೀತಿಗೂ ಏತಕ್ಕೆ ಸಂಬಂಧವನ್ನು ಕಲ್ಪಿಸುತ್ತೀರಿ? ನೀತಿ ವಿರಹಿತವಾದುದು ಕಲೆಯೇ ಅಲ್ಲವೇನು? ಕಲೆಯ (ಸಾಹಿತ್ಯವೂ ಸಹ ಕಲೆಯೆ) ಪರಮೋದ್ದಿಶ್ಯವಾದರೂ ಏನು? ಹೃದಯ ಭಾವಕಾಸಾರಗಳಿಂದ ರಸತರಂಗಗಳನ್ನೇಳಿಸಿ ಮಾನವನನ್ನು ಕ್ಲೇಶರಹಿತನನ್ನಾಗಿ ಮಾಡುವುದು; ಅವನಿಗೆ ಸೌಂದರ್ಯದರ್ಶನ, ಆನಂದಾನುಭವಮಾಡಿಕೊಡುವುದು. ಇಷ್ಟು ಮಾತ್ರವೇ ಅಲ್ಲ ಬುದ್ಧಿಯನ್ನೂ ಪ್ರಚೋದನಗೊಳಿಸುವುದು. ಶೋಧನ ವಿಚಾರ ಶಕ್ತಿಗಳನ್ನುಂಟುಮಾಡುವುದು. ಕಲೆಯು ನೀತಿಪ್ರಚಾರ ಸಾಧನವಲ್ಲ. ಹಾಗೆ ಅದು ಆದಕೂಡಲೇ ಕಲೆಯು ಸಾಯವಾಗುವುದು. ಜೀವನ, ನೀತಿ, ಧರ್ಮ, ಇವೆಲ್ಲ ಕಲೆಯನ್ನು ಆಶ್ರಯಿಸಿ ತಮ್ಮ ಬೆಳವಣಿಗೆಗೆ, ಭದ್ರತೆಗೆ ಅದರಲ್ಲೇನಾದರೂ ಪ್ರಕೃತಿಗಳಿದ್ದರೆ ಅವುಗಳಿಂದ ಪ್ರಯೋಜನಹೊಂದಲಿ. ಕಲೆಗೆ ಸ್ವತಃ ಯಾವ ಉದ್ದಿಶ್ಯವೂ ಇಲ್ಲ. ಮಾನವನ ಹೃದಯಾಂತರಾಳದಲ್ಲಿರುವ

ಸೌಂದರ್ಯ ಪ್ರೇಮಗುಣವನ್ನು ಹೊರಕ್ಕೆಳೆದು, ಅದಕ್ಕೆ ಸಾಣೆ ಇಡುವುದಷ್ಟೆ ಅದರ ಕೆಲಸ. ಇಲ್ಲಿ ನೀತಿ, ಅನೀತಿ ವಿಚಾರಕ್ಕೆ ಅವಕಾಶವೇ ಇಲ್ಲ. ಗ್ರೀಕ್ ಪ್ರತಿಮೆಗಳನ್ನು ತೆಗೆದುಕೊಳ್ಳಿ. ಜಗತ್ಪ್ರಸಿದ್ಧವಾದ ಹಲವು ಪ್ರತಿಮೆಗಳಾದರೂ ನಗ್ನವಾಗಿವೆ. ಸಾಹಿತ್ಯದಲ್ಲೂ ಅಷ್ಟೆ. ವಾತ್ಸಾಯನ ಕಾಮಸೂತ್ರಗಳನ್ನು ಓದಲೇಕೂಡದೆಂದು ಹೇಳುವವರು ಮಾನವ ಜೀವನ ವಿಶಿಷ್ಟ ಲಕ್ಷಣದ ಕಡೆಗೇ ಕುರುಡರಾಗಿರುವರೆಂದು ಹೇಳಬೇಕಾಗುತ್ತದೆ. ಮನುಷ್ಯನು ಮುಸುಕಿನಲ್ಲಿ ಮಾಡುವ ಕೆಲಸವನ್ನು ಕಲಾವಿದನು ಬಯಲಿಗಿಡುವುದು ಮಹಾಪರಾಧ? ಮನುಷ್ಯನ ಜ್ಞಾನೋದಯ ಪ್ರಯತ್ನದಲ್ಲಿ ಉಪಕಾರಿ. ಭಾವಾವೇಶದ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿಕೊಂಡು ಹೋಗದಂತೆ ಮಾನವನನ್ನು ಕಾಪಾಡುವ ಗೆಳೆಯ.”.

ಎಂಬುದಾಗಿ ಉತ್ತರ ಕೊಡುತ್ತಾರೆ. ಇವರು ಕೊಂಚ ಸೌಮ್ಯವಾದಿಗಳು. ಇವರಲ್ಲಿ ಉಗ್ರವಾದಿಗಳು ಬೇರೆ ಉಂಟು.

“ಮಹಾ ಸಾಧ್ವೀಮಣಿ, ಅಗ್ನಿಪುತ್ರಿ ದ್ರೌಪದಿಯನ್ನು ಹೊರಗಾಗಿದ್ದರೂ ಸಹ ರಾಜ ಸಭೆಗೆ ಎಳೆದು ತಂದು, ಆಕೆಯ ಸೀರೆ ಸೆಳೆದ ಪ್ರಕರಣವನ್ನು, ಧರ್ಮಪತ್ನಿಯನ್ನು ಒತ್ತೆಯಾಗಿಟ್ಟ ಐದು ಮಂದಿ ಜೂಜುಕೋರರ ಪುರಾಣವನ್ನು ನೀತಿವಾದಿಗಳು ಏನೆಂದು ಕರೆಯಬೇಕು. ಕೃಷ್ಣ ಇವರ ಪಕ್ಷಪಾತಿ! ಪಂಚಮ ವೇದವೆಂದು ಹಾಡುವರಲ್ಲ? ರಾವಣನು ಸೀತೆಯನ್ನು ಹೊತ್ತು ಹೋದಕತೆ, ಅಣ್ಣ ತಮ್ಮನ ಹೆಂಡತಿಯನ್ನೂ, ಮತ್ತೆ ತಮ್ಮ ಅಣ್ಣನ ಹೆಂಡತಿಯನ್ನು ಮದುವೆಯಾದ ಕತೆ ಇತ್ಯಾದಿ ಇತ್ಯಾದಿ ಕತೆಗಳ ಕಟ್ಟನ್ನು ನೀತಿಕೋವಿದರೇನೆಂದು ಕರೆಯುವರು? ನಿತ್ಯಪಾರಾಯಣದ ಪವಿತ್ರ ಗ್ರಂಥವೆಂದಲ್ಲವೆ? ಇದೆಂತಹ ನೀತಿ? ಕಲಿಂಗ ನೀತಿಯಲ್ಲವೆ? ವ್ಯಾಸ ವಾಲ್ಮೀಕಿಗಳು ನೀತಿವಾದಿಗಳಾಗಿದ್ದರೆ ನಮಗೆ ಭಾರತವೂ ಸಿಗುತ್ತಿರಲಿಲ್ಲ, ರಾಮಾಯಣವೂ ಸಿಗುತ್ತಿರಲಿಲ್ಲ. ಅವರ ದೃಷ್ಟಿ ಕಲೆ, ನೀತಿಯಲ್ಲ” ಎಂಬುದಾಗಿ ಇವರು ಘರ್ಜಿಸುವರು.

ಕನ್ನಡದ ಮೇಲೆ ಅಪಪ್ರಚಾರ

ಅ. ನ. ಕೃಷ್ಣರಾಯ

ಕನ್ನಡ ಇಂದು ನಾನಾ ಮುಖದಲ್ಲಿ ನಾನಾ ಬಗೆಯ ಶತ್ರುಗಳನ್ನು ಎದುರಿಸಬೇಕಾಗಿದೆ. ಹೊರಗಿನ ಶತ್ರುಗಳ ಬಾಧೆಗಿಂತ ಒಳಗಿನ ಶತ್ರುಗಳ ಕಾಟ ಹೆಚ್ಚಾಗಿದೆ. ಕನ್ನಡ ನಾಡಿನ ಅನ್ನವನ್ನುಂಡು, ನೀರು ಕುಡಿದು ಕನ್ನಡ ನಾಡಿಗೆ ದ್ರೋಹವೆಸಗುತ್ತಿರುವವರ ಸಂಖ್ಯೆ ಬೆಳೆಯುತ್ತಿದೆ. ಕನ್ನಡದ ಬೆಳವಳಿಗೆಯನ್ನು ಕುರಿತ ಯಾವ ವಿಷಯ ಬಂದರೂ ಅವರು ಪ್ರತ್ಯಕ್ಷ ಪರೋಕ್ಷವಾಗಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿ ಪ್ರಗತಿಯನ್ನು ಅಡ್ಡ ಗಟ್ಟುತ್ತಿದ್ದಾರೆ. ಭಾಷೆಯ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ಪ್ರಾಂತದ ಹೆಸರಿನಲ್ಲಿ ಈ ಧಾಳಿ—ಈ ಭರ್ತ್ಸನೆ ನಿರರ್ಗಳವಾಗಿ ನಡೆಯುತ್ತಿದೆ. ಕನ್ನಡಿ ಗರ ನಿರಭಿಮಾನ, ದೀರ್ಘ ಆಲಸ್ಯ ಇದಕ್ಕೆ ಸೊಪ್ಪು ಹಾಕುತ್ತಿದೆ.

ಜಗತ್ತಿನಲ್ಲಿ ವಿಜ್ಞಾನಯುಗವಾರಂಭವಾದಮೇಲೆ ಯಾಂತ್ರಿಕ ಕಲೆ ಯಾದ ಚಲನಚಿತ್ರಕ್ಕೆ ವಿಶೇಷ ಮಹತ್ವ ಬಂದಿತು. ಕಲಾ, ಶೈಕ್ಷಣಿಕ, ಔದ್ಯೋಗಿಕ ರಂಗಗಳನ್ನು ಚಲನಚಿತ್ರ ವ್ಯಾಪಿಸಿ ತನ್ನದೇ ಆದ ಒಂದು ಸರ್ವಾ ಧಿಕಾರಿತ್ವವನ್ನು ಸ್ಥಾಪಿಸಿದೆ. ಇದರಿಂದ ಸಾರ್ವತ್ರಿಕ ವಿದ್ಯಾಪ್ರಸಾರಕ್ಕೆ ಸ್ವಲ್ಪಮಟ್ಟಿಗೆ ಇಂಬು ದೊರಕಿದ್ದರೂ ಸಾಕಷ್ಟು ಹಾನಿಯೂ ಆಗಿದೆ. ಮಾನವನ ಕಲಾನಿರ್ಮಾಣ ಶಕ್ತಿಯನ್ನು, ನೈಸರ್ಗಿಕ ಕಲಾಪ್ರಿಯತೆಯನ್ನು ಚಲನಚಿತ್ರ ಒಂದು ಯಾಂತ್ರಿಕ ಸಾಧನೆಗೆ ಅಧೀನಮಾಡುತ್ತಿದೆ. ಅದರ ಸಾಧಕ ಬಾಧಕಗಳೇನೇ ಇದ್ದರೂ ಚಲನಚಿತ್ರ ಚಿರಸ್ಥಾಯಿಯಾಗಿ ಉಳಿಯುವ ಲಕ್ಷಣವನ್ನು ಖಚಿತವಾಗಿ ತೋರಿಬಿಟ್ಟಿದೆ.

ಬಂಡವಾಳಗಾರರ ಕೈಗೂಸಾದ ಚಲನಚಿತ್ರಕಲೆ ಇಂದು ಕೀಳು ಅಭಿ ರುಚಿಯ ಪ್ರಸಾರದ ಕೇಂದ್ರವಾಗಿ ಪರಿಣಮಿಸಿದೆ. ವಿಲಾಯಿತಿಯ ಚಿತ್ರಗಳ ಅನುಕರಣದಿಂದ ಭಾರತೀಯ ಸಂಸ್ಕೃತಿಯ ಮೋರೆಗೆ ಕಪ್ಪು ಬಳಿಯುತ್ತಿದೆ. ಹಿಂದೂಸ್ಥಾನದಲ್ಲಿ ಚಲನಚಿತ್ರ ಉದ್ಯಮ 'ವಿಶ್ವಾಮಿತ್ರ ಸೃಷ್ಟಿ'ಯಾಗಿ ಪರಿಣ ಮಿಸಿ ನೈಜ ಕಲಾವಿದರ ಗೋರಿಕಟ್ಟುವುದರಲ್ಲಿ ತೊಡಗಿದೆ.

ಒಂದು ಕಡೆ ಬಂಡವಾಳಗಾರರು ಚಲನಚಿತ್ರವನ್ನು ತಮ್ಮ ಆಶಾ ಸಾಧನೆಗೆ ದುರುಪಯೋಗಪಡಿಸಿಕೊಂಡಂತೆ ದುರಭಿಮಾನಿಗಳು ತಮ್ಮ ಚಾಪಲ್ಯ ಪೂರಣಕ್ಕೂ, ಪರರ ಅವಹೇಳನಕ್ಕೂ ಉಪಯೋಗಿಸಿಕೊಳ್ಳುತ್ತಿದ್ದಾರೆ. ಸುಮಾರು ಎರಡು ದಶಕಕಾಲ ಅಮೇರಿಕೆಯ ಚಿತ್ರಗಳು ರಷ್ಯಾ, ಚೀನಾ ದೇಶಗಳ ಭರ್ತ್ಸನೆಯನ್ನೇ ತಮ್ಮ ಹೆಗ್ಗುರಿಮಾಡಿಕೊಂಡಿದ್ದವು. ಇಂದಿನ ಯುದ್ಧದ ದೆಸೆಯಿಂದ ಈ ಅಪಪ್ರಚಾರ ಅಮೇರಿಕೆಯಲ್ಲಿ ನಿಂತಿದೆ.

ಅಮೇರಿಕೆಯ ಮೇಲ್ಪಂಕ್ತಿಯನ್ನನುಸರಿಸಿ ಹಿಂದೂಸ್ಥಾನದ ಕೆಲವು ಪ್ರಾಂತಗಳು ನೆರೆ ಪ್ರಾಂತಗಳ ಅವಹೇಳನಕ್ಕೆ ಚಲನಚಿತ್ರವನ್ನು ಚೆನ್ನಾಗಿ ಬಳಸುತ್ತಿವೆ. ದಾಕ್ಷಿಣಾತ್ಯರೆಂದರೆ ರಾಕ್ಷಸರು, ಕಪಿಗಳು, ಕರಡಿಗಳು ಎಂಬ ಯಾವ ದಿವ್ಯ ಭಾವನೆಯನ್ನು ಮಹಾ ಕವಿ ವಾಲ್ಮೀಕಿ ಆರಂಭಿಸಿದನೋ ಅವನ್ನೇ ಔತ್ತರೇಯ ಚಲನಚಿತ್ರ ನಿರ್ಮಾಪಕರು ಸಾರೋದ್ಧಾರವಾಗಿ ನಡಸಿಕೊಂಡು ಬಂದಿದ್ದಾರೆ. ಮಿಸ್ ಗೋಹರ್ ಅಭಿನಯಿಸುತ್ತಿದ್ದ ಇಂಪೀರಿಯಲ್ ಫಿಲ್ಮ್ ಕಂಪೆನಿ ಮತ್ತು ರಣಜಿತ್ ಕಂಪೆನಿಗಳ ಚಿತ್ರಗಳು ಮೂರು ನಾಮ ಹಚ್ಚಿದ ದಾಕ್ಷಿಣಾತ್ಯನನ್ನು ತಂದು ಅವನ ಬಾಯಿಂದ ನಾಲ್ಕು ತಮಿಳು ವಾಕ್ಯಗಳನ್ನಾಡಿಸಿ ದಾಕ್ಷಿಣಾತ್ಯರು ಎಂತಹ ಅನಾಗರಿಕ ಪಶುಗಳು ಎಂದು ಎತ್ತಿ ತೋರಿಸುತ್ತಿದ್ದವು. ಮರಾಟಿ ಚಿತ್ರಗಳಲ್ಲಿ ಕನ್ನಡಿಗರ ಅವಹೇಳನವಾಗದ ಪ್ರಯತ್ನಗಳೇ ವಿರಳ. ಶಾಂತಾರಾಮರ 'ಆದ್ಮಿ' ಚಿತ್ರದಲ್ಲಿಯೂ ದಾಕ್ಷಿಣಾತ್ಯನೊಬ್ಬನ ವ್ಯಂಗ್ಯ ಚಿತ್ರ ಮೂಡಿದೆ. ಸ್ವಯಂ ಕನ್ನಡಿಗರಾದ ವಿನಾಯಕ, ಬಾಬೂರಾವ್ ಪೆಂಡಾರ್ಕರ್ ಇವರು ತಮ್ಮ ಚಿತ್ರಗಳಲ್ಲಿ 'ಕಾನಡೀ ಅಪ್ಪಾ'ಗಳನ್ನು ಹುಡುಗಾಟಿಕೆ ಮಾಡುವ ಮಾತು, ಸನ್ನಿವೇಶಗಳನ್ನು ತಂದುಕೊಂಡಿದ್ದಾರೆ.

ಸಾಹಿತ್ಯರಂಗದಲ್ಲಿ ಐಕ್ಯತೆಯನ್ನೂ ಪರಸ್ಪರ ಗೌರವ ಪ್ರೇಮಗಳನ್ನೂ ಹುಟ್ಟಿಸಲು ಭಾರತೀಯ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದ ಶ್ರೀ ಕೆ. ಎಂ. ಮುನಿಷಿಯವರು ತಮ್ಮ 'ಪೃಥ್ವೀವಲ್ಲಭ' ಕಾದಂಬರಿಯಲ್ಲಿ ಕನ್ನಡ ನಾಡಿನ ವೀರಾಗ್ರಣಿಗಳಲ್ಲಿ ಒಬ್ಬನಾದ ಆಹವಮಲ್ಲ ಇಮ್ಮಡಿ ತೈಲಪನನ್ನು ಅತ್ಯಂತ ಕೀಳು ವ್ಯಕ್ತಿಯನ್ನಾಗಿ ಕಾಣಿಸಿದ್ದಾರೆ. ಇತ್ತೀಚೆಗೆ ಅದನ್ನು ರಜತ ಪರದೆಯ

ಮೇಲೆ ಕಾಣಿಸಿದ ಶ್ರೀ ಸೊಹ್ರಾಬ್ ಮೋದಿಯವರು ಮುನಿಷಿಯವರ ಅಪ ಪ್ರಚಾರವನ್ನು ಸಬಲವಾಗಿ ಮುಂದುವರಿಸಿದ್ದಾರೆ.

ಈ ಪಿಡುಗು ಉತ್ತರದಿಂದ ದಕ್ಷಿಣಕ್ಕೂ ವ್ಯಾಪಿಸುತ್ತ ಬಂದಿದೆ. ಶ್ರೀ ನಾಗಯ್ಯನವರು ಅಭಿನಯಿಸಿರುವ 'ವಂದೇ ಮಾತರಂ' ಚಿತ್ರದಲ್ಲಿ ವಿಜಯನಗರದ ವೈಭವವೆಲ್ಲಾ ತೆಲುಗರ ಪಾಲಾಗಿ ಹೋಗಿದೆ. ಶ್ರೀ ಎಚ್. ಎಂ. ರೆಡ್ಡಿಯವರು (ನಮ್ಮ ದುರದೃಷ್ಟಕ್ಕೆ ಇವರೂ ಕನ್ನಡಿಗರೇ) ತಮ್ಮ 'ತೆನಾಲಿ ರಾಮಕೃಷ್ಣ' ಚಿತ್ರದಲ್ಲಿ ಕೃಷ್ಣರಾಯನನ್ನೂ, ವಿಜಯನಗರದ ಸಂಸ್ಕೃತಿಯನ್ನೂ ಆಂಧ್ರರ ಪಾಲು ಮಾಡಿಬಿಟ್ಟರು. ಶ್ರೀ ನಾಗಯ್ಯನವರೇ ಅಭಿನಯಿಸಿದ (ಇವರೂ ಕನ್ನಡಿಗರಂತೆ!) 'ಪೋತನ' ಚಿತ್ರದಲ್ಲಿ ಶ್ರೀನಾಥ, ಪೋತನಾದಿ ತೆಲುಗುಕವಿಗಳಿಗೆ ಆಶ್ರಯದಾತನಾದ ಕನ್ನಡ ದೊರೆ 'ಕರ್ನಾಟ ಕಿರಾತ ಕೀಚಕುಲ'ನಾಗಿ ಬಿಟ್ಟ. ಪೋತನನೇ ಈ ಪದ್ಯ ರಚಕನಾಗಿದ್ದರೂ ನಿರ್ಮಾಪಕರು ಅದನ್ನು ಎತ್ತಿ ಹಿಡಿದು ಸಾರುವ ಮನೋಭಾವವನ್ನು ದೂರ ಮಾಡಿ ಕರ್ನಾಟಕಾಂಧ್ರ ಮೈತ್ರಿಗೆ ಭಂಗ ತರದಿರಬಹುದಾಗಿತ್ತು. ಜೆಮಿನಿ ಯವರ 'ಬಾಲನಾಗಮ್ಮ' ಚಿತ್ರದಲ್ಲಿ ಬರುವ ಮಾಯಾಲ ಮರಾಠಿ ಮಾಂತ್ರಿಕ, ಕುಡುಕ, ವ್ಯಭಿಚಾರಿ, ಪರಮ ವಂಚಕ. ಬಾಲನಾಗಮ್ಮನ ಪಾತಿವ್ರತ್ಯವನ್ನು ಅವನು ಕೆಡಿಸಲು ಹೋದಾಗ ಅವನು ಉಚ್ಚರಿಸುವುದು 'ಜೈ ಬಸವೇಶ್ವರ.' ಕನ್ನಡ ನಾಡಿನ ಪುಣ್ಯ ಪುರುಷನೂ, ಜಗದ್ವಿಭೂತಿಯೂ ಆದ ಬಸವೇಶ್ವರನ ಹೆಸರನ್ನು ತೆಲುಗರು ಹೇಗೆ ಬಳಸಿಕೊಂಡಿದ್ದಾರೆಂಬು ದನ್ನು ಕನ್ನಡಿಗರು ಗಮನಿಸಬೇಕು. ತಮಿಳು ನಿರ್ಮಾಪಕರ ಕೈಗೆ ಸಿಕ್ಕಿ ಭಕ್ತಶಿರೋಮಣಿ 'ಪುರಂದರ ದಾಸರು' ತುಕಾರಾಮನ ದಾಯಾದಿ ಗಳಾಗಿಬಿಟ್ಟರು.

ಈ ಎಲ್ಲ ಚಿತ್ರಗಳ ಕಳಶಪ್ರಾಯವಾಗಿ ಈಗ ದಿಗ್ದರ್ಶಕ-ನಿರ್ಮಾಪಕ ಶ್ರೀ ಕೆ. ಸುಬ್ರಹ್ಮಣ್ಯಂ ಅವರು 'ಭರ್ತೃಹರಿ' ಚಿತ್ರವನ್ನು ರಚಿಸಿ ರಸಿಕರ ಮುಂದಿಟ್ಟಿದ್ದಾರೆ. ಎಲ್ಲಾ ವಿಧದಲ್ಲಿಯೂ ಕೀಳೆನಿಸಿಕೊಂಡ ಪ್ರಹ್ಲಾದ, ಕೃಷ್ಣ ಸುಧಾಮ ಕನ್ನಡ ಚಿತ್ರಗಳನ್ನು ತಯಾರಿಸಿ ತಮಿಳರ ಬಾಯಲ್ಲಿ ಕನ್ನಡ ವನ್ನು ಅಪಭ್ರಂಶಗೊಳಿಸಿದ್ದು ಸಾಲದೆ ಸುಬ್ರಹ್ಮಣ್ಯಂ ಅವರು ಭರ್ತೃಹರಿ ಚಿತ್ರದಲ್ಲಿ ನಾಯಿಕೆಯನ್ನು ಸ್ವೈರಿಣಿಯನ್ನಾಗಿ ಮಾಡಿ ಅವಳ ಬಾಯಲ್ಲಿ

ಕೆಲವು ಕನ್ನಡ ಪಂಕ್ತಿಗಳನ್ನೂ ಕೂಡ ಆಡಿಸಿದ್ದಾರೆ. 'ಭರ್ತೃಹರಿ' ಚಿತ್ರದಿಂದ ಕನ್ನಡಿತಿಯರು ಜಾರಿಣಿಯರು ಎಂಬ ಕಲ್ಪನೆ ಸಾಧಾರಣವಾಗಿ ಬರುವಂತಿದೆ.

ಕನ್ನಡಿಗರು ಈ ಅಪಪ್ರಚಾರವನ್ನು ತಡೆಗಟ್ಟಬೇಕು. ಇಂತಹ ಚಿತ್ರಗಳನ್ನು ಕನ್ನಡ ನಾಡಿನ ಚಿತ್ರಮಂದಿರಗಳ ಒಡೆಯರು ತಮ್ಮ ಸಿನೀಮಾ ಮಂದಿರಗಳಲ್ಲಿ ಪ್ರದರ್ಶಿಸಕೂಡದು. ಜನತೆ ಎಚ್ಚೆತ್ತು ಭರ್ತೃಹರಿ ಮಾದರಿಯ ಚಿತ್ರಗಳನ್ನು ಪ್ರದರ್ಶಿಸಲು ಅನಕಾಶವಾಗದಂತೆ ಉಗ್ರ ಪ್ರಸಾರ ಕಾರ್ಯವನ್ನು ಕೈಗೊಳ್ಳಬೇಕು. ಲೇಖನ, ಭಾಷಣಗಳ, ಕಪ್ಪು ಬಾವುಟಗಳ ಪ್ರದರ್ಶನದ ಮೂಲಕ ಕನ್ನಡಿಗರು ತಮ್ಮ ಅಸಂತೋಷವನ್ನು ವ್ಯಕ್ತಪಡಿಸಬೇಕು. ಮೈಸೂರು ಮುಂಬಯಿ ಮದರಾಸು ಫಿಲ್ಮ್ ಸೆನ್ಸಾರ್ ಬೋರ್ಡಿನವರು ಪರಸ್ಪರ ವೈಷಮ್ಯವನ್ನು ಹುಟ್ಟಿಸುವ ಇಂತಹ ಚಿತ್ರಗಳ ಪ್ರದರ್ಶನಕ್ಕೆ ಸಮ್ಮತಿಯನ್ನು ಕೊಡಬಾರದು.

ಪ್ರಸುಪ್ತ ಕರ್ನಾಟಕ ಇನ್ನಾದರೂ ಜಾಗೃತವಾಗುವುದೇ ?

[ಮೇಲೆ ಹೇಳಿರುವ ಅಭಿಪ್ರಾಯಗಳನ್ನು ಒಟ್ಟಿನಮೇಲೆ ಅನುಮೋದಿಸುತ್ತೇವೆ. ಆದರೆ, ಇಲ್ಲಿ ವಾಲ್ಮೀಕಿಯ ವಿಚಾರವನ್ನು ಎತ್ತಿರುವುದು ಅಪ್ರಸಕ್ತ; ಲೇಖಕರು ಆರೋಪಿಸಿರುವಂಥ 'ದಿವ್ಯಭಾವನೆ' ವಾಲ್ಮೀಕಿಗೆ ಇತ್ತೆನ್ನುವುದು ಸಾಹಸದ ಊಹೆ. ಕಪ್ಪು ಬಾವುಟ ಪ್ರದರ್ಶನದ ವಿಷಯ : ಆ ಬಗೆಯ ವಿರೋಧ ಪ್ರದರ್ಶನ ಅನಾವಶ್ಯಕ ; ಕನ್ನಡ ಸಂಸ್ಕೃತಿಗೆ ಒಪ್ಪದು.

ಈ ವಿಚಾರವಾಗಿ ನಮಗೆ ಇನ್ನೂ ಬೇರೆಯ ಪತ್ರಗಳೂ ಬಂದಿವೆ. ಸ್ಥಳ ಸಂಕೋಚದಿಂದ ಅವನ್ನು ಪ್ರಕಟಿಸಲು ಸಾಧ್ಯವಿಲ್ಲದ್ದಕ್ಕಾಗಿ ವಿಷಾದಿಸುತ್ತೇವೆ. ಇತರ ಕನ್ನಡ ಪತ್ರಿಕೆಗಳೂ ಈ ವಿಷಯ ಬರೆದಿರುವುದು ಸಂತೋಷದ ಸಂಗತಿ.

ಚಿತ್ರಕ್ಕಾಗಿಯೇ ಮೀಸಲಾದ ಕನ್ನಡ ಪತ್ರಿಕೆಗಳು ಇಂಥ ವಿಚಾರಗಳಿಗೆ ಹೆಚ್ಚಿನ ಗಮನಕೊಟ್ಟು ಈಗಲೂ ಇನ್ನು ಮುಂದೆಯೂ ತಕ್ಕ ಪ್ರಚಾರಕಾರ್ಯ ಕೈಗೊಳ್ಳುವುವೆಂದು ನಂಬಿದ್ದೇವೆ.—ಸಂ. 'ಕನ್ನಡ ನುಡಿ.']

"ಕನ್ನಡ ನುಡಿ" ಸಂಪಾದಕರ ಸ|| ಕ್ಕೆ.

ನನ್ನ "ಕನ್ನಡದ ಮೇಲೆ ಅಪಪ್ರಚಾರ" ಲೇಖನವನ್ನು ಟೀಕಿಸುತ್ತಾ ತಾವು "ಕಪ್ಪು ಬಾವುಟದ ಪ್ರದರ್ಶನದ ವಿಷಯ : ಈ ಬಗೆಯ ವಿರೋಧ ಪ್ರದರ್ಶನ ಅನಾವಶ್ಯಕ; ಕನ್ನಡ ಸಂಸ್ಕೃತಿಗೆ ಒಪ್ಪದು" ಎಂದು ಬರೆದಿರುವುದು ಹಾಸ್ಯಾಸ್ಪದ

ವಾಗಿದೆ. ಕನ್ನಡಿಗರ ತನು, ಮನ, ಮಾನ, ಧನಗಳ ಮೇಲೆ ಅವ್ಯಾಹತವಾಗಿ ಧಾಳಿ ನಡೆಯುತ್ತಿರುವಾಗ ಪರಿಷತ್ತಿನ ಅಧಿಕೃತ ಪತ್ರಿಕೆಯಾದ 'ಕನ್ನಡ ನುಡಿ' ಈ ರೀತಿ ಬರೆದಿರುವುದು ಅದರ ಕರ್ತವ್ಯಲೋಪದ ಚಿನ್ಹೆ. ಜನತೆಗೆ ಪರಿಷತ್ತಿನ ಬಗ್ಗೆ ಇರುವ ಅನಾಸಕ್ತಿ, ಅನಾದರ, ಅಸಂತುಷ್ಟಿ ಇದರಿಂದ ಹೆಚ್ಚುವುದಕ್ಕೆ ಕಾರಣವಾಗುತ್ತದೆ. ಕನ್ನಡಿಗರ ಮಾನ ಪ್ರಾಣ ಹೋದಮೇಲೆ ನಿಮ್ಮ ಸಂಸ್ಕೃತಿ ಕಟ್ಟಿಕೊಂಡು ಮಾಡುವು ದೇನು? ಆಲಸ್ಯ, ಕರ್ತವ್ಯವಿಮುಖತೆ, ಹೇಡಿತನಗಳೇ ನಿಮ್ಮ 'ಕನ್ನಡ ಸಂಸ್ಕೃತಿ'ಯ ಚಿನ್ಹಗಳೇನು?

ನನ್ನ ಲೇಖನದ ಮಾತನ್ನೇ ಮುಂದುವರಿಸಿ ಕೆಲವು ಸೂಚನೆಗಳನ್ನು ಇಲ್ಲಿ ಸೇರಿಸಬೇಕಾಗಿದೆ.

೧. ಕನ್ನಡ ನಾಡಿನ ಸಂಸ್ಕೃತಿಗೆ ಯಾವದೇ ರೀತಿಯಲ್ಲಿ ಅಪಮಾನವೆಸಗುವ ಚಿತ್ರಗಳು ಪ್ರದರ್ಶನಕ್ಕೆ ಬರದಂತೆ ಮೈಸೂರು ಫಿಲ್ಮ್ ಸೆನ್ಸಾರ್ ಬೋರ್ಡಿನವರು ನೋಡಿಕೊಳ್ಳಬೇಕು.

೨. ಜನತೆ ತಮ್ಮ ಆಲಸ್ಯವನ್ನು ದೂರಮಾಡಿ 'ಭರ್ತೃಹರಿ'ಯಂತಹ ಹೇಯ ಚಿತ್ರಗಳನ್ನು ಕಪ್ಪುಬಾವುಟ ಪ್ರದರ್ಶನ, ಭಾಷಣ, ಲೇಖನಗಳ ಮೂಲಕ ಖಂಡಿಸ ಬೇಕು.

೩. ಕನ್ನಡ ಪತ್ರಿಕಾಕರ್ತರು 'ಭರ್ತೃಹರಿ' ಯಂತಹ ಚಿತ್ರಗಳ ಪ್ರಕಟನೆ ಗಳನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಕೂಡದು.

೪. ಕನ್ನಡ ನಾಡಿನ ಮುದ್ರಣಾಲಯದ ಒಡೆಯರು ಇಂತಹ ಅಪ-ಪ್ರಚಾರ ಚಿತ್ರಗಳ ಹಸ್ತಪತ್ರಿಕೆ, ಭಿತ್ತಿಪ್ರಕಟನೆಗಳನ್ನು ಅಚ್ಚುಮಾಡಿಕೊಡಕೂಡದು.

೫. ಕನ್ನಡ ನಾಡಿನ ಚಿತ್ರಮಂದಿರದ ಒಡೆಯರು ಇಂತಹ ಚಿತ್ರಗಳನ್ನು ತಮ್ಮ ಮಂದಿರಗಳಲ್ಲಿ ಪ್ರದರ್ಶಿಸಕೂಡದು.

೬. ಕನ್ನಡ ನಾಡಿನ ಫಿಲ್ಮ್ ಹಂಚಿಕೆಗಾರರು ಇಂತಹ ಚಿತ್ರಗಳನ್ನು ಹಂಚ ಕೂಡದು.

೭. ಪರಿಷತ್ತು ಎಚ್ಚೆತ್ತು ಅಪ-ಪ್ರಚಾರಕರ ಗಮನಕ್ಕೆ ನಮ್ಮ ವಿರೋಧ ಗೊತ್ತಾಗುವಂತೆ ಮದರಾಸು, ಮುಂಬಯಿ ಫಿಲ್ಮ್ ಸೆನ್ಸಾರ್ ಬೋರ್ಡಿನವರೊಂ ದಿಗೂ, ಆಲ್-ಇಂಡಿಯಾ ಫಿಲ್ಮ್ ಅಡ್ವೈಸರಿ ಬೋರ್ಡಿನವರೊಂದಿಗೂ ಪತ್ರವ್ಯವ ಹಾರ ಬೆಳಸಬೇಕು. ಇಂಗ್ಲಿಷ್, ತಮಿಳು, ತೆಲುಗು, ಮರಾಟಿ, ಹಿಂದೀ ಪತ್ರಿಕೆ ಗಳಲ್ಲಿ ಈ ವಿಷಯವನ್ನು ಪ್ರಸ್ತಾಪಿಸಬೇಕು.

ತಾವು ದಯೆಯಿಟ್ಟು 'ಕನ್ನಡ ನುಡಿ'ಯ ಮುಂದಿನ ಸಂಚಿಕೆಯಲ್ಲೇ ಈ ಪತ್ರ ವನ್ನು ಪ್ರಕಟಿಸಿ ಉಪಕಾರಮಾಡಬೇಕಾಗಿ ವಿನಂತಿ.

ಇಂತು ತಮ್ಮ

೬-೫-೪೪ **ಅ. ನ. ಕೃಷ್ಣರಾಯ**

ಕನ್ನಡ ನಾಡಿನಲ್ಲಿ ಚಲನಚಿತ್ರ ಉದ್ಯಮ

ಅ. ನ. ಕೃಷ್ಣರಾಯ

ಈ ಯುದ್ಧ ಚಲನಚಿತ್ರ ಪ್ರಪಂಚದಲ್ಲಿ ಅಭೂತಪೂರ್ವವಾದ ಕ್ರಾಂತಿಯನ್ನುಂಟುಮಾಡಿದೆ. ಹತ್ತು ವರ್ಷಗಳ ಕೆಳಗೆ ಭಾರತೀಯ ಚಿತ್ರಗಳನ್ನು ತೋರಿಸುವ ಒಂದೊಂದು ಚಿತ್ರಮಂದಿರಗಳಿರುತ್ತಿದ್ದವು. ಈಗ ವಿದೇಶೀಯ ಚಿತ್ರಗಳನ್ನು ತೋರಿಸುವ ಮಂದಿರಗಳು ಅಷ್ಟೇ ವಿರಳವಾಗಿವೆ. ವಿಲಾಯಿತಿಯ ಚಿತ್ರಗಳಿಂದ ನಮ್ಮ ಜನರ ನೋಟ ನಮ್ಮ ಚಿತ್ರಗಳ ಕಡೆ ತಿರುಗಿರುವುದು ಒಂದು ಒಳ್ಳೆಯ ಸುಧಾರಣೆ. ಇದರಿಂದ ಪರದೇಶಗಳಿಗೆ ಹೋಗುತ್ತಿದ್ದ ಲಕ್ಷಾಂತರ ರೂಪಾಯಿಗಳು ನಮ್ಮ ದೇಶದಲ್ಲಿಯೇ ನಿಂತಹಾಗಾಯಿತು. ಆದರೂ ಹೊನ್ನಿನ ಹೊಳೆ ಪೂರ್ಣನಿಂತಿಲ್ಲ. ಪ್ರತಿವರ್ಷವೂ ನಾವು ಲಕ್ಷಾಂತರ ರೂಪಾಯಿಗಳನ್ನು ಚಿತ್ರನಿರ್ಮಾಣ ಯಂತ್ರಗಳು, ಕಚ್ಚಾಫಿಲ್ಮು, ದ್ರಾವಕಗಳು ಇತರ ಚಿತ್ರಗ್ರಹಣ ಸಾಮಗ್ರಿಗಳಿಗಾಗಿ ವಿಲಾಯತಿಗೆ ಕಳುಹಿಸುತ್ತಿದ್ದೇವೆ. ಚಿತ್ರನಿರ್ಮಾಣೋದ್ಯಮ, ಸಂಪೂರ್ಣ ಯಶಸ್ವಿಯಾಗಬೇಕಾದರೆ ಹಿಂದೂಸ್ಥಾನದಲ್ಲಿಯೇ ಇವುಗಳನ್ನು ತಯಾರುಮಾಡುವ ಉಪ ಕೈಗಾರಿಕೆಗಳು ಬೆಳೆಯಬೇಕು. ಯಾವದಕ್ಕೂ ನಾವು ಹೊರಗಿನವರ ಆಶ್ರಯವನ್ನು ಕೋರುವ ಪರಿಸ್ಥಿತಿ ತೊಲಗಬೇಕು.

ಹಿಂದೂಸ್ಥಾನದ ಹಣ ಹಿಂದೂಸ್ಥಾನದಲ್ಲಿಯೇ ಉಳಿಯಬೇಕೆಂದು ಬಯಸುವುದು ಹೇಗೆ ಸಂಕುಚಿತ ಭಾವನೆಯಲ್ಲವೋ ಹಾಗೆ ಕರ್ನಾಟಕದ ದುಡ್ಡು ಕರ್ನಾಟಕದಲ್ಲಿಯೇ ಉಳಿದು, ಕರ್ನಾಟಕದಲ್ಲಿ ಈ ಉದ್ಯಮ ಹೆಚ್ಚು ಯಶಸ್ವಿಯಾಗಿ ವೃದ್ಧಿಯಾಗಬೇಕೆಂದು ಬಯಸುವುದು ತಪ್ಪಾಗುವುದಿಲ್ಲ.

ಕರ್ನಾಟಕದಲ್ಲಿ ಚಲನಚಿತ್ರ ಉದ್ಯಮದ ಪರಿಸ್ಥಿತಿ ತುಂಬ ವಿಷಾದಕರವಾಗಿದೆ. ಚಲನಚಿತ್ರ ಕೈಗಾರಿಕೆ ನಾಲ್ಕು ಮುಖ್ಯ ಪ್ರಸ್ಥಾನಗಳನ್ನಾಶ್ರಯಿಸುತ್ತದೆ. (೧) ಚಿತ್ರನಿರ್ಮಾಣ (೨) ಹಂಚಿಕೆ (೩) ಪ್ರದರ್ಶನ (೪) ಪ್ರಕಟನೆ.

ಚಿತ್ರ ನಿರ್ಮಾಣ

೧೯೪೩–೪೪ ಕನ್ನಡ ಚಿತ್ರ ನಿರ್ಮಾಣಕ್ಕೆ ಇದ್ದುದರಲ್ಲಿ ಒಳ್ಳೆಯ ಕಾಲವೆಂದು ಹೇಳಬಹುದು. ಈ ಎರಡು ವರ್ಷಗಳಲ್ಲಿ ಐದು ಕನ್ನಡ ಚಿತ್ರಗಳು ಬಂದಿವೆ. ಅವುಗಳಲ್ಲಿ ನಾಲ್ಕನ್ನು ಕನ್ನಡಿಗರು ತಮ್ಮ ಬಂಡವಾಳದಿಂದ ತಯಾರಿಸಿ

ದ್ದಾರೆ. ಚಿತ್ರಗಳು ಕೆಲಮಟ್ಟಿಗೆ ಯಶಸ್ವಿಯೂ ಆದವು. ಆದರೆ ಸ್ವಂತ ಸ್ಟೂಡಿಯೋ ಇಲ್ಲದೆ, ಹೊರಗಿನವರ ಸ್ಟೂಡಿಯೋಗಳಲ್ಲಿ ಚಿತ್ರಗಳನ್ನು ಅಂದಾಜಿನ ಇತಿ, ಮಿತಿಯಲ್ಲಿ ತಯಾರುಮಾಡುವುದು ಸಾಹಸದ ಮಾತು. ವ್ಯವಹಾರ ದೃಷ್ಟಿಯಿಂದ ಹೊರಗಿನ ಸ್ಟೂಡಿಯೋ ಮಾಲಿಕರು ೭೫,೦೦೦ ರೂ.ಗಳಲ್ಲಿ ಆಗುವ ಚಿತ್ರಕ್ಕೆ ೧॥ ಲಕ್ಷದಿಂದ ೨ ಲಕ್ಷದ ವರೆಗೆ ಖರ್ಚಾಗುವ ವ್ಯವಸ್ಥೆ ಮಾಡುತ್ತಾರೆ. ಒಮ್ಮೆ ಅವರ ಕೈಗೆ ಸಿಕ್ಕಿ ಹಾಕಿಕೊಂಡಮೇಲೆ ಪಾರಾಗಿಬರುವುದು ಕನ್ನಡ ನಿರ್ಮಾಪಕರಿಗೆ ಸಾಕುಸಾಕಾಗಿ ಹೋಗುತ್ತದೆ. ಕನ್ನಡಿಗರಿಂದಲೇ ನಡೆಸಲ್ಪಡುವ ಸ್ಟೂಡಿಯೋಗಳು ನಮ್ಮ ಪ್ರಥಮಾವಶ್ಯಕತೆ. ಚಿತ್ರನಿರ್ಮಾಣದ ಖರ್ಚು ಕಡಿಮೆಯಾಗಬೇಕು. ಆಗಲೇ ಅದು ಮೊತ್ತದಲ್ಲಿ ಲಾಭದಾಯಕವಾಗಿ ಪರಿಣಮಿಸಿ ನಿರ್ಮಾಪಕರಿಗೂ ಇತರ ಉತ್ಸಾಹಶಾಲಿಗಳಿಗೂ ಉತ್ತೇಜನ ಕೊಡುವುದು. ವ್ಯವಹಾರನೈಪುಣ್ಯಶೂನ್ಯರಾದ ಕನ್ನಡ ನಿರ್ಮಾಪಕರು ಅನವಶ್ಯಕವಾಗಿ ಖರ್ಚಿನ ಪ್ರಸಂಗಗಳನ್ನು ಬೆಳಸಿಕೊಂಡು, ಚಿತ್ರ ಸಾಕಷ್ಟು ಹಣಕೊಡಲಿಲ್ಲವೆಂದು ಕೊರಗುತ್ತಾರೆ. ಹೊರಗಿನಿಂದ ನಿರ್ದೇಶಕರು, ನಟನಟಿಯರು, ಸಂಗೀತಗಾರರು, ಕರ್ಮಕುಶಲರನ್ನು (Technicians) ಕರೆತಂದು ಅವರುದ್ದಕ್ಕೂ ಹಣಸುರಿದು ತಮ್ಮ ಒಣಚಾಪಲ್ಯವನ್ನು ಪೂರೈಸಿಕೊಳ್ಳುವ ಚಟವನ್ನು ಕನ್ನಡ ನಿರ್ಮಾಪಕರು ಬಿಡಬೇಕು. ಚಲನಚಿತ್ರ ಕೈಗಾರಿಕೆಯ ಪ್ರತಿಯೊಂದು ಶಾಖೆಯಲ್ಲಿಯೂ ನಿಪುಣರಾದ ಕನ್ನಡಿಗರು, ಕರ್ನಾಟಕದಲ್ಲಿಯೂ ಹೊರಗೂ ಇದ್ದಾರೆ. ಅವರುಗಳನ್ನು ಕಲೆಹಾಕಿ, ಅವರಿಂದ ತಮ್ಮ ಚಿತ್ರದ ಕೆಲಸ ಆಗುವಂತೆ ಮಾಡಬೇಕು.

ಒಂದೊಂದು ಚಿತ್ರಕ್ಕೆ ಇದ್ದ ಹಣವನ್ನು ಸುರಿದು ನಿರ್ಮಾಪಕರು ಕೈಕಟ್ಟಿ ಕೂಡಿ ಕರ್ನಾಟಕ್ಕೆ ಬಹಳ ಅನ್ಯಾಯಮಾಡಿದ್ದಾರೆ. ಒಂದು ಸಂಸ್ಥೆ ಒಂದು ವರ್ಷಾವಧಿಯಲ್ಲಿ ಮೂರು ಚಿತ್ರಗಳನ್ನಾದರೂ ತಯಾರಿಸಬೇಕು. ಒಂದು ಚಿತ್ರ ಯಾವ ಕಾರಣಕ್ಕಾದರೂ ಸೋತರೆ ಅದರ ನಷ್ಟವನ್ನು ಬೇರೊಂದು ಚಿತ್ರ ಕಟ್ಟಿಕೊಡುತ್ತದೆ. ಮೊತ್ತದಲ್ಲಿ ನಿರ್ಮಾಪಕರಿಗೆ ನಷ್ಟವಾಗುವುದಿಲ್ಲ.

ಹಂಚಿಕೆ

ಇದುವರೆವಿಗೆ ಚಿತ್ರಗಳ ಹಂಚಿಕೆಯೆಲ್ಲಾ ಹೊರಗಿನ ಬಂಡವಾಳಗಾರ

ರಾದ ಗುಜರಾತಿಗಳ, ಮುಲ್ತಾನಿಗಳ, ಮಾರ್ವಾಡಿಗಳ ಪಾಲಾಗಿತ್ತು. ಈಗ ಕನ್ನಡ ವ್ಯಾಪಾರಸ್ಥರು ಮುಂದುವರಿದು ಚಿತ್ರಗಳ ಹಂಚಿಕೆಯನ್ನು ಕೈಗೊಂಡಿದ್ದಾರೆ. ಆದರೆ ಇವರು ಹಂಚುವುದೇನು? ಮುಂಬಯಿ, ಮದರಾಸು, ಪಂಜಾಬಿನ ಚಿತ್ರಗಳನ್ನು. ಕನ್ನಡ ಹಂಚಿಕೆಗಾರರು ಇಂದು ಹೊರಗಿನ ಬಂಡವಾಳಗಾರರ ಪ್ರತಿನಿಧಿಗಳಾಗಿ ಅವರ ಚಿತ್ರಗಳನ್ನು ಇಲ್ಲಿ ಪ್ರದರ್ಶನಕ್ಕೇರ್ಪಡಿಸಿ ಹಣ ಸಂಗ್ರಹಿಸಿ ಅವರ ಭಂಡಾರವನ್ನು ತುಂಬುತ್ತಿದ್ದಾರೆ. ಈ ಹಂಚಿಕೆಯ ಉದ್ಯಮ ಕನ್ನಡ ವ್ಯಾಪಾರಸ್ಥರ ದೃಷ್ಟಿಯಿಂದ ಕೇವಲ ಆತ್ಮಹತ್ಯ ಪ್ರಸಂಗ. ಮುಂಬಯಿಯ ಚಿತ್ರ ಲೈಬ್ರರಿಯಲ್ಲಿ ಕೊಳೆತು ಬಿದ್ದಿರುವ ಚಿತ್ರಗಳನ್ನು ಒಂದಕ್ಕೆ ಹತ್ತರಂತೆ ಕೊಂಡು ಕನ್ನಡ ಹಂಚಿಕೆಗಾರರು ಹಣಮಾಡಲು ಹೊರಟಿದ್ದಾರೆ. ಈ ವ್ಯವಹಾರದಲ್ಲಿ ಹೊಸಬರು ಕಾಲಿಟ್ಟು ಏನೋ ಒಂದು ಬಗೆಯ ವ್ಯಾಮೋಹದಿಂದ ಹಿಂದೀ, ತಮಿಳು, ತೆಲುಗು ಚಿತ್ರಗಳನ್ನು ಅಪಾರ ಬೆಲೆಗೆ ಕೊಂಡು, ಅವುಗಳನ್ನು ಪ್ರದರ್ಶಿಸುವುದಕ್ಕೆ ಥಿಯೇಟರು ದೊರೆಯದೆ ತೊಳಲುತ್ತಿದ್ದಾರೆ. ಇವರು ಹಾಕಿರುವ ಹಣ ಹಿಂದಕ್ಕೆ ಬರುವ ಮಾತು ಹಾಗಿರಲಿ; ಹಣದ ಮೇಲಣ ಬಡ್ಡಿಯೂ ಇವರು ಕೊಂಡಿರುವ ಚಿತ್ರಗಳಿಂದ ಬರುತ್ತಿಲ್ಲ. ಹೊರಗಿನ ಚಿತ್ರಗಳು ಕರ್ನಾಟಕದಲ್ಲಿ ಪ್ರದರ್ಶಿತವಾಗಿ ಹಣ ಸುಲಿಯುವುದನ್ನು ಹಂಚಿಕೆಗಾರರು ತಡೆಹಾಕಲು ಯತ್ನಿಸಬೇಕು. ಕನ್ನಡ ಚಿತ್ರಗಳನ್ನಲ್ಲದೆ ಬೇರೆ ಚಿತ್ರಗಳನ್ನು ತಾವು ಹಂಚುವುದಿಲ್ಲವೆಂದು ಕನ್ನಡ ಹಂಚಿಕೆಗಾರರು ವೀರಶಪಥ ಮಾಡಬೇಕು. ಇಷ್ಟು ಜನ ಹಂಚಿಕೆಗಾರರು ಹೊರಟಿರುವಾಗ ಇವರೆಲ್ಲರಿಗೂ ಸಾಕಾಗುವಷ್ಟು ಕನ್ನಡ ಚಿತ್ರಗಳಿಲ್ಲವಲ್ಲಾ ಎಂಬ ಕೊರತೆಯಿದ್ದೇ ಇದೆ. ಆ ಕೊರತೆ ನಿವಾರಣೆಯಾಗಬೇಕಾದರೆ ೪೦-೪೫ ಸಾವಿರ ರೂಪಾಯಿ ಬಂಡವಾಳ ಹಾಕಿ ಹೊರಗಿನ ಚಿತ್ರಗಳನ್ನು ಹಂಚುವುದಕ್ಕೆ ಬದಲು ೩-೪ ಜನ ಕೂಡಿ ತಮ್ಮ ಹಣವನ್ನು ಕೂಡಿಸಿ ಹೆಚ್ಚು ಕನ್ನಡ ಚಿತ್ರಗಳನ್ನು ತಯಾರು ಮಾಡುವುದರ ಕಡೆಗೆ ಲಕ್ಷ್ಯಕೊಡಬೇಕು.

ಪ್ರದರ್ಶನ

ಕರ್ನಾಟಕದಲ್ಲಿರುವ ಹೆಚ್ಚು ಚಿತ್ರಮಂದಿರಗಳೆಲ್ಲಾ ಕನ್ನಡಿಗರದೇ ಆಗಿವೆ. ಕೆಲವು ಮಾತ್ರ ಹದಿನಾರಾಣೆ ಹೊರಗಿನವರವು. ಆದರೆ ಕನ್ನಡಿಗರ ನಿರಭಿಮಾನದಿಂದ ಅವರ ಚಿತ್ರಮಂದಿರಗಳ ಯಜಮಾನ್ಯವೂ ಹೊರಗಿ

ನವರ ಪಾಲಾಗಿದೆ. ಕನ್ನಡಿಗರು ತಾವು ಹಣಹಾಕಿ ಚಿತ್ರಮಂದಿರಗಳನ್ನು ಕಟ್ಟಿಸಿ ಹೊರಗಿನವರ ಪಾಲುಮಾಡುತ್ತಿದ್ದಾರೆ. ಚಿತ್ರಮಂದಿರಗಳ ಪರದೇಶಿ ವ್ಯವಸ್ಥಾಪಕರು ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಅವಕಾಶವೇ ಕೊಡದಂತೆ, ಕನ್ನಡ ಉದ್ಯಮಗಳ ಮೇಲೆ ಧಾಳಿ ನಡೆಸುತ್ತಿದ್ದಾರೆ. ಅಪ್ಪಿ ತಪ್ಪಿ ಕನ್ನಡ ಚಿತ್ರವೊಂದು ಅವರ ಮಂದಿರದಲ್ಲಿ ಪ್ರದರ್ಶನವಾಯಿತೆಂದರೆ ತಾವೇ ಹಣ ಕೊಟ್ಟು ಮಾವಾಳಿಗಳನ್ನು ಬಿಟ್ಟು ಚಿತ್ರದ ಮೇಲೆ ಅಪಪ್ರಚಾರಮಾಡಿ ನಾಲ್ಕಾರು ವಾರಗಳಲ್ಲಿ ಅದರ ಇತಿಶ್ರೀಯನ್ನು ಕಾಣಿಸಿಬಿಡುತ್ತಾರೆ. ಕನ್ನಡ ಚಿತ್ರಮಂದಿರಗಳ ಮಾಲೀಕರು ಯಾವ ಕಾರಣಕ್ಕೂ ಹೊರಗಿನ ಪ್ರದರ್ಶನ ಕಾರರಿಗೆ ತಮ್ಮ ಮಂದಿರಗಳನ್ನು ಕೊಡಕೂಡದು. ಇವರ ಈ ನಿರಭಿಮಾನ ಅವ್ಯವಹಾರಿಕತೆಯಿಂದ ಕರ್ನಾಟಕದಲ್ಲಿ ಒಂದು ದೊಡ್ಡ ಉದ್ಯಮವೇ ತಲೆ ಯೆತ್ತದಂತಾಗಿದೆ. ಹೊರಗಿನವರ ಕೈಗೊಂಬೆಗಳಾಗುವ ಕನ್ನಡ ಚಿತ್ರಮಂದಿರ ಮಾಲೀಕರನ್ನು ಕರ್ನಾಟಕದ ಪಂಚಮದಳದವರೆಂದು ನಾವು ಖಂಡಿಸಬೇಕಾಗುತ್ತದೆ.

ಪ್ರಕಟಣೆ

ಚಲನಚಿತ್ರ ಉದ್ಯಮಕ್ಕೆ ಪ್ರಕಟನೆಯೇ ಉಸಿರು. ಯೋಗ್ಯ ಪ್ರಕಟನೆ ಪ್ರಸಾರವಿಲ್ಲದೆ ಉತ್ತಮ ಚಿತ್ರಗಳು ಮಣ್ಣು ಮುಕ್ಕಿರುವುದೂ ಉಂಟು; ಅಯೋಗ್ಯ ಚಿತ್ರಗಳು ಪ್ರಸಾರಕರ ಕೈವಾಡದಿಂದ ಹೊನ್ನಿನ ರಾಶಿ ಗಳಿಸಿದ್ದೂ ಉಂಟು. ಇದರಲ್ಲಿ ಕನ್ನಡ ಪತ್ರಿಕಾಕರ್ತರು ತಮ್ಮ ಉತ್ತರವಾದಿತ್ವವನ್ನು ಗ್ರಹಿಸಬೇಕು. ಅಡ್ವರ್ಟೈಸ್‌ಮೆಂಟ್ (Advertisement) ಗಳಲ್ಲಿ ಬರುವ ಹಣದ ಆಸೆಗಾಗಿ ಹೊರಗಿನ ಚಿತ್ರಗಳನ್ನು ಅತಿ ಮೀರಿ ಹೊಗಳುವುದೂ ಕನ್ನಡ ಚಿತ್ರಗಳನ್ನೂ ಅದೇ ಧಾಟಿನಲ್ಲಿ ಹಳಿಯುವುದೂ ಯೋಗ್ಯವಲ್ಲ. ಹೊರಗಿನ ಚಿತ್ರಗಳ ಪ್ರಕಟನೆಯನ್ನು ಹಾಕುವುದಿಲ್ಲವೆಂಬ ಶಪಥವನ್ನೇ ಕನ್ನಡ ಪತ್ರಿಕಾಕರ್ತರು ಮಾಡಬೇಕು. ಇದರಿಂದ ಅವರಿಗೆ ಸ್ವಲ್ಪ ನಷ್ಟವಾಗುತ್ತದೆ ನಿಜ. ದೇಶಕ್ಕಾಗಿ ಇಷ್ಟು ತ್ಯಾಗವನ್ನು ನಮ್ಮ ಪತ್ರಿಕಾಕರ್ತರು ಮಾಡಲಾರರೆಂದು ನಾನು ನಂಬಲಾರೆ. ಹೊರಗಿನ ಚಿತ್ರಗಳ ಗುಣದೋಷಗಳನ್ನು ಎತ್ತಿ ತೋರಿಸುವ ನಿಷ್ಪಕ್ಷಪಾತ ವಿಮರ್ಶೆ ಬರಬೇಕು. ಪತ್ರಿಕಾಕರ್ತರು ಹಂಚಿಕೆಗಾರರ ಹಂಗನ್ನು ನೀಗಿಕೊಂಡರೆ ಮಾತ್ರ ಇದು ಸಾಧ್ಯ.

ಕೊನೆಯ ಮಾತು

ಕರ್ನಾಟಕ ಧನ, ಮಾನ, ಪ್ರಗತಿಯೆಲ್ಲಾ ಇಂದು ಹೊರಗಿನವರ ಹಿಡಿತಕ್ಕೆ ಸಿಕ್ಕಿದೆ. ಪ್ರತಿಯೊಂದು ರಂಗದಲ್ಲಿಯೂ ನಾವು ಹೊರಗಿನವರ ಸುಲಿಗೆಯನ್ನು ಎದುರಿಸಬೇಕಾಗಿದೆ. ಕನ್ನಡ ಬಂಡವಾಳಗಾರರು ಎಚ್ಚರ ಗೊಳ್ಳಬೇಕು. ಚಲನಚಿತ್ರ ಕೈಗಾರಿಕೆ ಶಾಶ್ವತವಾಗಿ ನಿಲ್ಲುವ ಒಂದು ಫಲ ಪ್ರದಾಯಕ ಕೈಗಾರಿಕೆಯಾಗಿವೆ. ಕನ್ನಡಿಗರ ಹಿತ ಸಂರಕ್ಷಿಸುವ ಕೆಲಸಕ್ಕೆ ಸರ್ಕಾರದವರೂ ಮನಸ್ಸು ಕೊಡಬೇಕು. ಹೊರಗಿನ ಬಂಡವಾಳಶಾಹಿ ಯನ್ನು ತಡೆಗಟ್ಟಲು ತಕ್ಕ ಯೋಜನೆಯನ್ನು ಮಾಡುವುದಕ್ಕೆ ಒಂದು ಉಪ ಸಮಿತಿಯನ್ನು ನಿಯಾಮಿಸಿ ಅವರ ಸಲಹೆ ತೆಗೆದುಕೊಳ್ಳಬೇಕು.

ಕನ್ನಡ ಬಂಡವಾಳಗಾರರು ತಮ್ಮ ಹಣವನ್ನು ಕೂಡಿಸಿ ದೊಡ್ಡ ಪ್ರಮಾಣದಲ್ಲಿ ಚಿತ್ರನಿರ್ಮಾಣ ಸ್ಟೂಡಿಯೋಗಳನ್ನು ಕಟ್ಟಬೇಕು ಮತ್ತು ಈಗ ಹೊರಗಿನವರ ಪಾಲಾಗಿರುವ ಚಿತ್ರ ಮಂದಿರಗಳನ್ನು ಅವರ ಹಿಡಿತದಿಂದ ತಪ್ಪಿಸಬೇಕು.

ಎಲ್ಲಕ್ಕೂ ಹೆಚ್ಚಾಗಿ ಜನತೆಯು ಜಾಗೃತವಾಗಬೇಕು. ಕನ್ನಡ ಚಿತ್ರಗಳು, ಕನ್ನಡಿಗರ ಉದ್ಯಮ ಎಷ್ಟೇ ದೋಷಭರಿತವಾಗಿದ್ದರೂ ಅವು ಗಳನ್ನು ಕನ್ನಡಿಗರು ಪ್ರೋತ್ಸಾಹಿಸಬೇಕು. ಕನ್ನಡಿನಾಡಿನ ಹಿತಕ್ಕೆ ವಿರೋಧ ವಾಗುವ ಸಂಸ್ಥೆ, ವ್ಯಕ್ತಿ, ಸಂಘಟನೆಗಳನ್ನು ತೀವ್ರವಾಗಿ ವಿರೋಧಿಸಿ, ನಮ್ಮ ನಾಡು ತನ್ನ ಸಂಸ್ಕೃತಿಗನುಗುಣವಾದ ರೀತಿಯಲ್ಲಿ ಕಲಾರಂಗದಲ್ಲಿಯೂ ಉತ್ಕರ್ಷವನ್ನು ಪಡೆಯಲು ಇಂಬುಗೊಡಬೇಕು.

—ತಮೂಷ್ ವಾರ್ಷಿಕ ಸಂಚಿಕೆ.

ವಾದಭೂಮಿ

[ಕಳೆದ ವರ್ಷ ಮುಂಬಯಿಯಲ್ಲಿ ಅಖಿಲ ಭಾರತೀಯ ಪ್ರಗತಿಶೀಲ ಲೇಖಕರ ಸಮ್ಮೇಳನವಾದಂದಿನಿಂದ ಟೀಕೆಗಳೂ, ಖಂಡನೆಗಳೂ ತಡೆಯಿಲ್ಲದೆ ನಡೆದಿವೆ. ಎಲ್ಲ ಟೀಕಾಕಾರರೂ ಹಾಡುವುದು ಅದೇ ಹಾಡು; ಹೇಳುವುದು ಅದೇ ಮಾತು. ಶ್ರೀ ಎಂ. ಜಿ. ಜೆ. ಯವರ ಲೇಖನ ಅದರ ಮಾದರಿ. ಅವರ ಲೇಖನದಲ್ಲಿ ಟೀಕಾಕಾರರ ಮತಸಂಗ್ರಹವಾಗಿದೆಯೆಂದು ತಿಳಿಯಬಹುದು. ಅ. ಭಾ. ಪ್ರ. ಶೀ. ಲೇಖಕರ ಸಂಘದ ಗೌರವ ಕಾರ್ಯದರ್ಶಿಗಳಾದ ಜನಾಬ್ ಅಹಮದ್ ಅಬ್ಬಾಸ್‌ರವರು ಪ್ರಗತಿಶೀಲರ ಅಭಿಪ್ರಾಯ, ಧೋರಣೆಗಳನ್ನು ವಿವರಿಸಿ ಸಯುಕ್ತವೂ ತರ್ಕಬದ್ಧವೂ ಆದ ರೀತಿಯಲ್ಲಿ ಉತ್ತರಿಸಿದ್ದಾರೆ. ಕರ್ನಾಟಕದಲ್ಲಿ ಪ್ರ. ಶೀ. ಲೇ. ಸಂಘ ಆರಂಭವಾದಂದಿನಿಂದಲೂ ಇದೇ ಹಾಡು. ಪರಿಷತ್ತಿನ ವಿಶೇಷ ಸಾಹಿತ್ಯೋತ್ಸವ ಕಾಲದಲ್ಲಿ ಪ್ರಗತಿಶೀಲ ಲೇಖನದ ಬಗ್ಗೆ ಆದ ವಿಚಾರಸಂಕಲನ ಸಭೆಯ ತರುವಾಯ ಎಲ್ಲ ಕಡೆಯಿಂದಲೂ ಟೀಕೆಯ ಸುರಿಮಳೆಯಾಗಿದೆ. 'ಮಾತೃಭೂಮಿ'ಯ ಪಾನ್ವಲಾ ಅವರು ತಮ್ಮ ಜನ್ಮವನ್ನು ಅದಕ್ಕೇ ಮೀಸಲು ಮಾಡಿದ್ದಾರೆ. ಮಂಗಳೂರಿನ 'ಪ್ರಭಾತ್' ಪತ್ರಿಕೆಯ ವಾರ್ಷಿಕ ಸಂಚಿಕೆಯಲ್ಲಿ ಶ್ರೀ ಕ. ಕಿಂ. ರೈಗಳವರು ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಈಚೆಗೆ 'ಜೀವನ' ಪತ್ರಿಕೆಯ ವ್ಯವಸ್ಥಾಪಕರಾದ ಶ್ರೀ ಅ. ನಾರಾಯಣಸ್ವಾಮಿ ಅಯ್ಯರ್ ಅವರು ಮಾತೃಭೂಮಿ, ಸುಬೋಧ ಪತ್ರಿಕೆಗಳ ಮೂಲಕ ತತ್ತ್ವದೂರವಾದ ವ್ಯಕ್ತಿನಿಂದನಾಪೂರ್ಣವಾದ ಲೇಖನಗಳನ್ನು ಬರೆಯುತ್ತಿದ್ದಾರೆ. ಇದಕ್ಕೆ ಮಾತೃಭೂಮಿ, ಸುಬೋಧ, ಜೀವನ ಪತ್ರಿಕೆಗಳ ಸಂಪಾದಕರ ಅಭಯಹಸ್ತವೂ ದೊರೆತಿದೆ. ಜನಾಬ್ ಅಬ್ಬಾಸ್‌ರವರ ಉತ್ತರ ನಮ್ಮ ಟೀಕಾಕಾರರಿಗೂ ಪೂರ್ಣವಾಗಿ ಅನ್ವಯಿಸುತ್ತದೆ. ಸತ್ಯದ ಬೆಳಕಿನ ಮುಂದೆ ಮಿಥ್ಯೆಯ ಮೋಡ ಜಾರುವುದೆನ್ನುವುದನ್ನು ಟೀಕಾಕಾರರು ಅರಿಯಬೇಕು. ಪ್ರಗತಿಶೀಲ ಲೇಖಕರು ಇಂದು ಮಂಡಿಸುತ್ತಿರುವುದು ಭಾರತಧರ್ಮ; ಭಾರತದ ೪೦ ಕೋಟಿ ಮೂಕಪ್ರಜೆಗಳ ಒಳಹುಯಿಲು. ಈ ಝೇಂಕಾರವನ್ನು ಟೀಕಾಕಾರರೂ ನಿಲ್ಲಿಸಲಾರರು, ಯಾವ ಶಕ್ತಿಯೂ ತಡೆಗಟ್ಟಲಾರದು. ಭಾರತದ ಮೂಕಕೋಟಿಯ ಕೋಟಲೆ ಯಾರಿಗೆ ಅರಿವಾಗಿಲ್ಲವೋ ಅವರು ಲೇಖನ ಕಲೆಗೇ ಅಪಮಾನ. ದೇಶದ, ಜನತೆಯ ಹಿತವನ್ನು ದುರ್ಲಕ್ಷಿಸುವ ಲೇಖಕ ದೇಶದ್ರೋಹಿ, ಜನತಾವಿರೋಧಿ. ಅವನನ್ನು ಪ್ರತಿಭಟಿಸುವುದು ತಮ್ಮ ಧರ್ಮವೆಂದು ಪ್ರಗತಿಶೀಲ ಲೇಖಕರು ಬಗೆದಿದ್ದಾರೆ. ಹಾಗೆ ಭಾವಿಸಿ ತ್ರಿಕರಣಪೂರ್ವಕವಾಗಿ ದುಡಿಯುವವರೇ ಪ್ರಗತಿಶೀಲ ಲೇಖಕರು.

ಸಂಪಾದಕ.]

ಪ್ರಗತಿಶೀಲ ಸಾಹಿತ್ಯವೆಂದರೇನು?

ಎಂ. ಜಿ. ಜಿ.

ಇತ್ತೀಚೆಗೆ ಪ್ರಗತಿಶೀಲ ಲೇಖನದ ಗಾಳಿ ಬಹಳ ಹರಡಿದೆ. ಆದ್ದರಿಂದ ಪ್ರಗತಿಶೀಲ ಬರೆಹಗಳ ಬಗ್ಗೆ ಕೆಲವೊಂದು ಮಾತುಗಳನ್ನು ಬರೆದರೆ ಅದು ಅನೃತವಾಗಲಾರದು. ಈ ಸಂದರ್ಭದಲ್ಲಿ ಪ್ರಗತಿಶೀಲ ಲೇಖಕರ ಸಂಘಕ್ಕೆ ಕಳೆದ ಸೆಪ್ಟಂಬರ್ ತಿಂಗಳಲ್ಲಿ ಅಪ್ಟನ್ ಸಿಂಕ್ಲೇರ್‌ರವರು ಭಾರತದ ಸ್ವಾತಂತ್ರ್ಯದ ವಿಚಾರ ವಿವೇಚಿಸಿ ಬರೆದ ಪತ್ರ ಉಂಟುಮಾಡಿದ ಗೊಂದಲ ನೆನಪಿಗೆ ಬರುತ್ತದೆ. ಈ ಪತ್ರ ಪ್ರಗತಿಶೀಲ ಬರೆಹದ ಮಾದರಿಯೇ ಎಂಬ ಸಂದೇಹ ಕೆಲವರಿಗಾಗದಿರದು. ಅಥವಾ ಇದೊಂದು ಅಮೆರಿ ಕೃತಿ, ಉತ್ಸಾಹ ಅಥವಾ ನಿರುತ್ಸಾಹಗಳನ್ನೀಯುದೆ ಅಸಹ್ಯತೆಗೆ ಮಾತ್ರ ಕಾರಣವಾದ ತಟ್ಟಿ ಪಾನೀಯದಂತೆ!

ಪ್ರಪಂಚ ಯುದ್ಧದಲ್ಲಿ ವಿವಿಧ ಶಕ್ತಿಗಳ ವಿಚಿತ್ರ ಕೂಟಗಳಾಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಪ್ರಗತಿಶೀಲ ಬರೆಹದ ವಿವೇಚನೆ ಸಮಸ್ಯಾತ್ಮಕವಾಗದಿರದು. ಒಂದು ಘಟ್ಟದವರೆಗೆ ಈ ಯುದ್ಧ ಪ್ರಗತಿ ವಿರೋಧಿಗಳೊಳಗೆ ಸಾಗುತ್ತಿದ್ದ ಹೋರಾಟವಾಗಿತ್ತು. ಸಾಮ್ರಾಜ್ಯಶಾಹಿ ಸಮರವೆನ್ನಿಸಿತ್ತು. ಫಕ್ಕನೆ ಇವರಲ್ಲೊಂದು ಪಕ್ಷ ಅಕಾರಣವಾಗಿ ರಷ್ಯಾದ ಆಕ್ರಮಣ ನಡೆಸಿತು. ಸೋವಿಯಟ್ ಯೂನಿಯನ್‌ನ ಧ್ಯೇಯಗಳು ಪ್ರಪಂಚದ ಪುರೋಗಾಮಿ ಶಕ್ತಿಯ ಪ್ರತಿನಿಧಿಯೆಂದು ಅನೇಕರು ತಿಳಿದಿದ್ದಾರೆ. ಆದರೆ ಈ ಧ್ಯೇಯಗಳು ಅದರ ಜನ್ಮಸ್ಥಳದಲ್ಲೇ ಕಾಲಾನುಕಾಲಕ್ಕೆ ಎಷ್ಟರಮಟ್ಟಿಗೆ ಆಚರಣೆಯಲ್ಲಿ ತರಲ್ಪಟ್ಟಿವೆ ಎಂಬುದನ್ನು ಇವರು ಯೋಚಿಸುತ್ತಿಲ್ಲ. ಅಷ್ಟೇ ಅಲ್ಲ, ಯುದ್ಧವೂ ಎರಡನೇ ಘಟ್ಟವನ್ನು ಮುಟ್ಟಿದಾಗ, ಆಶ್ಚರ್ಯಕರವಾದ ವಿವೇಚನೆಯ ಮೂಲಕ ರಷ್ಯಾವೇ ಅಲ್ಲಿ ಅದರೊಡನೆ ಬಲಾತ್ಕಾರಿಕವಾಗಿ ಸೇರಬೇಕಾಗಿ ಬಂದ ಶಕ್ತಿಗಳೂ ಕೂಡಾ ಪುರೋಗಾಮಿಗಳೆಂದು ಕರೆಯಲ್ಪಟ್ಟಿವೆ.

ಪೋಲೆಂಡಿನ ಗಡಿಯಲ್ಲಿರುವ ರಷ್ಯನರು ಅಥವಾ ರಾಜಕಾರಣಿಗಳ ರಾಜಕೀಯ ಚಾಕಚಕ್ಯತೆಗಳಿಂದಾಗಿ ಸೋವಿಯಟ್ ಯೂನಿಯನ್ ಮತ್ತು ಅದರ ಮಿತ್ರರಲ್ಲಿ; ಅಥವಾ ಮುಂದೆ ಶಾಂತಿ ಸಮ್ಮೇಳನದಲ್ಲಿ ಅನಿವಾರ್ಯವಾದ

ಹಾಗೂ ದುರದೃಷ್ಟಕರವಾದ ಜರ್ಮನಿಯನ್ನು ಮೆಟ್ಟುವ ಯುತ್ನದಲ್ಲಿ ಬೆಕ್ಕಟ್ಟು ಹುಟ್ಟಿ ಇಂದು ಒಂದಾದ ವಿವಿಧ ಶಕ್ತಿಗಳ ಕೂಟದಲ್ಲಿ ಬದಲಾವಣೆಯಾದರೆ, ಈ ಪ್ರಗತಿಶೀಲ ಬರೆಹದಲ್ಲೂ ವಿಚಿತ್ರವೂ ಮಹತ್ವಪೂರ್ಣವೂ ಆದ ಇನ್ನೊಂದು ಬದಲಾವಣೆಯಾಗಬಹುದು. ಆದುದರಿಂದ ಪ್ರಗತಿಶೀಲ ಬರೆಹವು ಬರೆಹಗಳ ಗುಣದಮೇಲೆ ಹೊಂದಿಕೊಂಡಿರುವಂತೆ ಕಾಣುವುದಿಲ್ಲ; ಬದಲಾಗಿ ವಿವಿಧ ರಾಷ್ಟ್ರಗಳ ಕೂಟವನ್ನು ಯುದ್ಧ ಅಥವಾ ಶಾಂತಿ ಕಾಲದಲ್ಲಿ ಒಂದರ ವಿರೋಧ ಇನ್ನೊಂದು ರಾಷ್ಟ್ರಕೂಟ ನಿಂತಿರುವುದರ ಮೇಲೆ ಹೊಂದಿಕೊಂಡಿರುವಂತೆ ಕಾಣಿಸುತ್ತಿದೆ.

ಇದಕ್ಕೊಂದು ಉದಾಹರಣೆ ಕೊಡೋಣ. ಚೀನೀ ಹೆಂಗಸೊಬ್ಬಳು ಜಪಾನೀಯರ ಅತ್ಯಾಚಾರಕ್ಕೆ ಗುರಿಯಾದಂತೆ ಚಿತ್ರಿಸಲ್ಪಟ್ಟರೆ ಅದು ಪ್ರಗತಿಶೀಲ ಸಾಹಿತ್ಯವಾಗುತ್ತದೆ. ಅದೇ ಭಾರತೀಯ ಹೆಂಗಸಾದರೆ ಇನ್ನೂ ಹೆಚ್ಚು ಪುರೋಗಾಮಿಯಾಗುತ್ತೆ ಆ ಲೇಖನ. ಅದಿಲ್ಲದೆ ಬ್ರಿಟಿಷ್ ಸೈನಿಕನೊಬ್ಬ ಈ ಕಾರ್ಯ ನಡೆಸಿದಾಗ ಆ ವಿಚಾರ ಬರೆಯಲ್ಪಟ್ಟರೆ ಅದು ಪ್ರಗತಿ ವಿರೋಧಿಯಾಗುತ್ತದೆ, ಪಂಚಮ ದಳದ ಸಾಹಿತ್ಯವೆನಿಸಲ್ಪಡುತ್ತದೆ. ಈ ವಿಚಾರ ನಮ್ಮ ನಿತ್ಯಜೀವನದಲ್ಲಿ ನಡೆಯಬಹುದಾದುದು ; ಜಪಾನೀ ಅತ್ಯಾಚಾರಕ್ಕಿಂತಲೂ ಹೆಚ್ಚು ಸತ್ಯವಾದುದು. ಆದರೆ ಪ್ರಗತಿಶೀಲ ಲೇಖಕ ಸಂಘದ ನಾಯಕರೆನ್ನುವವರು ಇದನ್ನರಿತಂತಿಲ್ಲ. ಬ್ರಿಟನ್ನು ಪ್ರಗತಿಶೀಲ ರಾಷ್ಟ್ರವಾದ ಸೋವಿಯಟ್ ಯೂನಿಯನ್ನಿನ ಮಿತ್ರನಾದುದರಿಂದ ಆತನ ಸೈನಿಕರಿಗೆ ಇಂತಹ ಅತ್ಯಾಚಾರ ತಿಳಿಯದು—ದೈಹಿಕವಾಗಿ ಅಲ್ಲ, ಮಾನಸಿಕವಾಗಿ—ಎಂದು ಇವರು ಸಾಧಿಸಿದಂತಿದೆ. ಅಂತಹ ಅತ್ಯಾಚಾರಗಳು ಸೋವಿಯಟ್ ಯೂನಿಯನ್ನಿನ ವೈರಿಗಳಿಂದ ಅಥವಾ ಅವರ ಮಿತ್ರರಿಂದ ಮಾತ್ರವೇ ಸಾಧ್ಯ ಎನ್ನುವಂತಿದೆ ಇವರು.

ಮೇಲೆ ಹೇಳಿದಂತೆ ಎಲ್ಲಾದರೂ ಎಂದಾದರೂ ಬ್ರಿಟನ್ನು ಮತ್ತು ರಷ್ಯಗಳ ಸೌಹಾರ್ದ ಸಡಿಲಾದಲ್ಲಿ, ರಷ್ಯಾ ಮುಂದೆಯೂ ಜಪಾನಿನೊಡನೆ ಸ್ನೇಹಭಾವದಿಂದಲೇ ಇದ್ದಲ್ಲಿ, ಇಂದಿನಂತೆ ಜಪಾನಿಗಳು ಪೆಡಂಭೂತಗಳಂತೆ ಆಗಲೂ ಚಿತ್ರಿಸಲ್ಪಡಲಾರರು. ಅಥವಾ ಆ ರೀತಿಯ ಚಿತ್ರಣ ಪುರೋಗಾಮಿ ಸಾಹಿತ್ಯ ಎನ್ನಿಸಲಾರದು. ಜರ್ಮನಿ ತಾನು ಆಕ್ರಮಿಸಿದ ಪ್ರದೇಶ

ದಲ್ಲಿ ನಡೆಸಿದ ಅತ್ಯಾಚಾರಗಳ ಸಾಹಿತ್ಯ ಜರ್ಮನಿ ೧೯೪೧ ರ ಜೂನ್ ತಿಂಗಳಲ್ಲಿ ರಷ್ಯದ ಮೇಲೇರಿ ನಡೆವವರೆಗೆ ಪುರೋಗಾಮಿ ಎನ್ನಿಸಲಿಲ್ಲ. [illegible] ಸಾಮ್ರಾಜ್ಯಶಾಹಿ ಬ್ರಿಟನ್ನಿನ ನೀತಿ ರೀತಿಗಳು ಪಾಪದ ಕುರಿತಾದ ಸಾಹಿತ್ಯ ಮಾತ್ರ ಪುರೋಗಾಮಿ ಎನ್ನಿಸಿತ್ತು. ಅನಂತರ ಅದೂ ಮಾಯವಾಯಿತು. ಮಾತ್ರವಲ್ಲ ಅಂತಹ ಸಾಹಿತ್ಯ ಪಂಚಮ ದಳದೆನ್ನುವವರೆಗೂ ಮುಟ್ಟಿತು.

ಯಾವುದಾದರೊಂದು ದುಷ್ಟ ಶಕ್ತಿಯು ಅನೀತಿಗೆ ಸಂಬಂಧಪಟ್ಟ ಲೇಖನದ ವಿಚಾರವಾಯಿತಷ್ಟೆ! ಈಗ ಒಬ್ಬ ಪುಟ್ಟ ನಾಟಕಕಾರನ ಅಥವಾ ಕಾದಂಬರಿಕಾರನ ವಿಚಾರ ಎತ್ತೋಣ. ಬಡಭಾರತದ ಆಹಾರದ ದುಸ್ಥಿತಿಯ ವಿಚಾರವೆತ್ತಿ ನೀವು ಬರೆಯುತ್ತೀರಿ ಎನ್ನೋಣ. ಹಸಿವೆಯಿಂದ ಹುಚ್ಚರಂತಾದವರಂತೆ ನೀವು ನಿಮ್ಮ ನಾಯಕನ ಹಾಗೂ ಅವನ ಅನುಯಾಯಿಗಳ ಚಿತ್ರ ಚಿತ್ರಿಸಿದರೆ ನೀವು ಪ್ರಗತಿ ವಿರೋಧಿ ಸಾಹಿತ್ಯ ಬರೆದ ಪಾಪಕ್ಕೆ ಒಳಗಾಗುವಿರಿ. ಅದೇ ಈ ನಿರ್ಗತಿಕರನ್ನು ಶಾಂತಚಿತ್ತರಾಗಿ ಸಾಲಾಗಿ ಸರದಿಗಾಗಿ ಕಾಯುತ್ತ ಅವರ ಆ 'ಕೆಂಪು' ನಾಯಕನು (ಬೇರೆ ಯಾರೂ ಆಗಬಾರದು) ಕಲೆಕ್ಟರ್ ಅಥವಾ ಇನ್ನಾವುದಾದರೂ ಸರಕಾರೀ ಅಧಿಕಾರಿಗಳೊಡನೆ ಮುಂದಗಾಮಿ ರಾಜಕಾರಣಿಯಂತೆ ಸಂಧಾನ ಸಾಗಿಸುವಂತೆ ಚಿತ್ರಿಸಿದರೆ; ಜನ ಶಾಂತರಾಗಿಯೇ ಇದ್ದು ಪಂಚಮದಳದ ಪುಂಡನೊಬ್ಬ ಗೊಂದಲ ಹರಡಲು ಬಂದು ಕೊನೆಗೆ ಆತ ಹೊರತಳ್ಳಲ್ಪಟ್ಟಂತೆ ಚಿತ್ರಿತವಾದರೆ ಅದಾಗ ಪುರೋಗಾಮಿ ಸಾಹಿತ್ಯ ಎನ್ನಿಸಲ್ಪಡುತ್ತದೆ.

ಮಾನವಕೃತ ಬರಗಾಲದ ಕಾಲದಲ್ಲಿ ಬಂಗಾಲದ ಮಂತ್ರಿ ಮಂಡಲವು, ತಾನು ಹುದುಗಿದ್ದ ಆಹಾರವನ್ನು ಅದು ಎಲ್ಲೇ ಇದ್ದರೂ, ಚಾಪೆ ಅಡಿಯಲ್ಲೇ ಅಡಗಿದ್ದರೂ ಹೊರಗೆಳೆಯುವುದಾಗಿ ಘಂಟಾಘೋಷವಾಗಿ ಸಾರಿತು. ಸಂಗ್ರಹಕಾರರಿಗೆ ಶಾಸ್ತಿಮಾಡುವುದಾಗಿ ಹೇಳಿತು. ಆದರೆ ಈ ಸಂಗ್ರಹಗಾರತನದ ವಿರುದ್ಧ ಹೋರಾಟದ ಫಲವೇನಾಯಿತೆಂಬುದಿನ್ನೂ ಗೊತ್ತಾಗಿಲ್ಲ. ಬಂಗಾಲದಲ್ಲಿ ಕೂಡಿಹಾಕಲ್ಪಟ್ಟ ಆಹಾರದ ಕತೆ ಯಾರಿಗೂ ತಿಳಿದಿಲ್ಲ. ಹೀಗಿದ್ದರೂ ಅಮೆರಿಯೂ, ಪ್ರಗತಿಶೀಲ ಲೇಖಕರ ಸಂಘವೂ ದವಸ ಸಂಗ್ರಹದ ವಿಚಾರವಾಗಿ ಕೂಗಾಡುತ್ತಿದ್ದಾರೆ. ಬಂಗಾಲದ ಪರಿಸ್ಥಿತಿಗೆ ಬಂಗಾಲ ಜಾತೀಯ

ಮಂತ್ರಿಮಂಡಲ, ಡೆಹಲಿಯ ಬ್ರಿಟಿಷ್ ಅಧಿಕಾರಿಶಾಹಿ, ಬಂಗಾಲದಲ್ಲಿನ ಅದರ ಏಜಂಟರೂ ಕಾರಣ ಎಂಬ ಹೊಣೆ ಹೊರೆಸಿದರೆ ಅದು ಪ್ರಗತಿ ವಿರೋಧ ಎನ್ನಿಸಲ್ಪಡುತ್ತಿದೆ. ದೇಶಪ್ರೇಮಿ ಮತ್ತು ದೇಶದ್ರೋಹಿಗಳ ಸ್ಥಾನ ಭಾರತದಲ್ಲಿ ಅದಲು ಬದಲಾದಂತಿದೆ!

ಸನಾತನ ಪದ್ಧತಿಯನ್ನು ಚೆಸ್ಟರ್‌ಟನ್ ತನ್ನ ಸಾಹಿತ್ಯದ ಶಕ್ತಿಯಿಂದ ಮಹತ್ತಾಗಿ ಪ್ರತಿಪಾದಿಸಿದ್ದಾರೆ. ಹಾಗೆಂದಮಾತ್ರಕ್ಕೆ ಅದೊಂದು ಪುರೋಗಾಮಿ ಸಾಹಿತ್ಯವಾಯಿತೆ? ಸಾಮ್ರಾಜ್ಯಶಾಹಿಗಳೂ ಬಂಡವಲಶಾಹಿಗಳೂ ತಮ್ಮ ಪದ್ಧತಿಯ ಶ್ಲಾಘನೆಗಾಗಿ ಸಂಬಳಕ್ಕೆ ಮಹಾ ಮಹಾ ಸಾಹಿತಿಗಳನ್ನು ನೇಮಿಸಿಕೊಳ್ಳಬಹುದು. ಈ ನೀತಿ ಶತಮಾನಗಳಿಂದ ನಡೆದುಬಂದಿದೆ. ಅಂತಹ ಸಾಹಿತ್ಯವನ್ನು ಯಾರೇ ಆಗಲಿ ಪುರೋಗಾಮಿ ಎಂದು ಕರೆಯಬಲ್ಲರೇ? ವಿಶ್ವವಿದ್ಯಾನಿಲಯಗಳನ್ನೋ ಇತರ ವಿದ್ಯಾಕೇಂದ್ರಗಳನ್ನೋ ಸ್ಥಾಪಿಸಿದ, ಅವುಗಳಿಗೆ ಸಹಾಯಧನವಿತ್ತ ಬಂಡವಲಿಗರ ಬೆನ್ನು ತಟ್ಟಿದ ಪ್ರೊಫೆಸರರಿಗೆ ಕಡಿಮೆಯಿಲ್ಲ. ಮಹಾಜನರ ವಿರುದ್ಧವಾದ ಅಪಪ್ರಚಾರದ ಅನ್ಯಾಯಕ್ಕೆ ಮೀಸಲಾದ ರಾಕ್‌ಫೆಲರ್ ಮತ್ತು ಕಾರ್ನಿಗಿ ದತ್ತುಗಳು, ದಾನಗಳು ಅಥವಾ ಲಂಚರುಷುವತ್ತುಗಳು ಜೀತದ ದಾಸ್ಯದ ಕುರುಹುಗಳಲ್ಲವೇ? ಅವು ದಾನಗಳೇ?

ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ದಬ್ಬಾಳಿಕೆ, ದಾಸ್ಯತೆ, ಜನತಾ ವಿರೋಧ, ದೂಷಣೆ, ಬಂಧನ, ಮೋಸ, ಕುತಂತ್ರ, ಹಸಿವೆಗಳನ್ನೆಲ್ಲ ಅದು ಯಾವ ರೂಪದಲ್ಲೇ ಇರಲಿ, ಯಾವುದೇ ರೀತಿಯಿಂದ ಪ್ರಕಟಿಸುವ ಸಾಹಿತ್ಯವೇ ಪುರೋಗಾಮಿ ಸಾಹಿತ್ಯವೆಂದು ಸಾಮಾನ್ಯವಾಗಿ ಹೇಳಬಹುದು. ತಾತ್ಕಾಲಿಕವಾದ ರಾಜಕೀಯ ಅಥವಾ ಸೈನಿಕ ವ್ಯವಸ್ಥೆಗಳು, ಹೇಗೇ ಇದ್ದರೂ ಸಾಹಿತ್ಯ ಈ ಕಾರ್ಯವನ್ನು ಸಾಧಿಸುತ್ತಾ ಹೋಗಬೇಕು. ಯಾವುದೇ ರಾಷ್ಟ್ರದ ಅಥವಾ ಜನತೆಯ ಆಧಾರದ ಮೇಲೆ ಈ ಸಾಹಿತ್ಯದ ರೂಪ ಹೊಂದಿರಬಾರದು. ಅಥವಾ ಆಯಾ ರಾಷ್ಟ್ರ ಅಥವಾ ಜನತೆಯ ರಾಜಕಾರಣ ಮತ್ತು ಪರಿಸ್ಥಿತಿಗಳಿಗೆ ಅನುಗುಣವಾಗಿ ಬದಲಾಗಲೂಬಾರದು.

ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ವಿವರವಾಗಿ ಹೇಳಬೇಕಾಗಿದೆ. ಸಾಹಿತ್ಯವನ್ನೂ ನಿಶ್ಚಿತವಾದ ಎರಡು ವಿಭಾಗವಾಗಿ ಮಾಡಿ,

ಇದು ಪುರೋಗಾಮಿ ಇದು ಪ್ರತಿಗಾಮಿ ಎಂದು ವಿಭಾಗಿಸುವುದೂ ಸಾಧ್ಯವಿಲ್ಲ. ಹಾಗೆ ಮಾಡುವುದು ಹುಚ್ಚುತನವಾಗಬಹುದು. ಈ ಎರಡು ವಿಭಾಗಕ್ಕೂ ಸೇರದ ಸಾಹಿತ್ಯ ಬೇಕಾದಷ್ಟಿದೆ; ಅದರದೇ ಆದ ಒಂದು ಉಪಯೋಗ ಅದು ಸಾಧಿಸಿದೆ. ಅನೇಕ ವಿಧವಾದ ಕವಿತೆಗಳು ಇಂತಹ ಚಿಕ್ಕಪುಟ್ಟ ವರ್ಗಭೇದ ಗಳಿಂದ ದೂರವಾಗಿವೆ. ಕೆಲವೊಂದು ಉದಾಹರಣೆಗಾಗಿ ಹೇಳುವುದಿದ್ದರೆ ಕೀಟ್ಸ್, ವರ್ಡ್ಸ್‌ವರ್ತ್, ಷೆಲ್ಲಿ ಎಂದಿಗೂ ಅಳಿಯಲಾರದ ಕವಿತೆಗಳನ್ನು ಬರೆದಿದ್ದಾರೆ. ಪ್ರಗತಿಶೀಲ ಬರೆಹವೆಂದು ಅಗಣಿತ ನಾಟಕಗಳೂ, ಕವಿತೆ ಗಳೂ ಎಂದೋ ಹೆಸರಿಲ್ಲದೆ ಹೋದಾಗಲೂ ಇವು ಉಳಿದಾವು. ಇಂದಿಗೂ ದುಡಿಯದೆ ಸಮಾಜದ ಬಂದಣಿಕೆಯಾದ ಬಂಡವಲಿಗನಷ್ಟೇ ಬೆವರಿಳಿಸಿ ಹಸಿದು ದುಡಿವ ಕೂಲಿಗಾರನೂ ಕೀಟ್ಸನ ಕವಿತೆಗಳನ್ನೋದಿ ಆನಂದಿಸು ತ್ತಾನೆ. ಇಂದು ಆಂಗ್ಲ ಭಾಷೆ ಆಡುವ ರಾಷ್ಟ್ರಗಳು ಅವನ ಮುಂದಿರಬಹುದು. ಆದರೆ, ಮುಂದೆ ವರ್ಣಭೇದಗಳೆಲ್ಲ ಕೊನೆಗೊಂಡಾಗ ಆತನ ಕವಿತೆಗಳನ್ನು ಎಂದಿಗಿಂತ ಹೆಚ್ಚಾಗಿ ಆನಂದಿಸಬಹುದು.

ಇಂದಿನ ಒಂದು ಮಾನದಂಡದಿಂದ ಮುನ್ನೂರು ವರ್ಷಗಳ ಸಾಹಿತ್ಯ ವನ್ನು ಅಳತೆಮಾಡಲು ಮುನ್ನಡೆವಾಗ ನಾವು ಎಚ್ಚರಿಕೆ ವಹಿಸಬೇಕು. ಕೃತಿಯ ಕೆಲವೊಂದು ವ್ಯಕ್ತಿಗಳನ್ನು ಆ ವ್ಯಕ್ತಿಗಳಾಡಿದ ಮಾತನ್ನು ಕಂಡು ಷೇಕ್ಸ್‌ಪಿಯರ್ ಮಹಾಕವಿಯನ್ನು ಪ್ರಗತಿವಿರೋಧಿ ಎಂದು ತೀರ್ಮಾನಿಸು ವುದರಲ್ಲಿ ಅರ್ಥವಿಲ್ಲ. ಷೇಕ್ಸ್‌ಪಿಯರನ ಕೃತಿಗಳು ರಷ್ಯನ್ ಭಾಷೆಗೆ ಅನು ವಾದಿಸಲ್ಪಟ್ಟು, ಸೋವಿಯೆಟ್ ಪ್ರಜೆಗಳ ಆದರಕ್ಕೆ ಪಾತ್ರವಾಗಿವೆ. ಆದ್ದರಿಂದ ಷೇಕ್ಸ್‌ಪಿಯರ್ ಪ್ರಗತಿ ವಿರೋಧಿ ಲೇಖಕ ಎಂಬ ಅಪವಾದಕ್ಕೆ ಆಧಾರ ಸಾಲ ದಾಗಿದೆ. ಈ ಪ್ರಗತಿ ವಿರೋಧಿ ಎನ್ನಲಾದ ಸಾಹಿತಿಗಳ ಕಿರೀಟಗಳ-ಸಿಂಹಾ ಸನ ವೈಭವಗಳ ಕತೆಗಳಿಂದು ಸೋವಿಯೆಟ್ ರಷ್ಯಾದ ದುಡಿವವರಿಗೆ, ಅದ ರಲ್ಲೂ ಹೊಸದೊಂದು "ಅಂತರರಾಷ್ಟ್ರೀಯ" ರೂಪುಗೊಳ್ಳುತ್ತಿರುವ ಸಂದರ್ಭ ದಲ್ಲಿ, ಅಂತಹ ಕಿರೀಟಗಳ ಸಹಕಾರ ವರ್ಜ್ಯವೆಂದಿಲ್ಲವಾದ ಸಮಯದಲ್ಲಿ ಆದರಣೀಯವಾಗದಿರದು. ಈ ಸಂದರ್ಭದಲ್ಲೊಂದು ಯೋಚನೆ ಬರುತ್ತೆ. ಈ ಹೊಸ ಅಂತರರಾಷ್ಟ್ರಿಯವೇ ಪ್ರಗತಿಶೀಲ ಬರೆಹದ ಮಾದರಿಯೇ? ಹಾಗಿ ದ್ದರೆ ಯಾವ ಮುಖದ ಪ್ರಗತಿ?

ಅಪ್ಟನ್ ಸಿಂಕ್ಲೇರರ ವಿಚಾರ ನೋಡಿದರೆ ಪ್ರಗತಿಶೀಲ ಬರೆಹಗಾರರಲ್ಲಿ ಆತನಿಗೆ ನಿಜಕ್ಕೂ ಉಚ್ಚಸ್ಥಾನವಿದೆ. ಆದರೆ ಪ್ರಗತಿಶೀಲ ಬರೆಹಗಾರರಿಗೆ ಆತ ಬರೆದ ಪತ್ರವನ್ನು ಕಂಡರೆ ಮಾತ್ರ ಆತನ ಆ ಸ್ಥಾನಯೋಗ್ಯತೆ ಉಳಿದಿಲ್ಲ ವೆನ್ನಬಹುದಾಗಿದೆ.

ಈ ರೀತಿಯಿಂದ ವಿವೇಚಿಸಿದರೆ ಪ್ರಗತಿಶೀಲ ಲೇಖಕರ ಸಂಘದ ಈ ಬರೆಹಗಾರಿತನ ಅತ್ಯಲ್ಪವಿದೆ; ಅವರ ಪ್ರಭಾವರಣವನ್ನು ಮೀರಿದ ಸಾಹಿತ್ಯ ರಚನೆ ಹೆಚ್ಚಿನದಿದೆ ಎನ್ನಬಹುದಾಗಿದೆ. ಈ ಸಂಘಕ್ಕೆ ರಷ್ಯ ಹೊಗಳುವವರ ಸಂಘ ಎಂದರೆ ಹೆಚ್ಚು ಒಪ್ಪುತ್ತೆ. ಕಮ್ಯುನಿಸ್ಟ್ ಅಂತರರಾಷ್ಟ್ರೀಯದ ಕೊನೆಯಾದ ಬಳಿಕ 'ಪಾರ್ಟಿ' ಎಂಬ ಪದವನ್ನು ರಷ್ಯಾದ ಹೊರಗಣ ದೇಶಗಳಲ್ಲಿ ಕಿತ್ತುಹಾಕಲು ಅಮೇರಿಕೆಯಲ್ಲಿ ಯೋಚನೆ ನಡೆಯುತ್ತಿದೆಯೆಂದು ಹೇಳಲಾಗಿದೆ. ಭಾರತದ ಕಮ್ಯುನಿಸ್ಟರು ಪ್ರಗತಿಶೀಲ ಲೇಖಕರ ಸಂಘದೊಳಗೇ ಸೇರಿಕೊಂಡು ಮೇಲೆ ಹೇಳಿದಂತೆ ಅದಕ್ಕೆ ಹೊಸ ಹೆಸರಿಟ್ಟರೆ ಅವರ ಆಶಯ ಪೂರ್ಣವಾದಂತಾಗಬಹುದು.

——:——

ನಾವು ಗಂಡಸರು

ಕ್ವಾಜಾ ಅಹಮ್ಮದ್ ಅಬ್ಬಾಸ್

ಸಾಹಿತ್ಯರಂಗದಲ್ಲಿ ನಾವು ಕಾಣಿಸಿಕೊಂಡ ಮೊದಲ ದಿನದಿಂದಲೇ ಪ್ರಗತಿಶೀಲ ಬರೆಹಗಾರರಾದ ನಮ್ಮ ಮೇಲೆ ಮಾತಿನ ಮತ್ತು ಕೃತಿಯ ಧಾಳಿ ಆರಂಭವಾಗಿದೆ.

ಇಂಗ್ಲೀಷ್, ಉರ್ದು, ಹಿಂದಿ, ಗುಜರಾತಿ, ಮರಾಟಿ, ಬೆಂಗಾಲಿ, ತಮಿಳು ಮತ್ತು ತೆಲುಗು ಪತ್ರಿಕೆಗಳಲ್ಲಿ ನಮ್ಮ ಮೇಲೆ ಟೀಕೆಗಳು, ಖಂಡನೆಗಳು, ಅಪಹಾಸ್ಯಗಳು ನಡೆದಿವೆ. ವಿವಿಧ ಬೈಗಳು ನಮಗೆ ದೊರೆತಿವೆ. ಸಾಹಿತ್ಯದ ಪುಂಡರು, ಕೆಸರೆರಚುವವರು, ಹೊಲಸಲ್ಲೇ ಕಾಲ ಕಳೆವ ದುರ್ಮತಿಗಳು, ಲೈಂಗಿಕ ರೋಗ ತಗಿಲಿದ ಮತ್ತರು, ಬೆಲೆ ಹೀನ ಪುಸ್ತಕ ಬರೆವವರು, ಕಮ್ಯೂನಿಸ್ಟ್ ಪಾರ್ಟಿಯ ಏಜಂಟರು, ಕವಿತೆಯ ಕೊಲೆಗಾರರು, ದೈವ ವಿರೋಧಿಗಳು, ನಾಸ್ತಿಕರು ಹಾಗೂ ಹಲವಾರು ಹೆಸರುಗಳನ್ನಿತ್ತು ನಮ್ಮನ್ನು ನಿಂದಿಸಿಯೂ ಮುಗಿದಿದೆ.

ನಮ್ಮ ಪುಸ್ತಕಗಳು ಮುಟ್ಟುಗೋಲು ಹಾಕಲ್ಪಟ್ಟಿವೆ; ಸುಟ್ಟು ಹಾಕಲ್ಪಟ್ಟಿವೆ. ನಮ್ಮ ಲೇಖನಗಳನ್ನು ಪ್ರಕಟಿಸುವ ಎದೆಗಾರಿಕೆ ತೋರಿದ ಸಂಪಾದಕರು ನ್ಯಾಯಾಸ್ಥಾನಗಳನ್ನು ಕಂಡಿದ್ದಾರೆ. ಘನ ಸರ್ಕಾರದ ಮಾನ್ಯ ಅತಿಥಿಗಳಾಗಿ ನಮ್ಮಲ್ಲಿ ಹೆಚ್ಚಿನವರು ಸೆರೆಮನೆಯ ಸುಖ ಉಂಡಿದ್ದಾರೆ.

ನಮ್ಮಲ್ಲಿ ಅನೇಕರಿಗೆ ಏಟಿನ ಬೆದರಿಕೆಯೂ ಬಂದಿದೆ. ಸಂತತಿ ಸಂಯಮವಾದ ವಿಚಾರವಾಗಿ ಸಣ್ಣ ಕತೆಯೊಂದನ್ನು ಬರೆದ ಸಂಯುಕ್ತ ಪ್ರಾಂತ್ಯದ ಮಹಿಳೆಯೊಬ್ಬರಿಗೆ ಮೂಗು ಕತ್ತರಿಸುವ ಬೆದರಿಕೆ ಕೂಡಾ ಬಂದಿತ್ತು. ಮುಂಬಯಿಯಲ್ಲಿ ಬಹಿರಂಗ ಸಭೆಯೊಂದರಲ್ಲಿ ನಾನು ಸುಳಿದಾಗ ಮೂರ್ಖನೊಬ್ಬ ನನ್ನ ಕತ್ತು ಹಿಡಿದು ಹೊಡೆಯಲು ಮುಂದಾದ. ಕಾರಣ ನಾನು ಮುಸ್ಲಿಂ ಲೀಗ್‌ನ ವಿರುದ್ಧ ಬರೆದೆ ಎಂದು. ಕೆಲ ವಿದ್ಯಾರ್ಥಿಗಳು ನನ್ನ ಸಹಾಯಕ್ಕೆ ಬರದಿದ್ದರೆ ನನ್ನ ಕೆಲ ಮೂಳೆಗಳು ಮುರಿದು ಹೋಗುತ್ತಿದ್ದವು. ಆದರೆ, ಇತರರು ನನ್ನಷ್ಟು ಅದೃಷ್ಟಶಾಲಿಗಳಲ್ಲ. ಫಾಸಿಸ್ಟ

ವಿರೋಧ ಬರೆಹಗಳನ್ನು ಬರೆಯುವದಕ್ಕಾಗಿ ಬಂಗಾಲಿ ಪ್ರಗತಿಶೀಲ ಲೇಖಕರೊಬ್ಬರು ಲೇಖನಗಳನ್ನು ಸಹಸಲಾರದವರಿಂದ ಕೊಲೆ ಮಾಡಲ್ಪಟ್ಟಿದ್ದಾರೆ.

ನಮ್ಮನ್ನು ಖಂಡಿಸಿ ಮಾಡಿದ ನಿರ್ಣಯಗಳ ಸಂಖ್ಯೆ ನೂರಾರು. ನಮ್ಮ ವಿರುದ್ಧವಾಗಿ ಬರೆಯಲ್ಪಟ್ಟ ಲೇಖನಗಳು ಅಸಂಖ್ಯಾತ ಸಂಪುಟಗಳಾಗಬಲ್ಲುವು. ನಮ್ಮನ್ನು ವಿರೋಧಿಸಲು ರಂಗಕ್ಕೆ ಬಂದಿಲ್ಲ ಬಂದು ಸಂದರ್ಭದಲ್ಲಿ ಬಂದವರಲ್ಲಿ ಅತ್ಯಂತ ಜನಾದರಣೀಯ ಶಕ್ತಿಶಾಲಿಗಳಿದ್ದಾರೆ. ಪ್ರಖ್ಯಾತ ಕವಿಗಳು, ಸಾಹಿತಿಗಳು, ರಾಜಕೀಯ ಮತ್ತು ಧಾರ್ಮಿಕ ಮುಂದಾಳುಗಳು, ಸನಾತನಿಗಳು ಮತ್ತು ಕಲೆಗಾಗಿ ಕಲೆ ಎಂಬುವರೂ, ನವಾಬರು ಮತ್ತು ರಾಜರುಗಳು !

ಈ ಎಲ್ಲ ಟೀಕೆಗಳ ಬಿರುಗಾಳಿಯನ್ನೂ ಎದುರಿಸಿ ನಾವು ಉಳಿದಿದ್ದೇವೆ ಮಾತ್ರವಲ್ಲ ಈ ಭೀಷಣ ಧಾಳಿಗಳಿದ್ದರೂ ಬೆಳೆದಿದ್ದೇವೆ. ಪೂರ್ಣ ಹೆಸರು ಕೊಟ್ಟು ಬರೆವ ಎದೆಗಾರಿಕೆ ಇಲ್ಲದೆ ಹೆಸರ ಮೊದಲಕ್ಷರಗಳ ಮರೆಯಲ್ಲಿ ಅಡಗಿದ ಒಂದು ವ್ಯಕ್ತಿಯ ಒಂದು ಪುಟ್ಟ ಲೇಖನದಿಂದ ನಾವು ಎಂದಿಗೂ ಭೀತರಾಗುವುದಿಲ್ಲ. ನಾವದನ್ನು ಎದುರಿಸಬಲ್ಲೆವು, ಇನ್ನು ಹೆಚ್ಚು ಲೇಖನಗಳಿಗೆ ಎದೆಕೊಡಬಲ್ಲೆವು. ಮಾತ್ರವಲ್ಲ ಪ್ರತಿ ಪ್ರಹಾರ ಕೊಡಲೂ ನಮಗೆ ಗೊತ್ತಿದೆ. ನಾವು ಕಠಿಣರು, ಗಂಡಸರು !

ನಾನು ಎಂ. ಜೆ. ಜಿ. ಯ ಲೇಖನವನ್ನು ಓದಿದ್ದೇನೆ; ಅರ್ಥಾತ್ ಇನ್ನೊಮ್ಮೆ ಓದಿದ್ದೇನೆ. ಅನೇಕ ತಿಂಗಳ ಹಿಂದೆ ಇದೇ ಎಂ. ಜೆ. ಜಿ. ಕ್ರಾನಿಕಲ್‌ನಲ್ಲಿ ಪ್ರಕಟಿಸುವದಕ್ಕಾಗಿ ನನಗೆ ಕಳುಹಿದ ಲೇಖನದ ತಿದ್ದಿದ ಪ್ರತಿಯೇ ಈ ಸೌಂಡ್ ಪತ್ರಿಕೆಯಲ್ಲಿ ಬಂದ ಲೇಖನ. ಕ್ರಾನಿಕಲ್ ಪತ್ರಿಕೆಯ ''ನಮ್ಮ ಓದುಗರ ಅಭಿಪ್ರಾಯ'' ಎಂಬ ಶಿರೋಲೇಖೆಯ ಅಡಿಯಲ್ಲಿ ಈ ಲೇಖನವೋ ಇದರ ಸಾರಾಂಶವೋ ಬಂದಿರಬಹುದೆಂದೂ ನನಗನ್ನಿಸುತ್ತದೆ. ಅದು ಮೇ ೧೯೪೩ರಲ್ಲಿ ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಮ್ಮೇಳನ ನಡೆದ ಒಡನೆಯೇ. ಆದ್ದರಿಂದ ಪ್ರಗತಿಶೀಲ ಲೇಖನದ ಚಳವಳ ಇದೀಗ ಕೆಲ ದಿನಗಳಿಂದ ಎಲ್ಲಿಲ್ಲೋ ಹರಡಿದೆ ಎಂಬ ಮಾತು ಈ ಒಂಭತ್ತು ತಿಂಗಳು ಕಳೆದ ಅನಂತರ ನಿಜಕ್ಕೂ ಪರಿಹಾಸವಾಗಿಯೇ ಕಾಣುವುದು. ಆದರೆ ಎಂ. ಜೆ. ಜಿ. ಅವರು ಲೇಖನದಲ್ಲಿ ಒಂದು ತಿದ್ದುಪಡಿಯನ್ನು ಮಾಡಿದ್ದಾರೆ.

ಹಿಂದೆ ಬಾಂಬೇ ಕ್ರಾನಿಕಲ್‌ನಲ್ಲಿ ಪ್ರಕಟನೆಗಾಗಿ ನನಗೆ ಕಳುಹಿದ ಲೇಖನದಲ್ಲಿ, ಜನತಾ ರಂಗಭೂಮಿಯವರಿಂದ ಅಭಿನಯಿಸಲ್ಪಟ್ಟ ನನ್ನ "ಅಮರತ್ವಕ್ಕೆ ಆಹ್ವಾನ" ಎಂಬ ನಾಟಕದ ಬಗ್ಗೆ ಒಂದೆರಡು ಒಳ್ಳೇ ಮಾತುಗಳಿದ್ದುವು. 'ಸೌಂಡ್' ಲೇಖನದಲ್ಲಿ ಅದನ್ನು ಕತ್ತರಿಸಲಾಗಿದೆ.

ಇದೀಗ ಎಲ್ಲೆಲ್ಲೂ ಹರಡಿಕೊಂಡ ಹಾಗೂ ಸಂಪೂರ್ಣ ನಿರಾಧಾರವಾದ ಅಭಿಮತದ ಮೇಲೆ ಎಂ. ಜೆ. ಜಿ. ಯ ಕ್ರೋಧ ಅಡಕವಾಗಿದೆ. ಪ್ರಗತಿಶೀಲ ಬರೆಹಗಾರರ ಚಳವಳಿ ಕಮ್ಯೂನಿಸ್ಟ್ ಪಾರ್ಟಿಯ ಒಂದು ಅಂಗ ಎಂಬುದೇ ಆ ಕ್ರೋಧ. ಹಿಂದೆ ಸೌಂಡ್ ಪತ್ರಿಕೆಯಲ್ಲಿ ಪ್ರಕಟಿಸಿದ ಲೇಖನದ ಮೂಲಕ ಇವರು ಕಮ್ಯೂನಿಸ್ಟರ ಮೇಲಿನ ದ್ವೇಷ ಸಾಧಿಸಿದ್ದಾರೆ. ಇದೀಗ ಈ ಲೇಖನದ ಪ್ರತಿಯೊಂದು ಅಭಿಪ್ರಾಯವೂ ಆ ಹಿಂದಿನ ಲೇಖನದ ಅಭಿಪ್ರಾಯವನ್ನೇ ಪುಷ್ಟೀಕರಿಸುತ್ತಿವೆ. "ಅಪವಾದ ಹೊರಿಸಿ ಗಲ್ಲಿಗೇರಿಸು" ಎಂಬ ನೀತಿ ಈ ಲೇಖಕರದು. ಪ್ರಗತಿ ವಿರೋಧಕರು, ಸಾಮ್ರಾಜ್ಯ ಶಾಹಿಗಳು, ಫಾಸಿಸ್ಟರು ಮತ್ತು ಬಂಡವಾಳಶಾಹಿಗಳು ಜನತೆಯನ್ನು ಸಂದೇಹದಲ್ಲಿ ಕೆಡವಲು ಸದಾ ಈ 'ಕೆಂಪು' (ಕಮ್ಯುನಿಸ್ಟ್) ಬಣ್ಣವನ್ನು ಉಪಯೋಗಿಸಿದ್ದಾರೆ. ಜಿನೋವೀಫ್ ಫೋರ್ಜರಿ ಪತ್ರ, ಸಾಕೊ-ವಾನ್‌ಜೆಟ್ಟಿ ಸಮಸ್ಯೆ, ಮೀರತ್ ಖಟ್ಲೆ-ಹಾಗೂ ಇಂತಹದೇ ಆದ ನೂರಾರು ನೀತಿಗಳು ಪ್ರತಿಯೊಂದು ದೇಶದಲ್ಲೂ ಆಗಾಗ ಆಚರಿಸಲ್ಪಟ್ಟಿವೆ. ಭಾರತದಲ್ಲೆ ಬಂಡವಲಿಗ, ಧರ್ಮಾಧಿಕಾರಿ, ಷಂಡರು ಹಾಗೂ ಸರಕಾರಗಳು ಮತ್ತು ಇವರೆಲ್ಲರ ದಾಸರು ತಮಗೆ ಕಹಿಯಾದ ಪುರೋಗಾಮಿ ಚಳವಳಗಳನ್ನೆಲ್ಲ 'ಕಮ್ಯುನಿಸ್ಟ್' ಎಂದು ಕರೆದು, ಜನತೆಯ ಬೆಂಬಲವನ್ನದು ಪಡೆಯದಂತೆ ಮಾಡಲು ಯತ್ನಿಸಿದ್ದಾರೆ. ಈ ಎಂ. ಜೆ. ಜಿ. ಕೂಡಾ ಈ ವರ್ಗಕ್ಕೆ ಸೇರಿದವರು; ಅವರಿಗೆ ಪ್ರಗತಿಶೀಲ ಬರೆಹಗಾರರನ್ನು ಕಂಡರೆ ಆಗುವುದಿಲ್ಲ. ಆದ್ದರಿಂದ, ಯಾವ ಪಾದಕ್ಕೂ ಆಸ್ಪದವಿಲ್ಲದ ಅಸಹ್ಯವಾದ ಸಟೆಯನ್ನು ನುಡಿದಿದ್ದಾರೆ. ಪ್ರಗತಿಶೀಲ ಬರೆಹಗಾರರು ಕಮ್ಯೂನಿಸ್ಟರು, ಕಮ್ಯೂನಿಸ್ಟ್ ಡಕಾಯಿತರು ಎಂದು ತುಚ್ಛೀಕರಿಸಿದ್ದಾರೆ. ಆ ಮೂಲಕ ಅತ್ಯಂತ ದೊಡ್ಡ ಸುಳ್ಳು ಸಾಧಿಸಲು ಯತ್ನಿಸಿದ್ದಾರೆ. ಬಹುಶ-ಅವರಿಗೆ ಪ್ರಗತಿಶೀಲ ಬರೆಹಗಾರರ ಚಳವಳದ,

ಪ್ರಗತಿಶೀಲ ಸಂಘದ ಸದಸ್ಯವರ್ಗದ ಅನುಭವವಿಲ್ಲ; ಇದ್ದರೂ ಅರ್ಥ ಮಾಡಿಕೊಳ್ಳಲು ಯತ್ನಿಸಿಲ್ಲ.

ಸಂಘದ ಸದಸ್ಯರ ಕಡೆಗೆ ನೋಡೋಣ. ಸಂಘದ ಆರಂಭದಿಂದ ಅದು ದೇಶದ ಖ್ಯಾತ ಬರೆಹಗಾರರಾದ ದಿವಂಗತ ರವೀಂದ್ರನಾಥ ಟಾಗೋರ್ ಮತ್ತು ಪಂಡಿತ ಜವಹರಲಾಲ ನೆಹರುಗಳ ಆಶೀರ್ವಾದ ಪಡೆದಿದೆ. ದಿವಂಗತ ಮುನ್ಷಿ ಪ್ರೇಮಚಂದ್, ಜೋಶ್ ಮಲಿಹಾಬಾದಿ, ಕ್ವಾಜಿ ಅಬ್ದುಲ್ ಗಾಫರ್, ರಘುಪತಿ ಸಹಾಯಿ ಫಿರಖ್, ಪಂಡಿತ್ ಸುದರ್ಶನ್, ಸಾಘರ್ ನಿಜಾಮಿ, ಮಾಮಾ ವಾರೇರ್ಕರ್, ಚಂದ್ರವದನ್ ಮೆಹ್ತಾ, ಅಹಮ್ಮದ್ ಆಲಿ, ರಾಜಾರಾವ್, ಕೃಷ್ಣಚಂದರ್, ಮಾಂಟೋ ಮತ್ತು ಇಸ್ಮತ್ ಮೊದಲಾದ ಲೇಖಕರು, ಕವಿಗಳು ಒಂದಲ್ಲ ಒಂದು ರೀತಿಯಿಂದ ಸಂಘದೊಡನೆ ಸಹಕರಿಸಿ ಈ ಚಳವಳದಲ್ಲಿ ಭಾಗಿಗಳಾಗಿದ್ದಾರೆ. ಇವರಲ್ಲಿ ಯಾರನ್ನೂ ಕಮ್ಯುನಿಸ್ಟರೆನ್ನಲು ಸಾಧ್ಯವಿಲ್ಲ!

ನಾನು ಕಮ್ಯುನಿಸ್ಟನಲ್ಲ; ಮಾರ್ಕ್ಸವಾದಿ ಎಂದೂ ಹೇಳಿಕೊಳ್ಳದವನು. ಕಮ್ಯುನಿಸ್ಟರೊಡನೆ ನನಗಿರುವ ಭಿನ್ನಾಭಿಪ್ರಾಯ ಅನೇಕ ವೇಳೆ ಪ್ರಕಟಿಸಿದ್ದೇನೆ; ಅದು ಜನಜನಿತವಿದೆ. ಹಾಗಿದ್ದರೂ ಅಖಿಲ ಭಾರತ ಸಂಸ್ಥೆಯ ಹಾಗೂ ಬೊಂಬಾಯಿ ಶಾಖೆಯ ಸಹಾಯಕ ಕಾರ್ಯದರ್ಶಿಯಾಗಿ ನನ್ನನ್ನು ಚುನಾಯಿಸಿ ಮಾನಿಸಿದ್ದಾರೆ. ಪ್ರಗತಿಶೀಲ ಲೇಖಕರ ಸಂಘ ಕಮ್ಯುನಿಸ್ಟರ ಬಾಲ ಎಂಬ ಅಪವಾದವನ್ನು ಮುಟ್ಟಹಾಕುವುದಕ್ಕೆ ಇದಿಷ್ಟೇ ಸಾಕಾಗಿದೆ.

ಸಂಘದಲ್ಲಿ ವೈಯಕ್ತಿಕವಾಗಿ ಕಮ್ಯುನಿಸ್ಟರಿದ್ದಾರೆ. ಅವರಲ್ಲಿ ಕೆಲವರು ನಮ್ಮ ಪ್ರಮುಖ ಸದಸ್ಯರು ಎಂಬುದು ನಿಜ! ಇತರ ಶಾಖೆಗಳ ವಿಚಾರ ನನಗೆ ಅಷ್ಟು ತಿಳಿದಿಲ್ಲ. ಬೊಂಬಾಯಿ ಶಾಖೆಯ ವಿಷಯ ನಾನು ತಿಳಿದಿದ್ದೇನೆ. ಇಲ್ಲಿನ ಸದಸ್ಯರಲ್ಲಿ ಕಮ್ಯುನಿಸ್ಟರ ಸಂಖ್ಯೆ ಶೇ. ೨೫ಕ್ಕೆ ಮಿರಾರಲಾರದು. ಅದು ಈ ಕಮ್ಯುನಿಸ್ಟರ ತಪ್ಪು ಎಂದಿಗೂ ಅಲ್ಲ. ಪಾಪವೂ ಅಲ್ಲ. ಈ ಸದಸ್ಯರು ಅತ್ಯಂತ ಶ್ರದ್ಧಾಸಕ್ತಿಯಿಂದ ದುಡಿಯುತ್ತಿದ್ದಾರೆ. ಸಂಘದ ಜೀವನಾಡಿಯಾಗಿದ್ದಾರೆ. ಸದಾ ಸಂಘದ ವಿಚಾರ ಗಮನ ತೆಗೆದುಕೊಳ್ಳುತ್ತಿದ್ದಾರೆ. ಚರ್ಚೆಯಲ್ಲಿ ಭಾಗ ವಹಿಸುತ್ತಿದ್ದಾರೆ, ತಮ್ಮ ಬರೆಹಗಳನ್ನು ಓದಲು ಮುಂದೆ

ಬರುತ್ತಾರೆ. ಇತರ ಸದಸ್ಯರಲ್ಲಿ ಈ ಕರ್ತವ್ಯಶೀಲತೆಯಿಲ್ಲವಾಗಿ ಅವರು ಸಭೆಗೆ, ಸಂಘಕ್ಕೆ ಬಾರದೆ, ಇವರೇ ಬಂದಿದ್ದು - ತಾವು ಇದ್ದೇವೆ - ಎಂದು ತೋರಿಕೊಟ್ಟರೆ ಅದು ಯಾರ ಕೀಳಿಗೇಡಿತನದ ಸೂಚನೆ? ಹಾಗಿದ್ದರೂ, ಬೊಂಬಾಯಲ್ಲಿ ನಡೆದ ಇಂಕ್ಲಾ ಹೆಚ್ಚಿನ ಸಭೆಗಳಿಗೆ ಬಂದು, ಅಥವಾ ಮೇ ತಿಂಗಳಲ್ಲಿ ಜರುಗಿದ ಸಮ್ಮೇಳನಕ್ಕೆ ಬಂದು, ಅಲ್ಲಿನ ಕಾರ್ಯಕ್ರಮಗಳನ್ನು ಕಣ್ಣಾರೆ ಕಂಡ ಯಾವನೊಬ್ಬನೂ ಈ ಸಂಘ ಕಮ್ಯುನಿಸ್ಟರ ಕೃತಿ ಎಂದು ಒದರಲಾರ!

ಪ್ರಗತಿಶೀಲ ಬರೆಹಗಾರರ ಚಳುವಳಿಯು ನಮ್ಮ ಸಾಹಿತ್ಯಜೀವನದಲ್ಲಿನ ಪುರೋಗಾಮಿ ಶಕ್ತಿಯನ್ನು ಕೂಡಿಕೊಂಡಿದೆ. ಈ ಅಥವಾ ಆ ರಾಜಕೀಯ ಪಕ್ಷದ ಕಾರ್ಯಕ್ರಮವನ್ನಲ್ಲ - ಎಂಬುದೇನೋ ಸಹಜ. ಆದ್ದರಿಂದ ಸಕಲ ಪ್ರಗತಿಶೀಲ ಪಕ್ಷಗಳ ಬುದ್ಧಿಜೀವಿಗಳ ಸಹಕಾರ ನಾವು ಪಡೆಯುತಿದ್ದರೂ ನಮ್ಮದೇ ಆದ ಸ್ವತಂತ್ರ ಧ್ಯೇಯವನ್ನು ಬಿಟ್ಟಿಲ್ಲ! ನಮ್ಮ ಧ್ಯೇಯವನ್ನು ಅಥವಾ ರಾಜಕೀಯ ಕಾಯಕ್ರಮವನ್ನು ನಮ್ಮ ಸದಸ್ಯರ ಅಥವಾ ಸಹಕಾರಿಗಳ ಮತ್ತು ಸಹಾನುಭೂತಿಯುತರ ಮೇಲೆ ಹೊರಿಸಲು ನಾವು ಇಚ್ಛಿಸುವುದಿಲ್ಲ. ಪ್ರತಿಯೊಬ್ಬ ಸದಸ್ಯನಿಗೂ ವೈಯಕ್ತಿಕ ಸ್ವಾತಂತ್ರ್ಯವಿದೆ. ಆತ ಕಾಂಗ್ರೆಸ್, ಕಾಂಗ್ರೆಸ್ ಸೋಷಿಯಲಿಸ್ಟ್, ಕಮ್ಯುನಿಸ್ಟ್ ಪಾರ್ಟಿ ಅಥವಾ ಪಾರ್ಟಿಯೇ ಇಲ್ಲದವನಿರಬಹುದು. ಆತ ಪ್ರಗತಿಶೀಲ ಬರೆಹಗಾರರ ಚಳುವಳಿಯ ಧ್ಯೇಯ, ಉದ್ದೇಶಗಳ ವಿಚಾರದಲ್ಲಿ ಸಹಾನುಭೂತಿಯುಳ್ಳವನಾದರೆ ಸರಿ!

ಹಾಗಿದ್ದರೆ ಪ್ರಗತಿಶೀಲ ಬರೆಹಗಾರರ ಧ್ಯೇಯವೇನು? ಸಾಹಿತ್ಯ ಮತ್ತು ಕಲಾಕಾರ್ಯರಂಗ ನಮ್ಮ ನಿತ್ಯಜೀವನದೊಡನೆ ಹಾಸುಹೊಕ್ಕಾಗಿ ಇರಬೇಕು. ಅದು ಜನಜೀವನದಿಂದ ವಿರಹಿತವಾಗಿರಬಾರದೆಂದು ನಾವು ತಿಳಿಯುತ್ತೇವೆ. 'ಕಲೆಗಾಗಿ ಕಲೆ', ಕಲೆ ದೈವಿಕವಾದುದು, ಅದು ಮನಸ್ಸಿಗೆ ನೆಮ್ಮದಿ ತರುವ ಸಾಧನ ಎಂಬ ಹುಚ್ಚು ಕಲ್ಪನೆಗಳನ್ನು ನಾವು ಒಪ್ಪುವುದಿಲ್ಲ. ಸಾಹಿತ್ಯದ ಸರಳತೆ-ಗಂಭೀರತೆಗಳ ಮಾತಿಗೆ ನಾವೂ ಬೆಲೆ ಕೊಡುವುದಿಲ್ಲ ಮಾತ್ರವಲ್ಲ ಆ ಅಭಿಮತದ ಜೊತೆಗೆ ಸಾಹಿತ್ಯದಲ್ಲಿ ಹುರುಳೂ ಇರಬೇಕು; ಆ ಕೃತಿಯು ಪ್ರಕಟಿಸುವ ಅಭಿಮತಕ್ಕೆ ಪ್ರಾಧಾನ್ಯ ಅಧಿಕ ಎನ್ನು

ತ್ತೇವೆ. ಮಹಾರಾಜನ ಮೇಲಣ ಮಹಾ ಕಾವ್ಯಕ್ಕಿಂತ ಮಡಿವ ಬಡವನ ವಿಚಾರದ ಲಾವಣಿ ನಮ್ಮ ದೃಷ್ಟಿಯಲ್ಲಿ ಶ್ರೇಷ್ಠವಾದುದು. ಲೇಖಕ ಹೇಗೆ ಬರೆಯುತ್ತಾನೆ ಎಂಬ ದೃಷ್ಟಿಕೋನದಿಂದ ನಾವು ಆವನ ಕೃತಿಯನ್ನು ವಿಮರ್ಶಿಸುವುದಲ್ಲ: ಯಾವುದರ ಕುರಿತಾಗಿ ಬರೆಯುತ್ತಾನೆ; ಅದು ಸಮಾಜಕ್ಕೆ ಎಷ್ಟರಮಟ್ಟಿಗೆ ಹಿತಕಾರಿಯಾಗಿದೆ ಎಂಬುದರ ಮೇಲೆ! **ಸಮಾಜದ ನೀತಿಯನ್ನು ಮರೆಸಿ, ಪ್ರಗತಿ ವಿರೋಧವನ್ನು ಪ್ರಶಂಸಿಸಿ, ಪ್ರಗತಿಯನ್ನು ತಡೆಯುವ** ಯಾವುದೇ ಕೃತಿಯನ್ನು ನಾವು ತುಚ್ಛೀಕರಿಸಿ ಕಸದ ಬುಟ್ಟಿಗೆ ಎಸೆಯುತ್ತೇವೆ! ಪ್ರಗತಿಯನ್ನು ಮೆಚ್ಚಿ, ಜನತೆಯ ಕೇಳಿಕೆಗಳನ್ನು ಪುಷ್ಟೀಕರಿಸಿ; ಮಾರ್ಕ್ಸ್‌ವಾದದ ಮುದ್ರೆ ಇದೆಯೋ ಇಲ್ಲವೋ—ಹಾಗೂ ಯಾವ ಲೇಖನ ಜನತೆಯನ್ನು ಉತ್ಸಾಹಗೊಳಿಸಿ, ಹುರಿದುಂಬಿಸಿ, ಪ್ರಗತಿ ಪಥದಲ್ಲಿ ಮುನ್ನಡೆಸುವುದೋ ಅದು ನಮ್ಮ ಮೆಚ್ಚುಗೆಗೆ ಪಾತ್ರವಾಗುತ್ತದೆ. ಹೀಗಿಲ್ಲವಾಗಿದ್ದರೆ ಪ್ರಗತಿಶೀಲ ಬರೆಹಗಾರರ ಸಂಘ ವಿವಿಧ ಭಿನ್ನ ಅಭಿಪ್ರಾಯಗಳ ಬರೆಹಗಾರರಾದ ಗಾರ್ಕಿ ಮತ್ತು ಟಾಗೋರ್, ಇಕ್ಬಾಲ್ ಮತ್ತು ಅಪ್ಟನ್ ಸಿಂಕ್ಲೇರ್, ನರ್ಮದ್ ಮತ್ತು ರಾಲ್ಫ್‌ಫಾಕ್ಸ್, ಪ್ರೇಮಚಂದ್ ಮತ್ತು ಪರ್ಲ್ ಬಕ್, ಘಾಲಿಬ್ ಮತ್ತು ಹರೀಂದ್ರನಾಥ್ ಚಟ್ಟೋಪಾಧ್ಯಾಯ ಇವರ ಲೇಖನಗಳನ್ನು ಹೇಗೆ ಪ್ರಶಂಸಿಸುತ್ತಿತ್ತು ?

ನಮ್ಮ ಚಳುವಳಿಯ ಆರಂಭದಲ್ಲಿ ಪ್ರಗತಿಶೀಲ ಬರೆಹಗಾರರು ನಾಶನ ದಾರಿಯನ್ನು ಅನುಸರಿಸುತ್ತಿದ್ದರು. ಪ್ರಗತಿ ವಿರೋಧವನ್ನೆಲ್ಲ ನಿರ್ಮೂಲ ಮಾಡಲು ಕಂಕಣತೊಟ್ಟಿದ್ದರು. ಪ್ರಗತಿ ವಿರೋಧವಾದ, ಸನಾತನ ಸಾಹಿತ್ಯದ ಅಸ್ತಿವಾರವನ್ನು ಅವರು ಹುಡಿಗೂಡಿಸಿ, ಅದನ್ನು ಜನಜೀವನದಿಂದ ಬೇರ್ಪಡಿಸಬೇಕಾಗಿತ್ತು. ಸೋಮಾರಿಗಳಾದ ಬಂಡವಲಿಗ ವರ್ಗದ ಈ ಆಡುಂಬೊಲವನ್ನು ಶುಚಿಗೊಳಿಸಬೇಕಾಯಿತು. ಆ ಸಂದರ್ಭದಲ್ಲಿ ರಚನಾತ್ಮಕ ವಿಮರ್ಶೆಗಿಂತ ವಿನಾಶಕಾರಕನೀತಿ ಹೆಚ್ಚಬೇಕಾಗಿತ್ತು. ಬುದ್ಧಿಜೀವಿಗಳನ್ನು ಬಡಿದೆಬ್ಬಿಸಿ, ಅವರ ನಿದ್ರೆಯನ್ನು ತೊಲಗಿಸಿ, ಹಳಸಿದ ಸಾಹಿತ್ಯದ ಹೊಗಳುಭಟ್ಟರ ಸ್ಥಾನದಿಂದ ಅವರನ್ನು ಕದಲಿಸಬೇಕಾಗಿತ್ತು. ವಿನಾಶಕಾರಕವಾದ, ಮಾದಕರೂಪದ ಸನಾತನೀಯ ಸಂಪ್ರದಾಯ, ಕಟ್ಟುಕಟ್ಟಳೆ, ಪ್ರಣಯ ಪ್ರೇಮಗಳ ಬಂಧನದಿಂದ ಬಲಾತ್ಕಾರಿಕವಾಗಿ ಸಾಹಿತ್ಯವನ್ನು ಬಿಡಿಸಿ

ರಕ್ಷಿಸಬೇಕಾಗಿತ್ತು. ಆದ್ದರಿಂದ ಪ್ರಗತಿಶೀಲ ಬರೆಹಗಾರರು ವೀರಯೋಧರ ಕ್ರೋಧದಿಂದ ಬರೆದರು. ಆಕ್ರಮಣ, ಮಟ್ಟ, ಜನತೆಯನ್ನು ಬೆದರಿಸುವ ಹಾಗೂ ಸಾಹಿತ್ಯದ ಗೋಳಗುಮ್ಮಟಗಳನ್ನು ಹುಡಿಗೂಡುವ, ಸಾಹಿತ್ಯದ ರಾಕ್ಷಸರನ್ನು ಸದೆಬಡೆವ, ಸಮಾಜದ ಅನೀತಿಯನ್ನು ಬಯಲಿಗೆಳೆವ, ಬಂಡವಲ ಮತ್ತು ಜಮೀನ್ದಾರೀ ನೀತಿಯ ಹೊಲಸನ್ನು ತೋರುವ ಸಾಹಸ ಮಾಡಿದರು.

ಆ ಹೋರಾಟದ ಯುಗದಲ್ಲಿ **ಪ್ರಗತಿಶೀಲ ಲೇಖಕರಿಂದ** ಮಹತ್ತಾದ ಸಾಹಿತ್ಯದ ಸೃಷ್ಟಿ ನಡೆಯಿತೆಂದು ನನಗನ್ನಿಸುವುದಿಲ್ಲ. ಆದರೆ ಪ್ರಗತಿ ವಿರೋಧ ಗುಡಿಗೋಪುರಗಳು ನೆಲಸಮವಾದುವು; ಹೊಸ ಸಾಹಿತ್ಯ ರಚನೆಗೆ ಬೇಕಾದ ಹೊಲ ಸಿದ್ಧವಾಯಿತು. ಆ ಸಂದರ್ಭದಲ್ಲಿ ಕೂಡಾ, ಪ್ರಗತಿಶೀಲ ಬರೆಹಗಾರರ ಬರೆಹಗಳನ್ನು ವಿವೇಚಿಸಿದಾಗಲೆಲ್ಲ ಎರಡು ಮಾರ್ಗ ಗಳು ಕಂಡುಬಂದಿವೆ. ಸಮಾಜದಲ್ಲಿ ನ್ಯಾಯವಿರಬೇಕು; ಜೀವನದ ನೈಜ ಚಿತ್ರಣವಿರಬೇಕು ಎಂಬುದು. ಈ ನೈಜತೆಯು ಸನಾತನೀಯ ನೀತಿವಂತ ರಿಗೆ ಸಿಟ್ಟೆಬ್ಬಿಸಿರಬಹುದು ಲೈಂಗಿಕ ವಿಚಾರವಾದ ಬರೆಹಗಳ ಮೂಲಕ! ಅದೇ ಸಂದರ್ಭದಲ್ಲಿ ಆರ್ಥಿಕವಾದವೂ ಪ್ರಚಾರಕಾರಕವಾಗಿಯೇ ಕಂಡು ಬಂದಿರಬಹುದು, ಅದರಲ್ಲಿ ಕಲಾರೂಪ ಕಾಣದಾಗಿರಬಹುದು. ಆದರೂ, ಬರೇ ಉರ್ದು ಲೇಖನಗಳನ್ನು ತೆಗೆದುಕೊಂಡರೂ, ಮಾಂಟೊ ಮತ್ತು ಇಸ್ಮತ್‌ರಂತಹ ಲೇಖಕರು ಸಾಹಿತ್ಯದ ಮಾರ್ಗವನ್ನು ವಿಶಾಲಗೊಳಿಸಿದರು, ಮಾನಸಶಾಸ್ತ್ರದ ಹೊಸ ನರನಾಡಿಗಳನ್ನು ಹಿಡಿದು ಅನೇಕ ಸಮಸ್ಯಾತ್ಮಕ ವಿಚಾರಗಳನ್ನು ವಿವೇಚಿಸಿದರು, ಅಸಮಾನ ಆರ್ಥಿಕ ನೀತಿಯಿಂದಾಗಿ ತಲೆ ದೋರಿರುವ ಲೈಂಗಿಕ ಪರಿಸ್ಥಿತಿ ಅವ್ಯವಸ್ಥೆ ಅನೀತಿಗಳನ್ನು ಬೆಳಕಿಗೆಳೆದರು, ಸಮಾಜದ ಅನೀತಿಗಳನ್ನು ನಿರ್ದಾಕ್ಷಿಣ್ಯವಾಗಿ ಚಿತ್ರಿಸಿದರು, ಎಂದರೆ ಯಾರೂ ಅಲ್ಲಗಳೆಯಲಾರರು. ಅಹ್ಮದಾಲಿ, ಕೃಷ್ಣಚಂದರ್. ಮತ್ತು ರಾಜೇಂದರ್ ಸಿಂಗ್ ಬೇಡಿ ಇದುವರೆಗೆ ಎಂದೂ ಇದ್ದಿರಲಾರದ, ಬರೇ ಮೈಗಳ್ಳ ದರ್ಜೆಯ ಲೈಂಗಿಕ ಸುಖಭೋಗಕ್ಕಾಗಿಯೇ ಇದ್ದ ಸಾಹಿತ್ಯವನ್ನು ಸಾಮಾನ್ಯ ಜನತೆಯ ಸಾಹಿತ್ಯವಾಗಿ ಮಾರ್ಪಡಿಸಿದರು.

ಇಂದು ಪ್ರಗತಿಶೀಲ ಬರೆಹಗಾರರು ಅನುಭವಿಗಳಾಗಿದ್ದಾರೆ; ಶಕ್ತಿ ಪೂರ್ಣರಾಗಿದ್ದಾರೆ. ಹಿಂದಿನ ಆ ಬೆದರಿಕೆಯ ಕಾರ್ಯಕ್ರಮ ಇಂದು ಇಲ್ಲ!

ಹಾರ್ದಿಕವಾದ ಜನತೆಯ ನೈಜಜೀವನದ ಚಿತ್ರಣವನ್ನಷ್ಟೇ ಅಲ್ಲ, ಆ ಜೀವನವನ್ನು ಸುಧಾರಿಸಿ ಬೆಳೆಸಲು ಬೇಕಾದ ಸಾಹಿತ್ಯ ರಚನೆ ಆರಂಭಿಸಿದ್ದಾರೆ. ಆದ್ದರಿಂದಲೇ ಉತ್ತಮವೂ ಸುಖಮಯವೂ ಆದ ಸಮಾಜದ ರಚನೆಗಾಗಿ ಹೋರಾಡುತ್ತಿರುವ ಜಗತ್ತಿನ ಪುರೋಗಾಮಿ ಚಳವಳದ ಸಹಾನುಭೂತಿ ನಮಗಿದೆ. ಅಂದಮೇಲೆ ಅವರು ಸಾಮ್ರಾಜ್ಯಶಾಹಿ, ಫಾಸಿಸಂ ಮತ್ತು ಬಂಡವಲ ಶಾಹಿಗಳನ್ನು ವಿರೋಧಿಸುವುದರಲ್ಲಿ ಹಾಗೂ ರಷ್ಯಾ ಮತ್ತು ಚೀನಾಗಳನ್ನು ಶ್ಲಾಘಿಸುವುದರಲ್ಲಿ ಆಶ್ಚರ್ಯವೇನಿದೆ? ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ಮುನ್ನಡೆದ ವೀರರು. ಸ್ವತಂತ್ರ ಭಾರತದಿಂದಲೇ ಜನತೆ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಗತಿಗಳನ್ನು ಸಾಧಿಸಬಲ್ಲರೆಂಬುದನ್ನವರು ಅರಿತಿದ್ದಾರೆ. ಲೇಖಕರಾದ್ದರಿಂದ, ಜನತೆಗೆ ಅವರ ಜೀವನದಲ್ಲಿ ಪ್ರಾಮುಖ್ಯವಾದ ವಿಚಾರಗಳಮೇಲೆ ಮಾನವನು ಮಾನವನ ಶೋಷಣೆ ನಡೆಸಲಾರದ ಪ್ರಪಂಚದ ಸೃಷ್ಟಿಗಾಗಿ ಅವರು ಬರೆಯುತ್ತಾರೆ. ಪ್ರಗತಿಶೀಲ ಲೇಖಕರು ಬರೆಯುತ್ತಿರುವುದು ಸ್ವಾತಂತ್ರ್ಯ, ಅನ್ನ, ಕೆಂಪು ಗೆರಿಲ್ಲಾಗಳ ಶೌರ್ಯ ಸಾಹಸಗಳು, ಬಂಡವಲಿಗ ದವಸ ಸಂಗ್ರಹಕಾರರ ರಕ್ತತೃಷ್ಣೆ, ಸಾಮ್ರಾಜ್ಯಸಾಹಿ ಆಳ್ವಿಕೆಯ ಅನೀತಿ, ಸೆರೆಯಲ್ಲಿ ಮೂಗು ಹಿಡಿದು ನರಳುತ್ತಿರುವ ದೇಶದ ನಾಯಕರ ಕುರಿತಾಗಿ. ಅವರು ಕವಿತೆ, ಕತೆ, ನಾಟಕ, ಲೇಖನ, ಗ್ರಂಥಗಳನ್ನು ಬರೆಯುತ್ತಾರೆ. ನಮ್ಮಲ್ಲಿ ಕೆಲವರು ಕಮ್ಯೂನಿಸ್ಟರು. ಅವರು ಸ್ಟಾಲಿನ್‌ಗ್ರಾಡ್, ಜನತೆಯ ಸಮರ ಮುಂತಾದುವುಗಳ ವಿಚಾರವಾಗಿ ಸ್ವಲ್ಪ ಹೆಚ್ಚಿಗೆ ಬರೆಯಬಹುದು. ಕೆಲವರು ಕಾಂಗ್ರೆಸ್‌ಮಂದಿ ಇದ್ದೇವೆ, ಅಂತಹರು ಚೀಮೂರು ಭಾರತದ ಸ್ವಾತಂತ್ರ್ಯ ಸಮರಗಳ ಮೇಲೆ ಅಧಿಕ ಬರೆಯಬಹುದು. ಒಂದು ವಿಚಾರದಲ್ಲಿ ಫಾಸಿಸ್ಟ್ ವಿರೋಧ ಭಾವನೆಯ ಮೇಲೆ ಹೆಚ್ಚಿನ ಪ್ರಾಮುಖ್ಯತೆಯಿದ್ದರೆ, ಇನ್ನೊಂದರಲ್ಲಿ ಸಾಮ್ರಾಜ್ಯಶಾಹಿ ವಿರುದ್ಧಭಾವನೆ ಅಧಿಕವಿರಬಹುದು. ಇನ್ನು ಕೆಲವವರಲ್ಲಿ ಸಮಾಜದ ಅನೀತಿಗಳು, ಅವು ಮಾನವ ಸಮಾಜವನ್ನು ಅರೆಯುತ್ತಿರುವ ರೀತಿ, ಜನರ ದೇಹದ ವಿಕ್ರಯವಾಗುತ್ತಿರುವ ಚಂಡಾಲತನಗಳ ವಿರುದ್ಧವಾದ ಕ್ರೋಧ ಅಡಕವಾಗಿರಬಹುದು. ಆದರೆ, ನಾವೆಲ್ಲ ಪ್ರಗತಿಶೀಲ ಲೇಖಕರೇ. ಎಲ್ಲರ ಧ್ಯೇಯವೂ ಒಂದೇ. ಜನತೆಗೆ ಅತ್ಯಗತ್ಯವಾದ ನಿತ್ಯವಿಚಾರಗಳಮೇಲೆ

ಬರೆಯುತ್ತೇವೆ. ಹೊರತಾಗಿ ಗುಲಾಬಿ ಹೂಗಳು, ಕೋಗಿಲೆಗಳು, ಪ್ರಣಯದ ಮೊದಲ ಮಹಾದುರಂತ, ಇಂತಹ ಹುಚ್ಚು ಕಲ್ಪನೆಗಳ ಮೇಲೆ ನಾವು ಬರೆಯುತ್ತಿಲ್ಲ. ಕಾರಣ, ಫಾಸಿಸಂ, ಸಾಮ್ರಾಜ್ಯಶಾಹಿಗಳು ನಾಶವಾಗದೆ ಗುಲಾಬಿ ಹೂಗಳು ಅರಳಿದರೂ ಅಪ್ರಯೋಜಕ, ಕೋಗಿಲೆಯ ಹಾಡು ಹಸಿದವನಿಗೆ, ನಿರ್ಗತಿಕನಿಗೆ, ದಾಸ್ಯದಲ್ಲಿರುವವನಿಗೆ ಆರ್ತನಾದವಾಗಬಹುದೆಂಬುದು ನಮಗೆ ತಿಳಿದಿದೆ!

ಈ ಧ್ಯೇಯದಿಂದ, ಉದ್ದೇಶದಿಂದ, ಕರ್ತವ್ಯಗಳಿಂದ ಗಂಡುಗಲಿಗಳಾಗಿ ನಾವು ಮುನ್ನಡೆಯುತ್ತಿದ್ದೇವೆ. ಟೀಕೆ, ಅಕ್ರಮಣ, ಪರಿಹಾಸ್ಯಗಳ ಶುನಕ ಸಂಗೀತವಿದ್ದರೂ, ನಮ್ಮ ಕುರಿತಾದ ಅಪಪ್ರಚಾರ, ಭಿನ್ನಾಭಿಪ್ರಾಯಗಳ ತಪ್ಪು ಕಲ್ಪನೆಗಳು ಹರಡಿದ್ದರೂ ನಾವು ಕರ್ತವ್ಯ ಪಥದಲ್ಲಿ ಮುಂದೆ ಹೆಜ್ಜೆ ಇಡುತ್ತಿದ್ದೇವೆ. ತಪ್ಪುಕಲ್ಪನೆಗಳು ನಾಶವಾಗಬಲ್ಲುವು; ಆಗುತ್ತದೆ. ಒಂದು ದಿನ ಈ ಎಂ. ಜೆ. ಜಿ. ಕೂಡಾ ನಮ್ಮೊಡನೆ ಕೂಡಿ ನಡೆಯಲು ಕಲಿತುಕೊಳ್ಳಬಹುದು. ಆದರೆ ಪ್ರಗತಿ ವಿರೋಧಿಗಳಾದ ಸಾಮ್ರಾಜ್ಯಶಾಹಿ ಫಾಸಿಸ್ಟರು, ಬಂಡವಲಿಗರು, ಅಧಿಕಾರಿಶಾಹಿ, ಧಾರ್ಮಿಕ ಹುಚ್ಚರು, ಕಲೆಗಾಗಿ ಕಲೆ ಎನ್ನುವ ಕಲಾವಿಹೀನರು ಉಳಿದೇ ಉಳಿದಾರು!

'ಬಂಡವಲಿಗರೂ ಸಾಮ್ರಾಜ್ಯಶಾಹಿಗಳೂ' ಅತ್ಯುತ್ತಮ ಬರೆಹಗಾರರನ್ನು ಲಂಚದಿಂದ ವಶಪಡಿಸಿಕೊಳ್ಳಬಹುದೆಂದು, ತಮ್ಮನ್ನೇ ತಾವು ಮರೆತು ಎಂ. ಜೆ. ಜಿ. ಹೇಳಿಬಿಟ್ಟಿದ್ದಾರೆ. ಈ ಮಾತು ನಿಜ! ಅದಕ್ಕೆ ಎಂ. ಜೆ. ಜಿ. ಯಂತಹ ಪ್ರಗತಿಶೀಲ ಬರೆಹಗಾರರ ವಿರೋಧಿಗಳೇ ತಕ್ಕ ಉದಾಹರಣೆ. ಈ ವಿಚಾರದಲ್ಲಿ 'ಬಹುದು' ಎಂಬ ಪದವೇ ಇಲ್ಲ. ಅವರು ಖಂಡಿತವಾಗಿ ಅತ್ಯುತ್ತಮ ಲೇಖಕರನ್ನು ಬೆಲೆಗೆ ಕೊಳ್ಳುತ್ತಾರೆ. ಆದರೆ ಅನೇಕವೇಳೆ ಅವರು ಶ್ರೇಷ್ಠ ಲೇಖಕರಾಗಿರುವುದಿಲ್ಲ! ಈ ಬಾಡಿಗೆಯ ಜೀತದಾಳುಗಳು ನಮ್ಮನ್ನು ವಿರೋಧಿಸುತ್ತಾರೆ; ವಿರೋಧಿಸಲೇಬೇಕು—ಅವರ ದೊರೆಗಳಿಗಾಗಿ. ಕಾರಣ, ನಮ್ಮಿಬ್ಬರ ಸ್ಥಾನ ಪೂರ್ವಪಶ್ಚಿಮಗಳಂತೆ! ಅವರು ಅಳಿದ ಪ್ರಾಚೀನ ಲೋಕದವರು; ನಾವು ಹೋರಾಡುತ್ತಿರುವ ಜಾಗ್ರತಿಕ ಪ್ರಪಂಚದವರು, ಇನ್ನೂ ಜನಿಸದ ಭಾವೀ ಜಗತ್ತಿನವರು! ಆದರೆ ಪ್ರಗತಿಶೀಲ ಬರೆಹಗಾರರಾದ ನಾವೇ ಅಂತಹ ಸಕಲ ವಿರೋಧಗಳನ್ನೂ ಎದುರಿಸಿ ವಿಜಯಶಾಲಿ

ಗಳಾಗಿ ಬಾಳುತ್ತೇವೆ. ಚಿತ್ರಹಿಂಸೆ, ದಬ್ಬಾಳಿಕೆ, ಶೋಷಣೆಗಳನ್ನೆಲ್ಲ ಎದುರಿಸಿ ಜನತೆ ಬದುಕಿದಂತೆ, ಅವರು ಅಮರರಾದಂತೆ ನಾವೂ ಬದುಕುತ್ತೇವೆ. ನಾವು ಜನತೆಗಾಗಿ ಬರೆವ ಲೇಖಕರು. ಜನತೆ ತಮ್ಮ ಶಕ್ತಿಯನ್ನು ಬೆಳೆಸಿ, ತಾವೇ ಜಗತ್ತಿನ ನಾಯಕರಾದಾಗ ನಾವೂ ನಮ್ಮ ಸ್ಥಾನ ಪಡೆಯಲೇ ಬೇಕು! ನಾವು ನಮ್ಮ ಅದೃಷ್ಟವನ್ನು, ಭವಿಷ್ಯವನ್ನು ಜನತೆಯೊಡನೆ ಹೊಂದಿಸಿ ಕೊಂಡಿದ್ದೇವೆ; ಅವರ ಹೃದಯದ ಅಳಲು, ನೆಳಲು - ಬೆಳಕುಗಳನ್ನು ಕತೆಯಾಗಿ ಹೇಳುತ್ತಿದ್ದೇವೆ; ಕವಿತೆಯಾಗಿ ಹಾಡುತ್ತಿದ್ದೇವೆ!

——::——

ಪ್ರಗತಿಶೀಲ ಲೇಖಕರ ಸಂಘ

ಪ್ರಗತಿಶೀಲ ಬರೆಹಗಾರರ ಚಳವಳಿಯು ವಿಚಾರವಾಗಿ ಗೆಳೆಯರಾದ ಅಬ್ಬಾಸ್ ಆಗಲೇ ತಿಳಿಸಿದ್ದಾರೆ. ಭಾರತದಲ್ಲಿ ಈ ಚಳವಳ ಅಖಿಲ ಭಾರತ ಸಂಸ್ಥೆಯಾಗಿ ಸುಮಾರು ೧೯೩೬ರಲ್ಲಿ ರೂಪುಗೊಂಡು, ಅಂದಿನಿಂದ ಅಂತರ ಗಂಗೆಯಾಗಿ ದುಡಿಯುತ್ತಾ ಬಂದಿದೆ. ಮುಂದೆ ಅದಕ್ಕೊಂದು ಸಂಘಟಿತ ರೂಪ ಬಂದುದೆಂದರೆ ಕಾಂಗ್ರೆಸ್ ಅಧಿಕಾರ ಸ್ವೀಕರಿಸಿದಾಗ; ದೇಶದ ಹಳ್ಳಿ ಹಳ್ಳಿಗಳಲ್ಲೂ ರಾಷ್ಟ್ರೀಯ ಪ್ರವಾಹ ಹರಿದಾಗ. ಮುಂದೆ ಪುನಹ ಕಾನೂನು ಭೀತಿಯಿಂದ ಲೇಖಕರೂ ಈ ದಾರಿಯಲ್ಲಿ ದುಡಿವವರೂ ದೂರದವರವಾಗಿ ನಿರ್ವಿಣ್ಣರಾದರು. ಪ್ರತಿಯೊಂದು ಪ್ರಾಂತ್ಯದಲ್ಲೂ, ದೇಶದ ಪ್ರತಿ ಭಾಷೆಯಲ್ಲೂ ಪ್ರಗತಿ ಸಾಹಿತ್ಯ ಮಾತ್ರ ಎಡೆಬಿಡದೆ ತನ್ನ ಹೋರಾಟ ನಡೆಸುತ್ತಿತ್ತು. ಅಲ್ಲಲ್ಲೇ ಬೆಳೆದು ಬರುತ್ತಿತ್ತು. ಮುಂದೆ ೧೯೪೨ರಲ್ಲಿ, ಇಡೀ ದೇಶದ ದಿಕ್ಕುಗಾಣದಾಗಿ, ಲೇಖಕರೆಲ್ಲ ದಾರಿಗಾಣದೆ ಸುಪ್ತ ಸ್ಥಿತಿಗೆ ಇಳಿದಾಗ, ಭಾರತದ ಲೇಖಕ ಸಮುದಾಯಕ್ಕೆ ದಾರಿ ತೋರಲು ಪ್ರಗತಿಶೀಲ ಬರೆಹಗಾರರೆಲ್ಲ ಒಂದುಗೂಡಿ ಮುಂದೆ ಬಂದರು. ಪರಿಣಾಮವಾಗಿ ನಾಲ್ಕನೇ ಅಖಿಲ ಭಾರತ ಪ್ರಗತಿಶೀಲ ಬರೆಹಗಾರರ ಸಮ್ಮೇಳನ ೧೯೪೩ ಮೇ ೨೨ರಿಂದ ೨೫ರ ವರೆಗೆ ಬೊಂಬಾಯಿಯಲ್ಲಿ ಜರುಗಿ, ಜಗತ್ತಿನ ಪ್ರಾಗತಿಕ ಪರಿಸ್ಥಿತಿಯನ್ನು ವಿವೇಚಿಸಿ, ಭಾರತದ ಲೇಖಕರ ಕರ್ತವ್ಯವನ್ನು ಸಾರಿತು.

ಈ ಸಮ್ಮೇಳನಕ್ಕೆ ದೇಶದ ವಿವಿಧ ಪ್ರಾಂತ್ಯಗಳ, ಭಾಷೆಗಳ ಪ್ರತಿನಿಧಿಗಳು ಬಂದಿದ್ದರು. ತಮ್ಮ ಪ್ರಾಂತ್ಯಗಳ ಸಾಹಿತ್ಯ, ಅದನ್ನು ಬೆಳೆಸುವ ಮಾರ್ಗಗಳ ಕುರಿತು ವಿವೇಚಿಸಿದರು. ಪ್ರೊ॥ ಆರ್. ವಿ. ಜಾಗೀರದಾರರ ಅಧ್ಯಕ್ಷತೆಯಲ್ಲಿ ಕನ್ನಡಿಗರು ವಿಚಾರ ವಿನಿಮಯ ಮಾಡಿಕೊಂಡರು. ಇತರ ಭಾಷಾ ಪ್ರತಿನಿಧಿಗಳ ಮುಂದೆ ಕನ್ನಡ ಪ್ರಗತಿ ಸಾಹಿತ್ಯದ ಚಿತ್ರವನ್ನು ಚಿತ್ರಿಸಿದರು.

ಸಮ್ಮೇಳನವು ಮುಂದಿನ ಅಧಿಕಾರಿ ವರ್ಗವನ್ನು ಆರಿಸಿತು. ಆಯಾ ಪ್ರಾಂತ್ಯದ ಪ್ರಖ್ಯಾತ ಲೇಖಕರು ತಮ್ಮ ಪ್ರಾಂತ್ಯಗಳಲ್ಲಿ ಪ್ರಗತಿಶೀಲ ಬರೆಹಗಳ ಚಳವಳಿ ನಡೆಸಲು ಕಂಕಣ ತೊಟ್ಟರು. ಅಖಿಲ ಭಾರತ ಪ್ರಗತಿಶೀಲ

ಬರೆಹಗಾರರ ಸಂಘದ ಕಾರ್ಯಕಾರಿ ಮಂಡಳಿಯು ಪುನರ್‍ರಚಿಸಲ್ಪಟ್ಟಿತು. ಶ್ರೀಗಳಾದ ವಿ. ಎಂ. ಇನಾಂದಾರ್ ಮತ್ತು ಕೃಷ್ಣ ಕುಮಾರ ಕಲ್ಲೂರರು ಕರ್ನಾಟಕ ಶಾಖೆಯ ಕಾರ್ಯದರ್ಶಿಗಳಾಗಿ ಚುನಾಯಿತರಾದರು. ಅಖಿಲ ಭಾರತ ಸಂಸ್ಥೆಯ ಕಾರ್ಯಕರ್ತರು :—

ಕಾರ್ಯದರ್ಶಿ—ಸಜ್ಜಾದ್ ಜಾಹೀರ್ (ಬೊಂಬಾಯಿ)

ಉಪಕಾರ್ಯದರ್ಶಿಗಳು—ಬಿಶ್ನುಡೇ (ಬಂಗಾಲ), ಕ್ವಾಜಾ ಅಹಮ್ಮದ್ ಅಬ್ಬಾಸ್ (ಬೊಂಬಾಯಿ).

ಸದಸ್ಯರು—ಪ್ರೊ. ಹಿರೇನ್ ಮುಖರ್ಜಿ, ಎಸ್. ಕೆ. ಆಚಾರ್ಯ (ಬಂಗಾಲ) ; ಆರ್. ಎ. ಬಕುಲೇಶ್, ಎಸ್. ಎ. ಡಾಂಗೆ (ಬೊಂಬಾಯಿ) ; ರಾಮ್‍ವಿಲಾಸ್ ಶರ್ಮ, ನರೇಂದ್ರ ಶರ್ಮ (ಹಿಂದಿ) : ಮಖದೂಮ್ ಮೊಹಿಯುದ್ದೀನ್, ಡಾ|| ಅಬ್ದುಲ್ ಆಲೀಮ್ (ಉರ್ದು) ; ಅನಂತ ಕಾಣೇಕರ್ (ಮರಾಟಿ) ; ಭೋಗಿಲಾಲ್ ಗಾಂಧಿ(ಗುಜರಾಥಿ) ; ಸಿ. ಪಿಚ್ಚಯ್ಯ (ತೆಲುಗು); ಪ್ರೊ|| ಜಾಗೀರದಾರ (ಕನ್ನಡ) ; ಶಕ್ತಿದಾಸಂ ಸುಬ್ರಮಣ್ಯಂ (ತಮಿಳು) ; ಕೇರಳೀಯನ್ (ಮಲಯಾಳ) ಮತ್ತು ಡಾ|| ಭಾಗ್‍ಸಿಂಗ್ (ಪಂಜಾಬಿ)

ಘೋಷಣೆ

ಅಖಿಲ ಭಾರತ ಸಮ್ಮೇಳನದ ಸಂದರ್ಭದಲ್ಲಿ ಭಾರತ ಪ್ರಗತಿಶೀಲ ಲೇಖಕರು ತಮ್ಮ ಉದ್ದೇಶಗಳ ಬಗ್ಗೆ ಒಂದು ಘೋಷಣೆಯನ್ನು ಹೊರಡಿಸಿದರು. ಸಕಲ ಲೇಖಕರಿಂದ ಅದು ಅನುಮೋದಿಸಲ್ಪಟ್ಟು ಅಖಿಲ ಭಾರತದ ಪ್ರಗತಿಶೀಲ ಲೇಖಕರ ಘೋಷಣೆಯಾಗಿ ಸ್ವೀಕರಿಸಲ್ಪಟ್ಟಿತು.

“ಇಂದಿನಂತಹ ದುರಂತಮಯ ಸಂದರ್ಭದಲ್ಲಿ, ದೇಶದ ಆತ್ಮವನ್ನು ಉಳಿಸುವುದು ಭಾರತದ ಪ್ರಗತಿಶೀಲ ಬರೆಹಗಾರರ ಅತ್ಯಂತ ಮಹತ್ವದ ಕರ್ತವ್ಯವಾಗಿದೆ. ನಮ್ಮ ಸ್ವಾತಂತ್ರ್ಯದ ದಿನ ಹತ್ತಿರಾಗುವಂತೆ ನಮ್ಮ ನಾಗರಿಕತೆ ಮತ್ತು ಸಂಸ್ಕೃತಿಗಳು ಉಳಿದು ಬೆಳಗಲು ಮಾರ್ಗವಾಗುವಂತೆ ಈ ಭೀಷಣ ಬಿರುಗಾಳಿ, ಬರಸಿಡಿಲುಗಳಿಂದ ನಾವು ಸಂಘಟಿತರಾಗಿ, ಶಕ್ತಿಪೂರ್ಣರಾಗಿ ಸ್ವತಂತ್ರರಾಗಿ ಪಾರಾಗಿ ಬರುವಂತೆ ಮಾಡಲು ಬೇಕಾದ ಮನೋಧೈರ್ಯ ಸ್ಥೈರ್ಯಗಳನ್ನು ಜನತೆಯಲ್ಲಿ ಹುಟ್ಟಿಸಿ ಬೆಳೆಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ.

ಭಾರತದ ಸ್ವಾತಂತ್ರ್ಯಕ್ಕಾಗಿ, ಸಮಾನವಾದ ಮತ್ತು ನ್ಯಾಯವಾದ ಆರ್ಥಿಕ ಸಾಮಾಜಿಕ ನೀತಿಗಾಗಿ ಪ್ರಗತಿಶೀಲ ಲೇಖಕರು ಸದಾ ಹೋರಾಡಿದ್ದಾರೆ. ಎಲ್ಲಾ ತೆರನ ಸಾಮಾಜಿಕ ಕಟ್ಟುಗಳನ್ನು, ದಾಸ್ಯ-ದಾಸೋಹಂ-ಮನೋಭಾವಗಳನ್ನು ಅವರು ಎದುರಿಸಿದ್ದಾರೆ. ಜಗತ್ತಿನ ಸ್ವಾತಂತ್ರ್ಯ ಭಾರತ ಸ್ವಾತಂತ್ರ್ಯವಿಲ್ಲದೆ ಸಾಧ್ಯವಿಲ್ಲ ಎಂದವರು ತಿಳಿಸಿದ್ದಾರೆ. ಎಲ್ಲಾ ರೀತಿಯಲ್ಲಿಯೂ ಸಾಮ್ರಾಜ್ಯಶಾಹಿ ದಬ್ಬಾಳಿಕೆಗಳಿಂದ ನಮ್ಮ ಜನತೆಗೆ ಸ್ವತಂತ್ರರಾಗುವ ಅಧಿಕಾರವಿದೆ ಎಂದು ಸಾರುವದರೊಂದಿಗೆ, ಫಾಸಿಸಂನ ಅಖಂಡ ವಿರೋಧಿಗಳಾಗಿ ಅವರು ನಿಂತಿದ್ದಾರೆ. ಕಾರಣ ಅತ್ಯಂತ ಭೀಷಣ ರೀತಿಯ ಸಾಮ್ರಾಜ್ಯಶಾಹಿ ರೂಪವೇ ಫಾಸಿಸಂ!

ನಮ್ಮ ಅನುಭವದ ಹಳೆಯ ಜಗತ್ತು ನಮ್ಮ ಸುತ್ತಲೂ ಕುಸಿದು ಬೀಳುತ್ತಿರುವಾಗ, ನಾವಿದುವರೆಗೆ ಅಪ್ಪಿಕೊಂಡಿದ್ದ ಆತ್ಮೀಯ ನೀತಿ ಹೊಸದಾಗಬೇಕಾಗಿ ಬಂದಿರುವಾಗ, ಬರೆಹಗಾರ ತನ್ನ ಉದ್ಯಮದ ನೀತಿಗೆ ಅನುಗುಣವಾಗಿ ಆಚರಿಸುವದಾದರೆ, ಆತನೂ ಬದಲಾಗಬೇಕು; ಜನತೆಯೊಡನೆ ಜೆರೆತು ನಿಲ್ಲಬೇಕು. ಸಾಹಿತ್ಯರಚನೆ ಸನಾತನವಾದುದು, ಅನೂಚೀನವಾಗಿ ನಡೆದು ಬಂದ ಪದ್ಧತಿ ಎಂಬುದನ್ನು ಅಲ್ಲಗಳೆದ ಮಾತಲ್ಲ ಇದು. ಹೊಸ ಸಂಸ್ಕೃತಿಯನ್ನು ಅಪ್ಪಣೆ-ಇಚ್ಛೆಗಳಿಂದ ಸೃಜಿಸಬಹುದು ಎಂಬ ಅಭಿಪ್ರಾಯವೂ ಅಲ್ಲ. ಆದರೆ ಸಮಾಜವು ಆಂದೋಲನಕ್ಕೆ ಸಿಕ್ಕಾಗ, ಬರೆಹಗಾರ ತನ್ನ ಹಿತ ದೃಷ್ಟಿಯಿಂದಲೇ ತಾನು ಅಡಗಿಕೊಂಡ ಸ್ವಪ್ನಸದನದಿಂದ ಹೊರಗಿಳಿಯಬೇಕು. ನಾವು ಸಂಸ್ಕೃತಿಯ ಸರ್ವಾಧಿಕಾರಿಗಳು ಎಂದು ಯಾರಾದರೂ ತಿಳಿದವರಿದ್ದರೆ ಅಂತಹ ಮೂಢರು ಅಕೃತ್ಯದ ಗದಾಪ್ರಹಾರಕ್ಕೆ ಮಣಿದು ಮಣ್ಣುಗೂಡದಿರಲಾರರು. ಇಂದು ಫಾಸಿಸಂನ ಅಂಕೆಗೆ ಒಳಗಾದ ರಾಷ್ಟ್ರಗಳಲ್ಲಿ ಆಗಿರುವ ಪರಿಸ್ಥಿತಿ ಇದೇ. ಅಲ್ಲಿ ತಮ್ಮನ್ನೇ ತಾವು ನಂಬಿ ನಿಂತ ಬರೆಹಗಾರರ ಬಣ್ಣ ಪೂರ್ಣ ಬಯಲಾಗಿದೆ ಇಂದು. ಅದೇ ರಷ್ಯದ ಉದಾಹರಣೆಯು ಕ್ರಾಂತಿ, ಹೇಗೆ ಅಭಿಮಾನ, ಸಂಸ್ಕೃತಿಗಳು ಎಲ್ಲರ ಸಮಾನ ಅನುಭವದ ವಸ್ತುವಾಗುವಂತೆ ಮಾಡಬಲ್ಲದೆಂಬುದನ್ನು ತೋರಿಸಿಕೊಟ್ಟಿದೆ.

ಇಂದು ನಮ್ಮ ದೇಶ ಅದರ ಇತಿಹಾಸದ ಅತ್ಯಂತ ಮಹತ್ವದ ದುರಂತಕ್ಕೆ ಒಳಗಾಗಿದೆ. ಒಂದೆಡೆಯಿಂದ ಅಮಾನುಷೀಯವೂ, ಅಸಮ

ರ್ಥವೂ ಆದ ಪರಕೀಯ ಸಾಮ್ರಾಜ್ಯಶಾಹಿ ಅಧಿಕಾರ ಬಿಟ್ಟುಕೊಡಲು ನಿರಾಕರಿಸುತ್ತಿದೆ. ಇನ್ನೊಂದೆಡೆಯಿಂದ ರಾಕ್ಷಸೀಯ ಜಪಾನೀ ಫಾಸಿಸಂ ನಮ್ಮ ಪೂರ್ವಕ್ಕೆ ಕೈಚಾಚುತ್ತಿದೆ. ಸಹಸ್ರಾರು ಮಂದಿ ಭಾರತೀಯ ದೇಶಪ್ರೇಮಿಗಳು ಸಾಮ್ರಾಜ್ಯಸಾಹಿ ಸೆರೆಮನೆಗಳಲ್ಲಿ ಕೊಳೆಯುತ್ತಿದ್ದಾರೆ; ಫಾಸಿಸ್ಟ್ ಪಿಶಾಚಿಗಳು ಅಸ್ಸಾಂ ಬಂಗಾಳಗಳ ಮೇಲೆ ಬಾಂಬಿನ ಮಳೆ ಸುರಿಸುತ್ತಿವೆ. ಆಹಾರ, ಬಟ್ಟೆಗಳ ಬೆಲೆ ಅಧಿಕವಾಗುತ್ತಿದೆ. ನಮ್ಮ ಸಂಸ್ಕೃತಿಯ ಸಾಮಾನ್ಯಜೀವನಕ್ಕೆ ಬಾಧಕದ ಭೀತಿಯನ್ನೂ ಕಾಗದ ಮತ್ತು ಪುಸ್ತಕ, ಪತ್ರಿಕೆಗಳ ಮುದ್ರಣಕ್ಕೆ ಬೇಕಾದ ಇತರ ಸಾಧನಗಳ ತುಟ್ಟಿಯನ್ನೂ ಉಂಟುಮಾಡಿದೆ. ಉತ್ಪತ್ತಿ ಅವ್ಯವಸ್ಥಿತವಾಗಿದೆ. ನಮ್ಮ ಸಮಾಜದ ಸಂಪೂರ್ಣ ಆರ್ಥಿಕ ಕಟ್ಟಡವೇ ಉರುಳುವ ಪರಿಸ್ಥಿತಿಗಿಳಿದಿದೆ.

ರವೀಂದ್ರನಾಥ್ ಟಾಗೋರ್ ಮತ್ತು ಇಕ್ಬಾಲ್‌ರಂತಹ ಮಹನೀಯರ ಸ್ವಾತಂತ್ರ ಪ್ರೇಮ, ಮಾನವ ಸಮಾಜದಲ್ಲಿನ ವಿಶ್ವಾಸಗಳನ್ನು ಹೊಂದಿದ ಸಂತತಿಯವರಾದ ಭಾರತದ ಪ್ರಗತಿಶೀಲ ಬರೆಹಗಾರರಾದ ನಾವು ಇಂದು ನಮ್ಮ ಹಾಗೂ ಜಗತ್ತಿನ ಸಕಲ ಜನತೆಯ ಸಾಮ್ರಾಜ್ಯಶಾಹಿ ಮತ್ತು ಫಾಸಿಸಂಗಳ ವಿರುದ್ಧವಾದ ಹೋರಾಟದಲ್ಲಿ ಬೆಂಬಲಿಗರಾಗಿ ನಿಲ್ಲುತ್ತೇವೆ. ಪರಾಕ್ರಮಿಗಳಾದ ತಮ್ಮ ಜನತೆಯೊಂದಿಗೆ ತಾವೂ ದುಃಖ, ದುರಂತ, ದುಸ್ಥಿತಿಗಳನ್ನು ಫಾಸಿಸ್ಟ್ ವಿರುದ್ಧವಾದ ಹೋರಾಟದಲ್ಲಿ ಅನುಭವಿಸಿ ನಿಂತು, ಇಂದಿನ ಅಂಧಕಾರದಲ್ಲೂ ಕಲೆ ಮತ್ತು ಸಾಹಿತ್ಯಗಳ ಕೈದೀವಿಗೆಗಳನ್ನೆತ್ತಿ ಹಿಡಿದ ಚೀನೀ ಮತ್ತು ರಷ್ಯ ಬರೆಹಗಾರರನ್ನು ನಾವು ಶ್ಲಾಘಿಸುತ್ತೇವೆ. ನಾವು ಎಂದಿಗೂ ಹಿಂದಾಗಲಾರೆವು. ಅವ್ಯಾಹತವಾಗಿ ನಾವೂ ಐಕ್ಯತೆ ಮತ್ತು ಸ್ವಾತಂತ್ರ್ಯದ ಸಂದೇಶವನ್ನು ನಮ್ಮ ಜನತೆಗೆ ಸಾರಿ, ತಮ್ಮ ಅಖಂಡ ಶಕ್ತಿಯಲ್ಲಿ ಅವರಿಗೆ ವಿಶ್ವಾಸ ಹುಟ್ಟಿಸುವೆವು. ಅದಕ್ಕಿಂತ ಪ್ರಗತಿಶೀಲತೆಗೆ ಬೇರೆ ಅರ್ಥವಿಲ್ಲ. ಮಾನವ ಸಮಾಜ ಅದರ ಸಂಪೂರ್ಣ ಭವಿಷ್ಯ ನಾಶದ ಭೀತಿಗೆ ಒಳಗಾಗಿದೆ; ಫಾಸಿಸ್ಟ್ ಪ್ರತಿಗಾಮಿಶಕ್ತಿ ಜಗತ್ತಿನ ಒಳ್ಳೆಯದನ್ನೆಲ್ಲ ನಾಶಮಾಡಲು ತನ್ನ ಕೊನೆಯ ನಿರಾಶಾಮಯ ಹೋರಾಟವನ್ನು ಆರಂಭಿಸಿದೆ. ಜೀವನದಲ್ಲಿ ನೀತಿಯುತವಾದುದು, ಸುಂದರವಾದುದು ಇದರ ಅಸ್ತ್ರಕ್ಕೆ ಒಳಗಾಗುವಂತಿವೆ. ಇಂತಹ ಸಂದರ್ಭದಲ್ಲಿ ಪ್ರತಿಗಾಮಿ ಸಾಮ್ರಾಜ್ಯಶಾಹಿ ನಮ್ಮ

ಸ್ವಾತಂತ್ರ್ಯದ ಹಾದಿಯಲ್ಲಿ, ಐಕ್ಯತೆಯ ಮಾರ್ಗದಲ್ಲಿ ಅಡ್ಡನಿಂತಾಗ ಪ್ರಗತಿಶೀಲತೆ ನಮ್ಮ ಜನತೆಗೆ ಆಶೆ ಸ್ವಾತಂತ್ರ್ಯಗಳ ಸಂದೇಶವನ್ನು ಸಾರಿ ಸಂಘಟಿತವಾದ ಯತ್ನದ ಮುಂದೆ ಸ್ವಾತಂತ್ರ್ಯ ಅನಿವಾರ್ಯವೆಂದು ತೋರಿಸಿಕೊಡಬೇಕಾಗಿದೆ.

ಈ ಸಾಮಾನ್ಯ ಉದ್ದೇಶಗಳನ್ನು ಇಟ್ಟುಕೊಂಡು ಪ್ರಗತಿಶೀಲ ಬರೆಹಗಾರರ ಸಂಘವು ಈ ಕೆಳಗಣ ಧ್ಯೇಯಸಾಧನೆಗಾಗಿ ಶ್ರಮಿಸುವುದು.

೧. ಸಾಮ್ರಾಜ್ಯಶಾಹಿ ಸಂಕಲೆಗಳಿಂಧ ಸ್ವತಂತ್ರರಾಗಲು ಐಕ್ಯತೆಯನ್ನು ಸಾಧಿಸುವಂತೆ, ಜಪಾನೀ ಫಾಸಿಸ್ಟರ ಆಕ್ರಮಣದಿಂದ ಭಾರತವನ್ನು ರಕ್ಷಿಸುವಂತೆ ಜನತೆಯನ್ನು ಹುರಿದುಂಬಿಸಿ ಮುನ್ನಡೆಸಲು ಸಾಧಕವಾದ ನಾಟಕ, ಕತೆ, ಕವನ, ಕಥನ ಕವನ, ಲಾವಣಿ ಮೊದಲಾದವುಗಳನ್ನು ಬರೆಯುವುದು.

೨. ಪರರಾಷ್ಟ್ರಗಳ ಹಾಗೂ ಮುಖ್ಯವಾಗಿ ಇತ್ತೀಚಿಗಿನ ಚೀನಾ ಮತ್ತು ರಷ್ಯಗಳ ಸಾಹಿತ್ಯವನ್ನು ಅನುವಾದಿಸುವುದು ಮತ್ತು ಪ್ರಕಟಿಸುವುದು.

೩. ದೇಶದ ವಿವಿಧ ಭಾಷೆಗಳಲ್ಲಿ ಪ್ರಕಟವಾದ ಗಣನೀಯ ಸಾಹಿತ್ಯಗಳ ಸಂಕಲನವನ್ನು ಆಂಗ್ಲಭಾಷೆಯಲ್ಲಿ ಆಗಾಗ ಪ್ರಕಟಿಸುವುದು.

೪. ಭಾರತದ ವಿವಿಧ ಭಾಷೆಗಳಲ್ಲಿ ಪ್ರಗತಿಶೀಲ ಸಾಹಿತ್ಯದ ಪತ್ರಿಕೆಗಳನ್ನು ಹಾಗೂ ಸಂಕಲನಗಳನ್ನು ಪ್ರಕಟಿಸುವುದು.

೫. ಕೂಲಿಕಾರರ ಮತ್ತು ರೈತರ ನಡುವೆ ಲಾವಣಿ, ಹಾಡುಗಾರಿಕೆ, ಯಕ್ಷಗಾನ, ಕವಿತಾಗೋಷ್ಠಿ ಮುಂತಾದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕೂಟಗಳನ್ನು ನಡೆಸಿ, ಜಾನಪದ ಸಾಹಿತ್ಯ ಮತ್ತು ಕಲೆಗಳೊಡನೆ ಪ್ರಗತಿಶೀಲ ಬರೆಹಗಾರರ ಸಂಘವನ್ನು ಹೊಂದಿಸುವುದು.

೬. ಭಾರತದ ಜನತಾ ರಂಗಭೂಮಿಯವರೊಡನೆ ನಾಟಕ ಬರೆಯುವದರಲ್ಲೂ, ಅಭಿನಯಿಸುವುದರಲ್ಲೂ ಸಹಕರಿಸುವುದು.

ನಿರ್ಣಯಗಳು

ಮುಂದಾಳುಗಳ ಬಿಡುಗಡೆ

ನಾಲ್ಕನೇ ಸಮ್ಮೇಳನ ಮಹತ್ವದ ವಿಚಾರಗಳನ್ನು ಕುರಿತು ಹಲವು ನಿರ್ಣಯಗಳನ್ನು ಮಾಡಿದೆ.

'ಸರಕಾರದ ಪ್ರಗತಿಗಾಮಿ ನೀತಿ ಭಾರತದ ದುರಂತಕ್ಕೆ ಕಾರಣ' ಎಂಬುದಾಗಿ ಸಾರಿ, ಕಾಂಗ್ರೆಸ್ ನಾಯಕರ ಬಿಡುಗಡೆಗಾಗಿ ಹೋರಾಡುವುದು ಪ್ರಗತಿಶೀಲ ಲೇಖಕರ ಕರ್ತವ್ಯವಾಗಿದೆ. ಈ ಬಿಡುಗಡೆಯಿಲ್ಲದೆ ಐಕ್ಯತೆಯೂ, ರಾಷ್ಟ್ರೀಯ ಸರಕಾರವೂ ಸಾಧ್ಯವಿಲ್ಲ. ಆದ್ದರಿಂದ ಸಕಲ ಜನತೆಯನ್ನೂ ಒಂದುಗೂಡಿಸಿ, ಜಾಗೃತಗೊಳಿಸಿ, ರಾಷ್ಟ್ರನಾಯಕರ ಬಿಡುಗಡೆಗಾಗಿ ಪ್ರತಿಯೊಂದು ಪಕ್ಷವೂ ಹೋರಾಡಬೇಕೆಂದು ಸೂಚಿಸಿ, ಪ್ರಗತಿಶೀಲ ಬರೆಹಗಾರರು ಈ ಹೋರಾಟ ತಮ್ಮ ಪ್ರಥಮ ಕರ್ತವ್ಯವೆಂದು ತಿಳಿದು ದುಡಿಯಬೇಕಾಗಿ ಕೇಳಿಕೊಳ್ಳುವ ನಿರ್ಣಯವಾಯಿತು.

ಸೆರೆಯಲ್ಲಿನ ಲೇಖಕರಿಗೆ

ಸರಕಾರದ ವಿವಿಧ ರೀತಿಯ ಅಸಂಬದ್ಧ ಅಪಾದನೆಗಳಿಗೆ ಹಾಗೂ ಭಾರತರಕ್ಷಣ ಶಾಸನದಂತ ಸಾಮ್ರಾಜ್ಯಶಾಹಿ ಸರಕಾರದ ಕರಾಳ ಶಾಸನಕ್ಕೆ ಬಲಿಯಾಗಿ ಸೆರೆಯಲ್ಲಿ ನರಳುತ್ತಿರುವ ಪ್ರಗತಿಶೀಲ ಬರೆಹಗಾರರಿಗೆ ತಮ್ಮ ಹಾರ್ದಿಕ ಸಂದೇಶವನ್ನು ಕಳುಹಿಸಿ, ಅಧಿಕಾರಿಶಾಹಿಯ ನೀತಿಯನ್ನು ಖಂಡಿಸಿ, ಸಕಲ ಪ್ರಗತಿಶೀಲ ಲೇಖಕರ ಬಿಡುಗಡೆಯನ್ನು ನಿರ್ಣಯವೊಂದರ ಮೂಲಕ ಸಮ್ಮೇಳನ ಕೇಳಿತು.

ರಷ್ಯದ ಬರೆಹಗಾರರಿಗೆ

'ನಿಮ್ಮ ಜನತೆಯ ಮಹತ್ತಾದ ಕ್ರಿಯಾತ್ಮಕ ಶಕ್ತಿ ಕಳೆದ ೨೫ ವರ್ಷಗಳಲ್ಲಿ ಸಾಧಿಸಿದ ಸಾಹಸ ನಮಗೆ ಆನಂದವನ್ನುಂಟುಮಾಡಿದೆ. ಭವಿಷ್ಯದ ಸಮಾಜಕ್ಕೆ ಆಶಾದಾಯಕವಿದೆ. ನೀವು ಸಾಂಸ್ಕೃತಿಕ ರಂಗದಲ್ಲಿ, ಸಾಹಿತ್ಯ ವಿಜ್ಞಾನ ಕಲೆಗಳಲ್ಲಿ ಬಂಡವಲ ರಾಷ್ಟ್ರಗಳು ತಡೆಯಿಲ್ಲದ ದುರಂತಗಳಿಗೆ ಬಲಿಯಾಗುತ್ತಿರುವ ಸಂದರ್ಭದಲ್ಲೂ ಪ್ರಗತಿ ಸಾಧಿಸಿದುದನ್ನು ಕಂಡು ನಮ್ಮ ಬುದ್ಧಿಜೀವಿಗಳು ಆನಂದಭರಿತರಾಗಿದ್ದಾರೆ.'

'ನಾಜಿಗಳು ನಿಮ್ಮ ದೇಶದ ಆಕ್ರಮಣ ನಡೆಸಿದಾಗ ನಮ್ಮ ಜನತೆ ಏಕಕಂಠದಿಂದ ನಿಮ್ಮಲ್ಲಿ ಸಹಕಾರ ಸಹಾನುಭೂತಿಗಳನ್ನು ವ್ಯಕ್ತಪಡಿಸಿದ್ದಾರೆ. ನಿಮ್ಮ ಜನತೆಯ ಶೌರ್ಯ ಸಾಹಸಗಳನ್ನು ಚಿತ್ರಿಸಿದ ನಿಮ್ಮ ಕತೆಗಳು ನಮ್ಮನ್ನು ಉತ್ಸಾಹಗೊಳಿಸಿವೆ.'

ದೆಹಲಿಯಲ್ಲಿ ಜರಗಿದ 'ನಮ್ಮ ಹಿಂದಿನ ಸಮ್ಮೇಳನದಲ್ಲಿ ಫಾಸಿಸಂನ ವಿರುದ್ಧ ನಮ್ಮ ಜನತೆಯನ್ನು ಸಂಘಟಿಸುವ ಪಣತೊಟ್ಟಿದ್ದೇವೆ. ಭಾರತದಲ್ಲಿನ ನಮಗೂ ಈ ಫಾಸಿಸ್ಟ್ ದಾಸ್ಯದ ಭೀತಿ ಖಚಿತವಾಗಿದೆ. ಟಾಲ್ಸ್ಟಾಯಿಯ ಮನೆ, ಪುಷ್ಕಿನ್, ಟಿಹಾಯ್‌ಕೊವ್‌ಸ್ಕಿಯವರ ಪ್ರದರ್ಶನಾಲಯಗಳನ್ನು ನಾಶಪಡಿಸಿದ ಫಾಸಿಸ್ಟರು ಸಂಸ್ಕೃತಿಯ ಶತ್ರುಗಳು, ಅವರ ವಿಜಯದಿಂದ ನಾಗರಿಕತೆಯ ನಾಶ ನಿಶ್ಚಯ ಎಂಬುದು ಖಚಿತವಾಗಿದೆ."

'ನಾವೂ ಫಾಸಿಸ್ಟ್ ವಿರುದ್ಧ ಹೋರಾಟದಲ್ಲಿ ನಮ್ಮ ಸ್ಥಾನ ಪಡೆಯುತ್ತೇವೆ. ಸಾಮ್ರಾಜ್ಯಶಾಹಿಯ ಅಡ್ಡಿ ಆತಂಕಗಳನ್ನು ಎದುರಿಸಿ ಮುನ್ನಡೆಯುತ್ತೇವೆ. ನಮ್ಮ ಪ್ರತಿಯೊಂದು ಬಿಂದು ಶಕ್ತಿಯನ್ನು ನಮ್ಮ ಜನತೆಯನ್ನು ಜಾಗೃತಗೊಳಿಸಿ, ಸಂಘಟಿಸಿ, ಸ್ವಾತಂತ್ರ್ಯಜ್ಯೋತಿ ಬೆಳಗುವವರಲ್ಲಿ ವಿನಿಯೋಗಿಸುತ್ತೇವೆ" ರಷ್ಯದ ಲೇಖಕರನ್ನು ವಂದಿಸುವ ನಿರ್ಣಯವಾಡಲಾಯಿತು.

ಚೀನೀ ಲೇಖಕರಿಗೆ

"ನಮ್ಮ ಎರಡು ಜನಾಂಗಗಳ ಸ್ನೇಹ ಶತಮಾನಗಳಿಂದ ನಡೆದು ಬಂದಿದೆ. ಸನ್‌ಯಾತ್‌ಸೇನ್ ಬೆಳಗಿದ ಸ್ವಾತಂತ್ರ್ಯ ಜ್ಯೋತಿಯನ್ನು ಉಳಿಸಿ ನಡೆಸುವ ನಿಮ್ಮ ಅಪಾರ ನಿರ್ಧಾರವನ್ನು ಶ್ಲಾಘಿಸುತ್ತೇವೆ. ಜಗತ್ತನ್ನೇ ದಾಸ್ಯತೆಯಲ್ಲಿರಿಸಲೆಳಸಿದ ಶಕ್ತಿಯನ್ನೆದುರಿಸಿ ನಿಂತ ಮೊದಲಿಗರು ನೀವು. ಚೀನೀ ಬರೆಹಗಾರರಾದ ನಿಮಗೆ ಏಷ್ಯದ ಜನ ಇಮ್ಮಡಿ ಋಣಿಗಳಾಗಿದ್ದೇವೆ. ನೀವು ನಮ್ಮಲ್ಲಿ ಸ್ವಾತಂತ್ರ್ಯದ ಕೆಚ್ಚು ಹುಟ್ಟಿಸಿದಿರಿ. ಭೀಷಣವಾದ ಮಹಾಶಕ್ತಿಯನ್ನೆದುರಿಸಿ ಬರಿಗೈಯಲ್ಲಿ ಹೋರಾಡುವ ಧೈರ್ಯತಂದುಕೊಟ್ಟಿರಿ. ನಿಮ್ಮ ಜನತೆಯ ಅಮೋಘವಾದ ಐಕ್ಯತೆಯ ಪರಿಣಾಮವಾಗಿ ಉಂಟಾದ ದೃಢ ನಿಶ್ಚಯ ಫಾಸಿಸ್ಟರನ್ನು ದೂರವಿರಿಸಲು ಕಾರಣವಾಯಿತು. ಫಾಸಿಸ್ಟ್ ಪೆಡಂಭೂತಗಳ ವಿರುದ್ಧವಾದ ಹೋರಾಟದಲ್ಲಿ ನಿಮ್ಮ ಮತ್ತು ಸಕಲ ಸ್ವಾತಂತ್ರ್ಯ ಪ್ರೇಮಿ ಜನಾಂಗಗಳೊಡನೆ ಸೇರಿ ನಿಲ್ಲುವ ಮಹದಾಶೆ ನಮಗಿದೆ. ಆದರೆ ಪರಕೀಯ ಅಧಿಕಾರಿಶಾಹಿ ಈ ಕಾರ್ಯಮಾಡಲು ನಮ್ಮ ಸಂಕಲೆ ಬಿಡಿಸುವುದಿಲ್ಲ. ನಮ್ಮ ನಾಯಕರನ್ನಿದು ಸೆರೆಯಲ್ಲಿರಿಸಿದೆ, ಜನತೆಯನ್ನು ಸದೆಬಡಿದಿದೆ, ನಮ್ಮ ಸ್ವಾತಂತ್ರ್ಯ ಪ್ರೇಮದ ಮೇಲೆ ಪೈಶಾಚಿಕ ಆಕ್ರಮಣ ನಡೆಸಿದೆ.

ನಮ್ಮ ಕಾರ್ಯ ಮಹತ್ವದ್ದಾಗಿದೆ. ಆದರೂ ನಮ್ಮ ಸರ್ವಶಕ್ತಿಯನ್ನು ಪ್ರಯೋಗಿಸಿ, ಜನತೆಯನ್ನು ಜಾಗೃತಗೊಳಿಸಿ ಹೋರಾಟಕ್ಕೆ ಅಣಿಮಾಡಿ, ನಿಮ್ಮ ಭುಜಕ್ಕೆ ಭುಜಕೊಟ್ಟು ನಿಲ್ಲುವಂತೆ ಮಾಡುವ, ಜಗತ್ತಿನ ಪ್ರಗತಿಶೀಲ ಶಕ್ತಿಯೊಡನೆ ನಮ್ಮ ದೇಶವೂ ಕೂಡಿ ಯುಕ್ತಸ್ಥಾನ ಸಂಪಾದಿಸುವಂತೆ ಮಾಡುವ ಭರವಸೆ ಕೊಡುತ್ತೇವೆ.'

ನಾಗರಿಕ ಹಕ್ಕು

ರಕ್ಷಣ ಶಾಸನದ ಮೂಲಕ ಜನತೆಯ ನಾಗರಿಕ ಹಕ್ಕು ಬಾಧ್ಯತೆಗಳನ್ನು ಕಟ್ಟಿ ತಡೆವ ವಿಧಿ, ನಿಯಮಗಳನ್ನು ಹೊರಿಸಿ, ಲೇಖಕರ ಅಭಿಮತಗಳ ಗಂಟಲು ಹಿಡಿದು, ಪತ್ರಿಕೆಗಳ ಮೂಗು ಹಿಡಿದು ನ್ಯಾಯವಾದ ಟೀಕೆಗೂ ಆಸ್ಪದವೀಯದ ಸರಕಾರದ ನೀತಿಯನ್ನು ಸಮ್ಮೇಳನ ಖಂಡಿಸುತ್ತದೆ. ಪ್ರಗತಿಶೀಲ ಬರೆಹಗಾರರ ಲೇಖನಗಳನ್ನು ಪ್ರಕಟಿಸಿದ ಪತ್ರಿಕೆಗಳ ಸಂಪಾದಕರ, ಪ್ರಕಾಶಕರ ಮೇಲೆ ಸರಕಾರ ನಡೆಸುತ್ತಿರುವ ದಬ್ಬಾಳಿಕೆಯನ್ನು ಖಂಡಿಸುತ್ತೇವೆ.

ಕಾಗದದ ತುಟ್ಟಿ

ಕಾಗದದ ತುಟ್ಟಿ ವಿದ್ಯಾಕೇಂದ್ರಗಳನ್ನು ಹಾಗೂ ನಮ್ಮ ಸಾಂಸ್ಕೃತಿಕ ಜೀವನವನ್ನು ಬಂಧಿಸಿದೆ. ಇದಕ್ಕೆ ಪ್ರಮುಖ ಕಾರಣ ಸರಕಾರದ ನೀತಿ. ಕಾಗದದ ಆಮದು ನಿಂತಿದೆ. ದೇಶದ ಕಾಗದದ ಕೈಗಾರಿಕೆಗಳಿಗೆ ಸೌಲತ್ತು ಸಿಗುತ್ತಿಲ್ಲ. ದೇಶದ ಕಾಗದದಲ್ಲಿ ಹೆಚ್ಚಿನ ಅಂಶ ಸರಕಾರದ ಅಂಕೆಗೆ ಸೇರಿದೆ. ಸರಕಾರದ ಈ ನೀತಿಯ ವಿರುದ್ಧವಾಗಿ ದೇಶದ ಸಕಲ ಜನತೆ, ಪ್ರಗತಿಶೀಲ ಲೇಖಕರು ಒತ್ತಾಯ ತಂದು ದೇಶೀಯ ಕಾಗದ ಕೈಗಾರಿಕೆಗೆ ಪ್ರೋತ್ಸಾಹ ಸಿಗುವಂತೆ ಮಾಡಬೇಕು.

ಪ್ರಗತಿಶೀಲ ಲೇಖಕರು ಮತ್ತು ಪ್ರಕಾಶಕರು

ದೇಶದ ಲೇಖಕರ ಮುಖ್ಯವಾಗಿ ಪ್ರಗತಿಶೀಲ ಬರೆಹಗಾರರ ಆರ್ಥಿಕ ಸ್ಥಿತಿ ಚಿಂತಾಜನಕವಾಗಿದೆ. ಇದಕ್ಕೆ ಇಂದಿನ ಸಮಾಜ ಪದ್ಧತಿಯೇ ಕಾರಣವಾದರೂ, ಪ್ರಕಾಶಕರು ಮತ್ತು ಪತ್ರಿಕಾ ಒಡೆಯರೂ ಕಾರಣರಾಗಿದ್ದಾರೆ. ಪರದೇಶೀ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳೂ, ಚಿತ್ರಗಳೂ

ನಮ್ಮ ಪತ್ರಿಕೆಗಳಲ್ಲಿ ಪುನರ್ಮುದ್ರಿಸಲ್ಪಡುತ್ತಿವೆ. ಈ ನೀತಿಯಿಂದ ಭಾರತದ ಲೇಖಕರ ನ್ಯಾಯವಾದ ಉತ್ಪತ್ತಿಗೆ ಕೊಡಲಿ ಬಿದ್ದಿದೆ.

ಧರ್ಮಾರ್ಥ ಬರೆದ ಹಾಗೂ ಅಪಕ್ವ ಲೇಖಕರಿಗೆ ಪ್ರೋತ್ಸಾಹ ಅಧಿಕವಾಗುತ್ತಿದೆ. ಕಾರಣ ಅವರಿಗೆ ಪ್ರತಿಫಲ ಕೊಡಬೇಕಾಗಿಲ್ಲ. ಅಧಿಕ ಲಾಭ ಸಂಪಾದಿಸುವ ಪತ್ರಿಕೆಗಳೂ, ಲೇಖಕರಿಗೆ ಸರಿಯಾದ ಪ್ರತಿಫಲ ಕೊಡುತ್ತಿಲ್ಲ; ಕೊಟ್ಟರೂ ಅದು ಅತ್ಯಲ್ಪ. ಪ್ರಕಾಶಕರು ಪಠ್ಯ ಪುಸ್ತಕಗಳ ಪ್ರಕಾಶನಕ್ಕಿಂತ ಮುನ್ನಡೆಯುತ್ತಿಲ್ಲ. ಸಿಕ್ಕ ಸಿಕ್ಕವರ ಬರೆಹಗಳನ್ನು ಕತ್ತರಿಸಿ ಕೂಡಿಸುವ ನೀತಿ ಇವರದಾಗಿದೆ. ಪ್ರಗತಿಶೀಲ ಸಾಹಿತ್ಯದ ಗೋಣು ಮುರಿದು, ಪ್ರತಿಗಾಮಿಗಳಾದ ಹಳೆಯ ಲೇಖಕರ ಕೃತಿಗಳನ್ನು ಪ್ರಕಟಿಸುವ ನೀತಿ ಪ್ರಕಾಶಕರದಾಗಿದೆ. ಲಾಭಗಾರಿಕೆ ಸಮಾಜದ ನೀತಿಯಾಗಿರುವ ತನಕ ಜನತೆಗೆ ಯೋಗ್ಯವಾದ, ಹಿತವಾದ ಸಾಹಿತ್ಯ ಪ್ರಕಟವಾಗದು. ತಮ್ಮ ಹೆಸರನ್ನು ಅಭಿಪ್ರಾಯಗಳನ್ನು ಪ್ರಕಾಶಕರು ವಿಕ್ರಯಕ್ಕೆ ಉಪಯೋಗಿಸದಂತೆ ಪ್ರಗತಿಶೀಲ ಬರೆಹಗಾರರು ಜಾಗ್ರತರಾಗಬೇಕು. ಲಾಭಗಾರಿಕೆಗಾಗಿರುವ ಪ್ರತಿಗಾಮಿ ಪತ್ರಿಕೆಗಳಿಗೆ ಬರೆಯಲು ಅವರು ನಿರಾಕರಿಸಬೇಕು.

ಲೇಖನಗಳ ವ್ಯಭಿಚಾರ ನಡೆಯದಂತೆ, ಪ್ರಗತಿಶೀಲ ಬರೆಹದ ಪ್ರಚಾರ ಅಧಿಕವಾಗುವಂತೆ, ಲೇಖಕರ ಆರ್ಥಿಕ ಸ್ಥಿತಿಯನ್ನು ಸಕಲ ರೀತಿಯಿಂದಲೂ ಉತ್ತಮಗೊಳಿಸಲು ಸಮ್ಮೇಳನ ಕಾರ್ಯಕ್ರಮ ಕೈಗೊಳ್ಳಬೇಕು.

ಚಲನ ಚಿತ್ರಗಳು

ಚಲನ ಚಿತ್ರಗಳಲ್ಲಿ ಪ್ರಗತಿಶೀಲತೆ ತಲೆ ಹಾಕಿದರೂ, ಅವು ಪ್ರತಿಗಾಮಿಗಳ ಕೈವಾಡವಾಗಿ ನಿಂತಿವೆ. ಪ್ರಗತಿಶೀಲತೆಗೆ ನೂರಾರು ಅಡಚಣೆಗಳನ್ನು ತರುತ್ತಿವೆ. ಪ್ರಗತಿಶೀಲ ಲೇಖಕರು ಈ ರಂಗದಲ್ಲಿ ಕೈಯಿಕ್ಕಿ ಚಿತ್ರಪ್ರಪಂಚದಲ್ಲಿ ಪ್ರಗತಿಶೀಲತೆಯನ್ನುಂಟುಮಾಡಲು ಸರ್ವ ಯತ್ನ ಮಾಡಬೇಕು.

ಜನತಾ ರಂಗಭೂಮಿ

ಭಾರತದ ರಂಗಭೂಮಿಯ ಪುನರ್ಘಟನೆಗೆ ತೊಡಗಿದ ಜನತಾ ರಂಗಭೂಮಿಯ ಚಳವಳಿಯನ್ನು ಸಮ್ಮೇಳನ ಸ್ವಾಗತಿಸುತ್ತದೆ. ಮಹಾ ಜನರನ್ನು ಜಾಗೃತಗೊಳಿಸಿ, ಅವರ ದಿನದಿನದ ಸಮಸ್ಯೆಗಳನ್ನು ಬಗೆಹರಿಸಿ, ನ್ಯಾಯ

ಮತ್ತು ಸ್ವಾತಂತ್ರ್ಯ ಸಾಧನೆಗಳ ಹೋರಾಟದಲ್ಲಿ ಈ ರಂಗಭೂಮಿ ದುಡಿಯುತ್ತಿದೆ. ಪ್ರಗತಿಶೀಲ ಬರೆಹಗಾರರ ಧ್ಯೇಯವು ಇದೇ. ಆದ್ದರಿಂದ ದೇಶದ ಸಕಲ ಪ್ರಗತಿಶೀಲ ಬರೆಹಗಾರರೂ, ಮಹಾಜನರ ಏಳಿಗೆಗಾಗಿ, ಸ್ವಾತಂತ್ರ್ಯಕ್ಕಾಗಿ, ವಿದ್ಯೆಗಾಗಿ ಶ್ರಮಿಸುವ ಜನತಾ ರಂಗಭೂಮಿಯೊಡನೆ ಸರ್ವವಿಧದಿಂದಲೂ ಸಹಕರಿಸಬೇಕು.

ಕರ್ಣಾಟಕದಲ್ಲಿ ಪ್ರಗತಿಶೀಲ ಬರೆಹಗಾರರ ಚಳವಳ

ಅಖಿಲ ಭಾರತ ಪ್ರಗತಿಶೀಲ ಬರೆಹಗಾರರ ಸಮ್ಮೇಳನ, ಅದರಿಂದ ದೇಶದ ಬರೆಹಗಾರರಿಗೆ ಹೊರಟ ಕರೆ, ಇವು ಕನ್ನಡನಾಡಿನ ಪ್ರಗತಿಶೀಲ ಬರೆಹಗಾರರಲ್ಲಿ ಹೊಸ ಚೈತನ್ಯವನ್ನು ಹುಟ್ಟಿಸಿದುವು. ೧೯೪೩ರ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಪ್ರಗತಿಶೀಲ ಬರೆಹಗಾರರ ಸಂಘವು, "ವಾಣಿ" ಪತ್ರಿಕೆಯ ಸಂಪಾದಕರಾದ ವಿ. ಬಿ. ಬಳ್ಳಾರಿಯವರ ಅಧ್ಯಕ್ಷತೆಯಲ್ಲಿ ಕೂಡಿದ ಮಹಾ ಸಭೆಯಲ್ಲಿ ಸ್ಥಾಪಿತವಾಯಿತು. ಹಲವು ಸಾಹಿತಿಗಳು ಈ ಸಂಘದ ಅಗತ್ಯವನ್ನು ವಿವರಿಸಿದರು. ಸಂಘದ ಉದ್ಘೋಷ ಸಭೆಯ ಸಕಲ ಲೇಖಕರ ಒಪ್ಪಿಗೆ ಪಡೆಯಿತು. ಅ. ನ. ಕೃಷ್ಣರಾಯರು ಅಧ್ಯಕ್ಷರಾಗಿಯೂ ನಾಡಿಗೇರ ಕೃಷ್ಣರಾಯ ಮತ್ತು ಅನಂತಪದ್ಮನಾಭ ಸೋಗಾಲ ಇವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು. ಒಂದು ಕಾರ್ಯಕಾರಿ ಸಮಿತಿಯ ರಚನೆಯೂ ಆಯಿತು.

೧೯೪೩ರ ಡಿಸೆಂಬರ್ ತಿಂಗಳಲ್ಲಿ ಶಿವಮೊಗ್ಗೆಯಲ್ಲಿ ಜರುಗಿದ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಕರ್ನಾಟಕದ ಪ್ರಗತಿಶೀಲ ಲೇಖಕರ ಕೂಟವೊಂದು ಜರುಗಿತು. ಕರ್ನಾಟಕ ಶಾಖೆಯ ಕಾರ್ಯದರ್ಶಿಗಳಾದ ಕೃಷ್ಣ ಕುಮಾರ ಕಲ್ಲೂರರು ಅಧ್ಯಕ್ಷತೆ ವಹಿಸಿದ್ದರು. ಗೆಳೆಯರಾದ ಕುಳಕುಂದ ಶಿವರಾಯರು ಮಂಗಳೂರಿನ ಪ್ರಗತಿಶೀಲ ಲೇಖಕರ ಚಟುವಟಿಕೆಯನ್ನು ವಿವರಿಸಿದರು. ಕುಮಾರ ವೆಂಕಣ್ಣನವರು ಬೆಂಗಳೂರು ಸಮಿತಿಯ ಪರವಾಗಿ ವರದಿ ಒಪ್ಪಿಸಿದರು. ಬೆಂಗಳೂರು ಪ್ರಗತಿಶೀಲ ಲೇಖಕರ ಸಂಘದ ಉದ್ಘೋಷೆಯನ್ನು ಕರ್ನಾಟಕದ ಬರೆಹಗಾರರ ಉದ್ಘೋಷೆಯಾಗಿ ಈ ಕೂಟ ಸ್ವೀಕರಿಸಿತು. ಅನೇಕ ಪ್ರಖ್ಯಾತ ಲೇಖಕರು ಕೂಟದಲ್ಲಿ ಭಾಗಿಗಳಾಗಿ ವಿವಿಧ ವಿಚಾರಗಳನ್ನು ಚರ್ಚಿಸಿದರು. ಕುಮಾರ ವೆಂಕಣ್ಣನವರು ಬರೆದ, ಬೆಂಗ

ಳೂರು ಶಾಖೆಯ ಮೊದಲನೆಯ ಪ್ರಕಟನೆಯಾದ "**ಭಾರತ ಶಕ್ತಿ**" ಎಂಬ ಗೀತಾ ನಾಟಕದ ಉದ್ಘಾಟನೆಯನ್ನು ನೆರವೇರಿಸಿ ಪ್ರೊ|| ವಿ. ಕೃ. ಗೋಕಾಕ ರವರು "ಇದು ಪ್ರಗತಿಶೀಲ ಸಾಹಿತ್ಯವಾದರೆ, ಇದೇ ನಮಗೆ ಬೇಕು. ಇದರಲ್ಲಿ ಲೇಖಕರು ತಮ್ಮದೇ ಆದ ವೈಯಕ್ತಿಕ ವೈಶಿಷ್ಟ್ಯತೆ ತೋರಿದ್ದಾರೆ. ನಮ್ಮ ನಾಡಿನ ದಲಿತ ಜನತೆಯ ಹೃದಯ ವೀಣೆ ಇದು" ಎಂದು ನುಡಿದು, ಪ್ರಗತಿ ಶೀಲ ಸಾಹಿತ್ಯದ ರೂಪರೇಷೆಗಳಿಗೆ ಮಿರುಗು ಕೊಟ್ಟರು.

ಕನ್ನಡ ನಾಡಿನ ಎಲ್ಲೆಡೆಯೂ ಪ್ರಗತಿಶೀಲ ಬರೆಹಗಾರರ ಸಂಘಗಳನ್ನು ಸ್ಥಾಪಿಸಬೇಕು, ಚಳವಳಿಯನ್ನು ಅವ್ಯಾಹತವಾಗಿ ನಡೆಸಬೇಕೆಂದು ಈ ಕೂಟ ನಿರ್ಧರಿಸಿತು.

ಬೆಂಗಳೂರಿನ ಕಾವ್ಯಕಲಾ ಸಂಘದ ಆಶ್ರಯದಲ್ಲಿ ೧೯೪೩ರ ಆಗಸ್ಟ್ ೭ನೇ ತಾರೀಖಿಗೆ ಪ್ರಗತಿಶೀಲ ಬರೆಹದ ಬಗ್ಗೆ ಭಾಷಣ ಮಾಲೆ ಏರ್ಪಡಿಸ ಲಾಗಿತ್ತು. ಆದರೆ ಭಾಷಣಕಾರರಲ್ಲೊಬ್ಬರಾದ ಕುಮಾರ ವೆಂಕಣ್ಣನವರು ೬ನೇ ತಾರೀಖಿಗೆ ಭಾರತ ರಕ್ಷಣಾ ಶಾಸನಕ್ಕೆ ಬಲಿ ಬಿದ್ದುದರಿಂದ ಸರಕಾರದ ವರ್ತನೆಯ ಖಂಡನೆಯಾಗಿ ಸಭೆ ನಡೆಯಲಿಲ್ಲ. ಮುಂದೆ ವೆಂಕಣ್ಣ ನವರ ಬಿಡುಗಡೆಯಾದ ಬಳಿಕ ಪುನಃ ಸಭೆ ಜರಗಿತು. ಲಿಂಗನಗೌಡ ಪಾಟೀಲ, ತ. ರಾ. ಸುಬ್ಬರಾವ್, ಅ. ನ. ಕೃಷ್ಣರಾವ್, ನಾಡಿಗೇರ ಕೃಷ್ಣರಾವ್, ಕುಮಾರ ವೆಂಕಣ್ಣ ಮೊದಲಾದವರು ಆ ಭಾಷಣ ಮಾಲೆಯಲ್ಲಿ ಭಾಗವಹಿಸಿದ್ದರು.

ವಿಶ್ವಕರ್ನಾಟಕ ಪತ್ರಿಕೆಯು ಸರಕಾರದಿಂದ ಒಂದು ವರ್ಷ ಕಾಲ ನಿಲ್ಲಿಸಲ್ಪಟ್ಟಾಗ ಪ್ರಗತಿಶೀಲ ಲೇಖರ ಸಂಘದವರು, ಸರಕಾರದ ವರ್ತನೆ ಯನ್ನು ಖಂಡಿಸಿ ನಿರ್ಬಂಧ ತೆಗೆಯುವಂತೆ ಸರಕಾರವನ್ನು ಒತ್ತಾಯಪಡಿಸುವ ನಿರ್ಣಯ ಮಾಡಿದರು.

ಮುಂದೆ ೧೯೪೪ರ ಜನವರಿ ಫೆಬ್ರುವರಿ ತಿಂಗಳಲ್ಲಿ ಸಂಘದ ಉದ್ದೇಶದ ಪ್ರಚಾರಕ್ಕಾಗಿ ಅ. ನ. ಕೃಷ್ಣರಾಯರೂ, ಕುಮಾರ ವೆಂಕಣ್ಣನವರೂ ದಕ್ಷಿಣ ಕನ್ನಡ ಜಿಲ್ಲೆ, ಭದ್ರಾವತಿ, ಮುಂತಾದ ಹಲವು ಪ್ರದೇಶಗಳಲ್ಲಿ ಸಂಚರಿಸಿ ದರು. ಕೃಷ್ಣರಾಯರು ಉತ್ತರ ಕರ್ನಾಟಕದ ಬಿಜಾಪುರ ಮೊದಲಾದೆಡೆ ಹೋಗಿ ಅನೇಕರನ್ನು ಕಂಡು ವಿಚಾರ ವಿನಿಮಯಮಾಡಿ ಬಂದರು.

ಪ್ರಗತಿಶೀಲ ಬರೆಹಗಾರರ ಪಾಂಚಜನ್ಯ ನಾಡಿನ ದಶ ದಿಕ್ಕುಗಳಿಗೂ ಕೇಳಿಸಿತು. ಲೇಖಕರು ಜಾಗೃತರಾದರು. ಸಾಹಿತ್ಯ ಪರಿಷತ್ತಿನ ಅಂಗವಾಗಿ ಬೆಂಗಳೂರಿನ ಪರಿಷನ್ಮಂದಿರದಲ್ಲಿ ಜರುಗಿದ ವಸಂತ ಸಾಹಿತ್ಯೋತ್ಸವದ ಸಂದರ್ಭದಲ್ಲಿ ಪ್ರಗತಿಶೀಲ ಬರೆಹಗಾರರು, ದ. ಕೃ. ಭಾರದ್ವಾಜರ ಅಧ್ಯಕ್ಷತೆಯಲ್ಲಿ ಒಂದು ಭಾಷಣಮಾಲೆಯನ್ನು ಏರ್ಪಡಿಸಿದ್ದರು. ನಾಡಿಗೇರ ಕೃಷ್ಣರಾಯ, ಅ. ನ. ಕೃಷ್ಣರಾಯ, ತ. ರಾ. ಸುಬ್ಬರಾವ್, ಅರ್ಚಿಕ ವೆಂಕಟೇಶ, ಶ್ರೀಕಾಂತಕಂಠಿ, ಕುಮಾರ ವೆಂಕಣ್ಣ ಮೊದಲಾದವರು ಭಾಷಣವಿತ್ತು ಪ್ರಗತಿಶೀಲ ಬರೆಹಗಾರರ ಧ್ಯೇಯ, ಉದ್ದೇಶ, ಕಾರ್ಯಕ್ರಮಗಳನ್ನು ವಿವರಿಸಿದರು. ಅಧ್ಯಕ್ಷರು ಲೇಖಕರ ಕಾರ್ಯಕ್ರಮವನ್ನು ಹರಸಿ ಸಕಲ ಸಹಕಾರವನ್ನು ವ್ಯಕ್ತಪಡಿಸಿದರು.

ಇದೀಗ ಬೆಂಗಳೂರಿನ ಸಂಘ ತನ್ನ ಕಾಲ ಮೇಲೆ ನಿಂತು, ಮುನ್ನಡೆಯಲು ಶಕ್ತವಾಗಿದೆ. ತನ್ನ ಪ್ರಕಟನೆಯ ಕಾರ್ಯಕ್ರಮದಿಂದ ಪ್ರಗತಿಶೀಲ ಬರೆಹಗಳ ಪರಿಚಯವನ್ನು ನಾಡಿಗೆ ಮಾಡಿಕೊಡಲು ನಿರ್ಧರಿಸಿದೆ. ಎರಡನೆಯ ಪ್ರಕಟನೆಯಾಗಿ "**ನನ್ನನ್ನು ನಾನೇ ಕಂಡೆ**" ಎಂಬ ಅ. ನ. ಕೃಷ್ಣರಾಯರ ವಿಚಾರ ಕ್ರಾಂತಿಯನ್ನು ಹೊಡಿದೆಬ್ಬಿಸುವ ಗ್ರಂಥ ಇದೀಗ ಪ್ರಕಟವಾಗಿದೆ. ಇದು ನಮ್ಮ ೩ನೆಯ ಪ್ರಕಟನೆ. ಪ್ರಗತಿ ಸಾಹಿತ್ಯವೇನೆಂದು ನಾಡ ಜನತೆಗೆ ಇದರಲ್ಲಿ ತೋರಲು ಯತ್ನಿಸಲಾಗಿದೆ.

ಬೆಂಗಳೂರಿನ ಪ್ರಗತಿಶೀಲ ಲೇಖಕರು ತಮ್ಮ ಸ್ಥಾನವನ್ನು ಬಲಪಡಿಸುತ್ತಿದ್ದಾರೆ. ನಾಡಿನ ಎಲ್ಲೆಡೆಯ ಬರೆಹಗಾರರು ಎಚ್ಚತ್ತು ಕರ್ತವ್ಯಪರರಾಗಬೇಕೆಂದು ಪ್ರಾರ್ಥಿಸುತ್ತೇವೆ.

ನಮ್ಮ ಹೋರಾಟ ಅವ್ಯಾಹತವಾಗಿ ಸಾಗಬೇಕು, ಜನತೆಗೆ ದಾರಿ ತೋರಿ, ಅವರನ್ನು ಜಾಗೃತಗೊಳಿಸಿ ಸಂಘಟಿಸಿ ಮುನ್ನಡೆಸುವ ಸಾಹಿತ್ಯ ರಚನೆಯಾಗಬೇಕೆಂಬುದು ನಮ್ಮ ಘನ ಉದ್ದೇಶ. ಈ ಯತ್ನದಲ್ಲಿ ನಮ್ಮಿಂದ ಸಾಧ್ಯವಾದಷ್ಟು ನಾವು ಯತ್ನಿಸುತ್ತೇವೆ.

ಮುಂದೆ ರಷ್ಯದ ಮಹಾ ಸಾಹಿತಿ, ಜಗತ್ತಿನ ಸಾಹಿತಿಗಳ ಧ್ರುವ ತಾರೆ **ಗಾರ್ಕಿಯ ಸಾಹಿತ್ಯದ ಸಾರವನ್ನು** ಕನ್ನಡಿಗರಿಗೆ ಕೊಡುವ ಒಂದು ಸಂಕಲನವನ್ನು ಪ್ರಕಟಿಸಲು ನಿಶ್ಚಯಿಸಿದ್ದೇವೆ. ಸುಮಾರು ೩೦೦-೪೦೦ ಪುಟಗಳ

ಈ ಗ್ರಂಥಕ್ಕೆ ಕನ್ನಡ ನಾಡಿನ ಅನೇಕ ವಿಖ್ಯಾತ ಲೇಖಕರು ಲೇಖನಗಳನ್ನು ಬರೆದಿದ್ದಾರೆ.

ಇನ್ನೊಂದು ಮಹತ್ವದ ಪ್ರಕಟನೆ "**ಓಲ್ಗಾದಿಂದ ಗಂಗಾನದಿಗೆ**" ಎಂಬ ಭಾರತ ಸಂಸ್ಕೃತಿಯ ಒರೆಗಲ್ಲಾದ ಮಹಾ ಗ್ರಂಥ. ಮಹಾ ಪಂಡಿತ ತ್ರಿಪೀಟಕಾಚಾರ್ಯ ರಾಹುಲ ಸಾಂಕೃತ್ಯಾಯನರು ಇದನ್ನು ಹಿಂದೀ ಭಾಷೆಯಲ್ಲಿ ಬರೆದಿದ್ದಾರೆ. ಜಗತ್ತಿನ ಪ್ರಗತಿಶೀಲ ಕೆಲವೇ ಮಹಾ ಗ್ರಂಥಗಳಲ್ಲಿ ಒಂದಾದ ಇದು ಸುಮಾರು ೫೦೦ ಪುಟಗಳಲ್ಲಿ ಧರ್ಮ, ವೇದ, ಉಪನಿಷತ್ತುಗಳ ವಿಮರ್ಶೆಯನ್ನು ಮಾಡುವ ಕಥಾ ಸಂಗ್ರಹವಾಗಿದೆ.

ಇದಲ್ಲದೆ ಇನ್ನು ಹಲವು ಚಿಕ್ಕ ಪುಸ್ತಕಗಳ ಪ್ರಕಟನೆಯ ಮೂಲಕ ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲ ಬರೆಹಗಳನ್ನು ಹೆಚ್ಚಿಸಬೇಕೆಂದು ಬಯಸಿದ್ದೇವೆ.

———:———

ಭಾರತೀಯ ಪ್ರಗತಿಶೀಲ ಲೇಖಕರ ಸಂಘ

ಬೆಂಗಳೂರು ಸಮಿತಿ

ಭಾರತೀಯ ಸಮಾಜದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗುತ್ತಿವೆ. ಅಂತ್ಯ ಅವಸಾನಕ್ಕೇ ದಕ್ಕದ ಪ್ರತಿಕ್ರಿಯೆ ಇನ್ನೂ ತನ್ನ ಕೈಚಳಕವನ್ನು ತೋರುತ್ತಾ ಬಾಳಿ ಬದುಕಲು ಹವಣಿಸುತ್ತಿದೆ.

ಭಾರತೀಯ ಜೀವನದಲ್ಲಾಗುತ್ತಿರುವ ಬದಲಾವಣೆಗಳನ್ನು ರೂಪಿಸಿ, ಪ್ರಾಗತಿಕ ಮನೋಭಾವಕ್ಕೆ ಸಹಾಯ ಮಾಡಬೇಕಾದುದು ಭಾರತೀಯ ಲೇಖಕರ ಆದ್ಯ ಕರ್ತವ್ಯವಾಗಿದೆ.

ಪುರಾಣ ಸಾಹಿತ್ಯ ಕುಸಿದು ಬಿದ್ದ ಮೇಲೆ ತಲೆಯೆತ್ತಿದ ಭಾರತೀಯ ಸಾಹಿತ್ಯ, ಜೀವನದ ಸಹಜತೆಯಿಂದ ದೂರ ಸರಿಯುವ ಮನೋಭಾವವನ್ನು ವ್ಯಕ್ತಪಡಿಸುತ್ತಿದೆ. ಅದು ಸಹಜತೆಯಿಂದ ದೂರವಾಗಿ ಅಧ್ಯಾತ್ಮವಾದದಲ್ಲಿಯೂ ಆದರ್ಶವಾದದಲ್ಲಿಯೂ ಆಶ್ರಯ ಪಡೆಯಲೆತ್ನಿಸುತ್ತಿದೆ. ಪರಿಣಾಮವಾಗಿ ಅದು ಕ್ಷಯಿಸಿ, ಮಾನಸಿಕ, ದೈಹಿಕ ದೌರ್ಬಲ್ಯಗಳನ್ನು ತೋರಿಸಿ ಒಂದು ಬಗೆಯ ಕಠೋರ ಸಂಪ್ರದಾಯಪ್ರಿಯತೆಯನ್ನೂ ವಿಕೃತ ಆದರ್ಶವಾದವನ್ನೂ ನಿರ್ಣಯ ಮಾಡಿದೆ. ಅದರ ಗುಹ್ಯ, ಭಕ್ತಿವಾದ, ಲೈಂಗಿಕ ವಿಚಾರಗಳ ಬಗ್ಗೆ ಇರುವ ವಿಚಾರಹೀನದೃಷ್ಟಿ, ರಸೋದ್ರಿಕ್ತ ಪ್ರದರ್ಶನಗಾರಿಕೆ, ನಿಸರ್ಗಶೂನ್ಯತೆಗಳೇ ಇದಕ್ಕೆ ಸಾಕ್ಷಿಗಳಾಗಿವೆ.

ಸಂಪ್ರದಾಯ ಶರಣರ ಕೈಗೆ ಸಿಕ್ಕಿ ಕೊರಗಿ ಅಪ್ರಗತಿ ಹೊಂದುತ್ತಿರುವ ಸಾಹಿತ್ಯ, ಕಲೆಗಳನ್ನು ಅವರ ಬಂಧನದಿಂದ ಪಾರು ಮಾಡುವುದೇ ಈ ಸಂಘದ ಉದ್ದೇಶ. ಜನತೆಯ ಸಮೀಪಕ್ಕೆ ಕಲೆಗಳನ್ನು ತರಬೇಕು. ಅವು ನೈಸರ್ಗಿಕ ಜೀವನದ ಕನ್ನಡಿಗಳಾಗುವುದಲ್ಲದೆ ಭವಿತವ್ಯದ ಪ್ರವಾದಿಗಳಾಗುವಂತೆ ಮಾಡಬೇಕೆಂಬುದೇ ನಮ್ಮ ಗುರಿಯಾಗಿದೆ.

ಪುರಾತನ ಸಂಸ್ಕೃತಿಯ ಪೀಳಿಗೆಯವರೆಂದು ಹೆಮ್ಮೆ ಪಟ್ಟುಕೊಳ್ಳುವ ಜತೆಗೆ ನಾವು ಪ್ರತಿಕ್ರಿಯೆಯ ಸಬಲ ಸೈನ್ಯಗಳನ್ನು ತೀವ್ರವಾಗಿ ವಿರೋಧಿಸುತ್ತೇವೆ. ಭಾರತೀಯ ಹಾಗೂ ವಿದೇಶೀಯ ಸಾಹಿತ್ಯಗಳ ಸಹಾಯದಿಂದ ನಾವು ನವಜೀವನದ ನಿರ್ಮಾಣಕ್ಕೆ ಹೇತುವಾದ ಮನೋಭಾವವನ್ನು ಬೆಳೆ

ಸಲು ವ್ಯಾಖ್ಯಾತ್ಮಕ ಹಾಗೂ ಕ್ರಿಯಾತ್ಮಕ ಸಾಹಿತ್ಯ ರಚನೆಯ ಮೂಲಕ ಶ್ರಮಿಸುತ್ತೇವೆ. ಸಾಮಾಜಿಕ ಅಪ್ರಗತಿ, ರಾಜಕೀಯ ಪರಾಶ್ರಯತೆಗಳನ್ನು ಎದುರಿಸಬೇಕೆಂದು ನಮ್ಮ ದೃಢ ಅಭಿಪ್ರಾಯವಾಗಿದೆ.

ಆಲಸ್ಯ, ಕಾರ್ಯವಿಮುಖತೆ, ಅವಿಚಾರಗಳಿಗೆ ನಮ್ಮನ್ನು ಎಳೆಯುವುದೆಲ್ಲವನ್ನೂ ನಾವು ಪ್ರತಿಕ್ರಿಯಾರೂಪಗಳೆಂದು ತಿರಸ್ಕರಿಸುತ್ತೇವೆ.

ವಿಚಾರದ ಬೆಳಕಿನಲ್ಲಿ ಸಂಸ್ಥೆ, ಆಚರಣೆಗಳನ್ನು ಪರೀಕ್ಷಿಸಲು ನೆರವಾಗಿ ನಮ್ಮಲ್ಲಿ ಸಂಘಟನಶಕ್ತಿ, ಕ್ರಿಯಾಶಕ್ತಿಗಳನ್ನು ಹುಟ್ಟಿಸುವುದೆಲ್ಲವನ್ನೂ ನಾವು ಪ್ರಾಗತಿಕ ಎಂದು ಭಾವಿಸುತ್ತೇವೆ.

ಉದ್ದೇಶ—೧. ದೇಶದ ವಿವಿಧ ಭಾಷಾ ಕೇಂದ್ರಗಳೊಂದಿಗೆ ಸಂಪರ್ಕವಿಟ್ಟುಕೊಳ್ಳಲು ಲೇಖಕರ ಸಂಘಗಳನ್ನು ಸ್ಥಾಪಿಸಿ ಈ ಸಂಘಗಳ ಕಾರ್ಯಕಲಾಪಗಳನ್ನು ಒಗ್ಗೂಡಿಸಿ ಸಮ್ಮೇಳನಗಳನ್ನು ನಡೆಸುವುದು, ಗ್ರಂಥಗಳನ್ನು ಪ್ರಕಟಿಸುವುದು; ಕೇಂದ್ರ ಸಂಸ್ಥೆಗೂ, ಪ್ರಾಂತಿಕ ಸಂಸ್ಥೆಗಳಿಗೂ ನಿಕಟ ಬಾಂಧವ್ಯವನ್ನೇರ್ಪಡಿಸುವುದು; ಸಂಘದ ಮೂಲ ತತ್ವಗಳಿಗೆ ವಿರೋಧವಾಗಿರದ ಸಂಘ ಸಂಸ್ಥೆಗಳೊಂದಿಗೆ ಸಹಕರಿಸುವುದು.

೨. ಸಾಂಸ್ಕೃತಿಕ ಪ್ರತಿಕ್ರಿಯೆಯ ಜತೆಯಲ್ಲಿ ಹೋರಾಡಲು ಪ್ರಾಗತಿಕ ಸ್ವರೂಪದ ಸಾಹಿತ್ಯವನ್ನು ಸೃಷ್ಟಿಮಾಡುವುದು ಮತ್ತು ಅನುವಾದ ಮಾಡಿ ಪ್ರಕಟಿಸುವುದು. ಈ ಮೂಲಕ ಭಾರತೀಯ ಸ್ವಾತಂತ್ರ್ಯಕಲ್ಪನೆಗೂ, ಸಾಮಾಜಿಕ ಪುನರುಜ್ಜೀವನಕ್ಕೂ ಇಂಬುಗೊಡುವುದು.

೩. ಲೇಖಕರ ಹಕ್ಕುಬಾಧ್ಯತೆಗಳನ್ನು ರಕ್ಷಿಸುವುದು.

೪. ಸ್ವತಂತ್ರ ವಿಚಾರ, ಉಚ್ಚಾರಗಳ ಹಕ್ಕಿಗಾಗಿ ಹೋರಾಡುವುದು.

ಕಾರ್ಯರೂಪ:—ಈ ಉದ್ದೇಶಗಳನ್ನು ಕೆಳಗೆ ಕಾಣಿಸಿರುವಂತೆ ಪ್ರಗತಿಶೀಲ ಲೇಖಕರ ಸಂಘ ಕಾರ್ಯರೂಪಕ್ಕೆ ತರುತ್ತದೆ:

೧. ರಾಷ್ಟ್ರೀಯ ಐಕಮತ್ಯವನ್ನೂ, ಪರಾಕ್ರಮಣಕ್ಕೆ ವಿರುದ್ಧವಾದ ರಾಷ್ಟ್ರೀಯ ರಕ್ಷಣವನ್ನೂ ಒತ್ತಿ ಹೇಳುವ ಸಣ್ಣ ನಾಟಕಗಳನ್ನು ಪ್ರದರ್ಶಿಸುವುದು. ಸಣ್ಣ ಕಥೆ, ಕವಿತೆ, ಹಾಡು, ಲಾವಣಿಗಳ ಪಠನಕ್ಕೇರ್ಪಡಿಸುವುದು.

೨. ಇತ್ತೀಚಿನ ಪ್ರಾಗತಿಕ ಸಾಹಿತ್ಯ (ವಿಶೇಷವಾಗಿ ರಷ್ಯಾ ಮತ್ತು ಚೀನಾ) ವನ್ನು ಅನುವಾದಿಸಿ ಪ್ರಕಟಿಸಿ ಪ್ರಸಾರ ಮಾಡುವುದು.

೩. ಶ್ರಮಜೀವಿಗಳು ಮತ್ತು ರೈತರಿಗಾಗಿ ಸಾಹಿತ್ಯ, ಕಲಾಕೂಟಗಳನ್ನೇರ್ಪಡಿಸುವುದು. ಪ್ರಗತಿಶೀಲ ಲೇಖಕರ ಸಂಘವನ್ನು ಜನಪದ ಸಾಹಿತ್ಯ ಕಲೆಗಳೊಂದಿಗೆ ಕೂಡಿಸುವುದು.

೪. " ಭಾರತೀಯ ಜನತಾ ರಂಗಭೂಮಿ " ಯವರೊಂದಿಗೆ ನಾಟಕಗಳನ್ನು ಬರೆಯಲು, ಆಡಲು ಸಹಕರಿಸುವುದು.

ಕಾರ್ಯದರ್ಶಿಗಳು :

ಅರಳೇಪೇಟೆ,
ಬೆಂಗಳೂರು ನಗರ

ಕೃಷ್ಣರಾವ್ ನಾಡಿಗೇರ
ಅ. ಸೋಗಾಲ

ಲೇಖಕರ ಪರಿಚಯ

೧. **ತಿ. ತಾ. ಶರ್ಮ :**

ಪ್ರಸಿದ್ಧ ಪಂಡಿತರು, ವಿಚಾರವಾದಿಗಳು. ಕರ್ನಾಟಕದ ಸರ್ವಜನ ಪ್ರಿಯ ಪತ್ರಿಕೆಯಾದ 'ವಿಶ್ವಕರ್ನಾಟಕ'ದ ಸಂಪಾದಕರು. ಕನ್ನಡದಲ್ಲಿ ಹಲವು ವಿಧದ ಪ್ರಗತಿಶೀಲ ಸಾಹಿತ್ಯ ಬರುವುದಕ್ಕೆ ಸತತವಾಗಿ ದುಡಿದವರು. ಶರ್ಮರ ಬರೆಹಶೈಲಿ ನೆಟ್ಟಲಗು, ಮಾತುಗಾರಿಕೆ ಬಿಟ್ಟಬಾಣ.

೨. **ಶ್ರೀ ರಾಜ :**

ವಿಜಾಪುರದ ಪ್ರಗತಿಶೀಲ ಲೇಖಕರು ಮತ್ತು ಪತ್ರಿಕೋದ್ಯಮಿಗಳು.

೩. **ತ. ರಾ. ಸುಬ್ಬರಾಯ :**

ಬೆಂಗಳೂರಿನ ಪತ್ರಿಕೋದ್ಯಮಿಗಳು. ಕಿರಿಯ ಲೇಖಕರಲ್ಲಿ ಬಹಳ ಮುಂದಿರುವ ಸಾಹಿತಿಗಳು. ಲಲಿತವೂ ಮೊನೆಯೂ ಆದ ಗದ್ಯಶೈಲಿ ತ. ರಾ. ಸು. ಅವರ ಕರತಲಾಮಲಕ. 'ಮನೆಗೆ ಬಂದ ಮಹಾಲಕ್ಷ್ಮಿ' ಎಂಬ ಕಾದಂಬರಿಯನ್ನು ಬರೆದಿದ್ದಾರೆ.

೪. **ಕುಮಾರ ವೆಂಕಣ್ಣ :**

ಸಾಹಿತ್ಯ ಮತ್ತು ರಾಜಕೀಯಗಳ ಸಂಗಮವನ್ನು ವೆಂಕಣ್ಣನವರಲ್ಲಿ ಕಾಣಬಹುದು. ಕತೆ, ಕವಿತೆ, ಲೇಖನ, ಭಾಷಣಗಳೆಲ್ಲವರಲ್ಲಿಯೂ ಇವರದು ಒಂದು ಕೈ - ಬಲವಾದ ಕೈ. 'ಭಾರತ ಶಕ್ತಿ' ಎಂಬ ಉಜ್ವಲ ಸರಳ ರಗಳೆಯ ನಾಟಕವನ್ನು ಬರೆದಿದ್ದಾರೆ. 'ರಷ್ಯಾದ ಮುನ್ನಡೆ' ಯನ್ನು ಕನ್ನಡಿಗರಿಗೆ ತೋರಿದ್ದಾರೆ. ಬಂಗಾಳ, ವಿಜಾಪುರ, ಕೇರಳಗಳ ಅನ್ನದ ಬರದ ಬಗ್ಗೆ ಸತತವಾಗಿ ದುಡಿದು ಜನತೆಯಲ್ಲಿ ಜಾಗೃತಿಯನ್ನುಂಟುಮಾಡಿದವರು.

೫. **ಎಸ್. ಅನಂತನಾರಾಯಣ :**

ಮೈಸೂರಿನ ಪ್ರಗತಿಶೀಲ ಲೇಖಕರು. ದೀನ, ದುಃಖಿಗಳಿಗೆ ಅನಂತನಾರಾಯಣರ ಲೇಖನಿ ಮೀಸಲು. ಇವರ 'ಕವಿ – ಕೂಲಿಗಾರ' ಕವಿತೆ ಕನ್ನಡ ಪ್ರ. ಶೀ. ಸಾಹಿತ್ಯದಲ್ಲಿ ಉಳಿಯುವ ಚಿರಂಜೀವಿ. ಕತೆ, ಕವಿತೆ, ಲೇಖನಗಳನ್ನು ಬರೆದಿದ್ದಾರೆ; ಕಾದಂಬರಿ ಬರೆಯುತ್ತಿದ್ದಾರೆ.

೬. ಕುಳುಕುಂದ ಶಿವರಾಯ :

ಮಂಗಳೂರಿನ 'ರಾಷ್ಟ್ರಬಂಧು' ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿದ್ದರು. ಸ್ವತಂತ್ರವಿಚಾರ, ನಿರ್ಭಯತೆಗೆ ಕು.ಶಿ. ರಾಯರು ಹೆಸರುವಾಸಿ. ಸಾಹಿತ್ಯದ ಹಲವು ಪ್ರಕಾರಗಳಲ್ಲಿ ನುರಿತ ಕೈ. ಕಿರಿಯರನ್ನು ಹುರಿದುಂಬಿಸಿ ಅವರನ್ನು ಕೆಲಸಕ್ಕೆ ಹಚ್ಚುವುದರಲ್ಲಿ ಕು. ಶಿ. ಅಪೂರ್ವ ಯಶಸ್ಸು ಗಳಿಸಿದ್ದಾರೆ. ಕತೆ, ಕವಿತೆಗಳನ್ನು ಬರೆದಿದ್ದಾರೆ. ಉತ್ತಮ ಮಾತುಗಾರರು, ಅಷ್ಟೇ ಉತ್ತಮ ಕೆಲಸಗಾರರು.

೭. ದ. ಕೃ. ಭಾರದ್ವಾಜ :

ವಯಸ್ಸಿನಲ್ಲಿ ಹಿರಿಯರು, ಉತ್ಸಾಹ ಸ್ಫೂರ್ತಿಗಳಲ್ಲಿ ತರುಣರು. ತಿಲಕ ಸಂದೇಶ – ಮಕ್ಕಳ ಪುಸ್ತಕ – ರಂಗಭೂಮಿ ಇವು ಇವರು ಸ್ಥಾಪಿಸಿ ನಡೆಸಿದ ಕೆಲವು ಪತ್ರಿಕೆಗಳು. ಕನ್ನಡದಲ್ಲಿ ಸ್ವತಂತ್ರವಾಗಿ ಲೈಂಗಿಕ ಪುಸ್ತಕಗಳನ್ನು ಧೈರ್ಯವಾಗಿ ಬರೆಯುವುದನ್ನು ಆರಂಭಿಸಿದರು. ನಲವತ್ತು ವರ್ಷಕಾಲ ಕರ್ನಾಟಕದ ಉತ್ಕರ್ಷಕ್ಕಾಗಿ ದುಡಿದಿದ್ದಾರೆ. ರಾಜಕೀಯ, ಸಾಹಿತ್ಯಿಕ ಎರಡು ರಂಗಗಳಲ್ಲಿಯೂ ಅಪಾರ ಕೆಲಸಮಾಡಿದ್ದಾರೆ. ನೂರಾರು ಕಿರಿಯರನ್ನು ಪ್ರೋತ್ಸಾಹಿಸಿ ಅವರನ್ನು ಉತ್ತಮ ಸಾಹಿತಿಗಳನ್ನಾಗಿ ಮಾಡಿದ್ದಾರೆ. ನಿರಾಡಂಬರಮೂರ್ತಿ, ತ್ಯಾಗಜೀವಿ, ಭಯಂಕರ ಕನಸುಗಾರ. 'ಒಂದಲ್ಲ ಎರಡಲ್ಲ ನಾಲ್ಕು' ನಿಘಂಟುಗಳನ್ನು ಬರೆದಿದ್ದಾರೆ. ಇವೆಲ್ಲವನ್ನೂ ಸಾಧಿಸಿದವನು ಒಬ್ಬನೇ ವ್ಯಕ್ತಿ – ಶ್ರಮಜೀವಿ – ಕನ್ನಡಿಗ.

೮. ದೊಡ್ಡೇರಿ ವೆಂಕಟಗಿರಿರಾಯ :

ಪಂಡಿತ ತಾರಾನಾಥರ ಆಶ್ರಮದಲ್ಲಿ ಆಯುರ್ವೇದ ಶಿಕ್ಷಣ ಪಡೆದು, ಹಲವು ಶಾಸ್ತ್ರೀಯ ಲೈಂಗಿಕ ಗ್ರಂಥಗಳನ್ನು ಬರೆದಿದ್ದಾರೆ. ಕವಿತೆ, ಕತೆಗಳಲ್ಲಿಯೂ ದೊಡ್ಡೇರಿಯವರದು ನುರಿತ ಕೈ.

೯. ನಾಡಿಗೇರ ಕೃಷ್ಣರಾಯ :

ಇವರು 'ಪ್ರಜಾಮತ'ದ ಉಪಸಂಪಾದಕರಾಗಿದ್ದು ಈಗ 'ದೇಶಬಂಧು' ವಾರಪತ್ರಿಕೆಯ ಉಪಸಂಪಾದಕರಾಗಿದ್ದಾರೆ. ಇಂದಿನ ಭಯಂಕರ ಪರಿಸ್ಥಿತಿಯಲ್ಲಿ ರಾಯರು ಹಾಸ್ಯದ ಹೊಳೆ ಹರಿಸಿ ಜನತೆಯನ್ನು

ಹುರಿದುಂಬಿಸುತ್ತಿದ್ದಾರೆ. ಚಟಿವಾತು, ಅಣಕ, ಲಲಿತಹಾಸ್ಯ, ಆಕ್ಷೇಪ, ಕುಚೋದ್ಯ ಎಲ್ಲದರಲ್ಲಿಯೂ ರಾಯರದು ಸಿದ್ಧಹಸ್ತ. ಕನ್ನಡ ಪ್ರಬಂಧ ಕಾರರಲ್ಲಿ ರಾಯರ ಸ್ಥಾನ ಹಿರಿಯ ಸ್ಥಾನ.

೧೦. ಅರ್ಚಿಕ ವೆಂಕಟೇಶ:

ಯತಿ, ಗಣ, ಪ್ರಾಸವಿದ್ದರೆ ಆಧುನಿಕ ಕವಿಗಳ ಕೈಗೆ ಬೇಡಿ ಎಂದು ಸಂಪ್ರದಾಯಸ್ಥರ ಆಕ್ಷೇಪ. ಅರ್ಚಿಕರ ಕವಿತೆ ಅವರು ಓದಿದ್ದರೆ ಆ ಮಾತು ಹೇಳುತ್ತಿರಲಿಲ್ಲ. ಸುಭಗವಾದ ಸುಂದರ ಕವಿತೆಗಳನ್ನು ಹಳೆಯ – ಹೊಸ ಎರಡು ಸಂಪ್ರದಾಯಗಳಲ್ಲಿಯೂ ಬರೆಯಬಲ್ಲರು. ಅಷ್ಟೇ ನುರಿತ ಗದ್ಯಶೈಲಿ ಅರ್ಚಿಕರದು. ಕುಸುಮ ಕೋಮಲ ಮನ ಸ್ಸಿನ ಈ ಕವಿ ಇಂದು ಕ್ರಾಂತಿಪ್ರಿಯ. ಇವರ 'ಹಸ್ತ ಸಾಮುದ್ರಿಕ' ಹಲವರನ್ನು ಕೆರಳಿಸಿತು.

೧೧. ಮಾ. ನಾ. ಚೌಡಪ್ಪ:

ಹೌದು: ಅವರೇ ಪ್ರಜಾಮತದ ಚೌಡಪ್ಪನವರು. ಈಗ ಅಲ್ಲಿಲ್ಲ ಅಷ್ಟೇ. ಕನ್ನಡ ಪತ್ರಿಕಾ ಪ್ರಪಂಚವನ್ನು ರೂಪುಗೊಳಿಸಿದ ವ್ಯಕ್ತಿ. ಮಾ. ನಾ. ಚೌ. ಶೈಲಿ ಕನ್ನಡದ ಗಂಡುಶೈಲಿ. 'ಚಂದ್ರಗುಪ್ತ' ನಾಟಕ ಬರೆದಿದ್ದಾರೆ. ಹಳ್ಳಿಗರ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲರು.

೧೨. ಕೆ. ಶ್ರೀಕಂಠೇಶ್ವರನ್:

ಬೆಂಗಳೂರು ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿರುವ ಒಬ್ಬ ಶ್ರಮಜೀವಿ. ಕೂಲಿಕಾರರ ವಾಣಿ. ಕೂಲಿಗಾರರ ಸಮಸ್ಯೆಗಳ ಮೇಲೆ ಹಲವು ಕತೆ ಗಳನ್ನು ಬರೆದಿದ್ದಾರೆ. 'ಪಗಾರ ದಿನ' ಕೂಲಿಗಾರ ಸಮಸ್ಯೆಯನ್ನು ಚಿತ್ತವಿದ್ರಾವಕವಾಗಿ ಕಾಣಿಸುವ ಒಂದು ಶ್ರೇಷ್ಠ ಕಲಾಕೃತಿ.

೧೩. ಮಹಾಪಂಡಿತ ರಾಹುಲ ಸಾಂಕೃತ್ಯಾಯನ:

ಆರ್ಯಸಮಾಜ, ಕಾಂಗ್ರೆಸ್, ಈಗ ಕಮ್ಯುನಿಸ್ಟ್ ಪಾರ್ಟಿಯ ಪುರ ಸ್ಕರ್ತರು. ಸಂಸ್ಕೃತ, ಹಿಂದಿ, ರಷ್ಯನ್ ಭಾಷೆಗಳಲ್ಲಿ ಅಗಾಧ ಪಾಂಡಿತ್ಯ. ೧೪ ಭಾಷೆಗಳಲ್ಲಿ ಪಂಡಿತರಿಗೆ ಪರಿಶ್ರಮ. ಸರ್ವದರ್ಶನ ಸಂಗ್ರಹ ಬರೆದ ಈ ಇವರೇ 'ಓಲ್ಗಾದಿಂದ ಗಂಗೆಯವರೆಗೆ' ಎಂಬ ಕ್ರಾಂತಿಕಾರಕ ಗ್ರಂಥ ವನ್ನು ಬರೆದಿದ್ದಾರೆ. ರಷ್ಯಾಗೆ ಹೋಗಿ ಬಂದು ಅದರ ಮೇಲೆ ಗ್ರಂಥ

ಬರೆದಿದ್ದಾರೆ. ಈಗ ಮತ್ತೆ ರಷ್ಯಾಗೆ ಯಾತ್ರೆ ಹೊರಟಿದ್ದಾರೆ. ಇವರ 'ಓಲ್ಗಾದಿಂದ ಗಂಗೆಯವರೆಗೆ' ಗ್ರಂಥವನ್ನು ಬೆಂಗಳೂರಿನ ಪ್ರ. ಶೀ. ಲೇ. ಸಂಘಕ್ಕಾಗಿ ಮಂಗಳೂರಿನ ವಿದ್ವಾನ್ ಬಿ. ಶಂಕರಭಟ್ಟರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ.

೧೪. ಶ್ರೀಮತಿ ಮಾಲತಿದೇವಿ :

ಹಿಂದೀ, ಕನ್ನಡಗಳಲ್ಲಿ ಪರಿಣೀತರು. ಕನ್ನಡದಲ್ಲಿ ಸ್ವತಂತ್ರವಾಗಿ ಹಲವು ಕತೆಗಳನ್ನು ಬರೆದಿದ್ದಾರೆ. ಹಿಂದೀ ಸಾಹಿತ್ಯದ ಉತ್ತಮ ಭಾಗ ಗಳನ್ನು ಕನ್ನಡಕ್ಕೆ ಅನುವಾದಮಾಡಿ ಉಪಕಾರ ಮಾಡುತ್ತಿದ್ದಾರೆ.

೧೫. ಎಂ. ಜೆ. ಜಿ :

ಮುಂಬಯಿಯ "ಸೌಂಡ್" ಪತ್ರಿಕೆಗೆ ಪದೇ ಪದೇ ಬರೆಯುತ್ತಾರೆ. ಪ್ರ. ಶೀ. ಲೇಖಕನ್ನು ಪ್ರತಿಭಟಿಸುವುದರಲ್ಲಿ ತುಂಬ ಆಸಕ್ತರು.

೧೬. ಅಹಮದ್ ಅಬ್ಬಾಸ್ :

ಬಾಂಬೇ ಕ್ರಾನಿಕಲ್, ಸೌಂಡ್ ಪತ್ರಿಕೆಗಳಲ್ಲಿ ಅಬ್ಬಾಸರ ಲೇಖನ ಗಳನ್ನು ಓದದವರಾರು? ಭಾರತದ ಒಬ್ಬ ಶ್ರೇಷ್ಠ ಸ್ವತಂತ್ರ ವಿಚಾರಿ ಪತ್ರಿಕೋದ್ಯಮಿಗಳು. ಕೆಲವು ರಾಜಕೀಯ ಗ್ರಂಥಗಳನ್ನು ಬರೆದಿದ್ದಾರೆ. ಈಚೆಗೆ ಇವರ ಒಂದು ಕಾದಂಬರಿ ಪ್ರಕಟವಾಗಿದೆ. ಅ. ಭಾ. ಪ್ರ. ಶೀ. ಲೇ. ಸಂಘದ ಮುಂಬಯಿ ಕಾರ್ಯದರ್ಶಿಗಳು. ಉರ್ದು, ಇಂಗ್ಲಿಷ್ ಎರಡು ಭಾಷೆಗಳಲ್ಲಿಯೂ ಸೊಗಸಾಗಿ ಬರೆಯಬಲ್ಲರು.

——::——

ನಮ್ಮ ಹೊಸ ಪ್ರಕಟನೆಗಳು

ಸಾಹಿತ್ಯ ಮತ್ತು ಜೀವನ : ಅ. ನ. ಕೃಷ್ಣರಾಯ

ಈ ಎರಡು ದಶಕಗಳ ಕನ್ನಡ ಸಾಹಿತ್ಯದ ಸಿಂಹಾವಲೋಕನ.
ವಿವಿಧ ರಸ ವಿಷಯಗಳ ರಸಾಯನ.

ಬೆಳೆಯುತ್ತಿರುವ ಕನ್ನಡ ಸಾಹಿತ್ಯ—ಕನ್ನಡ ನಾಡಿಗೆ ಬೇಕಾದ ಸಾಹಿತ್ಯ—ಹಳ್ಳಿಗಳಲ್ಲಿ ಕರ್ನಾಟಕ ಸಂಘಗಳು—ಹೆಣ್ಣುಮಕ್ಕಳ ಹಾಡುಗಳು—ವಿಮರ್ಶಕ—ಲಕ್ಷ್ಮೀಶನ ಸೀತಾರಾಮರು. ಕನ್ನಡದಲ್ಲಿ ಸಣ್ಣ ಕಥೆಗಳು—ಹಾಸ್ಯರಸ—ಕನ್ನಡ ಸಾಹಿತ್ಯದಲ್ಲಿ ಹಾಸ್ಯ—ನಾಟಕ—ಸಾಮಾಜಿಕ ನಾಟಕ—ರವೀಂದ್ರರ ನಾಟಕಗಳು.

ಬೆಲೆ ರೂ. ೧—೮—೦

ಶ್ರೀ ಬಸವಣ್ಣನವರ ಅಮೃತವಾಣಿ : ಅ. ನ. ಕೃಷ್ಣರಾಯ

೧. ಕಾರಣಪುರುಷರಾದ ಶ್ರೀ ಬಸವಣ್ಣನವರ ಅಮಾನುಷ ಜೀವನ.

೨. ಬಸವಣ್ಣನವರ ಅಮೃತವಾಣಿ : ಆಣಿಮುತ್ತುಗಳಂತಹ ೨೦೦ ವಚನಗಳ ಆಯ್ಕೆ.

೩. ಬಸವಣ್ಣನವರ ಗುಣಗಾನ.

೪. ಜಗಜ್ಯೋತಿಗಳಲ್ಲಿ ಬಸವಣ್ಣನವರ ಸ್ಥಾನ.

ಸರ್ವ ಧರ್ಮದವರಿಗೂ ಹಿತವೆನಿಸುವ ಗ್ರಂಥ.

ಬೆಲೆ ರೂ. ೨—೪—೦

ಪಾಪ-ಪುಣ್ಯ : ಹನ್ನೆರಡು ರಸಭರಿತ ಸಣ್ಣಕತೆಗಳು : ಅ. ನ. ಕೃಷ್ಣರಾಯ

ಕಪ್ಪುಮೋಡ—ಹಳದಿಯ ಬಾಗಿಲು—ಜ್ವಾಲೆ—ಸುಖಕ್ಕೆ ಸುಂಕ—ಪತಿತೆ—ಅಳಿಯ ಡಿಕ್ರೂಸರ ಮೀಸೆ—ವಿಷಕನ್ಯೆ—ಬೂಬಮ್ಮ—ಕರೆಯುವ ಕಣ್ಣು—ಕಾಲಕೂಟ—ಸ್ವಪ್ನಭಂಗ.

ಸಾಹಿತ್ಯದಲ್ಲಿ ನೀತಿಯ ಪ್ರಶ್ನೆಯನ್ನು ಚರ್ಚಿಸುವ ಪ್ರಬಂಧ ಅನುಬಂಧದಲ್ಲಿ ಸೇರಿದೆ.

ಬೆಲೆ ರೂ. ೧—೪—೦

ಶ್ರೀ ಅ. ನ. ಕೃಷ್ಣರಾಯರ ಗ್ರಂಥಗಳು

ಕಾದಂಬರಿ

ಜೀವನ ಯಾತ್ರೆ
ಉದಯರಾಗ
ಸಂಧ್ಯಾರಾಗ
ಮಂಗಳಸೂತ್ರ
ಸಾಹಿತ್ಯರತ್ನ
*ನಟಸಾರ್ವಭೌಮ
*ತಾಯಿಯ ಕರುಳು

ಕಥೆ

ಮಿಂಚು
ಕಿಡಿ
ಜಾತಿಹೀನನ ಮನೆಯ ಜ್ಯೋತಿ
ಕಾಮನ ಸೋಲು
ಪಾಪ – ಪುಣ್ಯ

ಜೀವನ ಚರಿತ್ರೆ

*ಸ್ವಾಮಿ ವಿವೇಕಾನಂದ
ಬಸವಣ್ಣನವರ ಅಮೃತವಾಣಿ

ಪ್ರಬಂಧ

ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ
ಹೊಸ ಹುಟ್ಟು
ರಾಜಾ ರವಿವರ್ಮ
ಸಾಹಿತ್ಯ ಮತ್ತು ಜೀವನ

ನಾಟಕ

ಆಹುತಿ
ಆದದ್ದೇನು
ಗೋಮುಖವ್ಯಾಘ್ರ
ಬಣ್ಣದ ಬೀಸಣಿಗೆ
ಎರಡು ನಾಟಕಗಳು
ಮದುವೆಯೋ ಮನೆಹಾಳೋ

ಸಂಕಲನ

ಪ್ರಣಯ ಗೀತೆಗಳು
ಕಾಮನ ಬಿಲ್ಲು
ಪ್ರಗತಿಶೀಲ ಸಾಹಿತ್ಯ

ಇತರ

ನನ್ನನ್ನು ನಾನೇ ಕಂಡೆ.

ಸಂಪಾದಿತ

*ಭಗವದ್ಗೀತಾರ್ಥಸಾರ
*ಮರುಳುಸಿದ್ಧ ಕಾವ್ಯ

---

* ಅಚ್ಚಿನಲ್ಲಿವೆ.

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ
ಮಾಳಮಡ್ಡಿ, ಧಾರವಾಡ.